ರಂಜನೆ ಬೋಧನೆ ಪ್ರಚೋದನೆ

ಲಂಕೇಶ್

ಫೆಬ್ರವರಿ 9, 2011 ರೂ. 12/-


ಭೀಮಸೇನ್ ಜೋಷಿ ವಿಶಾಲ ಹೃದಯದ ಗಾಯಕ





ಮುಖ್ಯಮಂತ್ರಿಯೇ ಕಳ್ಳ

ಲೂಟಿ ಮಾಡಿದ್ದು 4000 ಕೋಟಿ!

'ಲಿಂಗಾಯತರು ಹಿಂದೂಗಳಲ್ಲ'




ಇ.ಕೃಷ್ಣಪ್ಪ 100 ಕೋಟಿ ದರೋಡೆ



ಯಕ್ಷಗಾನಕ್ಕೆ ಕಲ್ಲು ಹಾಕಿದ ಕಲ್ಲಡ್ಕ ಭಟ್ಟ

ಬಳ್ಳಾರಿ ಸುಟ್ಟಿದ್ದು ಗಣಿ ದುಡ್ಡಾ?

ಕದ್ದ ಭೂಮಿ ಕುಣಿಕೆಯಾಯ್ತಾ?





ಪೊಲೀಸ್-ಪಿಂಪ್ ಫಿಕ್ಸಿಂಗ್

ಎಡವಿದಳು ಯಮುನೆ!



ಉತ್ತಮ ಚಿತ್ರ

ಒಲವೇ ಮಂದಾರ

ನೋ ಕಾಮೆಂಟ್ಸ್

"ಮತಾಂತರ ಮತ್ತು ಧರ್ಮಬೋಧನೆ ನಡೆಸುತ್ತಿದ್ದ ಆಸ್ಟ್ರೇಲಿಯಾ ಮಿಷಿನರಿಗೆ ಪಾಠ ಕಲಿಸಲೆಂದು ಗ್ರಹಾಂ ಸ್ಟೇನ್ಸ್ ಮತ್ತು ಅವರ ಎರಡು ಮಕ್ಕಳನ್ನು ಹಂತಕರು ಹತ್ಯೆ ಮಾಡಿದ್ದರು ಎಂಬ ಸುಪ್ರೀಂ ಕೋರ್ಟಿನ ತರ್ಕ ಅತ್ಯಂತ ಅನಪೇಕ್ಷಣೀಯ ಮತ್ತು ಅಸಾಂವಿಧಾನಿಕ. ಸುಪ್ರೀಂ ಕೋರ್ಟಿನ ಈ ನಿಲುವು ಕಂಧಮಲ್ ಹಿಂಸಾಚಾರದಂತಹ ಗಲಭೆ ಪ್ರಕರಣಗಳ ತೀರ್ಪು ನೀಡಲಿರುವ ಅಧೀನ ನ್ಯಾಯಾಲಯಗಳಿಗೆ ತಪ್ಪು ಸಂದೇಶ ನೀಡುತ್ತದೆ. ಕೊಯೆಂಜ್‌ಹಾರ್ ಜಿಲ್ಲೆಯಲ್ಲಿ 1991-98ರ ನಡುವೆ ಕ್ರೈಸ್ತರ ಸಂಖ್ಯೆ ಅಧಿಕವಾಗಿಲ್ಲ. ಈ ಅವಧಿಯಲ್ಲಿ ಕ್ರೈಸ್ತರ ಸಂಖ್ಯೆ ಕೇವಲ 595 ಏರಿಕೆಯಾಗಿದ್ದು ಇದು ನೈಸರ್ಗಿಕ ಏರಿಕೆಯಾಗಿದೆ ಎನ್ನುವ ಗ್ರಹಾಂ ಹತ್ಯೆ ಪ್ರಕರಣ ತನಿಖೆಗೆ ನಿಯೋಜಿಸಲಾಗಿದ್ದ ವಾಧ್ವಾ ಆಯೋಗದ ವರದಿಯನ್ನು ಸುಪ್ರೀಂ ಕೋರ್ಟ್ ಏಕೆ ಪರಿಗಣನೆಗೆ ತೆಗೆದುಕೊಂಡಿಲ್ಲ? ಅಯೋಧ್ಯೆ ವಿವಾದಕ್ಕೆ ಸಂಬಂಧಿಸಿದ ಅಲಹಾಬಾದ್ ಹೈಕೋರ್ಟ್ ತೀರ್ಪು ಮತ್ತು ಇಂತಹ ತೀರ್ಪುಗಳು ಸಂಘಪರಿವಾರದಂತಹ ಮೂಲಭೂತವಾದಿ ಸಂಘಟನೆ, ಕೃತ್ಯಗಳ ಪರವಾಗಿ ವಿಶ್ಲೇಷಿಸಲು ಅನುಕೂಲವಾಗುವುದು."

- ಆನಂದ್ ಪಟವರ್ಧನ್, ಹರ್ಷ್ ಮಂದಿರ್, ಶಬ್ನಮ್ ಹಷ್ಮಿ, ರಾಮ್ ಪುನ್ಯಾನಿ ಹಾಗೂ ಇನ್ನು ಹಲವು ಗಣ್ಯರು

"ದೇಶದಲ್ಲಿ ಸಾಕ್ಷರತೆಯ ಪ್ರಮಾಣ ಗಣನೀಯವಾಗಿ ಹೆಚ್ಚುತ್ತಿದೆ. ಆದರೆ ದೇಶದಲ್ಲಿ ಹೆಚ್ಚುತ್ತಿರುವ ಭ್ರಷ್ಟಾಚಾರ, ಅನೈತಿಕತೆ, ಅತ್ಯಾಚಾರ ಮತ್ತಿತರ ಸಮಾಜದ್ರೋಹಿ ಕೃತ್ಯಗಳಲ್ಲಿ ವಿದ್ಯಾವಂತರ ಪಾತ್ರ ಹೆಚ್ಚುತ್ತಿರುವುದು ಕಳವಳಕಾರಿ."

- ಪಾಟೀಲ್ ಪುಟ್ಟಪ್ಪ

"ವರ್ತಕನೊಬ್ಬನಿಂದ ಕಾಂಗ್ರೆಸ್ ಪಕ್ಷಕ್ಕೆ ಎಂದು ಹಣ ಪಡೆದು ಲೆಕ್ಕ ಇಡದ ಕಾರಣಕ್ಕೆ ತಮ್ಮ ಸಂಪುಟದ ಪೆಟ್ರೋಲಿಯಂ ಸಚಿವರಾಗಿದ್ದ ಕೆ.ಡಿ. ಮಾಳವೀಯ ಅವರಿಗೆ ರಾಜೀನಾಮೆ ನೀಡುವಂತೆ ನೆಹರೂ ಸೂಚಿಸಿದ್ದರು. ಆಗ ಸಾರ್ವಜನಿಕ ಬದುಕಿನಲ್ಲಿ ಮತ್ತು ಸರ್ಕಾರದಲ್ಲಿ ಬೆರಳೆಣಿಕೆಯಷ್ಟು ಜನರು ಭ್ರಷ್ಟರಾಗಿದ್ದರು. ಆದರೆ ಈಗ ಪ್ರಾಮಾಣಿಕರು ಬೆರಳೆಣಿಕೆಯಷ್ಟು ಇದ್ದಾರೆ."

- ಕುಲದೀಪ್ ನಯ್ಯರ್

"ಅಮೆರಿಕವನ್ನು ಒಳಗೊಂಡಂತೆ ವಿಶ್ವದ ಕೆಲವು ಸೊಕ್ಕಿನ ರಾಷ್ಟ್ರಗಳು ಇಸ್ರೇಲ್ ಅನ್ನು ಓಲೈಸುವ ಕೆಲಸವನ್ನು ನಿಲ್ಲಿಸದೆ ಈ ಪ್ರಾಂತ್ಯದಲ್ಲಿ ಶಾಂತಿ ಸ್ಥಾಪನೆ ಕಷ್ಟಸಾಧ್ಯ. ಪಶ್ಚಿಮದ ರಾಷ್ಟ್ರಗಳಿಗೆ ಇರಾನ್‌ನೊಂದಿಗೆ ಮಾತುಕತೆ ನಡೆಸಲು ಇನ್ನೂ ಮಾರ್ಗವು ಮುಕ್ತವಾಗಿದೆ. ಆದರೆ ಯಾರಿಂದಲೂ ತನ್ನ ಹಕ್ಕುಗಳು ಉಲ್ಲಂಘನೆಯಾಗುವುದನ್ನು ಇರಾನ್ ಸಹಿಸದು."

- ಮಹ್ಮೂದ್ ಅಹ್ಮದಿನಜಾದ್, ಇರಾನ್ ಅಧ್ಯಕ್ಷ

ನಂಬಿದ್ರೆನಂಬಿ ಬಿಟ್ರೆಬಿಡಿ

ವಿಪಕ್ಷ ನಾಯಕ ಸಿದ್ಧರಾಮಯ್ಯನವರಿಗೆ ಕಾಂಗ್ರೆಸ್‌ನಲ್ಲಿ ಭವಿಷ್ಯವಿಲ್ಲ, ಕಾಂಗ್ರೆಸ್ ಪಕ್ಷದಲ್ಲಿದ್ದ ನನಗೆ ಅವರಿಗಿಂತ ಹೆಚ್ಚಿನ ಅನುಭವವಿದೆ. ಆದ್ದರಿಂದ ಅವರು ಕಾಂಗ್ರೆಸ್ ಬಿಟ್ಟುಬರುವುದೇ ವಾಸಿ.

- ಬಂಗಾರಪ್ಪ

"ಜಾತಿ ಜನ್ಮಸೂಚಕ ಮಾತ್ರವಲ್ಲ, ಭಾಷೆ ಮತ್ತು ಸಂಸ್ಕೃತಿಯಂತಹ ಪರಂಪರೆ ಅದಕ್ಕಿದೆ. ಆದುದರಿಂದ ಜಾತಿವಿನಾಶ ಸುಲಭದ ಮಾತಲ್ಲ."

- ಗಿರೀಶ್ ಕಾರ್ನಾಡ್

ಮೂರೂ ಬಿಟ್ಟವರು ದೇಶಕ್ಕೇ ದೊಡ್ಡವರು!

"ಜಮೀನು ಡಿ ನೋಟಿಫಿಕೇಷನ್ ಕ್ರಮ ಕಾನೂನು ಪ್ರಕಾರವಾಗಿ ತಪ್ಪಲ್ಲವಾದರೂ ನೈತಿಕವಾಗಿ ಸರಿಯಾದ ಕ್ರಮವಲ್ಲವೆಂದು ಬಿಜೆಪಿ ಅಧ್ಯಕ್ಷ ನಿತಿನ್ ಗಡ್ಕರಿ ಹೇಳಿದರೂ ಮುಖ್ಯಮಂತ್ರಿ ಹುದ್ದೆಗೆ ನಾನು ರಾಜೀನಾಮೆ ನೀಡುವುದಿಲ್ಲ. ಇಲ್ಲಿ ಆತ್ಮಾವಲೋಕನದ ಪ್ರಶ್ನೆಯೇ ಉದ್ಭವಿಸುವುದಿಲ್ಲ."

- ಯಡಿಯೂರಪ್ಪ

ಮಕರ ಜ್ಯೋತಿ ಬಕರಾ ಭಕ್ತರು!


"ಮಕರಜ್ಯೋತಿ ಆಕಾಶದಲ್ಲಿ ಮಿನುಗುವ ನಕ್ಷತ್ರವಾಗಿದ್ದು ಪೊನ್ನಂಬಲಮೇಡುವಿನಲ್ಲಿ ಸಾಂಕೇತಿಕವಾಗಿ ನಡೆಸುವ ದೀಪಾರಾಧನೆಯೇ ಮಕರವಿಳಕ್ಕು. ಈ ಹಿಂದೆ ಬುಡಕಟ್ಟು ಜನರು ಮಕರವಿಳಕ್ಕುವನ್ನು ಉರಿಸುತ್ತಿದ್ದರು. ಈಗ ಯಾರು ಆ ಕೆಲಸವನ್ನು ಮಾಡುತ್ತಿದ್ದಾರೆ ಎಂದು ತಿಳಿದಿಲ್ಲ."

- ಶಬರಿಮಲೈ ದೇವಸ್ಥಾನದ ಪ್ರಧಾನ ತಂತ್ರಿ

ಮೊದಲು ಆರೆಸ್ಸೆಸ್ ಕಚೇರಿಯಲ್ಲಿ ತಿರಂಗಾ ಹಾರಿಸಿ!

"ರಾಷ್ಟ್ರಾದ್ಯಂತ ಸುಮಾರು ಐವತ್ತು ಸಾವಿರ ಜನರು ಜನವರಿ 25ರಂದು ಜಮ್ಮುವಿಗೆ ಆಗಮಿಸಲಿದ್ದಾರೆ. ಜ.26ಕ್ಕೆ ಶ್ರೀನಗರದ ಲಾಲ್‌ಚೌಕದಲ್ಲಿ ನಾವು ತಿರಂಗಾ ಹಾರಿಸುವುದನ್ನು ಯಾರೂ ತಡೆಯಲು ಸಾಧ್ಯವಿಲ್ಲ."

- ಶಂಶೇರ್ ಸಿಂಗ್, ಬಿಜೆಪಿ ರಾಜ್ಯಾಧ್ಯಕ್ಷ



'ಅಕ್ಷರ'ವಂತರು ಮಾಡುವ ಸಹಜ ಅವಮಾನಗಳು!



ಶಿವಸುಂದರ್

ಚಾರ್ವಾಕ

ಕೆಳೆದ ವಾರ 'ಪ್ರಜಾವಾಣಿ'ಯ ಸಾಪ್ತಾಹಿಕದಲ್ಲಿ ಕೆ.ವಿ. ಅಕ್ಷರ ಅವರು ಬರೆದ 'ಹರಕೆ-ಹರಾಜು-ಯಾವುದು ಸಹಜ? ಯಾವುದು ಅವಮಾನ' ಎಂಬ ಲೇಖನವನ್ನು ಓದಿ ನನ್ನಂಥ ಹಲವರ ಮನಸ್ಸಿಗೆ ಘಾಸಿಯೇ ಆಗಿದೆ. ಸುಬ್ರಹ್ಮಣ್ಯದ ದೇವಾಲಯವೊಂದರಲ್ಲಿ ಹರಕೆದಾರರು ಎಂಜಲೆಲೆಗಳ ಮೇಲೆ ಹೊರಳಾಡಿದ್ದನ್ನು ಸಮಾಜವನ್ನು ಕಾಡುತ್ತಿರುವ ಪಿಡುಗು ಎಂದು ಬಣ್ಣಿಸಿದ ಮಾಧ್ಯಮಗಳು ನಮ್ಮ ಕ್ರಿಕೆಟ್ ಆಟಗಾರರನ್ನು ಎಮ್ಮೆದನಗಳ ರೀತಿ ಹರಾಜು ಹಾಕಿದ್ದನ್ನು ಮಾತ್ರ ಅಪಮಾನವೆಂದು ಭಾವಿಸದೇ ಇರುವುದಕ್ಕೆ ನಮ್ಮ ಚಿಂತನೆಯು ವಸಾಹತುಶಾಹಿ ಪ್ರಭಾವದಿಂದ ಕಳಚಿಕೊಳ್ಳದೇ ಇರುವುದು ಕಾರಣವೆಂದು ಅಕ್ಷರ ಆರೋಪಿಸುತ್ತಾರೆ. ಬರೀ ಇಷ್ಟೆ ಆಗಿದ್ದರೆ ಈ ಲೇಖನದ ಬಗ್ಗೆ ಹೆಚ್ಚಿನ ತಕರಾರೇನೂ ಇರುವ ಅಗತ್ಯವಿರಲಿಲ್ಲ. ಆದರೆ ನಂತರದಲ್ಲಿ ಅವರು ಅವಮಾನ ಹಾಗೂ ಸಹಜ ವಿದ್ಯಮಾನಗಳ ನಡುವಿನ ವ್ಯತ್ಯಾಸವನ್ನು ವಿಷದಪಡಿಸಲು ಬಳಸಿರುವ ರೂಪಕ ಮತ್ತದರ ವ್ಯಾಖ್ಯಾನಗಳು ಲೇಖನದ ಹಿಂದಿರುವ ಅಮಾನವೀಯ ಕುತರ್ಕಗಳನ್ನು ಹೊರಹಾಕುತ್ತದೆ.

"ಹರಕೆ ಮತ್ತು ಹರಾಜಿನಲ್ಲಿ ಯಾವುದು ಅವಮಾನ ಮತ್ತು ಯಾವುದು ಸಹಜ ವಿದ್ಯಮಾನ ಎಂಬುದನ್ನು ಖಡಾಖಂಡಿತವಾಗಿ ತೀರ್ಮಾನಿಸುವ ತರಾತುರಿಯಿಂದ ಈ ಟಿಪ್ಪಣಿಯನ್ನು ಬರೆದಿಲ್ಲ" ಎಂದು ಅಡಿಟಿಪ್ಪಣಿಯ ರೀತಿಯಲ್ಲಿ ಅವರು ಬರೆದುಕೊಂಡಿದ್ದರೂ ಇಡೀ ಲೇಖನ ಎಂಜಲೆಲೆಯ ಮೇಲೆ ಹೊರಳಾಡುವ ಹರಕೆಗಳಲ್ಲಿ ಸಂಕೇತಗೊಂಡಿರುವ ಭಾರತೀಯ ಸಮಾಜದ ಹಲವು ಆಚರಣೆಗಳನ್ನು ಅಪಮಾನ ಎಂದು ಭಾವಿಸುವುದು ವಸಾಹತುಶಾಹಿ ತಿಳಿವಳಿಕೆಯ ಪರಿಣಾಮ ಎಂದು ದೂಷಿಸುತ್ತದೆ ಮತ್ತು ಅವೆಲ್ಲಾ ಸಹಜ ವಿದ್ಯಮಾನಗಳೆ ಎಂಬ ಸೂಚನೆಯನ್ನೂ ಕೊಡುತ್ತದೆ. ಅದೇ ರೀತಿ "ಉನ್ನತ ಸ್ಥಾನದಲ್ಲಿ ಕಾಲಮೇಲೆ ಕಾಲು ಹಾಕಿ ಕೂತವನ ಎದುರು ಇತಿಹಾಸದುದ್ದಕ್ಕೂ ತಲೆಬಾಗಿಯೇ ನಿಂತ ಸ್ಥಿತಿಯನ್ನು ಎಲ್ಲಿಯ ತನಕ ಕೆಳಗೆ ನಿಂತವನು ಅಪಮಾನ ಎಂದು ಭಾವಿಸುವುದಿಲ್ಲವೋ ಅಲ್ಲಿಯತನಕ ಅದನ್ನು ಅಪಮಾನ ಎಂದು ಭಾವಿಸಲಾಗದು" ಎಂಬ ಫರ್ಮಾನನ್ನೂ ಸಹ ಹೊರಡಿಸುತ್ತದೆ.

ಈ 'ಚಿಂತನಾ ಧಾಟಿ' ಅಂಬೇಡ್ಕರ್, ಫುಲೆ, ದಲಿತ ಚಳವಳಿ, ರೈತ-ಕಾರ್ಮಿಕ ಚಳವಳಿಗಳೆಲ್ಲದರ ಸಾಮಾಜಿಕ ಪ್ರಯತ್ನವನ್ನು ಮತ್ತು ದಲಿತರಿಗೆ ಮತ್ತು ಇತರ ಶೋಷಿತ ಜನಾಂಗಗಳಿಗೆ ತಂದುಕೊಟ್ಟ ಆತ್ಮಾಭಿಮಾನವನ್ನೇ ಪರೋಕ್ಷವಾಗಿ ಪ್ರಶ್ನೆಗೊಳಪಡಿಸುತ್ತದೆ ಹಾಗೂ ಬ್ರಾಹ್ಮಣಶಾಹಿ ದಮನಕಾರಿ ಸಾಮಾಜಿಕ ಮತ್ತು ಸಾಂಸ್ಕೃತಿಕ ರಚನೆಗಳನ್ನು ಪರೋಕ್ಷವಾಗಿ ಸಮರ್ಥಿಸಿಬಿಡುತ್ತವೆ.

ಅಕ್ಷರ ಅವರ ತರ್ಕ ಈ ಅಪಾಯಕಾರಿ ನೆಲೆ-ನಿಲುವುಗಳಿಗೆ ಬಂದು ತಲುಪಲು ಪ್ರಮುಖ ಕಾರಣ ಅವರ ಚಿಂತನಾ ವಿಧಾನದಲ್ಲಿರುವ ಅಪಾಯಕಾರಿ ನೆಲೆಗಳು. ಈ ಚಿಂತನಾಧಾರೆಯು ವಸಾಹತುಶಾಹಿಯ ಪ್ರಭಾವದಿಂದ ಹೊರಬರುವ ಪ್ರಯತ್ನದಲ್ಲಿ ಗತವನ್ನು ವೈಭವೀಕರಿಸುತ್ತದೆ ಇಲ್ಲವೇ ಅವಿಮರ್ಶಾತ್ಮಕವಾಗಿ ಗ್ರಹಿಸುತ್ತವೆ. ವಸಾಹತುಶಾಹಿ ಪ್ರಭಾವಕ್ಕೆ ಒಳಪಡುವ ಮುಂಚೆಯೂ ಈ ದೇಶದಲ್ಲಿ ಜಾತಿ-ವರ್ಗ-ಲಿಂಗ ತಾರತಮ್ಯಗಳು, ಶೋಷಣೆಗಳು ಇದ್ದವೆಂಬುದನ್ನು ಮತ್ತು ಅದರ ವಿರುದ್ಧ ಹೋರಾಟಗಳು ಇದ್ದವೆಂಬುದನ್ನು ನಿರಾಕರಿಸುತ್ತದೆ. (ಅದರಲ್ಲೂ ಇದೀಗ ಈ ಬಗೆಯ ಚಿಂತನಾಧಾರೆಯ ಕವಲೊಂದು ಈ ದೇಶದಲ್ಲಿ ಜಾತಿ ಇತ್ತೇ ಹೊರತು ಜಾತಿಶೋಷಣೆ ಇರಲಿಲ್ಲ, ಪಾಶ್ಚಿಮಾತ್ಯ ಇತಿಹಾಸ ನೋಟವು ಅದನ್ನು ಶೋಷಣೆಯೆಂಬಂತೆ ಚಿತ್ರಿಸಿವೆ ಎಂಬ ಅತಿರೇಕಕ್ಕೂ ಹೋಗಿವೆ). ಅಂದರೆ ವಿದೇಶಿ ಜ್ಞಾನ ದಮನದ ಮಾದರಿಗಳನ್ನು ವಿರೋಧಿಸುವ ಪ್ರಕ್ರಿಯೆಯಲ್ಲಿ ಸ್ವದೇಶಿ ದಮನದ ಸಾಮಾಜಿಕ ಮತ್ತು ಸಾಂಸ್ಕೃತಿಕ ರಚನೆಗಳ ಸಮರ್ಥನೆಗೆ ನಿಂತುಬಿಡುತ್ತವೆ. ಕೆಲವೊಮ್ಮೆ ಪ್ರತ್ಯಕ್ಷವಾಗಿ. ಕೆಲವೊಮ್ಮೆ ಪರೋಕ್ಷವಾಗಿ. ಆದರೆ ಅಂತಿಮ ಪರಿಣಾಮ ಮಾತ್ರ ಎರಡರದ್ದೂ ಒಂದೇ. ಆದ್ದರಿಂದಲೇ ರಾಧಿಕಾ ದೇಸಾಯಿ ಎಂಬ ಖ್ಯಾತ ವಿದ್ವಾಂಸರು "ಈ ಬಗೆಯ ಸಿದ್ಧಾಂತ ಬಲಪಂಥೀಯ ರಾಜಕಾರಣದ ಮಿತ್ರನಾಗಿಯೂ ಪರ್ಯಾವಸಾನಗೊಳ್ಳುವ ಅಪಾಯ ಇದೆ" ಎಂದು ಎಚ್ಚರಿಸುತ್ತಾರೆ.



ಒಂದು ಸಮಾಜದಲ್ಲಿ ಯಾವುದು ಅವಮಾನ ಮತ್ತು ಯಾವುದು ಸಹಜ ಎಂದು ಮಾನದಂಡಗಳು ಸ್ಥಳೀಯವಾಗಿ ವಿಕಸನಗೊಳ್ಳಬೇಕೆ ವಿನಃ ಪರ ಸಂಸ್ಕೃತಿಗಳ ಮಾನದಂಡವನ್ನು ಸಾರಾಸಗಟಾಗಿ ಆಮದು ಮಾಡಿಕೊಳ್ಳಲಾಗದು ಎಂದು ಅಕ್ಷರ ಹೇಳುತ್ತಾರೆ. ಅವರು ಉದಾಹರಿಸಿರುವ ಸುಬ್ರಹ್ಮಣ್ಯ ದೇವಸ್ಥಾನದಲ್ಲಿ "ಕೆಲವು ಹರಕೆದಾರರು ಎಂಜಲೆಲೆಗಳ ಮೇಲೆ ಹೊರಳಾಡಿದ" ಪ್ರಸಂಗವನ್ನು ನೋಡೋಣ. ಪಾಶ್ಚಿಮಾತ್ಯ ಕಣ್ಣುಗಳು ಅದರಲ್ಲಿ ಮೌಢ್ಯವನ್ನು ಮಾತ್ರ ನೋಡಿ "ಈ ಜನ ಎಷ್ಟು ಹಿಂದುಳಿದಿದ್ದಾರೆ" ಎಂದು ಹೀಯಾಳಿಸುತ್ತದೆ. ಆಧುನಿಕ ಸುಶಿಕ್ಷಿತ ಮಧ್ಯಮ ವರ್ಗದ ಪ್ರತಿಕ್ರಿಯೆಯೂ ಇಂಥವನ್ನು ಅಶಿಕ್ಷಿತ ಜನರ ಮೌಢ್ಯ, ದೇಶದ ಪಿಡುಗು ಎಂದೇ ಹೀಯಾಳಿಸುತ್ತದೆ ಎಂದೇ ಇಟ್ಟುಕೊಳ್ಳೋಣ. ಇದರಲ್ಲಿ ಹೀಯಾಳಿಕೆಯ ಅಂಶ ವಸಾಹತುಶಾಹಿ ದುರಹಂಕಾರದ ಪರಿಣಾಮ ಎಂಬುದನ್ನು ಒಪ್ಪಿಕೊಳ್ಳಲೂ ಹಿಂಜರಿಯಬೇಕಿಲ್ಲ. ಆ ಧೋರಣೆ ನಮ್ಮನ್ನೇ ನಮ್ಮವರಿಂದ ಪರಕೀಯಗೊಳಿಸುವ ಸಾಂಸ್ಕೃತಿಕ ಮೌಲ್ಯವನ್ನು ಬಿತ್ತುತ್ತದೆ. ಆದರೆ ಇದರ ಹಿಂದೆ ಮೌಢ್ಯವಿಲ್ಲ, ಅದು ಈ ದೇಶದ ಜನತೆ ಕಂಡುಕೊಂಡ ಆಧ್ಯಾತ್ಮಿಕ ಮಾರ್ಗ ಎನ್ನಲು ಸಾಧ್ಯವೇ?

ಖಂಡಿತಾ ಇಲ್ಲ, ಏಕೆಂದರೆ ಅಲ್ಲಿ ಮಡೆ ಹೊರಳುವ "ಕೆಲವು ಹರಕೆದಾರರೆಲ್ಲಾ" ದಲಿತ ಮತ್ತು ಇತರ ದಮನಿತ ಜಾತಿಗಳಿಗೆ ಸೇರಿದವರೇ ಆಗಿರುತ್ತಾರೇ ವಿನಃ ಮೇಲ್ಜಾತಿ ಬ್ರಾಹ್ಮಣರಲ್ಲ, ಅಷ್ಟು ಮಾತ್ರವಲ್ಲ, ಅವರು ಮಡೆ ಹೊರಳುವ "ಎಂಜಲೆಲೆ" ಬ್ರಾಹ್ಮಣರದ್ದೇ ವಿನಃ ಕೆಳಜಾತಿಗಳದ್ದಲ್ಲ, ಈ ಸಂಪ್ರದಾಯದಲ್ಲಿ ಎಂದಿಗೂ ಬ್ರಾಹ್ಮಣರು ದಲಿತ, ಶೂದ್ರರ ಎಂಜಲೆಲೆಯಲ್ಲಿ ಹೊರಳಾಡುವುದಿಲ್ಲ. ಇದರ ಹಿಂದೆ ಇರುವ ಸಾಮಾಜಿಕ ತಿಳಿವಳಿಕೆ ಮೇಲು ಕೀಳಿನ ತಾರತಮ್ಯದ್ದಲ್ಲವೇ? ಹೀಗಾಗಿ ಇಲ್ಲಿ ಪ್ರಧಾನವಾಗಿ ವಿಮರ್ಶೆಗೊಳಗಾಗಬೇಕಿದ್ದು ಈ ತಾರತಮ್ಯಕ್ಕೆ ಬಲಿಯಾಗಿರುವ ದಮನಿತ ಜನತೆಯ ಮೌಢ್ಯವಲ್ಲ, ಬದಲಿಗೆ ಈ ಅಮಾನವೀಯ ಪದ್ಧತಿಗೆ ಧಾರ್ಮಿಕ ಚೌಕಟ್ಟನ್ನು ಕೊಟ್ಟು ಸಾಂಸ್ಥೀಕರಿಸುತ್ತಿರುವ ಬ್ರಾಹ್ಮಣ್ಯದ ಕುತಂತ್ರ. ಈಗಂತೂ ಅದನ್ನು ಹಾಲಿ ಪ್ರಭುತ್ವ ರಾಜ್ಯದೆಲ್ಲೆಡೆಗೆ ವಿಸ್ತರಿಸುವ ಪ್ರಯತ್ನದಲ್ಲಿದೆ. ವಸಾಹತುಶಾಹಿಗಳು ಅದನ್ನು ಜನರ ಮೌಢ್ಯವೆಂದು ಕರೆದು ಅದರ ಹಿಂದಿನ ಸಾಂಸ್ಥಿಕ ಶಕ್ತಿಗಳನ್ನು ತಡೆಯುವ ಯಾವ ಪ್ರಯತ್ನವನ್ನು ಮಾಡಲಿಲ್ಲ. ಹೀಗಾಗಿ ನನ್ನ ಪ್ರಕಾರ ವಸಾಹತುಶಾಹಿಯ ಆಧುನಿಕತೆಯೇ ಒಂದು ಹಿಪಾಕ್ರಸಿ.

ಆದರೆ ಮತ್ತೊಂದು ಕಡೆ ವಸಾಹತುಶಾಹಿ ಚಿಂತನೆಯಿಂದ 'ಮುಕ್ತರಾದವರು' ಇಂಥ ಮೌಢ್ಯಗಳ ಹಿಂದಿನ ದೇಸೀ ಬ್ರಾಹ್ಮಣ್ಯದ ಸಮಾಜೋ-ರಾಜಕೀಯ ಹುನ್ನಾರಗಳನ್ನು ಪ್ರಶ್ನಿಸುವ ಬದಲಿಗೆ ಆ ಬಗೆಯ ಆಚರಣೆಗಳ ವಿರೋಧವನ್ನೇ ಅಮಾನ್ಯಗೊಳಿಸುತ್ತಾ ವಸಾಹತುಶಾಹಿಪೂರ್ವ ದಮನಕಾರಿ ಸಾಮಾಜಿಕ ರಚನೆಗಳ ಪುನರುತ್ಥಾನಕ್ಕೆ ಪೂರಕವಾಗುತ್ತಿಲ್ಲವೇ? ವಸಾಹತುಶಾಹಿಯ ಮೇಲರಿಮೆಯನ್ನು ಮತ್ತು ಸ್ಥಳೀಯ ಸಮಾಜದ ಮೇಲ್‌ಸ್ತರದವರ ಸಾಮಾಜಿಕ ಮತ್ತು ಸಾಂಸ್ಕೃತಿಕ ಶೋಷಣೆಯನ್ನು ಪ್ರಶ್ನಿಸುವ ಪ್ರಜಾತಾಂತ್ರಿಕ ಸಾಂಸ್ಕೃತಿಕ ಪರಿಕರಗಳು ನಮ್ಮ ಜನಪದರ ಇತಿಹಾಸದಲ್ಲಿದೆ. ಅದೇರೀತಿ ಪಾಶ್ಚಿಮಾತ್ಯ ಜ್ಞಾನ ಮಾದರಿಗಳೂ ಏಕಸ್ವರೂಪಿಯೇನಲ್ಲ. ಅಲ್ಲಿನ ಶೋಷಿತ ಜನಸಮುದಾಯವೂ ತಮ್ಮ ಸಂಘರ್ಷದ ಮೂಲಕ ಪರ್ಯಾಯ ಜ್ಞಾನಸಂಪತ್ತು ಮತ್ತು ವಿಮೋಚನಾ ಮಾರ್ಗಗಳನ್ನು ಅನ್ವೇಷಿಸಿವೆ. ಪಶ್ಚಿಮವನ್ನು ಏಕರೂಪಿಯಾಗಿ ಗ್ರಹಿಸುವ ಮೂಲಕ ಈ ಅಕ್ಷರವಂತರ ಬಳಗ ಮನುಷ್ಯ ಘನತೆಯನ್ನು ಹೆಚ್ಚಿಸುವ ಭೌಗೋಳಿಕ ಕಾರಣದಿಂದ ಮಾತ್ರ ಈ ಸ್ಥಳದ್ದಲ್ಲದ ಆದರೆ ಇತರ ದಮನಿತ ಜನರದ್ದೇ ಆದ ಜ್ಞಾನಸಂಪತ್ತನ್ನೂ ಪೂರ್ವಗ್ರಹದಿಂದಲೇ ನೋಡುವಂತೆ ಮಾಡುತ್ತದೆ.

ವಾಸ್ತವವಾಗಿ ಹರಕೆಯ ಮತ್ತು ಹರಾಜು ಎರಡರಲ್ಲೂ ಮನುಷ್ಯನ ಸ್ವಾಭಿಮಾನ ಮತ್ತು ಘನತೆ ಎರಡೂ ಬೇರೆಬೇರೆ ರೀತಿಯಲ್ಲಿ ಅಪಮಾನಕ್ಕೊಳಪಟ್ಟಿವೆ. ಒಂದರಲ್ಲಿ ಸಾಂಸ್ಕೃತಿಕ ಗುಲಾಮೀಕರಣ ಇನ್ನೊಂದರಲ್ಲಿ ಮನುಷ್ಯ ಪ್ರತಿಭೆಯ ಸರಕೀಕರಣ. ಎರಡೂ ಮನುಷ್ಯನನ್ನು ಡಿ-ಹ್ಯೂಮನೈಸ್ ಮಾಡುತ್ತವೆ. ಹೀಗಾಗಿ ಒಂದರ ಎದುರಿಗೆ ಮತ್ತೊಂದನ್ನು ನಿಲ್ಲಿಸುವ ಅಗತ್ಯವೇ ಇಲ್ಲ, ಎರಡನ್ನೂ ಶೋಷಿತ ಜನರೆಲ್ಲರ ವಿಶ್ವಾತ್ಮಕವಾದ ಮೌಲ್ಯಗಳಾದ ಮನುಷ್ಯ ಘನತೆ, ಸ್ವಾಭಿಮಾನ ಮತ್ತು ಸಮಾನತೆಯ ನೆಲೆಯಿಂದ ಮಾತ್ರವೇ ವಿಮರ್ಶಿಸಲು ಸಾಧ್ಯ. ಅಕ್ಷರ ಹೇಳುವ ಸ್ಥಳೀಯ ಜ್ಞಾನ ಮಾದರಿಯಲ್ಲಿ ಒಂದಾದ ವೈದಿಕಶಾಹಿಯಲ್ಲಿ ಮನುಷ್ಯ ಸಮಾನತೆಯ ಸೊಲ್ಲೇ ಇಲ್ಲ. ಹೀಗಿರುವಾಗ ಅವರ ಸ್ಥಳೀಯ ಸಾಂಸ್ಕೃತಿಕ ಮಾನದಂಡಗಳ ವಕಾಲತ್ತು ಮತ್ತು ವಿಶ್ವಾತ್ಮಕ ಮೌಲ್ಯಗಳ ಬಗೆಗಿನ ಸಂಶಯಗಳು ಹರಕೆ-ಹರಾಜು ಎರಡಕ್ಕೂ ಕಾರಣವಾಗಿರುವ ಮೂಲ ಸಾಂಸ್ಕೃತಿಕ ಮತ್ತು ಆರ್ಥಿಕ ರಚನೆಗಳನ್ನು ವಿಮರ್ಶಿಸುವುದೇ ಇಲ್ಲ, ಬದಲಿಗೆ ಸಮರ್ಥಿಸುತ್ತದೆ.

ಎಲ್ಲಕ್ಕಿಂತ ಹೆಚ್ಚಾಗಿ ಜಾತಿಗ್ರಸ್ತ ಮನಸ್ಸುಗಳು ಸ್ವಾಭಿಮಾನ ತೋರಿದ ದಲಿತರಿಗೆ ಮಲ ತಿನ್ನಿಸುತ್ತಿರುವ ಈ ಹೊತ್ತಿನಲ್ಲಿ ಅದು ರೂಢಿಗತ ಸಹಜ ವಿದ್ಯಮಾನವೋ ಅಥವಾ ಸಾಮಾಜಿಕ ಅಪಮಾನವೋ ಎಂಬ ಪ್ರಶ್ನೆ ಮೂಡುವುದು ಕೇವಲ ಬೌದ್ಧಿಕ ವಿದ್ಯಮಾನವಂತೂ ಆಗಿರಲು ಸಾಧ್ಯವಿಲ್ಲ. ಈ ವಿದ್ಯಮಾನವನ್ನೂ ಸಹ ಅಕ್ಷರ ಅವರು ಬಳಸಿರುವ ರೂಪಕದಲ್ಲೇ ಹೇಳಬಹುದು. ತಲೆಬಾಗಿ ನಿಲ್ಲುವುದು ಅಪಮಾನ ಎಂದು ಅರ್ಥ ಮಾಡಿಕೊಂಡ ದಮನಿತರು ಕೂತವರ ವಿರುದ್ಧ ಬಂಡೇಳುವ ಹೊತ್ತಿನಲ್ಲಿ ಮೇಲೆ ಕೂತವರ ನೆಂಟರು ಬಂಡುಕೋರರ ಜೊತೆ ನೀವೂ ಕುಂತಿಪುತ್ರರೇ ಎಂದು ಕೃಷ್ಣಸಂಧಾನ ಮಾಡುವಂತಿದೆ ಅಕ್ಷರರವರ ಲೇಖನ. ಇದು ಅಕ್ಷರ ವಂಚನೆಯೂ ಹೌದು. ಅರಿವಿನ ದ್ರೋಹವೂ ಹೌದು. ●

...ಯಡ್ಡಿ ಧರಿಸಿದ ಲಿಂಗ ದಿಟವಲ್ಲ ಪ್ರಭುವೆ!



• ಗೌರಿ ಲಂಕೇಶ್
editorlankesh@gmail.com

ಕಂಡಹಾಗೆ

...ಿದ ವಾರ ಮುಖ್ಯಮಂತ್ರಿ ಯಡಿಯೂರಪ್ಪನ ... ಕ್ರಿಮಿನಲ್ ಮೊಕದ್ದಮೆ ದಾಖಲಿಸಲು ಇಬ್ಬರು ...ಿಗೆ ರಾಜ್ಯಪಾಲ ಹನ್ಸರಾಜ್ ಭಾರದ್ವಾಜ್ ಅವರು ...ತಿ ನೀಡಿದ ದಿನ ಬೆಂಗಳೂರು ಹತ್ತಿರದ ಒಂದು ...ರ ಹಿರಿಯರು "ಕೊನೆಗೂ ಜಾತಿ ರಾಜಕಾರಣ ...ರಲ್ಲ" ಎಂದು ಉದ್ಗಾರವೆತ್ತಿದರು. ಆ ಹಿರಿಯರು ...ಯುತ ಜಾತಿಗೆ ಸೇರಿದವರು ಎಂದು ಪ್ರತ್ಯೇಕವಾಗಿ ...ರ ಅಗತ್ಯವಿಲ್ಲ ಎನಿಸುತ್ತದೆ.

...ದರಲ್ಲಿ ಜಾತಿ ರಾಜಕಾರಣ ಎಲ್ಲಿದೆ? ರಾಜ್ಯಪಾಲರ ...ದ ಹಿಂದೆ ಯಡ್ಡಿ ಭ್ರಷ್ಟಾಚಾರದಲ್ಲಿ ತೊಡಗಿದ್ದಾನೆ ...ಕಾರಣವಿದೆಯೇ ಹೊರತು ಆತ ಲಿಂಗಾಯತ ...ನಲ್ಲ" ಎಂದೆ.

...ಾಗಾದರೆ ಈ ಹಿಂದೆ ಬೇರೆ ಯಾರೂ ಮಾಡ ... ಯಡಿಯೂರಪ್ಪ ಮಾಡಿದ್ದಾರೆಯೇ. ಆಗ ಅವರ ... ಯಾಕೆ ಇದೆಲ್ಲ ನಡೆದಿರಲಿಲ್ಲ?" ಎಂದು ಆ ...ರು ಕೇಳಿದರು.

...ೇರೆಯವರು ಮಾಡಿಲ್ಲ ಎಂದಲ್ಲ. ಆದರೆ ಅವರು ...ಮಾಡಿದಾಗ ಅವರ ವಿರುದ್ಧ ಆಗ ವಿರೋಧ ...ನಾಯಕನಾಗಿದ್ದ ಯಡಿಯೂರಪ್ಪ ಕೂಡ ಇಂತಹ ...ನ್ನು ತೆಗೆದುಕೊಳ್ಳಬಹುದಿತ್ತು. ಅಧನ್ನು ಯಡ್ಡಿ ...ಮಾಡಲಿಲ್ಲ? ನನಗೆ ಅನಿಸೋದು ಏನು ಗೊತ್ತಾ? ... ಮುಖ್ಯಮಂತ್ರಿ ಎಸ್.ಎಂ.ಕೃಷ್ಣ ತನಗೆ ...ವರಿಗೆ 'ಜಿ' ಕ್ಯಾಟಗರಿಯಲ್ಲಿ ಸೈಟುಗಳನ್ನು ...ಾಗ ಯಡ್ಡಿಯ ಆಪ್ತೆ ಶೋಭಾ ಕರಂದ್ಲಾಜೆ ...ಂಗಳೂರಿನ ಪ್ರತಿಷ್ಠಿತ ಎಚ್‌ಎಸ್‌ಆರ್ ಲೇಔಟಿನಲ್ಲಿ ... ದೊಡ್ಡ ಸೈಟು ಪಡೆದಿದ್ದರು. ಪಾಪ, ಅದು ... ಕೈಬಾಯಿಯನ್ನು ಕಟ್ಟಿಹಾಕಿದ್ದಿರಬಹುದು. ...ರಲಿ, ಬೇರೆಯವರು ಮಾಡ್ಡಿದ ಭ್ರಷ್ಟಾಚಾರವನ್ನು ...ಮಾಡುವುದಿಲ್ಲ ಎಂದಲ್ಲವೇ ಯಡ್ಡಿ ಆಶ್ವಾಸನೆ ...ುನಾವಣೆಯಲ್ಲಿ ಗೆದ್ದದ್ದು? ಆದರೀಗ ಬೇರೆಯ ...ಮಾಡಿದ್ದನ್ನೇ ತಾನೂ ಮಾಡಿದ್ದೇನೆ ಎನ್ನುತ್ತಿರುವ ...ಅವರೂ ಕಳ್ಳರು, ನಾನೂ ಕಳ್ಳ' ಎಂದು ತನ್ನ ...ನ್ನು ಒಪ್ಪಿಕೊಂಡಿದ್ದಾರೆ. ಇನ್ನೊಂದು ಅಂಶ, ...ರಣಕ್ಕೇ ಒಬ್ಬ ಭ್ರಷ್ಟನ ಪರ ವಹಿಸುವಂತಹ ... ಲಿಂಗಾಯತರಿಗೆ ಯಾಕೆ ಬಂತು? ಹೀಗೆ ...ನ್ನೇ ಲಿಂಗಾಯತರು ಮುಖ್ಯವಾಗಿಸಿಕೊಂಡು ...ರವನ್ನು ಒಪ್ಪಿಕೊಂಡರೆ ನಾಳೆ ಒಬ್ಬ ಕೊಲೆಗಡುಕ ...ಅತ್ಯಾಚಾರಿಯನ್ನೂ ಸಮರ್ಥಿಸಿಕೊಳ್ಳುತ್ತಾರೆಯೇ?" ...ನಾನು ಅವರಿಗೆ ಮರು ಪ್ರಶ್ನೆಗಳನ್ನೇ ಹಾಕಿದೆ. ... ಆ ಹಿರಿಯರಿಗೆ ಏನೆಂದು ಉತ್ತರಿಸಲು ...ನೆ ಸುಮ್ಮನಾದರು.


...ಿ ಆ ಹಿರಿಯರಂತೆಯೇ ಇವತ್ತು ಇತರೆ ಲಿಂಗಾ... ಯಡ್ಡಿಯ ಪರ ನಿಂತಿರುವುದು ಲಿಂಗಾಯತ ... ಆ ಸಮುದಾಯಕ್ಕೂ ಅಪಾಯಕಾರಿಯಾಗಿದೆ. ...ದೆ ಇದೇ ಕಾಲಂನಲ್ಲಿ ಹೇಗೆ ಬಿಜೆಪಿಯ ... ಅಜೆಂಡಾಗೆ ವಿರುದ್ಧವಾಗಿ ಲಿಂಗಾಯತ ಧರ್ಮ ...ದೂ, ಹೇಗೆ ಯಡಿಯೂರಪ್ಪ ಇವತ್ತು ...ತನಾಗಿ ಉಳಿದಿಲ್ಲ ಎಂದೂ ಬರೆದಿದ್ದೆ. ಆದರೂ ...ಯಡ್ಡಿಯ ಮತ್ತು ಬಿಜೆಪಿಯ ಅನಾಹುತಕಾರಿ ...ುತ್ತು ಸಿದ್ಧಾಂತದ ಬಗ್ಗೆ ಮತ್ತೊಮ್ಮೆ ಹೇಳಿ ...ಜೆಪಿಯಿಂದ ಲಿಂಗಾಯತರನ್ನು ರಕ್ಷಿಸಬೇಕಿದೆ ...ಿ.

...ವಲನೆಯದಾಗಿ ಲಿಂಗಾಯತರು ನೆನಪಿಟ್ಟುಕೊಳ್ಳ... ಸಂಗತಿ ಯಾವುದೆಂದರೆ ಎಲ್ಲಾ ಲಿಂಗಾಯತರೂ ...ಾಲದಲ್ಲಿ ಇತರೆ ಜಾತಿ ಮತ್ತು ಧರ್ಮಗಳಿಂದ ...ರಗೊಂಡಿರುವವರು. ಅದಕ್ಕೆ ಕಾರಣೀಭೂತ ... ಬಸವಣ್ಣನವರು. ಯಾವ ಶ್ರೇಣೀಕೃತ ಜಾತಿ ...ನ್ನು ಇವತ್ತು ಹಿಂದೂತ್ವವಾದಿ ಸಂಘಪರಿವಾರಿ ಗಳು 'ಹಿಂದೂ ಧರ್ಮ' ಎಂದು ಕರೆಯುತ್ತಾರೋ ಆ 'ಧರ್ಮ'ದಲ್ಲಿನ ಅಸಮಾನತೆ, ಅಸ್ಪೃಶ್ಯತೆಯಂತಹ ಅಮಾನವೀಯ ಮೌಲ್ಯಗಳನ್ನು ಧಿಕ್ಕರಿಸಿ ಲಿಂಗಾಯತ ಧರ್ಮ ರೂಪು ತಳೆಯಲು ಬಸವಣ್ಣ ಶ್ರಮಿಸಿದ್ದರು. ಅವರು 12ನೇ ಶತಮಾನದಲ್ಲಿ ಹುಟ್ಟು ಹಾಕಿದ ಈ ಹೊಸ ಧರ್ಮದಲ್ಲಿನ ವಿಶಾಲತೆ ಮನೋಭಾವವನ್ನು ಕಂಡು ಅದರತ್ತ ಆಕರ್ಷಿತರಾಗಿ ಮತಾಂತರಗೊಂಡವರೇ ಇವತ್ತಿನ ಲಿಂಗಾಯತರು.

ಸಮಾನತೆ, ಸಹಬಾಳ್ವೆ ಮತ್ತು ಸಹಿಷ್ಣುತೆಯನ್ನು ಸಾರುವ ಲಿಂಗಾಯತ ಧರ್ಮ ಬಿಜೆಪಿಯ 'ಹಿಂದೂ ಧರ್ಮ'ಕ್ಕಿಂತ ಉತ್ತಮವಾದದ್ದು ಮಾತ್ರವಲ್ಲ, ಆ 'ಹಿಂದೂ ಧರ್ಮ'ಕ್ಕೆ ಸೇರದೆ ಇರುವಂತಹದ್ದು. ಆದರೂ ಯಡ್ಡಿಯ ಕಾರಣಕ್ಕೆ ಲಿಂಗಾಯತರು ತಮ್ಮ ಧರ್ಮದ ತತ್ವಗಳ ವಿರುದ್ಧವಾದ ಸಿದ್ಧಾಂತ ಹೊಂದಿರುವ ಬಿಜೆಪಿಯನ್ನು ಬೆಂಬಲಿಸುವುದು ತಮ್ಮ ಧರ್ಮಕ್ಕೇ ದ್ರೋಹ ಬಗೆದಂತಲ್ಲವೇ?

ಇನ್ನು ಯಡ್ಡಿಯ ವಿಚಾರಕ್ಕೆ ಬಂದರೆ ಆತ ಯಾವ ರೀತಿಯಲ್ಲಿ ಲಿಂಗಾಯತ ಧರ್ಮವನ್ನು ಪಾಲಿಸುತ್ತಿದ್ದಾರೆ ಎಂಬುದರತ್ತ ಲಿಂಗಾಯತರು ಗಮನ ಹರಿಸಬೇಕಿದೆ. ಬಸವಣ್ಣ ಸೇರಿದಂತೆ ಲಿಂಗಾಯತರಿಗೆ ವಿಭೂತಿ ಮುಖ್ಯ. ಆದರೆ ಯಡ್ಡಿಯ ಮುಖದಲ್ಲಿ ಕಂಗೊಳಿಸುವುದು ವಿಭೂತಿ ಅಲ್ಲ, ಬದಲಿಗೆ ಪುರೋಹಿತಶಾಹಿಗಳ ಕುಂಕುಮ. ಈ ಕುಂಕುಮವನ್ನು ಯಾವ ಲಿಂಗಾಯತ ಮಠಾಧೀಶರಾದರೂ ಧರಿಸಿರುವುದನ್ನು ಯಾರಾದರು ನೋಡಿದ್ದಾರೆಯೇ?

ಇನ್ನು ನಮ್ಮ ಸಮುದಾಯಗಳಲ್ಲಿ ನಮ್ಮ ಮಕ್ಕಳಿಗೆ ಇಡುವ ಹೆಸರುಗಳೂ ನಮ್ಮ ಪರಂಪರೆಯೊಂದಿಗೆ ಬೆಸೆದುಕೊಂಡಿರುತ್ತವೆ (ಆಧುನಿಕ ಕಾಲದಲ್ಲಿ ಇದು ಸಡಿಲಗೊಳ್ಳುತ್ತಿದೆ ಎಂಬುದು ನಿಜ). ಆ ನಿಟ್ಟಿನಲ್ಲಿ ಸುಮಾರು ನಲವತ್ತು ವರ್ಷಗಳ ಹಿಂದೆಯೇ ಯಡ್ಡಿ ತನ್ನ ಇಬ್ಬರು ಪುತ್ರರಿಗೆ ಇಟ್ಟಿರುವ ಹೆಸರುಗಳು ಯಾವುವು? ವಿಜಯೇಂದ್ರ ಮತ್ತು ರಾಘವೇಂದ್ರ! ಈ ಎರಡೂ ಹೆಸರುಗಳು ಲಿಂಗಾಯತ ಪರಂಪರೆಗೆ ಸೇರಿದ್ದವಲ್ಲ. ಬದಲಾಗಿ ಯಾವ ಪುರೋಹಿತಶಾಹಿ ವ್ಯವಸ್ಥೆಯನ್ನು ವಿರೋಧಿಸಿ ಬಸವಣ್ಣ ಲಿಂಗಾಯತ ಧರ್ಮವನ್ನು ಸ್ಥಾಪಿಸಿದ್ದರೋ ಅಂತಹ ಸಂಪ್ರದಾಯಕ್ಕೆ ಸೇರಿರುವ ಮಾಧ್ವ ಪರಂಪರೆಯ ಹೆಸರುಗಳು. ಅಂದರೆ ಯಡ್ಡಿಗೆ ಲಿಂಗಾಯತ ಪರಂಪರೆಗಿಂತ ಚೆಡ್ಡಿ ಪರಂಪರೆಯೇ ಪ್ರಿಯ ಎಂದು ಅರ್ಥವಲ್ಲವೇ? ಈತ ಎಂತಹ ಲಿಂಗಾಯತ?



ಲಿಂಗಾಯತ ಧರ್ಮ ದೇವಸ್ಥಾನ ಸಂಸ್ಕೃತಿಯನ್ನು ವಿರೋಧಿಸುತ್ತದೆ. ಬಸವಣ್ಣನವರಂತೂ 'ದೇಹವೇ ದೇಗುಲವಯ್ಯ' ಎಂದು ಸಾರಿದ್ದರು. ಆದರೆ ಯಡ್ಡಿ ಮಾಡುತ್ತಿರುವುದು ಏನನ್ನು? ಇವತ್ತು ರಾಜ್ಯದ ಯಾವ ಮೂಲೆಯಲ್ಲೂ ಯಡ್ಡಿ ಭೇಟಿ ನೀಡದಿರುವ ದೇವಸ್ಥಾನ ಇಲ್ಲ ಎಂದರೆ ತಪ್ಪಾಗಲಾರದು. ಹಲವು ಪ್ರಜ್ಞಾವಂತ ಗುರುಗಳನ್ನು ಹೊರತುಪಡಿಸಿದರೆ ಯಡ್ಡಿ ಸಾಷ್ಟಾಂಗ ನಮಸ್ಕಾರ ಮಾಡದೆ ಇರುವ ಭ್ರಷ್ಟ, ಧರ್ಮಾಂಧ ಮಠಾಧೀಶನೂ ರಾಜ್ಯದಲ್ಲಿ ಇಲ್ಲವೇನೋ.

ಇನ್ನು ಲಿಂಗಾಯತರು ಅಗ್ನಿಯ ಆರಾಧಕರಲ್ಲ. ಆದ್ದರಿಂದಲೇ ಅವರ ಯಾವ ಸಂಪ್ರದಾಯಗಳಲ್ಲೂ ಅಗ್ನಿಗೆ ಸ್ಥಾನಮಾನವಿಲ್ಲ. ಮಾತ್ರವಲ್ಲ, ಅಗ್ನಿಗೆ ಪವಿತ್ರಗೊಳಿಸುವ ಶಕ್ತಿ ಇದೆ ಎಂದು ಬ್ರಾಹ್ಮಣರಂತೆ ಲಿಂಗಾಯತರು ನಂಬಿಲ್ಲ. ಆ ಕಾರಣಕ್ಕೇ ಲಿಂಗಾಯತರು ಮೃತರನ್ನು ಅಗ್ನಿಗೊಡ್ಡದೆ ಮಣ್ಣು ಮಾಡುತ್ತಾರೆ.

ಆದರೆ ಯಡಿಯೂರಪ್ಪ ಮಾಡಿರುವುದು ಏನನ್ನು? ಅವರ ಪತ್ನಿ ಮೈತ್ರಾ ದೇವಿ ತೀರಿಕೊಂಡಾಗ ಆಕೆಯ ದೇಹವನ್ನು ಲಿಂಗಾಯತರ ಸಂಪ್ರದಾಯದಂತೆ ಮಣ್ಣು ಮಾಡಲಿಲ್ಲ, ಬದಲಾಗಿ ಸುಟ್ಟು ಹಾಕಿದರು, ಬ್ರಾಹ್ಮಣರಂತೆ. ಅದಕ್ಕೆ ಕಾರಣ ಮೈತ್ರಾದೇವಿ ಅನುಮಾನಾಸ್ಪದವಾಗಿ ಸಾವನ್ನಪ್ಪಿದ್ದು ಕಾರಣವಿರಬಹುದು. (ಯಾರಾದರು ಮುಂದೊಂದು ದಿನ ಆಕೆಯ ಸಾವಿನ ಬಗ್ಗೆ ವಿಚಾರಣೆ ನಡೆಸಿದರೆ ಎಂಬ ಭಯ ಅವರನ್ನು ಕಾಡಿದ್ದಿರಬಹುದು.) ಆ ನಂತರ ಅಧಿಕಾರ ಬಂದ ಕೂಡಲೇ ವಿಧಾನಸೌಧದಲ್ಲೇ ಹೋಮ ಮಾಡಿಸಿದರು. ಸೂರ್ಯಗ್ರಹಣ ಸಂಭವಿಸಿದಾಗಲೂ ಹೋಮ ಮಾಡಿಸಿದರು. ಇನ್ನು ಅವರ ಸ್ಥಾನಕ್ಕೆ ಕಂಟಕ ಎದುರಾದಾಗಲೆಲ್ಲ ಹೋಮಹವನಗಳಲ್ಲಿ ಮುಳುಗಿದರು. ಈಗ ಅವರು ಶತ್ರು ಸಂಹಾರದಂತಹ ಮೌಢ್ಯಗಳಲ್ಲೂ ಭಾಗವಹಿಸಲಾರಂಭಿಸಿದ್ದಾರೆ. ಆ ಮೂಲಕ ಬಸವಣ್ಣನವರ ಧ್ಯೇಯಗಳಿಗೆ ತಿಲಾಂಜಲಿ ಇಟ್ಟಿದ್ದಾರೆ. ಈತ ಎಷ್ಟರಮಟ್ಟಿಗೆ ಲಿಂಗಾಯತ?

ಇನ್ನು ಲಿಂಗಾಯತ ಧರ್ಮದ ಮುಖ್ಯ ಸಿದ್ಧಾಂತಗಳಲ್ಲಿ 'ಕಾಯಕವೇ ಕೈಲಾಸ' ಎಂಬುದು ಮುಖ್ಯವಾದದ್ದು. ಅಂದರೆ ಯಾವ ಕಾಯಕವೂ ಹೀನವಲ್ಲ, ಅಸ್ಪೃಶ್ಯವಲ್ಲ, ಎಲ್ಲರೂ ಈ ಸಮಾಜಕ್ಕೆ ಮುಖ್ಯ ಎಂಬ ಧೋರಣೆ ಈ ಸಿದ್ಧಾಂತದಲ್ಲಿ ಅಡಕವಾಗಿದೆ. ಆದರೆ ಒಮ್ಮೆ ಕೆಂಪು ರೇಷ್ಮೆ ಸೀರೆಯನ್ನು ಹೋಮದ ಅಗ್ನಿಯಲ್ಲಿ ಯಡ್ಡಿ ಭಸ್ಮ ಮಾಡಿದರು. ಸುಮ್ಮನೆ ಯೋಚಿಸಿ. ಆ ಒಂದು ಸೀರೆಯ ಹಿಂದೆ ಅದೆಷ್ಟು ಜನರ ಕಾಯಕ ಅಡಗಿತ್ತು. ಹಿಪ್ಪುನೇರಳೆ ಬೆಳೆದ ರೈತ, ರೇಷ್ಮೆಹುಳು ಸಾಕಿದ ಮನುಷ್ಯ, ರೇಷ್ಮೆ ನೂಲು ತೆಗೆದ ಕಾರ್ಮಿಕ, ನೂಲಿಗೆ ಬಣ್ಣ ಹಚ್ಚಿದ ತಜ್ಞ, ಅದನ್ನು ಸೀರೆಯಾಗಿ ಪರಿವರ್ತಿಸಿದ ಕುಶಲಕರ್ಮಿ... ಇಂತಹ ಹಲವಾರು ಜನರ ಶ್ರಮ ಇತ್ತು, ಆದರೆ ಅವರ್‍ಯಾರೂ ಮೂರ್ಖ ಯಡ್ಡಿಗೆ ಮುಖ್ಯವಾಗಲೇ ಇಲ್ಲ. ಆ ಸೀರೆಯನ್ನು ಸುಡುವ ಮೂಲಕ ಯಡ್ಡಿ 'ಕಾಯಕವೇ ಕೈಲಾಸ' ಎಂಬ ಬಸವ ತತ್ವಕ್ಕೆ ಅವಮಾನ ಮಾಡಿದರು.

ಹೀಗೆ ಯಡಿಯೂರಪ್ಪ ಪ್ರತಿಹಂತದಲ್ಲೂ ಲಿಂಗಾಯತ ಧರ್ಮದ ಮೂಲ ಆಶಯಗಳಿಗೆ ಮತ್ತು ಮೂಲ ಸಿದ್ಧಾಂತಗಳಿಗೆ ದ್ರೋಹ ಬಗೆಯುತ್ತಾ ಬಂದಿದ್ದಾರಲ್ಲದೆ, ಯಾವ ಪುರೋಹಿತಶಾಹಿಯ ವಿರುದ್ಧ ಬಸವಣ್ಣ ಸಿಡಿದು ನಿಂತಿದ್ದರೋ ಅದೇ ಪುರೋಹಿತಶಾಹಿಯ ಉದ್ಧಾರಕ್ಕೆ ಯಡ್ಡಿ ನಿಂತಿದ್ದಾರೆ. ಆ ಮೂಲಕ ಲಿಂಗಾಯತ ಧರ್ಮವನ್ನೇ ನಾಶಮಾಡಲು ಹೊರಟಿದ್ದಾರೆ.

ನೆನಪಿದೆಯೇ, ಯಡ್ಡಿ ಅಧಿಕಾರಕ್ಕೆ ಬಂದಕೂಡಲೆ ರಾಜ್ಯದ ಶಾಲೆಗಳಲ್ಲಿ ಭಗವದ್ಗೀತೆಯನ್ನು ಬೋಧಿಸುವ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದರು. ಆದರೆ ಇದೇ ಭಗವದ್ಗೀತೆಯ ಬಗ್ಗೆ ಬಸವಣ್ಣನವರ ವಚನವೊಂದು ಹೀಗಿದೆ:

ಗೀತವ ಬಲ್ಲಾತ ಜಾಣನಲ್ಲ,
ಮಾತ ಬಲ್ಲಾತ ಜಾಣನಲ್ಲ,
ಜಾಣನು ಜಾಣನು, ಆತ ಜಾಣನು;
ಲಿಂಗವ ನೆರೆ-ನಂಬಿದಾತ ಆತ ಜಾಣನು!
ಜಂಗಮಕ್ಕೆ ಸವೆಸುವಾತ ಆತ ಜಾಣನು!
ಜವನ ಬಾಯಲು ಬಾಲವ ಕೊಯ್ದು
ಹೋದಾತ ಆತ ಜಾಣನು
ನಮ್ಮ ಕೂಡಲಸಂಗಮನ ಶರಣನು!

ಹಾಗೆಯೇ ಇನ್ನೊಂದು ವಚನದಲ್ಲಿ

ಗೀತವ ಹಾಡಿದರೇನು,
ಶಾಸ್ತ್ರ ಪುರಾಣವ ಕೇಳಿದರೇನು,
ವೇದವೇದಾಂತವನೋದಿದರೇನು,
ಮನವೊಲಿದು ಲಿಂಗಜಂಗಮವ
ಪೂಜಿಸಲರಿಯದವರು?
ಇವೆಲ್ಲರಲ್ಲಿಯೂ ಅನುಭಾವಿಯಾದರೇನು,
ಭಕ್ತಿಯಿಲ್ಲದವರನೊಲ್ಲ ಕೂಡಲಸಂಗಮ ದೇವಾ.

ಆದರೆ ಯಡ್ಡಿ ಎಂಬ ಲಿಂಗಾಯತ ದ್ರೋಹಿಗೆ ಇದೆಲ್ಲ ಹೇಗೆ ಗೊತ್ತಿರಬೇಕು ಹೇಳಿ. ಆದ್ದರಿಂದಲೇ ಅವರು ಕನ್ನಡದ ಮಕ್ಕಳನ್ನು 'ಜಾಣ'ರಾಗಿಸಲು ಅವರೆಲ್ಲರಿಗೆ ಈ ಗೀತೆಯನ್ನು ಬೋಧಿಸಿದ್ದರು. ಭಗವದ್ಗೀತೆಯ ಬದಲಾಗಿ ರಾಜ್ಯದ ಮಕ್ಕಳಿಗೆ ಶರಣ ಸಂಸ್ಕೃತಿಯ ಭಾಗವಾಗಿರುವ ವಚನಗಳನ್ನು ಕಲಿಸಬಹುದಿತ್ತು. ಆ ಮೂಲಕ ಅವರನ್ನೆಲ್ಲ ಜನಪರವಾಗಿ ರೂಪಿಸಬಹುದಿತ್ತು. ಹಾಗೆ ಮಾಡುವ ಬದಲಾಗಿ ಯಡ್ಡಿ ಅವರನ್ನೆಲ್ಲ ವೈದಿಕರ ದಾಸರನ್ನಾಗಿಸಿದರು. ಇದು ಓರ್ವ ಲಿಂಗಾಯತ ಮಾಡುವ ಕೆಲಸವೇ?


ಹೀಗೆ, ಯಡ್ಡಿ ಮುಖ್ಯಮಂತ್ರಿ ಆಗಿದ್ದರಿಂದ ಲಿಂಗಾಯತ ಸಮುದಾಯಕ್ಕೆ ಲಾಭಕ್ಕಿಂತ ನಷ್ಟವೇ ಆಗುತ್ತಿದೆ. ಆತನಿಂದಾಗಿ ಹಲವು ಮಠಗಳು ಅಕ್ರಮವಾಗಿ ಸಾರ್ವಜನಿಕ ಹಣವನ್ನು ಸ್ವಾಹಾ ಮಾಡಿವೆ. ಹಲವು ಭ್ರಷ್ಟ ಲಿಂಗಾಯತ ಅಧಿಕಾರಿಗಳಿಗೆ ಆಯಕಟ್ಟಿನ ಸ್ಥಾನಗಳು ಸಿಕ್ಕಿ ಅವರು ಕೊಬ್ಬಿದ್ದಾರೆ. ಸ್ವತಃ ಯಡ್ಡಿ ಮತ್ತಾತನ ಮಕ್ಕಳು, ಮರಿಗಳು ಸರ್ಕಾರದ ಆಸ್ತಿಯನ್ನು ಲೂಟಿ ಮಾಡಿ ತಮ್ಮ ತಿಜೋರಿಯನ್ನು ತುಂಬಿಸಿಕೊಂಡಿದ್ದಾರೆ.

ಇದೆಲ್ಲದರಿಂದ ಸಾಮಾನ್ಯ, ಸಜ್ಜನ, ಸ್ವಾಭಿಮಾನಿ ಲಿಂಗಾಯತರಿಗೆ ಆದದ್ದೇನು? ತಮ್ಮ ಜಾತಿಗೆ ಸೇರಿದ ಇಂತಹ ವ್ಯಕ್ತಿ ದೇಶದಾದ್ಯಂತ ತಮ್ಮ ಸಮುದಾಯದ ಮಾನ ಹರಾಜು ಮಾಡಿದ ಎಂಬ ಕಳಂಕ ಮಾತ್ರವಲ್ಲವೆ?

ಇಂತಹ ಭ್ರಷ್ಟ ವ್ಯಕ್ತಿ ಲಿಂಗಾಯತ ಜಾತಿಯಲ್ಲಿ ಹುಟ್ಟಿದ ಎಂಬ ಏಕೈಕ ಕಾರಣಕ್ಕೆ, ಲಿಂಗಾಯತರು ಆತನಿಗೆ ಬೆಂಬಲವನ್ನು ನೀಡಬೇಕೆ? ಆ ಮೂಲಕ ತಮ್ಮ ಸಮುದಾಯಕ್ಕೆ, ತಮ್ಮ ಧರ್ಮಕ್ಕೆ ದ್ರೋಹವೆಸಗಬೇಕೆ?

ಲಿಂಗಾಯತರು ಈಗಲಾದರೂ ಎಚ್ಚೆತ್ತುಕೊಳ್ಳಬೇಕಿದೆ. ●

ಇ.ಕೆ. ಎನ್‌ಕ್ಲೇವ್ ಮುಂಗಾರು ಮಳೆ ಕೃಷ್ಣಪ್ಪನ 100 ಕೋಟಿಯ ಭೂದರೋಡೆ



ಸಿದ್ಧದ ಮಾರುಕಟ್ಟೆ ರೇಟಿನ ಪ್ರಕಾರವೇ ಲೆಕ್ಕ ಹಾಕುವುದಾದರೆ ಅದು ನೂರು ಕೋಟಿಯ ಭೂದರೋಡೆ!

ಅದಕ್ಕೆ ಮುಂಗಾರು ಮಳೆ ಕೃಷ್ಣಪ್ಪ ಅಲಿಯಾಸ್ ಅದಕಮಾರನಹಳ್ಳಿ ಕೃಷ್ಣಪ್ಪ ಕೊಟ್ಟುಕೊಂಡಿರುವ ಹೆಸರು ಇ.ಕೆ. ಎನ್‌ಕ್ಲೇವ್!

ಸದ್ಯ ಬೆಂಗಳೂರು-ತುಮಕೂರು ರಸ್ತೆಯಲ್ಲಿ ಪೀಣ್ಯದಿಂದ ಹಿಡಿದು ನೆಲಮಂಗಲದ ತನಕ ಈ ಇ.ಕೆ. ಎನ್‌ಕ್ಲೇವ್‌ನ ಮಿರಿಮಿರಿ ಮಿಂಚುವ ಜಾಹೀರಾತುಗಳೇ ಕಣ್ಣು ಕುಕ್ಕುತ್ತವೆ. ಇಲ್ಲಿ ಇ.ಕೆ. ಎಂದರೆ ಮುಂಗಾರು ಮಳೆ ನಿರ್ಮಾಪಕ ಅರ್ಥಾತ್ ಹಾಲಿ ವಿಧಾನ ಪರಿಷತ್ ಸದಸ್ಯ ಇ. ಕೃಷ್ಣಪ್ಪ ಯಾರದೋ ಜಮೀನು ಕಿತ್ತುಕೊಂಡು, ಅದಕ್ಕೆ ಅಕ್ಕಪಕ್ಕದ ಸರ್ಕಾರಿ ಭೂಮಿಯನ್ನೂ ಸೇರಿಸಿಕೊಂಡು, ನಕಲಿ ದಾಖಲೆ ಸೃಷ್ಟಿಸಿ, ಬಿಎಂಆರ್‌ಡಿಎ ಮತ್ತು ನೆಲಮಂಗಲದ ಯೋಜನಾ ಪ್ರಾಧಿಕಾರದ ಅಧಿಕಾರಿಗಳನ್ನೂ ಬುಟ್ಟಿಗೆ ಹಾಕಿಕೊಂಡು ರೂಪುಗೊಂಡ ಇಂಥ ವಂಚನಾಕಾಂಡದಿಂದ ಕೇವಲ ರೈತರಷ್ಟೇ ಅಲ್ಲ, ನಂಬಿ ಸೈಟು ಕೊಂಡವರು ಕೂಡ ಬೀದಿಗೆ ಬೀಳುವುದು ಶತಸ್ಸಿದ್ಧ.

ಒಂದೆಡೆ ದಲಿತರು, ರೈತರನ್ನು ತನ್ನ ಬಾಡಿಗೆ ಬಂಟರನ್ನು ಬಿಟ್ಟು ಪ್ರತಿನಿತ್ಯ ಪೀಡಿಸುವುದು, ಮತ್ತೊಂದೆಡೆ ಈಗಾಗಲೇ ಸೈಟು ಕೊಂಡವರನ್ನು ಹಿಂಸಿಸುವುದು ಮಾಡಿಕೊಂಡೇ ತಾನೊಬ್ಬ ಗಣ್ಯ ರಾಜಕಾರಣಿಯಂತೆ ಪೋಜು ಕೊಡುವ ಮುಂಗಾರು ಮಳೆ ಕೃಷ್ಣಪ್ಪನ ಹಣದಾಹ ಮತ್ತು ಭೂದಾಹಕ್ಕೆ ಬಿಜೆಪಿ ಸರ್ಕಾರದ ಅಧಿಕಾರಿಗಳು ಕೈಜೋಡಿಸಿದ್ದಾರೆ. ದುಡ್ಡೊಂದಿದ್ದರೆ ಕಾಯ್ದೆ ಕಾನೂನುಗಳೆಲ್ಲ ಹೇಗೆ ಕಾಲಕಸವಾಗುತ್ತವೆ ಎಂಬುದಕ್ಕೆ ಇದು ಮತ್ತೊಂದು ನಿದರ್ಶನವಷ್ಟೆ.

ಇ.ಕೆ.. ಎನ್‌ಕ್ಲೇವ್

ಬೆಂಗಳೂರು-ತುಮಕೂರು ರಸ್ತೆಗೆ ಹೊಂದಿಕೊಂಡಂತೆ ರಾಷ್ಟ್ರೀಯ ಹೆದ್ದಾರಿ-4 ರಲ್ಲಿ ರಾವುತ್ತನಹಳ್ಳಿಗೆ ಹೋಗುವ ಕೂಡು ದಾರಿಯ ಮಧ್ಯೆ 52.15 ಎಕರೆ ವಿಸ್ತೀರ್ಣದ ಇ.ಕೆ. ಎನ್‌ಕ್ಲೇವ್ ತಲೆ ಎತ್ತಿದೆ. ಇದು ಬೆಂಗಳೂರು-ಉತ್ತರ ತಾಲ್ಲೂಕಿನ ದಾಸನಪುರ ಹೋಬಳಿಯ ಗೌಡಹಳ್ಳಿ, ಶಿವನಪುರ



ಇ.ಕೆ.ಎನ್‌ಕ್ಲೇವ್‌ನ ಜಾಹೀರಾತು

ಮತ್ತು ಗೆಜ್ಜಗದ ಹಳ್ಳಿಗಳ ನಡುವಿನ ವಿಶಾಲ ಗೋಮಾಳ, ಕೆರೆ ಮತ್ತು ಸರ್ಕಾರಿ ಜಮೀನಿನ ನಡುವಿನ ಭೂಭಾಗ. ಗೌಡಹಳ್ಳಿಯ ಸ.ನಂ. 59 ರಲ್ಲಿ ಹತ್ತೆಕರೆ, ಸ.ನಂ. 71 ರಿಂದ 75 ರಲ್ಲಿ ಎಂಟೆಕರೆ ಮತ್ತು ಶಿವನಪುರದ ಸ.ನಂ. 137ರಿಂದ 143 ರಲ್ಲಿ 34.15 ಎಕರೆ ಸೇರಿದಂತೆ ಒಟ್ಟು 52.15 ಎಕರೆ ವಿಸ್ತೀರ್ಣದಲ್ಲಿ ಇ.ಕೆ. ಎನ್‌ಕ್ಲೇವ್‌ಗೆಂದು ಬಿಎಂಆರ್‌ಡಿಎ ಪರವಾನಗಿ ಕೊಟ್ಟಿದೆ. ಅದನ್ನು ಸ್ಥಳೀಯ ನೆಲಮಂಗಲ ಯೋಜನಾ ಪ್ರಾಧಿಕಾರವೂ (NPA) ಸಮ್ಮತಿಸಿ 2009 ರ ಫೆಬ್ರವರಿ 11 ರಂದು ಬಡಾವಣೆಯ ನಕ್ಷೆ ಮಂಜೂರು ಮಾಡಿದೆ.

ಇದನ್ನೇ ಬೋರ್ಡು ಬರೆಸಿ ಹೆದ್ದಾರಿಯುದ್ದಕ್ಕೂ ಹಾಕಿಸಿರುವ ಎಮ್ಮೆಲ್ಸಿ ಕೃಷ್ಣಪ್ಪ ಸದ್ಯ ಪ್ರತಿ ಸೈಟೊಂದನ್ನು 10 ರಿಂದ 20 ಲಕ್ಷಕ್ಕೆ ಮಾರಿಕೊಳ್ಳುತ್ತಿದ್ದಾನೆ. ಪೀಣ್ಯದಿಂದ ಶುರುವಾಗಿ ನೆಲಮಂಗಲಗದ ತನಕ ಕೃಷ್ಣಪ್ಪನ ಲೇಔಟಿಗೆ ಸೈಟು ಮಾರಿಸಿಕೊಡುವ ಬ್ರೋಕರುಗಳ ಹಿಂಡೇ ಇದೆ. ನಂಬಿದ ಅದೆಷ್ಟು ಮಂದಿ ಕಾಸು ಕೊಟ್ಟು ಸೈಟು ಖರೀದಿಸಿದ್ದಾರೋ ಗೊತ್ತಿಲ್ಲ.



ಮೇಲುನೋಟಕ್ಕೆ ಬಿಎಂಆರ್‌ಡಿಎ ಮತ್ತು ನೆಲಮಂಗಲ ಪ್ರಾಧಿಕಾರಿಗಳು ತಮ್ಮ ಅಪ್ರೂವಲ್ ಕೊಟ್ಟವೆಯಾದ್ದರಿಂದ ಮುಗ್ಧ ನಿವೇಶನದಾರರು ಇದು ಪಕ್ಕಾ ಕೃಷ್ಣಪ್ಪನದೇ ಆಸ್ತಿಯಾ ಜಮೀನಿನ ಹಕ್ಕು ಮಾರುವವನದ್ದೇ ಕೈಯಲ್ಲಿದೆಯಾ; ಇತ್ಯಾದಿ ತಲೆ ಕೆಡಿಸಿಕೊಳ್ಳುವುದಿಲ್ಲ, ಕೊಂಡವರಿಗೆ ಮಾರುವವನ ಕೈಚಳಕ ಗೊತ್ತಿರುವುದಿಲ್ಲ,

ಬೀದಿಗೆ ಬಿದ್ದ 1200 ಮಂದಿ

ಹಕೀಕತ್ತೇನೆಂದರೆ ಇಲ್ಲಿ ಜಮೀನಿಗೂ ಲೇಔಟು ಮಾಡಿದ ಕೃಷ್ಣಪ್ಪನಿಗೂ ಯಾವುದೇ ಸಂಬಂಧವಿಲ್ಲ, ಈ ಪೈಕಿ ಅರ್ಧಕ್ಕರ್ಧ ಸರ್ಕಾರಿ ಗೋಮಾಳವಾದರೆ ಉಳಿದರ್ಧ ಭೂಮಿಯಲ್ಲಾಗಲೇ ಸೈಟು ಕೊಂಡವರು ನಿಂತು ಎದೆಬಡಿದುಕೊಳ್ಳುತ್ತಿದ್ದಾರೆ. ಯಾವ ಇ.ಕೆ. ಎನ್‌ಕ್ಲೇವ್‌ಗೆಂದು ಬಿಎಂಆರ್‌ಡಿಎ ನಕ್ಷೆ ಮಂಜೂರು ಮಾಡಿದೆಯೋ ಅದು ತನ್ನ ಷರತ್ತಿನಲ್ಲಿ; ಮಂಜೂರು ಮಾಡಿದ ನಕ್ಷೆಯೇನಿದ್ದರೂ ಕೇವಲ ತಾಂತ್ರಿಕವೇ ಹೊರತು ಇದನ್ನೇ ಮುಂದಿಟ್ಟುಕೊಂಡು ಜಮೀನಿನ ಮೇಲಿನ ಹಕ್ಕನ್ನು ಪ್ರತಿಪಾದಿಸುವುದಾಗಲಿ, ಭೂಮಿಯ ಮಾಲೀಕತ್ವವನ್ನು ನಿರ್ಧರಿಸುವುದಾಗಲಿ ಮಾಡುವಂತಿಲ್ಲ ಎಂದು ಸ್ಪಷ್ಟವಾಗಿ ನಮೂದಿಸಿದೆ.

ಜಮೀನಿಗೆ ಸಂಬಂಧಿಸಿದ ಯಾವುದೇ ಸಿವಿಲ್ ವ್ಯಾಜ್ಯಗಳಿಗೆ ಪ್ರಾಧಿಕಾರವು ಹೊಣೆಯಲ್ಲ ಎಂದೇ ನೆಲಮಂಗಲ ಯೋಜನಾ ಪ್ರಾಧಿಕಾರ ತನ್ನ ನಕ್ಷೆ ಮಂಜೂರಾತಿ ಆದೇಶದಲ್ಲಿ ಸ್ಪಷ್ಟಪಡಿಸಿದೆಯೆಂದರೆ ಇ.ಕೆ. ಎನ್‌ಕ್ಲೇವ್‌ನ ಮರ್ಮವೇ ಇನ್ನೊಂದಿರಬೇಕಲ್ಲವೆ?


ಅಸಲಿಗೆ ನಕ್ಷೆ ಮಂಜೂರಾದ ಜಮೀನಿಗೂ ಕೃಷ್ಣಪ್ಪನಿಗೂ ಯಾವುದೇ ಸಂಬಂಧವಿಲ್ಲ. 1992-93 ರಲ್ಲಿ ಮಾಧುರಾವ್, ರವಿ ಮತ್ತು ಕಣ್ಣನ್ ಸೇರಿಕೊಂಡು ಕ್ಲಾಸಿಕ್ ಡೆವಲಪರ್ಸ್ ಹೆಸರಲ್ಲಿ ಇದೇ ಭೂಮಿಯಲ್ಲಿ ಸೈಟು ಮಾಡಿ ಬೆಂಗಳೂರಿನ 1200 ಜನಕ್ಕೆ ಮಾರಿದ್ದು ಈಗ ಇದೇಜಮೀನಿನಲ್ಲಿ ಹೇಗೆ ಕೃಷ್ಣಪ್ಪನ ಲೇಔಟು ಎದ್ದೇಳಲು ಸಾಧ್ಯ?

ಆಗ ಕ್ಲಾಸಿಕ್ ಡೆವಲಪರ್ಸ್ ರೈತರಿಗೆ ಎಕರೆಗೆ ನಾಲ್ಕೋ ಐದೋ ಲಕ್ಷ ಕೊಟ್ಟು ಖರೀದಿಸಿ ಸೈಟು ವಿಂಗಡಿಸಿ ಮಾರುತ್ತಿದ್ದ ಕಾಲದಲ್ಲಿ ಅಡಕಮಾರನಹಳ್ಳಿ ಕೃಷ್ಣಪ್ಪ ಯಕಶ್ಚಿತ್ ಲ್ಯಾಂಡ್ ಬ್ರೋಕರ್. ಅದಕ್ಕೂ ಮುನ್ನ ಹೆದ್ದಾರಿ ಪಕ್ಕದ ಫುಟ್‌ಪಾತಿನಲ್ಲಿ ನಿಂತು ಸೌತೆಕಾಯಿ ಮಾರಿಕೊಂಡಿದ್ದ. ಡೆವಲಪರ್ ಮಾಧುರಾವ್‌ನ ಛೇಲಾನಂತೆ ಆತನ ಸೂಟ್‌ಕೇಸ್ ಹಿಡಿದುಕೊಂಡು ರೈತರ ಮನೆಬಾಗಿಲು ಬಡಿಯುತ್ತಿದ್ದ ಅವತ್ತಿನ ಕೃಷ್ಣಪ್ಪ ಕ್ರಮೇಣ ತನ್ನದೇ ಗೂಂಡಾಪಡೆ ಕಟ್ಟಿಕೊಂಡು ಅನ್ನ ಕೊಟ್ಟ ಮಾಧುರಾವ್ ವಿರುದ್ಧವೇ ತಿರುಗಿಬಿದ್ದ.

ಪುಂಡರ ಗ್ಯಾಂಗ್

ಅದು 1994-95 ಕಾಲ. ರಿಯಲ್ ಎಸ್ಟೇಟ್ ನೆಲ ಕಚ್ಚಿತ್ತು, ಆ ಹೊತ್ತಿಗಾಗಲೇ ರೈತರಿಗೆ ಚೂರುಪಾರು ಅಡ್ವಾನ್ಸ್ ಕೊಟ್ಟು ನಿವೇಶನದಾರರಿಂದ ದುಡ್ಡು ಕಿತ್ತಿದ್ದ ಮಾಧುರಾವ್, ರವಿ ಮತ್ತು ಕಣ್ಣನ್ ಇತ್ತ ರೈತರಿಗೂ ಬಾಕಿ ತೀರಿಸದೇ ಅತ್ತ ನಿವೇಶನದಾರರಿಗೂ ಪೂರ್ತಿ ಸೈಟು ಕಲ್ಪಿಸಲಾಗದೇ ಮಾಡಿದ ಸಾಲಕ್ಕೂ ಬಡ್ಡಿ ಕಟ್ಟಲಾಗದೇ ಊರು ಬಿಟ್ಟು ಪರಾರಿಯಾಗಿದ್ದನ್ನೇ ಸಮಯ ಕಾದು ಕೃಷ್ಣಪ್ಪ ಎಂಟ್ರಿ ಕೊಟ್ಟ.

ಇದೇ ಅಡಕಮಾರನಹಳ್ಳಿಯ ರೌಡಿ ದಾಡಿ ಮುನಿರಾಜ ಅಲಿಯಾಸ್ ಕರಿಯ, ಡಾಬಾ ನಟರಾಜ್, ಲೋಕಲ್ ರೌಡಿ ಬಟಾಣಿ ರಾಜ, ದೊಂಬರಹಳ್ಳಿಯ ಡೀಸಿ ಗೌಡ, ಚಿಕ್ಕೇಗೌಡ ಶ್ರೀರಾಂಪುರದ ಹಳೇ ರೌಡಿ ಮಾರೇಗೌಡ ಉರ್ಫ್ ಕಳ್ಳ, ಮೀಟರ್ ಬಡ್ಡಿ ಕುಳ ಅಪ್ಪಿ ಅಲಿಯಾಸ್ ಮಾರೇಗೌಡ, ಲಾರಿ ಕಳ್ಳ ಐಸಿ ಬಾಲಕೃಷ್ಣ ಬಾರ್ ಲಕ್ಷ್ಮಣ ಹೀಗೆ ಅನಾಹುತಕಾರಿ ಲೋಕಲ್ ಪುಂಡರ ಪಡೆಯೇ ಕೃಷ್ಣಪ್ಪನ ಲ್ಯಾಂಡ್ ದಂಧೆಗೆ ಬೆಂಗಾವಲಾಯಿತು. ಮಾಧುರಾವ್‌ನನ್ನು ಅಟಕಾಯಿಸಿಕೊಂಡಿದ್ದೇ ಧಮಕಿ ಹಾಕಿದ ಕೃಷ್ಣಪ್ಪನ ರೌಡಿ ಪಡೆ ಜಮೀನು ಮಾರಿದ್ದ ರೈತರನ್ನೆಲ್ಲ ತಮ್ಮ ಕಡೆ ಮಾಡಿಕೊಂಡರು. ಮಾಧುರಾವ್ ಕೊಟ್ಟಿದ್ದಕ್ಕಿಂತಲೂ ಎಕರೆಗೆ 1 ಲಕ್ಷ ನಾನೇ ಜಾಸ್ತಿ ಕೊಡ್ತೀನಿ, ಎಕರೆಗೊಂದು ಸೈಟನ್ನೂ ಕೊಡ್ತೀನಿ, ಇದನ್ನು ಮೀರಿ ಏನಾದ್ರೂ ಮಾಧುರಾವ್ ಸಹವಾಸ ಮಾಡಿದ್ರಿ ಅಂದ್ರೆ ಕತೆಯೇ ಬೇರೆ-ಎಂದು ನೇರವಾಗಿ ರೈತರಿಗೆ ಕೃಷ್ಣಪ್ಪನ ಗ್ಯಾಂಗು ಆವಾಜು ಹಾಕಿತು. ಹೆದರಿದ ರೈತರು ಬಂದಷ್ಟು ಬರಲಿ ಎಂದು ಕೃಷ್ಣಪ್ಪ ಕಾಸು ಜೇಬಿಗಿಳಿಸಿ ಸಹಿ


ಗೋಮಾಳ ಮಧ್ಯೆ ನೀರಿನ ಟ್ಯಾಂಕ್

ಹಾಕಿಕೊಟ್ಟರು. ಕೃಷ್ಣಪ್ಪ ಇಲ್ಲಿ ಎಂಥಾ ತಲೆ ಓಡಿಸಿದ್ದನೆಂದರೆ, ನಿವೇಶನದಾರರಿಗೆ ಸೈಟು ಮಾತ್ರ ಮಾಧುರಾವ್‌ನಿಂದ ಮಂಜೂರಾಗಿತ್ತೇ ಹೊರತು ಭೂಮಿಯಿನ್ನೂ ಪೂರ್ತಿ ವರ್ಗಾವಣೆಗೊಂಡಿರಲಿಲ್ಲ.

ಈ ಮಧ್ಯೆ ಕ್ಲಾಸಿಕ್ ಡೆವಲಪರ್ಸ್ ಜೊತೆ ಇ.ಕೆ. ಇನ್ನೊಂದು ಒಪ್ಪಂದ ಮಾಡಿಕೊಂಡ. ಅದು ಇಡೀ ವ್ಯವಹಾರವನ್ನು ಮಾಧುರಾವ್ ಕೃಷ್ಣಪ್ಪನಿಗೆ ವಹಿಸಿಕೊಡುವುದು ಮತ್ತು ಆತ ಯಾರ್‍ಯಾರಿಗೆ ಸೈಟು ಮಾರಿದ್ದನೋ ಅವರನ್ನೆಲ್ಲ ಕೃಷ್ಣಪ್ಪನೇ ಸಂಭಾಳಿಸುವುದು!

ಬೋಗಸ್ ಚೆಕ್ಕುಗಳು


ಅಲ್ಲಿಗೆ ಮಾಧುರಾವ್ ಮತ್ತು ಕ್ಲಾಸಿಕ್ ಡೆವಲಪರ್ಸ್‌ನ ಇಡೀ ಲೇಔಟ್ ಪ್ಲಾನೇ ರದ್ದಾಂತಾಗಿತ್ತು. ಈಗಾಗಲೇ ಸೈಟು ಕೊಂಡಿದ್ದರಲ್ಲ ಅವರ ಮೇಲೆ ತನ್ನ ರೌಡಿ ಪಡೆಯನ್ನು ಛೂಬಿಟ್ಟು ನೀವು ಕೊಟ್ಟ ನಲವತ್ತು ಸಾವಿರಕ್ಕೆ ನಾನು

▶▶ 12

ನ್ಯಾಯ ಕೇಳಿದ ದಲಿತನ ತಲೆ ಬೋಳಿಸಿ ಮೆರವಣಿಗೆ ಅನಾಹುತಕಾರಿ ಇ.ಕೆ. ಗ್ಯಾಂಗ್


ತನ್ನ ಭೂಕಬಳಿಕೆ ಮತ್ತು ಸೈಟು ವಂಚನೆಗೆಂದು ಇ.ಕೆ. ಹುಟ್ಟುಹಾಕಿರುವ ರೌಡಿ ಪಡೆ ಮತ್ತು ಅದರ ಹಾವಳಿಯಿದೆಯಲ್ಲ; ಅದೇ ಮತ್ತೊಂದು ಭಯಾನಕ ವೃತ್ತಾಂತವಾಗುತ್ತದೆ.

ತುಮಕೂರು ರಸ್ತೆಯಲ್ಲಿ ಪೀಣ್ಯ ದಾಟಿದ ನಂತರ ನೆಲಮಂಗಲದ ತನಕ ಈ ಕಿರಾತಕರದ್ದೇ ಅಟ್ಟಹಾಸ. ಯಾರೇ ಮನೆ ಕಟ್ಟಲಿ, ಸೈಟು ಕೊಳ್ಳಲಿ ಅಥವಾ ಭೂಮಿಯನ್ನೇ ಖರೀದಿಸಲಿ. ಇ.ಕೆ. ಗ್ಯಾಂಗಿಗೆ ಕಾಣಿಕೆ ಸಂದಾಯವಾಗಲೇಬೇಕು. ಕೊನೆಕೊನೆಗೆ ಫುಟ್‌ಪಾತ್ ಪಕ್ಕ ಪೆಟ್ಟಿ ಅಂಗಡಿಯಿಡುವವ ಕೂಡ ಈ ಗ್ಯಾಂಗಿಗೆ ತಪ್ಪದೇ ರೋಲ್‌ಕಾಲ್ ಸಲ್ಲಿಸಬೇಕು.




ಇಂಥದೊಂದು ಅನಾಹುತಕಾರಿ ಗ್ಯಾಂಗಿಗೆ ನಾಯಕನಂತಿರುವವನು ಇದೇ ಅಡಕಮಾರನಹಳ್ಳಿಯ ರೌಡಿ ಮುನಿರಾಜ ಅಲಿಯಾಸ್ ಕರಿಯ. ಈತ ಇ.ಕೆ.ಗೆ ಬಲಗೈ ಬಂಟ. ಅಡಕಮಾರನಹಳ್ಳಿ ಕಾಲೋನಿಯ ಪುಂಡರ ಗ್ಯಾಂಗ್ ಪಡೆ ಸದಾ ಈತನ ಜೊತೆಗಿರುತ್ತದೆ. ದೂರದೂರದಿಂದ ಬರುವ ಲಾರಿಗಳಿಂದ ಹಫ್ತಾ ವಸೂಲಿ ಮಾಡುವುದು ಮತ್ತು ಮೀಟರ್ ಬಡ್ಡಿ ದಂಧೆ ಈತನ ಉಪಕಸುಬುಗಳು. 2005 ರಲ್ಲಿ ಜಾನಕಿ ರಾಮ್ ಎಂಬಾತನ 4 ಎಕರೆ ಆಸ್ತಿಯನ್ನು ಫೋರ್ಜರಿ ಮಾಡಿ ಲಪಟಾಯಿಸಿ ನಂತರ ಅದನ್ನು ಇ.ಕೆ. ಲೇಔಟಿಗೆ ಜಮೆ ಮಾಡಿದ್ದೇ ಈತ. ಈತನ ವಿರುದ್ಧ ನೆಲಮಂಗಲ ಪೊಲೀಸ್ ಠಾಣೆಯಲ್ಲಿ ದಲಿತರ ಮೇಲೆ ದೌರ್ಜನ್ಯವೆಸಗಿದ ಕೇಸಲ್ಲದೇ ಬೆಂಗಳೂರಿನ ಬೇರೆಬೇರೆ ಪೊಲೀಸ್ ಠಾಣೆಗಳಲ್ಲಿ ಸೈಟುದಾರರಿಗೆ ಕೊಲೆ ಬೆದರಿಕೆ ಹಾಕಿದ ಕೇಸುಗಳಿವೆ.

ಸಂಜೆಯಾದರೆ ಸಾಕು ಅಡಕಮಾರನಹಳ್ಳಿ ಪಕ್ಕದ ಅಗರವಾಲ್ ಹೋಟೆಲ್ ಪಕ್ಕದ ಗೋಲ್ಡನ್ ಬ್ರೀಜ್ ಡಾಬಾದಲ್ಲಿ ಮುನಿರಾಜನ ಗ್ಯಾಂಗ್ ಜಮೆಯಾಗುತ್ತದೆ. ಈ ಗೋಲ್ಡನ್ ಬ್ರೀಜ್ ಡಾಬಾದ ಮಾಲೀಕ ನಟರಾಜ ಅಲಿಯಾಸ್ ಡಾಬಾನ ಕೂಡ ಇ.ಕೆ. ಶಿಷ್ಯನೆ. ಇಲ್ಲಿ ಅಡ್ಡೆ ಹಾಕುವ ಮತ್ತೊಬ್ಬ ಪಾತಕಿ ಬಾರ್ ಲಕ್ಷ್ಮಣ ಕೂಡ ಇದೇ ಗ್ಯಾಂಗಿನ ಆಧಾರಸ್ತಂಭ. ಈ ಹಿಂದೆ ಶ್ರೀರಾಂಪುರದ ಮದ್ಯಪಾನ ವಿರೋಧಿ ಹೋರಾಟಗಾರ ಎ.ಟಿ. ಬಾಬು ಹತ್ಯೆಯಲ್ಲಿ ಪ್ರಮುಖ ಪಾತ್ರಧಾರಿಯಾದ ಬಾರ್ ಲಕ್ಷ್ಮಣನಿಗೆ ಮಾದನಾಯಕನಹಳ್ಳಿಯಲ್ಲಿ ಜೆ.ಬಿ. ಬಾರ್, ಗುರುಚರಣ್ ಬಾರ್ ಮತ್ತು ಲಾಡ್ಜ್ ಲಕ್ಷ್ಮಿ ವೈನ್ಸ್; ಇತ್ಯಾದಿ ಲಿಕ್ಕರ್ ಅಡ್ಡೆಗಳಿವೆ. ಗುರುಚರಣ್ ಲಾಡ್ಜಿನಲ್ಲಿ ಅಂದರ್‌ಬಾಹರ್ ಇಸ್ಪೀಟ್ ಪಾರ್ಟಿ ನಡೆಸಿ ಮೀಟರ್ ಬಡ್ಡಿಯಲ್ಲೇ ದುಂಡಗಾದ ಲಕ್ಷ್ಮಣನಿಂದ ಸಾಲ ಪಡೆದವರ್‍ಯಾರೂ ಉದ್ಧಾರವಾಗಿಲ್ಲ, ರಕ್ಷಾ ಹೋಲ್‌ಸೇಲ್ ಎಂಬ ಲಿಕ್ಕರ್ ಮಳಿಗೆ ಇಟ್ಟುಕೊಂಡಿದ್ದ ಚನ್ನವೀರರಾಜು ತನ್ನ ಮಗಳನ್ನೇ ಹೀರೋಯಿನ್ ಮಾಡಲು ಹೋಗಿ ಚಾಣಕ್ಯ ಎಂಬ ಸಿನಿಮಾ ನಿರ್ಮಿಸಿದ. ಅದಕ್ಕೆ ಆತ ಲಕ್ಷ್ಮಣನಿಂದ ಸಾಲ ಪಡೆದಿದ್ದ. ಅದು ಬಡ್ಡಿ, ಚಕ್ರಬಡ್ಡಿ ಬೆಳೆದು ಕೊನೆಗೆ ಚನ್ನವೀರರಾಜು ತನ್ನ ರಕ್ಷಾ ಹೋಲ್‌ಸೇಲನ್ನೇ ಲಕ್ಷ್ಮಣನಿಗೆ ಒತ್ತೆ ಇಡಬೇಕಾಯ್ತು, ಅತ್ತ ಸಿನಿಮಾ ಕೂಡ ಎಕ್ಕುಟ್ಟಿ ಹೋಯ್ತು.



ಇಂಥ ಲಕ್ಷ್ಮಣ ಮತ್ತು ರೌಡಿ ಮುನಿರಾಜರ ಪುಂಡಾಟಗೆ ಅನುಕೂಲವಾಗಲೆಂದೇ ಡಾಬಾ ನಟರಾಜ ತನ್ನ ಡಾಬಾದ ಹಿಂದೆ ನಾಲ್ಕು ಶೆಡ್ ಕಟ್ಟಿಸಿದ್ದಾನೆ. ಸಾಲಗಾರರನ್ನು ಹೊತ್ತು ತಂದು ಅಲ್ಲೇ ಚಿತ್ರಹಿಂಸೆ ಕೊಟ್ಟು ಆಸ್ತಿ ಬರೆಸಿಕೊಳ್ಳುತ್ತಾರೆ. ಇವರಿಗೆ ಸಾಥ್ ಕೊಡುವ ಇ.ಕೆ. ಗ್ಯಾಂಗಿನ ಮತ್ತೊಬ್ಬ ಪಾತಕಿ ದೊಂಬರಹಳ್ಳಿಯ ಡೀಸಿ ಗೌಡ ಉರ್ಫ್ ಗಂಗಾಧರ ಗೌಡ. ಅರ್ಕಾವತಿ ಜಲಾನಯನ ಪ್ರದೇಶವನ್ನೇ ಆಕ್ರಮಿಸಿ ಅಲ್ಲೊಂದು ಗೋಡೌನ್ ಕಟ್ಟಿಸಿದ್ದಾನೆ. ದೊಂಬರಹಳ್ಳಿಯ ಬ್ರಾಹ್ಮಣರ ಲೇಔಟನ್ನು ಆಕ್ರಮಿಸಿ ಸೈಟು ದೋಚಿದ್ದಾನೆ. ಈತನಿಗೆ ಗುರುವಿನಂತಿರುವವನು ಮಾರೇಗೌಡ ಉರ್ಫ್ ಅಪ್ಪಿ, ಇ.ಕೆ. ಗ್ಯಾಂಗಿನಲ್ಲಿ ಕರಿಯನನ್ನು ಬಿಟ್ಟರೆ ಈತನದ್ದು ಎರಡನೇ ಸ್ಥಾನ. ಈತ ಪ್ರಳಯಾಂತಕ. ಯಾರ ಕೈಗೂ ಸಿಗುವುದಿಲ್ಲ,


ಮಾದನಾಯಕನಹಳ್ಳಿಯಿಂದ ಹಿಡಿದು ದಾಸನಪುರದ ಪಂಚಾಯ್ತಿಯ ತನಕ ಅರಿಶಿನಕುಂಟೆ, ಗೌಡಹಳ್ಳಿ, ಶಿವನಪುರ, ನಗರೂರು, ಮಾಕಳಿ, ಅರೆಕಿತ್ತನಹಳ್ಳಿ, ಗೆಜ್ಜಗದಹಳ್ಳಿ ಸುತ್ತಮುತ್ತ ಯಾರೇ ಗುಡಿಸಲೆಬ್ಬಿಸಲಿ ಅಥವಾ ಫುಟ್‌ಪಾತ್ ಪಕ್ಕ ಟೀ ಅಂಗಡಿಯಿಟ್ಟರೂ ಅಪ್ಪಿಗೆ ರೋಲ್‌ಕಾಲ್ ಕೊಡಲೇಬೇಕು. ತೀರ ಇತ್ತೀಚೆಗೆ ಇ.ಕೆ. ಅಡ್ಡೆಯಲ್ಲಿ ಕಂಗೊಳಿಸುವ ಮತ್ತೊಬ್ಬ ರೌಡಿ ಮಾರೇಗೌಡ ಉರ್ಫ್ ಕಳ್ಳ. ಈತ ಮೂಲತಃ ಗಾಯಿತ್ರಿನಗರದ ರೌಡಿ. ಚೆಸಿ ನಾರಾಯಣನ ಶಿಷ್ಯ ಕೂಡ. ಈತನ ಜೊತೆ ಬಟಾಣಿ ರಾಜ ಎಂಬ ಅನಾಹುತಕಾರಿ ಕೂಡ ಕೃಷ್ಣಪ್ಪನ ಪರ ಹಾವಳಿಯಿಡುತ್ತಾನೆ. ಅರೆಕಿತ್ತನಹಳ್ಳಿಯಲ್ಲಿ ತನ್ನ ತಂದೆ ರಾಮಯ್ಯನ ಹೆಸರಲ್ಲಿ ಈತ ದೋಚಿದ ಆಸ್ತಿಯ ಬೆಲೆಯೇ 25 ಕೋಟಿಯಾಗುತ್ತದೆ. ಇ.ಕೆ. ಗ್ಯಾಂಗಿನಲ್ಲಿ ಇನ್ನೂ ಒಬ್ಬ ಅನಾಹುತಕಾರಿಯಿದ್ದಾನೆ. ಈತನ ಹೆಸರು ಐಸಿ ಅಲಿಯಾಸ್ ಬಾಲಕೃಷ್ಣ. ಮರಳು ದಂಧೆಯಲ್ಲೇ ಲಕ್ಷಗಟ್ಟಲೇ ದೋಚಿದ್ದಾನೆ. ಸಾಲದ್ದಕ್ಕೆ ಮುಂಬಯಿ, ದೆಹಲಿಗಳಿಂದ ಬರುವ ಲಾರಿಗಳ ಟೈರು ಕದಿಯುತ್ತಾನೆ. ಅದನ್ನು ಜೆ.ಬಿ. ಮೂರ್ತಿ ಎಂಬಾತನ ಸ್ವಾಮಿ ಟೈರ್ಸ್ ಮಳಿಗೆಗೆ ಮಾರುತ್ತಾನೆ. ಈತ ಕೂಡ ಮುನಿರಾಜನ ಶಿಷ್ಯನೆ. ಮೀಟರ್ ಬಡ್ಡಿ ದಂಧೆ ಕೂಡ ಇದೆ.



ಇ.ಕೆ. ಎನ್‌ಕ್ಲೇವ್‌ಗೆಂದು ಮೇಸ್ತ್ರಿ ನಾರಾಯಣಪ್ಪ ಎಂಬ ದಲಿತ ನಾಯಕ ಭೂಮಿ ಕೊಡಲಿಲ್ಲ ಎಂದು ಆತನ ಮಗ ಮುನಿರಾಜನ ತಲೆ ಬೋಳಿಸಿ, ಚಪ್ಪಲಿ ಹಾರಹಾಕಿ ಮೆರವಣಿಗೆ ಮಾಡಿಸಿದ್ದು ಇದೇ ಗ್ಯಾಂಗಿನ ಅಟ್ಟಹಾಸಕ್ಕೆ ಉದಾಹರಣೆಯಾಗಿತ್ತು, ಅವತ್ತು ಮನೆ ಖಾಲಿ ಮಾಡಿ ಊರು ಬಿಟ್ಟ ಮೇಸ್ತ್ರಿ ನಾರಾಯಣಪ್ಪ ಇವತ್ತಿಗೂ ನಾಪತ್ತೆ, ಇದೇ ಅಟ್ರಾಸಿಟಿ ಕೇಸಿನಲ್ಲಿ ಕೃಷ್ಣಪ್ಪ ಕೂಡ ತಿಂಗಳಾನುಗಟ್ಟಲೇ ಪೊಲೀಸರಿಗೆ ಸಿಗದೇ ತಲೆಮರೆಸಿಕೊಂಡಿದ್ದ. ಕೃಷ್ಣಪ್ಪನ ಬೆನ್ನಿಗಿರುವ ಇಂಥ ದುಷ್ಟಕೂಟದ ಹಾವಳಿ ಇವತ್ತಿಗೂ ನಿಂತಿಲ್ಲ.

ಸಂದರ್ಶನ

ಇದೇ 2011ರ ಜೂನ್ ತಿಂಗಳಿನಲ್ಲಿ ಕೇಂದ್ರ ಸರ್ಕಾರ 2240 ಕೋಟಿ ರೂಪಾಯಿ ವೆಚ್ಚದಲ್ಲಿ ಜನಗಣತಿ ನಡೆಸಲು ಮುಂದಾಗಿದೆ. ಈ ಸಂದರ್ಭದಲ್ಲಿ ಬಸವ ಮಂಟಪದ ಮಾತೆ ಮಹಾದೇವಿಯವರು "ಈಗ ಜನಗಣತಿಯ ಧರ್ಮದ ಕಾಲಂನಲ್ಲಿ 'ಹಿಂದೂ' ಎನ್ನುವ ಬದಲು ಲಿಂಗಾಯತರೆಲ್ಲರೂ 'ಲಿಂಗಾಯತ' ಎಂದು ಬರೆಸಬೇಕಿದೆ. ಲಿಂಗಾಯತರು ಹೇಗೆ ಹಿಂದೂಗಳಲ್ಲವ್ರೋ, ಹಾಗೆ ವೀರಶೈವರೂ ಅಲ್ಲ. ಕರ್ನಾಟಕದ ಲಿಂಗಾಯತರು ಹಿಂದೂ ಧರ್ಮದ ಅಂಗವಲ್ಲ ಮತ್ತು ಲಿಂಗಾಯತರೆಲ್ಲರೂ ಒಟ್ಟುಗೂಡಿ ಮುಂದೆ ಬರಲಿರುವ ಜನಗಣತಿಯಲ್ಲಿ ತಮ್ಮನ್ನು ಪ್ರತ್ಯೇಕ ಧರ್ಮವೆಂದು ಗುರುತಿಸಿಕೊಳ್ಳಬೇಕು" ಎಂದು ಸಾರ್ವಜನಿಕ ವೇದಿಕೆಗಳಲ್ಲಿ ಕರೆಕೊಟ್ಟು ಹೋರಾಟಕ್ಕೂ ಇಳಿದಿದ್ದಾರೆ. ಈ ಸಂದರ್ಭದಲ್ಲಿ ಅವರೊಂದಿಗೆ ಪತ್ರಿಕೆ ನಡೆಸಿದ ಮಾತುಕತೆಯ ಪೂರ್ಣಪಾಠ ಇಲ್ಲಿದೆ:



'ಲಿಂಗಾಯತರು ಹಿಂದೂಗಳಲ್ಲ'

ಈ ಹಿಂದೆ ಬಸವಣ್ಣನ ವಚನಗಳ ಅಂಕಿತವಾದ 'ಕೂಡಲ ...ನುದೇವಾ'ವನ್ನು 'ಲಿಂಗದೇವರು' ಎಂದು ಬದಲಿಸಿ ವಿವಾದಕ್ಕೆ ಸಿಲುಕಿದ್ದ ... ಮಹಾದೇವಿಯವರು ಬಂಜಗೆರೆ ಜಯಪ್ರಕಾಶರ 'ಅನು ದೇವಾಹೊರಗಣ ... ಕೃತಿಯನ್ನು ಖಂಡಿಸಿ ಬೀದಿಗಿಳಿದದ್ದನ್ನು ಕಂಡು ಅನೇಕರು ಇದು ... ಪ್ರಚಾರಕ್ಕಾಗಿ ಎಂದುಕೊಂಡದ್ದು ಉಂಟು. ಬಸವಣ್ಣನ ಅಂಕಿತದ ... ಮಾತೆ ಮಹಾದೇವಿಯವರು ತಮ್ಮ ನಿರ್ಧಾರವನ್ನು ಈಗಲೂ ...ಚವೂ ಸಡಿಲಿಸಿಕೊಂಡಿಲ್ಲ. 'ಬಸವಣ್ಣನವರು ತಾತ್ವಿಕವಾಗಿ ದೇವರಾಗಿ ...ಂಡದ್ದು ಲಿಂಗದೇವರನ್ನು, ಅವರ ನಿಧನದ ನಂತರ ಅವರ ವಚನಗಳು ...ರೋಹಿತಶಾಹಿಗಳ ಕೈಗೆ ಸಿಕ್ಕಿ ವಚನದ ಅಂಕಿತವೇ ಬದಲಾಯಿತು' ...ವಾದವನ್ನು ಮಾತೆ ಮಹಾದೇವಿ ಮಂಡಿಸುತ್ತಾರೆ.

...ಲಿಂಗಾಯತರು ಹಿಂದೂಗಳಲ್ಲ; ವೀರಶೈವರು ಈ ಮಣ್ಣಿನ ...ಯತರಲ್ಲ. ಮುಂದಿನ ಜನಗಣತಿಯಲ್ಲಿ ಧರ್ಮದ ಕಾಲಂನಲ್ಲಿ ...ಯತರು ತಮ್ಮ ಧರ್ಮವನ್ನು ಹಿಂದೂ ಅಥವಾ ವೀರಶೈವ ... ಬರೆಸದೆ 'ಲಿಂಗಾಯತ' ಧರ್ಮವೆಂದೇ ಬರೆಸಬೇಕೆಂದು ... ಹೊಸ ಬಗೆಯ ಹೋರಾಟವನ್ನೇ ಮಾತೆ ಮಹಾದೇವಿಯವರು ...ಪ್ರಾಕಿದ್ದಾರೆ. ಈಗಾಗಲೇ ಕನ್ನಡದ ಅನೇಕ ಪ್ರಗತಿಪರ ಚಿಂತಕರು, ...ಕಾರಣಿಗಳು, ಲೇಖಕರು ಈ ಹೋರಾಟಕ್ಕೆ ಬಹಿರಂಗವಾಗಿ ಬೆಂಬಲ ...ಸಿದ್ದಾರೆ. ಈ ಹೋರಾಟ ತೀವ್ರತೆಯ ಕುರಿತು ಅನೇಕ ಲಿಂಗಾಯತ ...ಗಳು ಕಾದು ನೋಡುವ ನೀತಿಯನ್ನು ಅನುಸರಿಸುತ್ತಿವೆ. ...ನಂದ ಮೂರ್ತಿಯಂತಹ ಹಿರಿಯ ಸಂಶೋಧಕರು ... ಮಾತೆ ಮಹಾದೇವಿಯವರೊಂದಿಗೆ ಚರ್ಚೆಗಿಳಿ... ಹಿಂಜರಿಯುತ್ತಿದ್ದಾರೆ.

...ಲಂಕೇಶ: ಕಾವಿ ಶೋಷಣೆಯ ವೇಷ ...ರುವ ಈ ಹೊತ್ತಲ್ಲಿ ನೀವು ಏಕಾಂಗಿ ... ಲಿಂಗಾಯತರು ಹಿಂದೂಗಳಲ್ಲ ... ಹೇಳುತ್ತಾ ಮುಂದಿನ ಜನಗಣತಿ ... 'ಧರ್ಮ'ದ ಅಂಕಣದಲ್ಲಿ 'ಲಿಂಗಾ... ಎಂದೇ ಬರೆಸಲು ಜನತೆಗೆ ಕರೆ ...ತ್ತಿದ್ದೀರಿ. ಚಿದಾನಂದ ಮೂರ್ತಿಯಂಥ ... ತಮ್ಮ ಸಂಶೋಧನೆಯ ಮೂಲಕ ...ಯತರು, ವೀರಶೈವರು ಎಲ್ಲರೂ ...ದೂಗಳೇ ಎಂಬ ತಮ್ಮ ಪುರಾತನ ...ಗಳಿಗೆ ಗಂಟುಬಿದ್ದಿರುವಾಗ ನೀವು ...ಯತರದು ಹೇಗೆ ಪ್ರತ್ಯೇಕ ಧರ್ಮ ಎಂದು ಹೇಳುವಿರಿ?

ಮಾತೆ ಮಹಾದೇವಿ: ನಾನು ಚಿದಾನಂದ ಮೂರ್ತಿಯವರನ್ನು ದೊಡ್ಡ ...ಶೋಧಕರೆಂದು ಪರಿಗಣಿಸುವುದಿಲ್ಲ. ಅವರದು ಪೂರ್ವಾಗ್ರಹ ಪೀಡಿತ ...ಸ್ಸು; ಅವರ **Predetermined ideas**ಗಳು ಸದಾ ಸತ್ಯದಿಂದ ... ಉಳಿದಿರುತ್ತವೆ. ಇವತ್ತು ಧರ್ಮ ಅಂಥ ಕರೆಸಿಕೊಳ್ಳಲಿಕ್ಕೆ ಯಾವ ...ತೆಯನ್ನು ಪಡೆಯದಿರುವುದು ಹಿಂದೂ ಧರ್ಮ ಮಾತ್ರ. ಈ ಧರ್ಮಕ್ಕೊಬ್ಬ ...ಪಕನಿಲ್ಲ; ಇದರದ್ದೇ ಆದ ಧರ್ಮಗ್ರಂಥವೂ ಇಲ್ಲ. ಬ್ರಿಟಿಷರು ಕೊಟ್ಟ ...ದೂ' ಹೆಸರಿನಿಂದ ಆ ಧರ್ಮವನ್ನು ಗುರುತಿಸಲಾಗುತ್ತಿದೆ. ಹಿಂದೂ ... ಅನ್ನುವುದು ವೈದಿಕಧರ್ಮದ ನಿಜವಾದ ಮುಖ. ಅದು ನಿಂತಿರುವುದೇ ...ಪ್ರಮಾಣ, ಆಗಮ, ಶೃತಿ, ಸ್ಮೃತಿ, ಭಗವದ್ಗೀತೆ ...ತ್ತು ಪುರಾಣಗಳ ಮೇಲೆ. ಹನ್ನೆರಡನೆಯ ...ಮಾನದಲ್ಲಿಯೇ ಬಸವಣ್ಣನವರು ಈ ವೈದಿಕ ಧರ್ಮ ... ಮನುಷ್ಯ ವಿರೋಧಿ ಧರ್ಮವೆಂದು ಪರಿಗಣಿಸಿ ...ರಿಸಿದ್ದರು. ಲಿಂಗಾಯತ ಧರ್ಮ ಅನುಭಾವದ ... ನಿಂತಿದೆ, ಯಾವ ಕಾರಣಕ್ಕೂ ನಾವು ವೇದಗಳ ...ಮಾಣ್ಯವನ್ನು ಒಪ್ಪಲಾರೆವು. ಹೋಮ, ಹವನ, ಯಜ್ಞ ...ಗಳನ್ನು ಮಾತ್ರ **Rituals** ಎಂದು ಕರೆದುಕೊಳ್ಳುವ ... ಧರ್ಮ ಮದುವೆ, ಮುಂಜಿ, ಉಪನಯನಗಳ ...ನ್ನು ಆಚರಣೆಗಳಲ್ಲಿ ಹಿಡಿದಿಟ್ಟಿದೆ. ಚಿದಾನಂದಮೂರ್ತಿ ...ರ ಎಲ್ಲ ವಿತಂಡವಾದಗಳಿಗೂ ನಾನು ನನ್ನ 'ಡಾ.ಎಂ.ಚಿದಾನಂದಮೂರ್ತಿ ...ಗೊಂದು ಕೈಗನ್ನಡಿ' ಎಂಬ ಕೃತಿಯಲ್ಲಿ ಸಮರ್ಪಕವಾದ ಉತ್ತರ ಕೊಟ್ಟಿದ್ದೇನೆ. ...ಲಿಂಗಾಯತರಲ್ಲಿ ಮೂರು ಪರಂಪರೆ ಇದೆ.

...ಮೊದಲನೆಯದು ಆಚಾರ್ಯ ಪರಂಪರೆ–ಇದು ಹೆಚ್ಚೂಕಮ್ಮಿ ವೈದಿಕ ...ಪರಂಪರೆಯಂತಿದ್ದು ಸಂಪೂರ್ಣವಾಗಿ ಬ್ರಾಹ್ಮಣರ ಹಿಡಿತದಲ್ಲಿದೆ. ವೈದಿಕರ ...ಯಂತೆ, ಅಡ್ಡ ಪಲ್ಲಕ್ಕಿಯ ವೈಭವದಲ್ಲಿ ಈ ಪರಂಪರೆ ಸಿಕ್ಕು ನಾಶವಾಗುತ್ತಿದೆ. ...ನೆಯದು ವಿರಕ್ತ ಪರಂಪರೆ–ಬ್ರಾಹ್ಮಣ್ಯದತ್ತ ಮುಖಮಾಡಿ ಮತ್ತೆ ಎಚ್ಚೆತ್ತು ...ಬಸವ ಮಾರ್ಗದತ್ತ ನಡೆಯುತ್ತಿದೆ. ಮೂರನೆಯದು ನಮ್ಮದು ಶರಣ ...ಪರಂಪರೆ–ಇಲ್ಲಿ ಯಾರು ಬೇಕಾದರೂ ಭಕ್ತ, ಗುರು, ಜಗದ್ಗುರುವಾಗಬಹುದು.

...ಲಂಕೇಶ: ಅಂದರೆ ಒಬ್ಬ ಶೋಷಿತ ಜನಾಂಗದ ಹೆಣ್ಣನ್ನು ನೀವು ನಿಮ್ಮ ...ರಾಧಿಕಾರಿಯನ್ನಾಗಿ ಮಾಡುವಿರಾ?


...ಮಾತೆ ಮಹಾದೇವಿ: (ಆತ್ಮವಿಶ್ವಾಸ ತುಂಬಿಕೊಂಡ ಗಟ್ಟಿ ಧ್ವನಿಯಲ್ಲಿ) ...ದು ಜಾತ್ಯತೀತ ಬಸವ ಮಾರ್ಗ. ಅನೇಕ ಶೋಷಿತ ಸಮುದಾಯದ ... ನಾವು ಶರಣ ದೀಕ್ಷೆ ನೀಡಿದ್ದೇವೆ. ಎಲ್ಲ ಶೋಷಿತ ಜಾತಿಯ ಜನ ...ಲ್ಲೂ ದಲಿತರು ಮತ್ತು ಮುಸ್ಲಿಂರು ನಮ್ಮೊಂದಿಗಿದ್ದಾರೆ. ಒಬ್ಬ ಶೋಷಿತ ...ದ ಹೆಣ್ಣು ಕೇವಲ ಭಕ್ತಳಷ್ಟೆ ಅಲ್ಲ ಗುರು, ಸದ್ಗುರು, ಜಗದ್ಗುರುವಾಗುವ ...ಅವಕಾಶಗಳನ್ನೂ ನಾವು ಕಲ್ಪಿಸಿದ್ದೇವೆ. ಇದಕ್ಕೆ ನಿಮ್ಮ ಕಣ್ಣ ಮುಂದೆಯೇ ...ದರಣೆ ಇದೆ ನೋಡಿ. (ಲಿಂಗಾಯತೇತರ ಸಮುದಾಯಗಳ ಜನ ... ಕೊಟ್ಟು ತಮ್ಮ ಬಳಿಯೇ ಇರುವುದನ್ನು, ಅಲ್ಲಿಯೇ ಇದ್ದ ಕೆಲವರ ...ಚಯದ ಮೂಲಕ ಮಾತೆ ಮಹಾದೇವಿಯವರು ನನ್ನ ಗಮನ ಸೆಳೆದರು)

ಲಂಕೇಶ: ಇಷ್ಟೆಲ್ಲ ಹೇಳುವ ನಿಮಗೆ ಇವತ್ತು ಲಿಂಗಾಯತ ಮಠಗಳು ಬಸವಣ್ಣನನ್ನು ಶೋಷಿತರಿಂದ ದೂರವಿಟ್ಟಿದೆ ಎಂದು ಅನ್ನಿಸುವುದಿಲ್ಲವೇ?

ಮಾತೆ ಮಹಾದೇವಿ: ನಿಜ, **ego**, ಪ್ರತಿಷ್ಠೆಗಳು ಇವತ್ತು ಮಠಾಧೀಶರನ್ನು ಬಿಟ್ಟಿಲ್ಲ. ಶೋಷಿತರಿಗೆ ಶರಣ ದೀಕ್ಷೆಕೊಟ್ಟು ಅವರನ್ನು ಮಠದೊಳಕ್ಕೆ ಬಿಟ್ಟುಕೊಳ್ಳುವ ಅವಕಾಶಗಳಿದ್ದರೂ ಕೆಲವು ಲಿಂಗಾಯತ ಮಠಗಳು ಬಸವಣ್ಣನನ್ನು ದಲಿತರ ಕೇರಿ ಪ್ರವೇಶಿಸದಂತೆ ನೋಡಿಕೊಂಡವು. ಇಲ್ಲಿ ಪುರೋಹಿತಶಾಹಿಗಳ ಕಾಣಿಕೆಯೂ ಹೆಚ್ಚಿದೆ.

ಲಂಕೇಶ: ಈಗ ನೀವು ಲಿಂಗಾಯತರು ಮತ್ತು ವೀರಶೈವರು ಬೇರೆ ಬೇರೆ ಎಂಬ ವಾದ ಹುಟ್ಟುಹಾಕುತ್ತಿದ್ದೀರಲ್ಲಾ....

ಮಾತೆ ಮಹಾದೇವಿ: ಹೌದು. ಮಡಿವಾಳ, ಕುರುಬ, ಗಾಣಿಗ ಲಿಂಗಾಯತರೆಂದು ಕರ್ನಾಟಕದಲ್ಲಿ ಕರೆದುಕೊಳ್ಳುವುದುಂಟು. ಲಿಂಗಾಯತರು ಗೋಳಾಕಾರದ ಇಷ್ಟಲಿಂಗವನ್ನು ಪೂಜಿಸಿದರೆ, ವೀರಶೈವರು ಶೈವ ಪಂಥದ ಅನುಯಾಯಿಗಳು. ವೀರಶೈವ ಪಂಥ ಮೂಲತಃ ಆಂಧ್ರಪ್ರದೇಶದ್ದು ಈಗ ತಮಿಳುನಾಡು, ಕೇರಳ ರಾಜ್ಯಗಳಲ್ಲಿ ಪ್ರಬಲವಾಗಿದೆ. ಈ ವೀರಶೈವ ಧರ್ಮ ನಿಂತಿರುವುದೇ ಚಾತುರ್ವರ್ಣ ವ್ಯವಸ್ಥೆಯ ಮೇಲೆ. ಅವರು ಅಸ್ಪೃಶ್ಯರಿಗೆ ದೀಕ್ಷೆ ಕೊಡುವುದಿರಲಿ, ಚಾತುರ್ವರ್ಣ ವ್ಯವಸ್ಥೆಗೆ ಸಣ್ಣಪುಟ್ಟ ಮಾರ್ಪಾಡುಗಳನ್ನೂ ಮಾಡಿಕೊಳ್ಳಲಾರರು. 'ವೀರಶೈವ ಮಹಾಸಭಾ' ಸ್ಥಾಪಿಸುವುದರ ಮೂಲಕ ಹಾನಗಲ್ಲ ಕುಮಾರಸ್ವಾಮಿಗಳು ವೇದ, ಆಗಮ, ಪುರಾಣಗಳನ್ನು ವೀರಶೈವ ಧರ್ಮಕ್ಕೆ ತಂದು ಲಿಂಗಾಯತರ ನಡುವೆ ಧಾರ್ಮಿಕ ದ್ರೋಹವನ್ನು ಎಸಗಿದರು. ಚಿದಾನಂದ ಮೂರ್ತಿ ಮತ್ತು ಎಸ್.ಆರ್.ಹಿರೇಮಠರಂತಹ ಸಂಶೋಧಕರು ಲಿಂಗಾಯತರೆಲ್ಲ ವೀರಶೈವರು ಎಂದು ಹೇಳುತ್ತಾ ಲಿಂಗಾಯತರಲ್ಲಿಯೇ ಗೊಂದಲ ತಂದಿಕ್ಕಿದ್ದಾರೆ.



ಲಂಕೇಶ: ಇವತ್ತಿನ ಲಿಂಗಾಯತ ಮಠಗಳು ಬಸವಣ್ಣನನ್ನು ಪೇಟೆಂಟ್ ತೆಗೆದುಕೊಂಡಂತೆ ವರ್ತಿಸುತ್ತಿರುವ ಸಂದರ್ಭದಲ್ಲಿ ಲಿಂಗಾಯತ ಧರ್ಮಕ್ಕೆ ಸಾಂವಿಧಾನಿಕ ಮಾನ್ಯತೆ ಸಿಗಬೇಕೆಂದು ಚಳವಳಿಗಿಳಿದಿರುವ ನಿಮ್ಮ ನಡೆ ಉಳಿದವರಿಗಿಂತ ಹೇಗೆ ಭಿನ್ನ?

ಮಾತೆ ಮಹಾದೇವಿ: ಭ್ರಷ್ಟ ಮತ್ತು ನೀಚ ರಾಜಕಾರಣಿಗಳನ್ನು ಸಮರ್ಥಿಸಿಕೊಳ್ಳುವ ಇವತ್ತಿನ ಮಠಾಧೀಶರು ತಮ್ಮ ಅಂತರಂಗದೊಳಗೆ ಬಸವಣ್ಣನವರನ್ನು ಪೇಟೆಂಟ್ ತೆಗೆದುಕೊಂಡಿದ್ದರೆ ಖಂಡಿತ ಈ ಸಮಸ್ಯೆ ಬರುತ್ತಿರಲಿಲ್ಲ. ಹುಟ್ಟಿನಿಂದ ಸಮಗಾರನಾಗಿ ಸಂಸ್ಕಾರದಿಂದ ಶರಣರಾದ ಹರಳಯ್ಯನವರ ಮಗನಿಗೆ, ಹುಟ್ಟಿನಿಂದ ಬ್ರಾಹ್ಮಣರಾಗಿ ಸಂಸ್ಕಾರದಿಂದ ಶರಣರಾದ ಮಧುವರಸರ ಮಗಳನ್ನು ಕೊಟ್ಟು ವಿವಾಹವನ್ನು ಬಸವಣ್ಣನವರು ಮಾಡಿಸಿದರು. ಇದರಿಂದ ಕೆರಳಿದ ಪುರೋಹಿತಶಾಹಿ ಜಾತಿವಾದಿಗಳು ಬಿಜ್ಜಳ ರಾಜನನ್ನು ಪ್ರಚೋದಿಸಿ ಬಸವಣ್ಣನವರಿಗೆ ಗಡಿಪಾರು ಶಿಕ್ಷೆಯಾಗುವಂತೆ ನೋಡಿಕೊಂಡರು. ಈ ವಿವಾಹದಲ್ಲಿ ಭಾಗಿಯಾದ ಶರಣರ ವಧೆಯಾಯಿತು. ಕಲ್ಯಾಣದಲ್ಲಿ ರಕ್ತಕ್ರಾಂತಿಯಾಗಿ ಶರಣರು ದಿಕ್ಕೆಟ್ಟು ಚದುರಿಹೋದರು.



ಈ ದೇಶದ ದೊಡ್ಡ ದುರಂತವೆಂದರೆ ಪುರೋಹಿತಶಾಹಿ ಬ್ರಾಹ್ಮಣ ಧರ್ಮ ಪ್ರಬಲವಾಗಿರುವ ಯಾವ ಕಾಲದಲ್ಲೂ ಬೇರೆ ಧರ್ಮಗಳು ಕ್ರಾಂತಿಕಾರಿ ರೂಪು ಪಡೆಯಲು ಆಗಲಿಲ್ಲ, ವೈದಿಕ ಧರ್ಮದೆದುರು ರಾಜಿಮಾಡಿಕೊಳ್ಳದ ಕಾರಣ ಬೌದ್ಧ ಧರ್ಮವನ್ನು ಈ ದೇಶ ಬಿಟ್ಟು ಓಡಿಸಲಾಯಿತು. ಲಿಂಗಾಯತ ಜೈನ ಧರ್ಮಗಳಂತೂ ತನ್ನ ಅಸಲಿ ಸ್ವರೂಪಗಳನ್ನೇ ಕಳೆದುಕೊಂಡು ಬದುಕಾಯಿತು.

ಹೀಗಿರುವಾಗ ಲಿಂಗಾಯತ ಧರ್ಮವು ಹಿಂದೂ ಧರ್ಮವಲ್ಲ, ಅದು ಜಾತಿಯಲ್ಲ, ಮತ ಪಂಥವಲ್ಲ ಎಂದು ಘೋಷಿಸಿ ಇದೇ 2011ರ ಜನಗಣತಿಯಲ್ಲಿ ಲಿಂಗಾಯತರು ಧರ್ಮದ ಕಾಲಂ(7)ನಲ್ಲಿ 'ಲಿಂಗಾಯತ' ಧರ್ಮ ಎಂದು ಬರೆಸುವಂತೆ ಜನರಲ್ಲಿ ಜಾಗೃತಿ ಮೂಡಿಸುವುದು ನಮ್ಮ ಮುಖ್ಯ ಕೆಲಸಗಳಲ್ಲೊಂದು. ಇಷ್ಟಲ್ಲದೆ ಲಿಂಗಾಯತ ಧರ್ಮವು ವೀರಶೈವ ಪಂಥದಿಂದ ಹೊರಗಿರುವ ಒಂದು ಪರಿಪೂರ್ಣ ಧರ್ಮ. ವೀರಶೈವ ಪಂಥದ ಹಂಗಿನಲ್ಲಿ ಯಾವತ್ತೂ ಲಿಂಗಾಯತ ಧರ್ಮ ಬದುಕಿರಲಿಲ್ಲ.

ಹನ್ನೆರಡನೆಯ ಶತಮಾನದಿಂದಲೂ ಶರಣ ದೀಕ್ಷೆ ಪಡೆಯುತ್ತ ಬಂದಿರುವ ಲಿಂಗಾಯತ ಮಡಿವಾಳ, ಹೆಳವ, ಕುಂಬಾರ, ಹಡಪದ ಮುಂತಾದ ಜಾತಿಗಳು ಕುಲಕಸುಬನ್ನೇ ನೆಚ್ಚಿಕೊಂಡು ಹಿಂದುಳಿದಿದ್ದು, ಜಾತಿಕಾರಣದಿಂದ ಲಿಂಗಾಯತರಾಗಿದ್ದರೂ ಅವರಿಗೆ ಸಿಗಬೇಕಾದ ಹಿಂದುಳಿದ ವರ್ಗಗಳ ಸೌಲಭ್ಯವನ್ನು ಯಾವ ಕಾರಣಕ್ಕೂ ಮೊಟಕುಗೊಳಿಸಬಾರದೆಂದು ಸರ್ಕಾರವನ್ನು ಕೋರಲು ಈ ಹೋರಾಟದಲ್ಲಿ ತೊಡಗಿಕೊಂಡಿರುವೆ.

ಲಂಕೇಶ: ಬಸವಣ್ಣನನ್ನು ಮರಳಿ ಶೋಷಿತ ಸಮುದಾಯಗಳ ಜನರ ಮನೆ ಬಾಗಿಲಿಗೆ ಕೊಂಡೊಯ್ಯಲು ನಿಮ್ಮ ಪ್ರಯತ್ನಗಳು ಹೇಗಿವೆ?

ಮಾತೆ ಮಹಾದೇವಿ: ಸಾಂಪ್ರದಾಯಿಕ ಲಿಂಗಾಯತ ಮಠಗಳು ಶೋಷಿತರನ್ನು ತಮ್ಮ ಮಠದೊಳಕ್ಕೆ ಬಿಟ್ಟುಕೊಳ್ಳಲು ಹಿಂಜರಿಯುತ್ತಿರುವ ಈ ಸಂದರ್ಭದಲ್ಲಿ ಬಸವಣ್ಣನವರ ತಾತ್ವಿಕ ಚಿಂತನೆಗಳಿಗೆ ತೀರಾ ಹತ್ತಿರವಿರುವ ನಾವು ನಮ್ಮ ಬಸವ ಮಂಟಪದ ಮೂಲಕ ಅಂತರ್ಜಾತಿ, ಅಂತರ್ಧರ್ಮೀಯ ವಿವಾಹಗಳನ್ನು ನಡೆಸಿದ್ದೇವೆ. ಅಸ್ಪೃಶ್ಯರು ಶರಣರಾಗುವ ಮಾರ್ಗಗಳು ನಮ್ಮ ಬಸವ ಮಂಟಪದಲ್ಲಿ ಸದಾ ತೆರೆದಿರುತ್ತವೆ.

ಲಂಕೇಶ: ಇವತ್ತಿನ ಯಡಿಯೂರಪ್ಪನವರ ಸರ್ಕಾರವು ಬೀಳದಂತೆ ನೋಡಿಕೊಳ್ಳುವುದು ನಮ್ಮ ಮುಖ್ಯ ಅಜೆಂಡಾಗಳಲ್ಲೊಂದು ಎನ್ನುವ ರೀತಿಯಲ್ಲಿ ಕೆಲವು ಲಿಂಗಾಯತ ಮಠಗಳು ವರ್ತಿಸುತ್ತಿವೆಯಲ್ಲ?

ಮಾತೆ ಮಹಾದೇವಿ: ನಿಜ. ಇವತ್ತು ಕರ್ನಾಟಕದ ಮಠ, ದೇವಸ್ಥಾನಗಳಿಗೆ ಹರಿದುಬರುತ್ತಿರುವ ಆದಾಯ ನಿಜಕ್ಕೂ ಸೇರಬೇಕಾದದ್ದು ಈ ನೆಲದ ಬಡಜನಕ್ಕೆ. ನಮ್ಮ ಮಠಾಧೀಶರು ಸ್ವಾಭಿಮಾನ ಕಳೆದುಕೊಂಡಿರುವುದರಿಂದಲೇ ರಾಜಕಾರಣಿಗಳು ಎಸೆಯುವ ದುಡ್ಡಿಗೆ ಕೈಚಾಚಿ ನಂತರ ಪರೋಕ್ಷವಾಗಿ ಅವರ ರಕ್ಷಣೆಗೆ ನಿಲ್ಲುವ ಮಾತುಗಳನ್ನಾಡುತ್ತಿದ್ದಾರೆ. ಇದು ಮಠಗಳು ತಲುಪಿರುವ ನೈತಿಕ ಅಧಃಪತನವನ್ನು ತೋರಿಸುತ್ತದೆ.

ಈ ಸರ್ಕಾರ ವೈದಿಕ ಧರ್ಮಕ್ಕೆ ಮಣೆಹಾಕಲು ಗಂಗಾಜಲಕ್ಕೆ ಕೋಟಿಗಟ್ಟಲೆ ಹಣವನ್ನು ಸುರಿಯಿತು. ಮನುಷ್ಯ ಪರ ಚಿಂತಿಸುವ ಯಾರೂ ಇಂತಹ ಮೂರ್ಖ ಕೆಲಸಕ್ಕೆ ಕೈಹಾಕುವುದಿಲ್ಲ. ಆ ಸಂದರ್ಭದಲ್ಲಿ ಸರ್ಕಾರದ ನಡೆಗಳನ್ನು ನಾನು ತೀವ್ರವಾಗಿ ಖಂಡಿಸಿ ಬಹಿರಂಗವಾಗಿ ಪತ್ರಿಕಾ ಹೇಳಿಕೆಗಳನ್ನು ನೀಡಿದೆ. ಆಗ ನನ್ನ ಬೆಂಬಲಕ್ಕೆ ಯಾವ ಲಿಂಗಾಯತ ಮಠಾಧೀಶರು ಬರಲಿಲ್ಲ. ಈ ಸರ್ಕಾರದ ಋಣದ ಹಂಗಿನಲ್ಲಿ ಬದುಕುತ್ತಿರುವ ಮಠಾಧೀಶರು ಅವರ ವಿರುದ್ಧವೇ ಹೇಗೆ ತಿರುಗಿ ಬೀಳುತ್ತಾರೆ ಹೇಳಿ?

ಎಲ್ಲ ರಂಗಗಳು ಭ್ರಷ್ಟವಾಗಿರುವ ಈ ಸಂದರ್ಭದಲ್ಲಿ ಕಾವಿ ಕೂಡ ಶೋಷಣೆಯ ಅಸ್ತ್ರವಾಗಿದೆ ಅನ್ನುವುದನ್ನು ನಾನು ನಿರಾಕರಿಸುವುದಿಲ್ಲ.

ಲಂಕೇಶ: ಈ ಜನಗಣತಿ ಹೋರಾಟದಲ್ಲಿ ಉಳಿದ ಲಿಂಗಾಯತ ಮಠಗಳು ನಿಮ್ಮ ಬೆನ್ನಿಗೆ ನಿಲ್ಲದಿದ್ದರೆ....

ಮಾತೆ ಮಹಾದೇವಿ: ಅನೇಕ ಲಿಂಗಾಯತ ಮಠಗಳು ಈ ಹೋರಾಟದಲ್ಲಿ ನಮ್ಮ ಜತೆ ಸೇರಲು ಮೀನಮೇಷ ಎಣಿಸುತ್ತಿವೆ. ಕೆಲವರ ಬಳಿ ಖುದ್ದು ಮಾತನಾಡಿ ಈ ಹೋರಾಟದ ನೇತೃತ್ವವನ್ನು ವಹಿಸಿಕೊಳ್ಳಲು ಕೋರಿಕೊಂಡಿರುವೆ. ಕರ್ನಾಟಕದ ಪ್ರಗತಿಪರ ಚಿಂತಕರು ಈ ನಿಟ್ಟಿನಲ್ಲಿ ನಮ್ಮೊಂದಿಗಿರುವುದು ನನಗೆ ನಿಜಕ್ಕೂ ಸಂತಸ ನೀಡಿದೆ. ಡಾ.ಸಿ.ಎಸ್.ದ್ವಾರಕಾನಾಥ್, ರಂಜಾನ್ ದರ್ಗಾ, ಎಲ್.ಹನುಮಂತಯ್ಯ, ಮೂಡ್ನಾಕೂಡು ಚಿನ್ನಸ್ವಾಮಿ ಮತ್ತು ಎಲ್.ಎನ್. ಮುಕುಂದ ರಾಜು ಮುಂತಾದವರು ಈ ಪ್ರಾರಂಭಿಕ ಹಂತದ ಹೋರಾಟದಲ್ಲಿ ನಮ್ಮೊಂದಿಗಿರುವುದು ಹೆಚ್ಚಿನ ವಿಶ್ವಾಸ ತಂದುಕೊಟ್ಟಿದೆ.

ಜಾತಿ ಹೋರಾಟವೆಂದ ಕೂಡಲೇ ಅದಕ್ಕೆ ಸಂಕುಚಿತ ಪೊರೆ ತೊಡಿಸುವ ಅಪಾಯವಿದೆ. ನಮ್ಮದು ವಿಶಾಲವಾದ ಧಾರ್ಮಿಕ ಹೋರಾಟ, ಮತ್ತಿದು ಜಾತ್ಯತೀತ ಹೋರಾಟ ಕೂಡಾ.

ಲಂಕೇಶ: ನಿಮ್ಮ ಉತ್ತರಾಧಿಕಾರಿಯಾಗಿ ನಿಮ್ಮ ಸ್ಥಾನವನ್ನು ಒಬ್ಬ ಶೋಷಿತ ಮಹಿಳೆಗೆ ಬಿಟ್ಟು ಕೊಡುವಿರಾ?

ಮಾತೆ ಮಹಾದೇವಿ: ನಮ್ಮದು ಜಾತ್ಯತೀತ ಬಸವ ಮಾರ್ಗ. ಶೋಷಿತ ಹೆಣ್ಣು ನನ್ನ ಉತ್ತರಾಧಿಕಾರಿಯಾಗುವ ಎಲ್ಲ ಸಾಧ್ಯತೆ ಮತ್ತು ಅವಕಾಶಗಳನ್ನು ನಾವೇ ಖುದ್ದು ನಿರ್ಮಿಸಿದ್ದೇವೆ.

ಲಂಕೇಶ: ಕಡೆಯದಾಗಿ ಒಂದು ಪ್ರಶ್ನೆ. ಈ ಹಿಂದೆ ಬಂಜಗೆರೆ ಜಯಪ್ರಕಾಶರು 'ಆನುದೇವಾ ಹೊರಗಣವನು...' ಕೃತಿ ಪ್ರಕಟಿಸಿದಾಗ ಅದನ್ನು ವಿರೋಧಿಸುವವರ ಮೊದಲ ಸಾಲಿನಲ್ಲಿ ನೀವು ನಿಂತಿದ್ದಿರಿ. ಬಸವಣ್ಣ ಮಾದಿಗನೆಂದು ಒಪ್ಪಿಕೊಳ್ಳುವುದು ನಿಮಗೆ ಕಷ್ಟವಾಯಿತೇ?

ಮಾತೆ ಮಹಾದೇವಿ: (ಗಂಭೀರವಾಗಿ) ನೋಡಿ ಸಂಶೋಧನೆ ಯಾವತ್ತೂ ಸತ್ಯಕ್ಕೆ ಹತ್ತಿರವಿರಬೇಕು. ಇತಿಹಾಸವನ್ನು ತಿರುಚಿ, ಚರಿತ್ರೆಯ ಘಟನೆಗಳನ್ನು ನಮ್ಮ ಮೂಗಿನ ನೇರಕ್ಕೆ ನಿರೂಪಿಸಬಾರದು. ಬಂಜಗೆರೆ ಜಯಪ್ರಕಾಶರ ಕೃತಿ ಸತ್ಯದಿಂದ ದೂರ ಉಳಿದು ಅನೇಕ ತಪ್ಪುಗಳಿಂದ ಕೂಡಿತ್ತು, ಬಸವಣ್ಣನವರು ವೈದಿಕ ಧರ್ಮದಿಂದ ಹೊರಬರಲು ಯತ್ನಿಸಿದ ನಡೆಗಳನ್ನು ನಾವು ಅವರ ಅನೇಕ ವಚನಗಳಲ್ಲಿ ಕಾಣುತ್ತೇವೆ. ಒಂದು ವೇಳೆ ಅವರು ನಿಜಕ್ಕೂ ಮಾದಿಗರಾಗಿದ್ದರೆ, ಎಲ್ಲರಿಗಿಂತ ನಾನು ಸಂತೋಷಪಡುತ್ತಿದ್ದೆ. ಬಸವಣ್ಣನವರನ್ನು ಜಾತಿಯ ಕಂಬಕ್ಕೆ ಕಟ್ಟುವ ಸಂಶೋಧನೆಗಳು ಹೆ... ಪೂರ್ವಾಗ್ರಹದಿಂದ ಕೂಡಿವೆ.

• ಕೆ.ಎಲ್.ಚಂದ್ರಶೇಖರ್ ಐಜೂ...

ಪೊಲೀಸ್-ಪಿಂಪ್ ಫಿಕ್ಸಿಂಗ್ ಎಡವಿದಳಾ ಯಮುನೆ?

ನಟಿ ಯಮುನಾ ವೇಶ್ಯಾವಾಟಿಕೆ ನಡೆಸುತ್ತಿದ್ದಾಗ ಸಿಕ್ಕಿ ಬಿದ್ದಿದ್ದಾಳೆ. ಇದು ಎಲ್ಲರಿಗೂ ಗೊತ್ತಾಗಿರುವ ಸತ್ಯ. ಆದರೆ ಅವಳ ಕಸುಬಿನ ಬಗ್ಗೆ ಮೊದಲೇ ಗೊತ್ತಿದ್ದ ಕೆಲ ಪೊಲೀಸ್ ಅಧಿಕಾರಿಗಳು ಬೇಕಂತಲೇ ಅವಳನ್ನು ಈ ರೀತಿ ಹಿಡಿಸಿದ್ದಾರೆಂಬ ಸುದ್ದಿಯೂ ಕೇಳಿಬರುತ್ತಿದೆ.



ಇವತ್ತು ಅದೆಷ್ಟೋ ಸಿನಿಮಾ ನಟಿಯರು ತಮ್ಮ ದೇಹವನ್ನೇ ಬಂಡವಾಳ ಮಾಡಿಕೊಂಡು ಬದುಕು ನಡೆಸುತ್ತಿದ್ದಾರೆ. ಕೆಲವರು ಬದುಕಿನ ಘೋರತೆಗೆ ಸಿಲುಕಿ ಈ ಕಸುಬಿಗೆ ಇಳಿದಿದ್ದರೆ ಇನ್ನೂ ಹಲವರು ಐಶಾರಾಮಿ ಜೀವನಕ್ಕಾಗಿ, ಶೋಕಿಗಳಿಗಾಗಿ ಈ ಕಾಯಕವನ್ನು ನಡೆಸುತ್ತಿದ್ದಾರೆ. ಮೊನ್ನೆ ವೇಶ್ಯಾವಾಟಿಕೆ ಆರೋಪದ ಮೇಲೆ ಸಿಕ್ಕಿಬಿದ್ದಿರುವ ಯಮುನಾ ಎರಡನೆ ಗುಂಪಿಗೆ ಸೇರಿದ ನಟಿ.

ಮೊದಲೆಲ್ಲಾ ಸಿನಿಮಾ ನಟಿಯರು ತಮ್ಮ ನೇಮು-ಫೇಮು ಇರೋತನಕ ಚಿತ್ರರಂಗದಲ್ಲಿದ್ದು ನಂತರ ಯಾರನ್ನಾದರೂ ಮದುವೆ ಮಾಡಿಕೊಂಡು ಸೆಟಲ್ ಆಗಿಬಿಡುತ್ತಿದ್ದರು. ಆದರೆ ಬರಬರುತ್ತಾ ಸಿನಿಮಾ, ಸೀರಿಯಲ್ಲುಗಳಲ್ಲಿ ನಟಿಸಿದ ಒಂದಷ್ಟು ನಟಿಯರು ತಮ್ಮ ಚಾರ್ಮು ಕಳೆದು ಹೋಗುತ್ತಿದ್ದಂತೇ ಮೈಕಸುಬಿಗೆ ಇಳಿಯುವುದು ಮಾಮೂಲಾಯಿತು. ಸಂಪಾದನೆಗೂ ಮೀರಿದ ಖರ್ಚು, ವಿಲಾಸೀ ಜೀವನದ ಬಯಕೆಗಳು ಬಣ್ಣ ಹಚ್ಚಿದ ನಟಿಯರನ್ನು ಬಹುಬೇಗ ತಪ್ಪು ದಾರಿಗೆ ಸೆಳೆಯಲಾರಂಭಿಸಿದವು.

ಮೊದಲಿನಿಂದಲೂ ಸಿನಿಮಾ ನಟಿಯರಿಗೆ ರಾಜಕಾರಣಿಗಳೊಂದಿಗೆ, ಅಧಿಕಾರಿಗಳೊಂದಿಗೆ, ಪೊಲೀಸರೊಂದಿಗೆ ನಂಟು ಇದ್ದೇ ಇದೆ. ಈ ಹಿಂದೆ ಮುಖ್ಯಮಂತ್ರಿಯಾಗಿದ್ದ ಜೆ.ಎಚ್.ಪಟೇಲರ ದರ್ಬಾರಿನಲ್ಲಿ ಕಾಲಿಗೆ ಗೆಜ್ಜೆ ಕಟ್ಟಿ ಕುಣಿದ ನಟಮಣಿಯರು ಅದೆಷ್ಟೋ... ಆದರೂ ಬೆಂಗಳೂರಿನಲ್ಲಿ ಸಿನಿಮಾ ನಟಿಯರು ತೀರಾ ದುಡ್ಡಿಗಾಗಿ ಪಲ್ಲಂಗ ಏರಲು ಶುರುಮಾಡಿದ್ದು ಒಂದು ದಶಕದಿಂದ ಈಚೆಗೆ.

ಪಲ್ಲವಿ ಥಿಯೇಟರಿನ ಕೆಳಗೆ ಎರಡು ಲೈವ್ ಬ್ಯಾಂಡ್ ನಡೆಸುತ್ತಿದ್ದ ಸುಧಾಕರ ಶೆಟ್ಟಿ ಎಂಬ ಫೋರ್‌ಟ್ವೆಂಟಿಯೊಬ್ಬ ಐದಾರು ವರ್ಷಗಳ ಹಿಂದೆ ಸಿನಿಮಾ ನಟಿಯರನ್ನು ಸಂಪರ್ಕಕ್ಕೆ ತಂದುಕೊಂಡು ಅವರನ್ನೆಲ್ಲ ಅಕ್ಷರಶಃ ವ್ಯಾಪಾರಕ್ಕಿಟ್ಟಿದ್ದ. 'ಹುಡುಗಾಟ'ದ ಹುಡುಗಿಯೊಬ್ಬಳನ್ನು ದಿನಕ್ಕೆ ಅರವತ್ತು ಸಾವಿರ ರೂಪಾಯಿಗೆ ಬಾಡಿಗೆಗೆ ಕಳುಹಿಸುತ್ತಿದ್ದ. ಈ ವ್ಯಾಪಾರದಲ್ಲೇ ಸುಧಾಕರ ಶೆಟ್ಟಿ ತಿಂಗಳಿಗೆ ಅರವತ್ತೆಪ್ಪತ್ತು ಲಕ್ಷದ ಲಾಭ ಮಾಡುತ್ತಿದ್ದ ಎಂದರೆ ನಂಬಲೇಬೇಕು. ಇವನೊಟ್ಟಿಗೆ ಬೊಬ್ಬ ಕುಮಾರ ಎಂಬಾತನೂ ಇದ್ದ. ಈ ಬೊಬ್ಬ ತನ್ನ ಸಹೋದರಿ ಸುಜಾತ ಎಂಬುವವಳೊಂದಿಗೆ ಸೇರಿ ಸಿನಿಮಾ ನಟಿಯರನ್ನು ಅಡ್ಡದಾರಿಗೆ ಎಳೆದು ಕಾಸು ಮಾಡಿಕೊಳ್ಳುತ್ತಿದ್ದ. ಒಮ್ಮೆ ಸುಧಾಕರ ಶೆಟ್ಟಿಯ ಮೇಲೆ ಸಿಸಿಬಿ ಪೊಲೀಸ್‌ನವರು ರೇಡುಬಿದ್ದು ಆತನನ್ನು ಗಡಿಪಾರು ಮಾಡಿದ್ದರು. ಇವತ್ತಿಗೆ ಇದೇ ಅಡ್ಡಕಸುಬಿ ಸುಧಾಕರ 'ಜಯ ಕರ್ನಾಟಕ' ಎಂಬ ಚಿಲ್ಲರೆ ಸಂಘಟನೆಯ ಎಂ.ಜಿ.ರೋಡ್ ಶಾಖೆಗೆ ಅಧ್ಯಕ್ಷ!

ನಟಿಯರ ಚಪಲ

ಅದೇನು ಸೋಜಿಗವೋ ಗೊತ್ತಿಲ್ಲ, ಕೆಲ ಶ್ರೀಮಂತ ಶೋಕಿಲಾಲರಿಗೆ ಪರದೆಯ ಮೇಲೆ ಕಾಣಿಸಿಕೊಳ್ಳುವ ನಟಿಯರೊಂದಿಗೆ ಕಾಲ ಕಳೆಯಬೇಕೆಂಬ ಚಪಲ. ಇಂಥ ಹಣದ ಕುಳಗಳಿಗೆ, ಅಧಿಕಾರಿಗಳಿಗೆ, ರಾಜಕಾರಣಿಗಳಿಗೆ ಹೆಣ್ಣುಮಕ್ಕಳನ್ನು ಸಪ್ಲೈಮಾಡುವ ಬೃಹತ್ ಜಾಲವೇ ಬೆಂಗಳೂರಿನಲ್ಲಿದೆ. ಆರ್ಕುಟ್ಟು, ಫೇಸ್ ಬುಕ್‌ಗಳೆಂಬ ಅಂತರ್ಜಾಲ ತಾಣಗಳಲ್ಲಿ ಇದಕ್ಕಾಗಿ ಆನ್‌ಲೈನ್ ಬುಕ್ಕಿಂಗೂ ಇದೆ. ಈ ವರ್ತುಲದಲ್ಲಿ ಸಿನಿಮಾ ಹಾಗೂ ಧಾರಾವಾಹಿಗಳ ಹಲವು ನಟಿಯರದ್ದೇ ಮೇಲುಗೈ.

ಕನ್ನಡ ಚಿತ್ರರಂಗದ ಹಲವು ರಿಟೈರ್ಡು ನಟಿಯರು, ಧಾರಾವಾಹಿಯ ನಟಿಯರು ಬಳ್ಳಾರಿ ಗಣಿ ಧಣಿಗಳಿಗೆ, ಆಂಧ್ರದ ರಕ್ತಪಿಪಾಸು ರಾಜಕಾರಣಿಗಳಿಗೆ, ರಿಯಲ್ ಎಸ್ಟೇಟ್ ಏಜಂಟರಿಗೆ, ಭೂಕಂಟಕರಿಗೆ ದಂಡಿಯಾಗಿ ಸರಬರಾಜಾಗುತ್ತಿದ್ದಾರೆ. ಗಂಟೆಗಳ ಲೆಕ್ಕದಲ್ಲಿ ಲಕ್ಷಾಂತರ ರೂಪಾಯಿಗಳನ್ನು, ಅವರ ವಿಮಾನದ ಟಿಕೆಟ್ ಖರ್ಚನ್ನೆ, ದಂಧೆ ನಡೆಯುವ ಸ್ಥಳದ ಎಲ್ಲಾ ವೆಚ್ಚಗಳನ್ನು ನೋಡಿಕೊಳ್ಳುವುದು ಈ ದಂಧೆಯ ಕಿಂಗ್ ಪಿನ್. ಆತನೇ ಪಿಂಪ್ ಸುರಕ್ಷಿತ್. ನಟಿಯರನ್ನು ಹಣದ ಕುಳಗಳೊಂದಿಗೆ ಗೋವಾಕ್ಕೆ ಕಳುಹಿಸಬೇಕಾದರೆ ಇಷ್ಟು, ಬ್ಯಾಂಕಾಕ್‌ಗಾದರೆ ಇಂತಿಷ್ಟೆಂದು 'ರೇಟ್' ಫಿಕ್ಸ್ ಮಾಡಿ ಕಳುಹಿಸುವವನೂ ಇದೇ ಸುರಕ್ಷಿತ್.

ಫೇಸ್ ಬುಕ್ಕಲ್ಲಿ ಮ್ಯಾಚ್ ಫಿಕ್ಸು!

ಫೇಸ್ ಬುಕ್ಕಲ್ಲಿ ಮ್ಯಾಚ್ ಫಿಕ್ಸ್ ಮಾಡುವವರ ಪೈಕಿ ಸುರಕ್ಷಿತ್ ಅಲಿಯಾಸ್ ಸುಮನ್ ಕೂಡ ಒಬ್ಬ. ಚಿತ್ರರಂಗದಲ್ಲಿ ಇವತ್ತಿಗೆ ಬೋರ್ಡಿಗಿಲ್ಲದಂತಾಗಿರುವ ಮಾಜಿ ನಟಿಯರಿಂದ ಹಿಡಿದು ಪುಡಿ ನಟಿಯರೊಂದಿಗೂ ಈತನ ಸಂಪರ್ಕವಿದೆ. ಅದೇ ರೀತಿ ಬೆಂಗಳೂರಿನ ಕಾರ್ಪೋರೇಟರ್ ಲೆವೆಲ್ಲಿಂದ ಹಿಡಿದು ಆಂಧ್ರದ ದೊಂಗ ರಾಜಕಾರಣಿಗಳ ತನಕ ಗಿರಾಕಿಗಳ ಕಾಂಟ್ಯಾಕ್ಟೂ ಇದೆ. ಬೆಂಗಳೂರಿನ ಸಾಫ್ಟ್‌ವೇರ್ ಕಂಪೆನಿಗಳಲ್ಲಿ ಲಕ್ಷಗಟ್ಟಲೆ ಸಂಬಳ ಎಣಿಸಿಕೊಳ್ಳುವ ಉದ್ಯೋಗಿಗಳು ಸುರಕ್ಷಿತನಿಗೆ ಪರ್ಮನೆಂಟ್ ಗಿರಾಕಿಗಳು. ಇಂಟರ್‌ನೆಟ್ಟಲ್ಲೇ ಫೋಟೋ, ರೇಟು, ಕೊಟೇಷನ್ನುಗಳನ್ನು ನಿಕ್ಕಿ ಮಾಡಿಕೊಳ್ಳುತ್ತಾರೆ.

ಮೊನ್ನೆ ವಿಠಲ್ ಮಲ್ಯ ರಸ್ತೆಯ ಐಟಿಸಿ ಗಾರ್ಡೇನಿಯಾ ಹೋಟೇಲಿನ ನಾಲ್ಕನೇ ಮಹಡಿಯ 1402 ರೂಮಿನ ಮೇಲೆ ಪೊಲೀಸರು ನಡೆಸಿದ ರೇಡಿನಲ್ಲಿ ಸಗೇಬಿದ್ದ ಯಮುನಾ ಕೂಡ ಇದೇ ಸುರಕ್ಷಿತನ ನೆಟ್‌ವರ್ಕಿನಲ್ಲಿದ್ದವಳೇ.



ಇತ್ತೀಚೆಗೆ ಬಿಡುಗಡೆಗೊಂಡ ದುನಿಯಾ ವಿಜಯ್ ನಾಯಕನಾಗಿರುವ 'ಕಂಠೀರವ' ಚಿತ್ರದಲ್ಲಿ ಪ್ರಮುಖ ಪಾತ್ರದಲ್ಲಿ ನಟಿಸಿರುವ ಬಹುಭಾಷಾ ನಟಿ ಯಮುನಾ ನಾಯ್ಡು. ಈಕೆ ಮೂಲತಃ ಆಂಧ್ರದವಳು ಆದರೆ ಸಿನಿಮಾ ನಟಿಯಾಗುವ ಮುನ್ನ ಬೆಂಗಳೂರಿನ ಹನುಮಂತನಗರದಲ್ಲಿ ವಾಸವಿದ್ದಳು. ಈಕೆಯ ತಾಯಿ ಬಸವನಗುಡಿಯಲ್ಲಿ ಹೂ ಮಾರಿ ಜೀವನ ನಡೆಸುತ್ತಿದ್ದರು. ಹಿಂದೊಮ್ಮೆ ನಟಿ ಸೌಂದರ್ಯಳಂತೆ ಈಕೆಯೂ ಆಂಧ್ರದಲ್ಲಿ ದೊಡ್ಡ ಹೆಸರು ಮಾಡಿದವಳು. ಹತ್ತಾರು ಹಿಟ್ ಚಿತ್ರಗಳಲ್ಲಿ ನಟಿಸಿದವಳು. ಕನ್ನಡದಲ್ಲಿ ಹ್ಯಾಟ್ರಿಕ್ ಹೀರೋ ಶಿವರಾಜ್ ಕುಮಾರ್ ಜೊತೆ 'ಮೋಡದ ಮರೆಯಲ್ಲಿ', ಕ್ರೇಜಿ ಸ್ಟಾರ್ ರವಿಚಂದ್ರನ್ ಜೊತೆ 'ಚಿನ್ನ'ದಲ್ಲಿ, ಶಶಿಕುಮಾರ್ ಜೊತೆ 'ಹೆಂಡ್ತೀರೇ ಹುಷಾರ್' ಸಿನಿಮಾದಲ್ಲಿ ನಾಯಕಿಯಾಗಿ ನಟಿಸಿದ್ದವಳು ಇದೇ ಯಮುನಾ. ಪ್ರೀತಮ್ ಗುಬ್ಬಿ ನಿರ್ದೇಶನದ 'ಹಾಗೆ ಸುಮ್ಮನೆ' ಚಿತ್ರದಲ್ಲಿ ಮದರ್ ರೋಲ್‌ನಲ್ಲಿ ಕಾಣಿಸಿಕೊಂಡಿದ್ದ ಯಮುನಾ ಚಿಂದೋಡಿ ಸಂಸ್ಥೆ ನಿರ್ಮಿಸಿ ಇತ್ತೀಚೆಗಷ್ಟೇ ಬಿಡುಗಡೆಯಾಗಿದ್ದ 'ಶಂಭೋ ಶಂಕರ' ಚಿತ್ರದಲ್ಲಿ ಪಾರ್ವತಿಯ ಪಾತ್ರದಲ್ಲಿ ನಟಿಸಿದ್ದಳು. ತಮಿಳು, ತೆಲುಗು ಮತ್ತು ಮಲಯಾಳಂ ಚಿತ್ರಗಳಲ್ಲೂ ಪೋಷಕ ಪಾತ್ರಗಳಲ್ಲಿ ಮಿಂಚುತ್ತಿರುವ ಈ ನಟಿ ಸದ್ಯ ಮೆಗಾಧಾರಾವಾಹಿಗಳಲ್ಲೂ ಬ್ಯುಸೀ ಆಗಿರುವ ನಟಿ. ರಾಡಾನ್ ಸಂಸ್ಥೆ ನಿರ್ಮಾಣದ 'ಲಕ್ಷ್ಮಿ' ಧಾರಾವಾಹಿಯಲ್ಲಿ ಯಮುನಾಳೇ ಕೇಂದ್ರಬಿಂದು. ಧಾರಾವಾಹಿ ನಟನೆಗೆ ಯಮುನಾ ದಿನವೊಂದಕ್ಕೆ ಪಡೆಯುವ ಸಂಭಾವನೆ ಬರೋಬ್ಬರಿ ಹತ್ತು ಸಾವಿರ ರೂಪಾಯಿ. ಸಿನಿಮಾಗಾದರೆ ಪಡೆಯುವ ಹಣ ಮೂವತ್ತು ಸಾವಿರ ರೂಪಾಯಿ.

ಮದುವೆಯಾಗಿ ಇಬ್ಬರು ಮಕ್ಕಳನ್ನೂ ಹೊಂದಿರುವ, ಕೈತುಂಬ ನಟನೆಯ ಅವಕಾಶಗಳೂ ಇರುವ ಯಮುನಾಗೆ ತೀರಾ ಇಂಥ ದಂಧೆಗಿಳಿಯುವ ಅನಿವಾರ್ಯತೆ ಅದೇನಿತ್ತೋ ಗೊತ್ತಿಲ್ಲ.

ಯಮುನಾ ಹಾದಿ ತಪ್ಪಿರುವುದು, ಹಣದ ದಾಹಕ್ಕೆ ಬಿದ್ದು ಬೇಡದ ದಂಧೆಗೆ ಧುಮುಕಿರುವುದು ನಿಜವೇ ಇರಬಹುದು. ಆದರೆ ಯಮುನಾಳ ಬಂಧನದ ಹಿಂದೆ ಪೊಲೀಸರ ವ್ಯವಸ್ಥಿತ ಸಂಚು ನಡೆದಿದೆ ಎಂಬ ಮಾತೂ ಕೇಳಿಬರುತ್ತಿದೆ.

ಬೆಂಗಳೂರಿನ ಸೆಕ್ಸ್ ರ್‍ಯಾಕೆಟ್ಟಿನ ಹಿಂದೆ ಉನ್ನತ ಪೊಲೀಸ್ ಅಧಿಕಾರಿಗಳ ದಟ್ಟ ನೆರಳಿದೆ. ಪ್ರತಿ ತಿಂಗಳು ಈ ದಂಧೆಯಿಂದ ಲಕ್ಷಾಂತರ ರೂಪಾಯಿಗಳ ಕಪ್ಪ ಕೂಡಾ ಖಾಕಿಗಳಿಗೆ ಸಂದಾಯವಾಗುತ್ತದೆ. ಸದ್ಯ ಯಮುನಾಳ ಬಂಧನದ ಹಿಂದೆ ಪೊಲೀಸ್ ಅಧಿಕಾರಿಗಳಾದ ಚಂದ್ರ ಮತ್ತು ರೆಡ್ಡಿ ಎಂಬಿಬ್ಬರು ಅಧಿಕಾರಿಗಳ ಹೆಸರು ಪ್ರಮುಖವಾಗಿ ಕೇಳಿಬರುತ್ತಿದೆ. ವಿಕಟವೆಂದರೆ, ಈ ಇಬ್ಬರು ಅಧಿಕಾರಿಗಳೂ ಈ ದಂಧೆಯ ಫಲಾನುಭವಿಗಳೇ ಆಗಿದ್ದಾರೆ.

ರೆಡ್ಡಿ ಎಂಬ ಪೊಲೀಸ್ ಆಫೀಸರ್‌ಗೂ ನಟಿ ಯಮುನಾಗೂ ಮೊದಲೇ ನೆಂಟಸ್ತಿಕೆಯಿತ್ತಂತೆ. ಇದೇ ವ್ಯಕ್ತಿ ಯಮುನಾ ನಟಿಸಿದ್ದ 'ಶಂಭೋಶಂಕರ' ಸೇರಿದಂತೆ ಹಲವಾರು ಸಿನಿಮಾ ಕಾರ್ಯಕ್ರಮಗಳಲ್ಲಿ ಪಾಲ್ಗೊಂಡಿದ್ದರಂತೆ. ಸಿನಿಮಾದವರು ಹಾಜರಾಗುವ ಬಹುತೇಕ ನೈಟ್ ಔಟ್ ಪಾರ್ಟಿಗಳಲ್ಲಿ ಮಿಸ್ಟರ್ ರೆಡ್ಡಿಗಾರು ಹಾಜರಾತಿ ಇದ್ದೇ ಇರುತ್ತೆ. ಕಳೆದ ತಿಂಗಳಷ್ಟೇ ನಡೆದ 'ಚಿನ್ನದ ತಾಳಿ' ಎಂಬ ಸಿನಿಮಾದ ಅತ್ಯದ್ದೂರಿ ಪಾರ್ಟಿಯಲ್ಲಿ ಸಹಾ ರೆಡ್ಡಿ ಸಾಹೇಬರ ಉಪಸ್ಥಿತಿಯಿತ್ತು. ಇಂಥ ರೆಡ್ಡಿಯವರಿಗೆ ಸಿನಿಮಾ ನಟಿಯರೇ ಅಭಿಮಾನಿಗಳಾಗಿದ್ದಾರೆ!

ಇಂಥ ಅಧಿಕಾರಿಗಳು ಮತ್ತು ಯಮುನಾ ನಡುವೆ ಅದೇನು ರಂಕಲು ಮೆತ್ತಿಕೊಂಡಿತ್ತೋ? ದುಡ್ಡಿನ ವಿಚಾರದಲ್ಲಿ ಕಲಹ ಶುರುವಾಯಿತೋ ಅಥವಾ ಯಮುನೆ ತಮಗೆ ದಕ್ಕದ ಹತಾಶೆಯೋ ಗೊತ್ತಿಲ್ಲ. ಅಂತೂ ಸಿಸಿಬಿ ಪೊಲೀಸರನ್ನು ಬಿಟ್ಟು ಏಕಾಏಕಿ ರೇಡು ಮಾಡಿಸಿ ಅದು ಮಾಧ್ಯಮಗಳ ಕಣ್ಣಿಗೆ ಸೆರೆ ಸಿಕ್ಕುವಂತೆ ಈ ಪೊಲೀಸ್ ಅಧಿಕಾರಿಗಳೇ ಮಾಸ್ಟರ್ ಪ್ಲಾನು ಮಾಡಿದ್ದಾರೆ. ಅವತ್ತು ಪಿಂಪ್ ಸುರಕ್ಷಿತ್ ಮತ್ತು ಯಮುನಾಳ ಮೊಬೈಲ್ ಟವರ್‌ಗಳ ಮೇಲೆ ಪೊಲೀಸರು ಕಣ್ಣಿಟ್ಟಿದ್ದಾರೆ. ಇಬ್ಬರ ಮೊಬೈಲ್ ಸಿಗ್ನಲ್‌ಗಳು ಗಾರ್ಡೇನಿಯಾ ಹೋಟೆಲಿನಲ್ಲೇ ಇತ್ತಾದ್ದರಿಂದ ಸಿಸಿಬಿ ಪೊಲೀಸರು ಒಮ್ಮಿಂದೊಮ್ಮೆಲೇ ಹೋಟೇಲಿನ ಮೇಲೆ ರೇಡು ಮಾಡಿದ್ದಾರೆ. ಅಷ್ಟರಲ್ಲಾಗಲೇ ಬೆಂಗಳೂರಿನ ರಾಮಮೂರ್ತಿ ನಗರದ ಕಸ್ತೂರಿ ನಗರದ ನಿವಾಸಿ, 'ಟ್ರಾನ್ಸ್ ಸಾಫ್ಟ್' ಎಂಬ ಸಾಫ್ಟ್‌ವೇರ್ ಕಂಪನಿಯೊಂದರ ಸಿಇಒ ವೇಣುಗೋಪಾಲ ಎಂಬಾತ ಯಮುನಾಳೊಂದಿಗೆ ಇದ್ದಾನೆ. ದಾಳಿಯಿಟ್ಟ ಪೊಲೀಸರು ಯಮುನಾ, ಬ್ರೋಕರ್ ಸುರಕ್ಷಿತ್ ಸೇರಿದಂತೆ ಒಟ್ಟು ಒಂಭತ್ತು ಮಂದಿಯನ್ನು ಬಂಧಿಸುತ್ತಾರೆ.

ಸಾಮಾನ್ಯವಾಗಿ ವೇಶ್ಯಾವಾಟಿಕೆ ಜಾಲದ ಮೇಲೆ ದಾಳಿಯಿಡುವ ಸಿಸಿಬಿ ಅಧಿಕಾರಿಗಳು ನಂತರ ಅದೇ ಲಿಮಿಟ್ಟಿಗೆ ಬರುವ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಿಸಿ ಬಂಧಿತರನ್ನು ನ್ಯಾಯಾಲಯಕ್ಕೆ ಒಪ್ಪಿಸುತ್ತಾರೆ. ಎರಡು ಮೂರು ದಿನಗಳಲ್ಲಿ ಆರೋಪಿಗಳು ಬೇಲ್ ಪಡೆದು ಹೊರಬರುತ್ತಾರೆ. ಆದರೆ ಯಮುನಾ ವಿಚಾರದಲ್ಲಿ ಪೊಲೀಸರು ಭಿನ್ನವಾಗಿ ವರ್ತಿಸಿದ್ದಾರೆ. ಬ್ರೋಕರ್ ಸುರಕ್ಷಿತ್‌ನನ್ನು 15 ದಿನಗಳ ವಿಚಾರಣೆಗೂ ಒಪ್ಪಿಸಿದ್ದಾರೆ.

ಅದೇನೇ ಇರಲಿ, ಓರ್ವ ತಾಯಿ, ಮಡದಿ, ಗೃಹಿಣಿ ಮತ್ತು ಖ್ಯಾತ ನಟಿಯೂ ಆಗಿರುವ ಯಮುನಾಳಿಗೆ ತನ್ನ ಮೈ ಮಾರಿಕೊಳ್ಳುವಂತಹ ಸ್ಥಿತಿ ಬಂದಿದ್ದು ಯಾತಕ್ಕೆ? ಈ ಪ್ರಶ್ನೆಗೆ ಉತ್ತರ ಸಿಗುತ್ತದೆಯೇ?

• ವರದಿಗಾರ


ಸಿಕ್ಕಿಬಿದ್ದ ಆಂಧ್ರಾವಾಲ ಯಾರು?

ಯಮುನಾ ಜತೆ ಸಿಕ್ಕಿ ಬಿದ್ದವರಲ್ಲಿ ಆಂಧ್ರ ಪ್ರದೇಶದ ಜನಪ್ರಿಯ ರಾಜಕಾರಣಿಯೊಬ್ಬರ ಪುತ್ರ ಕೂಡ ಇದ್ದ ಎನ್ನುವ ಸುದ್ದಿ ಕೇಳಿಬರುತ್ತಿದೆ. ಆದರೆ ಆತ ಯಾರೆಂಬುದರ ಕುರಿತು ಎಷ್ಟೇ ಪ್ರಶ್ನಿಸಿದರೂ ಪೊಲೀಸರು ಬಾಯಿ ಬಿಡುತ್ತಿಲ್ಲ. ಮೂಲಗಳ ಪ್ರಕಾರ ಆ ಯುವಕನ ತಂದೆ ಆಂಧ್ರ ರಾಜಕಾರಣದಲ್ಲಿ ಹಲವು ವರ್ಷಗಳ ಕಾಲ ಉನ್ನತ ಹುದ್ದೆಯಲ್ಲಿದ್ದವರು. ಆತನ ಕುಟುಂಬಕ್ಕೆ ಚಿತ್ರರಂಗದೊಂದಿಗೆ ಭಾರೀ ನಂಟೂ ಇದೆಯಂತೆ. ಆ ಯುವಕ ಈಗ ರಾಜಕಾರಣದಲ್ಲಿ ನೆಲೆ ಕಂಡುಕೊಳ್ಳಲು ಯತ್ನಿಸುತ್ತಿದ್ದಾನೆ ಎಂದು ಹೈದರಾಬಾದ್ ಪೊಲೀಸ್ ಆಯುಕ್ತ ಎ.ಕೆ. ಖಾನ್ ಹೇಳಿದ್ದರೂ ಆ ಆಂಧ್ರಾವಾಲಾ ಯಾರು ಎಂಬುದಿನ್ನೂ ಬಯಲಾಗಿಲ್ಲ.



ಅಲೋಕ್ ಪಟ್ಟಿಯಲ್ಲಿ ಫಲಾನುಭವಿ ಪೊಲೀಸರು?

ಇತ್ತೀಚೆಗೆ ಆಂಧ್ರದಲ್ಲಿ ಸಾಯಿರಾಬಾನು ಮತ್ತು ಜ್ಯೋತಿ ಎಂಬಿಬ್ಬರು ನಟಿಯರು ವೇಶ್ಯಾವಾಟಿಕೆ ಆರೋಪದಲ್ಲಿ ಸಿಕ್ಕುಬಿದ್ದ ಮೇಲೆ ಆಂಧ್ರದ ವಿಟ ಪುರುಷರೆಲ್ಲಾ ಬೆಂಗಳೂರಿನತ್ತ ದೌಡಾಯಿಸುತ್ತಿದ್ದಾರೆ. ಹೋಟೆಲ್ ಅಶೋಕ, ದಿ ಪಾರ್ಕ್, ವಿಟ್ರಿಯಾ ಸೇರಿದಂತೆ ಸ್ಟಾರ್ ಹೋಟೆಲುಗಳ ರೂಮುಗಳು ಈ ಅತೃಪ್ತ ಆತ್ಮಗಳ ಶಾಂತಿಯಾಗಕ್ಕೇ ಬುಕ್ಕಾಗುತ್ತಿವೆ. ಈ ಬಗ್ಗೆ ಸ್ವತಃ ಆಂಧ್ರ ಪೊಲೀಸರೇ ಬೆಂಗಳೂರಿನ ಅಧಿಕಾರಿಗಳಿಗೆ ಮಾಹಿತಿ ನೀಡಿದ್ದಾರೆ.



ಸದ್ಯ ಕಡಕ್ ಪೊಲೀಸ್ ಅಧಿಕಾರಿ ಅಲೋಕ್ ಕುಮಾರ್ ಅವರು ಚಿತ್ರರಂಗದಲ್ಲಿದ್ದುಕೊಂಡೇ ವೇಶ್ಯಾವಾಟಿಕೆಯನ್ನು ಪಾರ್ಟ್‌ಟೈಂ ಉದ್ಯೋಗವಾಗಿಸಿಕೊಂಡಿರುವ ನಟಿಯರ ಮತ್ತು ಹೈಟೆಕ್ ಜಾಲಗಳ ಲಿಸ್ಟು ಸಿದ್ಧಪಡಿಸುತ್ತಿದ್ದಾರಂತೆ. ಹೇಗಾದರೂ ಸರಿ ಬೆಂಗಳೂರಿನ ಸೆಕ್ಸ್ ರಾಕೆಟ್‌ಅನ್ನು ನಿರ್ನಾಮ ಮಾಡಬೇಕೆಂಬುದು ಅಲೋಕ್ ಕುಮಾರ್ ಅವರ ಒತ್ತಾಸೆ. ಆದರೆ ಅವರ ತಂಡ ತಯಾರಿಸುತ್ತಿರುವ ಲಿಸ್ಟು ಸಂಪೂರ್ಣವಾಗಿ ಅಲೋಕ್ ಕುಮಾರ್ ಅವರ ಕೈ ಸೇರಿದಾಗ ಅದರಲ್ಲಿ ಪೊಲೀಸ್ ಅಧಿಕಾರಿಗಳು, ರಾಜಕಾರಣಿಗಳ ಪತ್ನಿಯರು ಸೇರಿದಂತೆ ಪ್ರತಿಷ್ಠಿತ ಫಲಾನುಭವಿಗಳ ಹೆಸರುಗಳು ಕಂಡುಬಂದಾಗ ಅವರು ಬೆಚ್ಚಿಬೀಳದಿದ್ದರೆ ಸಾಕು.


ಪವಾರ್

ಗದಗ: ಆಟೋ ಡ್ರೈವರ್ ರಮೇಶನನ್ನು ಠಾಣೆಯಲ್ಲೇ ಹೊಡೆದು ಕೊಂದ ಖಾಕಿ ಕಿಲ್ಲರ್ಸ್!

ಗಳ ಕ್ರೌರ್ಯಕ್ಕೆ ಅಮಾಯಕ ಯುವಕನ ಹೆಣ ರೊಬ್ಬರ ರಿಕ್ಷಾ ಹೊಡೆದು ದಿನವಿಡೀ ದುಡಿದು ಗಾಸಿನಲ್ಲಿ ಹೊಟ್ಟೆ ತುಂಬಿಸಿಕೊಳ್ಳುತ್ತಿದ್ದ ರಮೇಶ ರಣವಿಲ್ಲದೆ ಖಾಕಿಗಳ ಕೈಗೆ ಸಿಕ್ಕು ಕೊಲೆಯಾಗಿ ಪೊಲೀಸ್ ಠಾಣೆಯಲ್ಲಿ ಈ ಸಾವು ನಡೆದಿದೆ ರೆ ಇದು ಲಾಕಪ್‌ಡೆತ್ ಎನ್ನುವುದರಲ್ಲಾಗಲಿ, ದ್ದು ಐದೇ ಗಂಟೆಯಲ್ಲಿ ಥರ್ಡ್ ಡಿಗ್ರಿ ಟಾರ್ಚರ್ ಕೊಂದು ಹಾಕಿರುವ ಪೊಲೀಸರು ಕೊಲೆಗಡುಕರು ಲ್ಲಾಗಲಿ ಯಾವುದೇ ಸಂಶಯವಿಲ್ಲ. ವನ್ನು ಸುಳ್ಳಾಗಿಸುವಲ್ಲಿ ನಿಸ್ಸೀಮರಾದ ರಮೇಶನ ಸಾವಿಗೊಂದು ಸ್ಟೋರಿ ಮಾಡಿ ಇದರಿಂದ ಪಾರಾಗಿದ್ದಾರೆ. ತ್ರಿ ಸಿ.ಸಿ.ಪಾಟೀಲ ಮತ್ತವನ ಕೈಚೇಲಾ ಸಿ ಸುರೇಶ ಮಸೂತಿ ಸೇರಿಕೊಂಡು ನೆಗೆ ರಮೇಶನ ಸಾವಿನ ಚಿತ್ರಣವೇ ೆ. ಕೊಲೆಗಡುಕ ಎಸ್‌ಐ ಸುರೇಶ ಮತ್ತು ಮನಬಂದಂತೆ ಲಾಠಿ ಬೀಸಿದ ಪೇದೆಗಳು ಸದ್ಯ ಸೇಫ್ ಆಗಿದ್ದಾರೆ.

ತ್ತ ಜನವರಿ 17ರ ಸಂಜೆ ರಮೇಶ ಕೆಲಸ ಶುರು ಮಾಡಿದ್ದ. ಬಾಗಲ ನಗ ಪ್ಯಾಸೆಂಜರ್ ರೈಲು ಬಂದಾಕ್ಷಣ ಊರಗೆ ರಿಕ್ಷಾ ಹತ್ತಿದ ಪ್ರಯಾಣಿಕರನ್ನು ಡು ಸಂಜೆ 5 ಗಂಟೆ ಸುಮಾರಿಗೆ ಟೇಸ್ ಹತ್ತಿರದ ಖಾಸಗಿ ಆರ್‌ಆರ್ ಣಕ್ಕೆ ತಂದು ಬಿಟ್ಟಿದ್ದಾನೆ. ಅಂದು ಚೆಡ್ಡಿಗಳ ಹಿಂದೂ ಸಮಾಜೋತ್ಸವದ ರಾಟ ಬಲು ಜೋರಾಗಿತ್ತು. ಊರು ಯಿಂದ ತುಂಬಿತ್ತು. ಬಸ್ ನಿಲ್ದಾಣ ರಿಕ್ಷಾ ನಿಲ್ದಾಣದಲ್ಲಿ ನಿಂತಿದ್ದ ರಮೇಶ ೋ ಒಬ್ಬ ಕುಡುಕ ಬಂದು ಕಾಡಿದ್ದಾನೆ. ದಾಂಧಲೆ ಮಾಡಿದ್ದಾನೆ. ಅಲ್ಲೇ ಸ್ಟೇಬಲ್ ಎಂ.ಎಸ್. ಪಾಟೀಲ ಈ ಬಂಡವಾಳ ಮಾಡಿಕೊಂಡು ರಮೇಶ ಪೀಕಲು ಪ್ರಯತ್ನ ಮಾಡಿದ್ದಾನೆ. ಲನ ಮಾತಿಗೆ ಜಗ್ಗದ ರಮೇಶ ವೆ ದುಡ್ಡು ಕೊಡಲು ನಿರಾಕರಿಸಿದ್ದಾನೆ. ಸ್ಥಳದಲ್ಲೇ ನಾಲ್ಕು ಜನರ ಮಧ್ಯ ಮಾನ ಕಳಕೊಂಡ ಲ್ ಏನೋ ದೊಡ್ಡ ಅನಾಹುತವಾದಂತೆ ನಟಿಸಿ ಪವಾರನನ್ನು ಠಾಣೆಗೆ ಎಳೆದೊಯ್ದಿದ್ದಾನೆ. ಲಾರಿ ಬಾಸುಂಡೆ ಮೂಡೋ ಹಾಗೆ ಹೊಡೆದು ಅವನ ನ್ನ ನಾಲ್ಕು ಸಾವಿರವನ್ನು ಪಾಟೀಲ್ ಕಿತ್ತುಕೊಂಡಿ ರೇಶ ಆ ಹಣವನ್ನ ಬ್ಯಾಂಕಿಗೆ ಕಟ್ಟಲೆಂದು ದಿದ್ದ ಇತ್ತೀಚಗಿನ ಅತಿವೃಷ್ಟಿ ಮಳೆಯಿಂದ ನೆಲಕ್ಕುರ ಮನೆಯನ್ನು ಕಟ್ಟಿಕೊಳ್ಳಲು ಈ ಬಡಪಾಯಿ ಹಿಸಿಡುತ್ತಿದ್ದ, ಸೂರಿಗಾಗಿ ಕೂಡಿಟ್ಟ ಹಣ ಕಾರಣ ಪಿಗಳ ಪಾಲಾಗಿದ್ದನ್ನ ಕಂಡು ಕಂಗಾಲಾಗಿದ್ದ ಕೈ ಕಾಲಿಗೆ ಬೇಡಿ ಹಾಕಿ ಸೆಲ್‌ನಲ್ಲಿ ಕೂಡಿಹಾಕಿ ಟೀಲ್.

ಸಮಾಜೋತ್ಸವ ಗಲಾಟೆ ಮುಗಿಸಿ ಚೆಡ್ಡಿಗಳ ಕೃತಾರ್ಥನಾಗಿ ರಾತ್ರಿ 8 ಗಂಟೆ ಸುಮಾರಿಗೆ ಸುರೇಶ ಕುಂಬಾರ ಠಾಣೆಗೆ ಬಂದಿದ್ದಾನೆ. ತಾನು ಜಿಲ್ಲಾ ದಂಧೆಯನ್ನು ಮುಚ್ಚಿಕೊಳ್ಳಲು ರಮೇಶ ವಿರುದ್ಧ ಪಾಟಿಲ್ ಸುಳ್ಳು ಸ್ಟೋರಿ ಇವನು ಬ್ಲಾಕ್ ಟಿಕೆಟ್ ಮಾರುತ್ತಿದ್ದ, ಗೆ ಮಾಮೂಲಿ ಕೊಡು ಎಂದಿದ್ದಕ್ಕೆ ಬಾಬಿಟ್ಟ ಬೈದಿದ್ದಾನೆ ಅಂತೆಲ್ಲಾ ಸೀನ್ ಟೀಲನ ಮಾತಿಗೆ ಜೋತುಬಿದ್ದ ಂಬಾರ ಬೆಲ್ಟ್ ತೆಗೆದು ರಮೇಶನನ್ನು ಬಾರಿಸಿದ್ದಾನೆ. ಆದರೆ ಏನಾಗುತ್ತಿದೆ ರಮೇಶನಿಗೆ ತಿಳಿಯದಂತಾಗಿತ್ತು, ಗೆ, ಕುಂಬಾರನಿಗೆ ತಿಳಿ ಹೇಳಲು ಆತನಿಗೆ ಅವಕಾಶ ಸಿಕ್ಕಿಲ್ಲ ಏಟು ತಾಳಲಾರದೆ ರಮೇಶ


ಸುರೇಶ್ ಕುಂಬಾರ್


ರೂಪ



ರೂಪ

ಪ್ರಜ್ಞಾಹೀನಸ್ಥಿತಿ ತಲುಪಿದ್ದ. ರಾತ್ರಿ 8-30 ಗಂಟೆಯಾದರೂ ರಮೇಶ ಮನೆಗೆ ಬಾರದಿದ್ದಕ್ಕೆ ಗಾಬರಿಯಾದ ಆತನ ತಾಯಿ ರೇಣುಕವ್ವ, ಪತ್ನಿ ಯಶೋದಾ ಮತ್ತವನ ತಂಗಿ ಪೊಲೀಸರು ಠಾಣೆಗೆ ಎಳೆದೊಯ್ದು ಸುದ್ದಿ ಕೇಳಿ ಅಲ್ಲಿಗೆ ತಮ್ಮ ಏರಿಯಾದ ಕೆಲ ಮುಖಂಡ ರೊಂದಿಗೆ ಧಾವಿಸಿದ್ದಾರೆ. ಸೆಲ್ಲಲ್ಲಿ ಕೂಡಿಹಾಕಿ ಅವನನ್ನು ಥಳಿಸಿದ್ದ ದೃಶ್ಯ ಕಂಡು ಹೌಹಾರಿ ದ್ದಾರೆ. ತಕ್ಷಣ ಪಿಎಸ್‌ಐ ಸುರೇಶ ಕುಂಬಾರನ ಕಾಲಿಗೆ ಬಿದ್ದು ಅಮಾಯಕ ರಮೇಶನನ್ನು ಬಿಡುವಂತೆ ಅಂಗಲಾಚಿದ್ದಾರೆ. ಪೇದೆ ಎಮ್‌ಎಸ್ ಪಾಟೀಲ ಹೇಳಿದ್ದ ಸುಳ್ಳು ಕಥೆಯನ್ನು ನಂಬಿ ಕುಳಿತಿದ್ದ ಕುಂಬಾರ ರಾತ್ರಿ ಬಿಟ್ಟು ಕಳುಹಿಸುತ್ತೇನೆ ಎಂದು ರಮೇಶನ ಕಡೆಯವರನ್ನು ಸಾಗಹಾಕಿ ತಾನೂ ಅಲ್ಲಿಂದ ಹೊರ ನಡೆದಿದ್ದಾನೆ.


ರವಿ ನಾಯಕ್

ನಂತರ ಪ್ರಾರಂಭವಾಗಿದ್ದೆ ಬೇರೆ ಕಥೆ. ಪೇದೆ ಪಾಟೀಲನಿಗೆ ನಾಲ್ಕು ಸಾವಿರ ಕೊಟ್ಟಿದ್ದೀಯ ಮತ್ತೆ ನಮಗೂ ಸ್ವಲ್ಪ ಕೊಡು ಎಂದು ಜಿಗಳೂರ ಮತ್ತು ಹೊಸಮನಿ ಎಂಬ ಪೇದೆಗಳು ಹಣಕ್ಕಾಗಿ ಪೀಡಿಸಿದ್ದಾರೆ. ಇಲ್ಲದ ದುಡ್ಡನ್ನು ಎಲ್ಲಿಂದ ತಾನೇ ಕೊಟ್ಟಾನು ರಮೇಶ? ಇಲ್ಲ ಎಂದಿದ್ದಕ್ಕೆ ಇವರಿಬ್ಬರ ಲಾಠಿ, ಬೆಲ್ಟ್ ಕೆಲಸ ಮಾಡಿವೆ. ಮೊದಲೆ ಸುರೇಶ ಕುಂಬಾರನ ಹೊಡೆತಕ್ಕೆ ಅರ್ಧ ಜೀವ ಕಳೆದುಕೊಂಡಿದ್ದ ರಮೇಶ, ಇವರಿಬ್ಬರ ಟಾರ್ಚರ್ ತಡೆಯಲಾರದೆ ಜೀವ ಬಿಟ್ಟಿದ್ದಾನೆ. ಅಷ್ಟೊತ್ತಿಗಾಗಲೇ ರಾತ್ರಿ 11 ಗಂಟೆಯಾಗಿತ್ತು. ತಡರಾತ್ರಿಯಾದರೂ ಮಗ ಮನೆಗೆ ಬಾರದಿದ್ದರಿಂದಾಗಿ ತಾಯಿ ರೇಣುಕವ್ವ, ಸೊಸೆ ಯಶೋದಾಳನ್ನು ಕರೆದುಕೊಂಡು ಊಟ ಕಟ್ಟಿಕೊಂಡು ಠಾಣೆಗೆ ಬಂದಿದ್ದಾಳೆ. ರಮೇಶನ ಉಸಿರು ನಿಂತು ಹೋಗಿದ್ದಕ್ಕೆ ತಳಹಳಿ ಮಾಡಿಕೊಂಡಿದ್ದ ಪೇದೆಗಳಾದ ಹೊಸಮನಿ ಮತ್ತು ಜಿಗಳೂರ ಇವರನ್ನು ನೋಡಿ ಮತ್ತಷ್ಟು ಹೆದರಿದ್ದಾರೆ. ಎಲ್ಲಿ ವಿಷಯ ತಿಳಿದು ಹೆಂಡತಿ ಮತ್ತು ತಾಯಿ ಗಲಾಟೆ ಮಾಡುತ್ತಾರೋ ಎಂದು ಮತ್ತೊಂದು ಸುಳ್ಳು ಹೇಳಿದ್ದಾರೆ. "ಕುಂಬಾರ ಸಾಹೇಬರು ಹೊರಗೆ ಹೋಗಿದ್ದಾರೆ. ಅವರು ಬಂದತಕ್ಷಣ ರಮೇಶನನ್ನು ಬಿಟ್ಟು ಕಳುಹಿಸುತ್ತಾರೆ. ಈಗ ರಾತ್ರಿ ಬಹಳ ಆಗೈತಿ ನೀವು ಮನೆಗೆ ನಡೀರಿ" ಎಂದು ಹೇಳಿ ಅವರನ್ನು ಮತ್ತಗೆ ಸಾಗಹಾಕಿದ್ದಾರೆ.


ರಮೇಶ್ ಸತ್ತಿರುವ ಸುದ್ದಿ ತಿಳಿದು ಠಾಣೆಗೆ ಬಂದ ಪಿಎಸ್‌ಐ ಸುರೇಶ ಕುಂಬಾರ ಮತ್ತು ಪೇದೆಗಳಾದ ಪಾಟೀಲ, ಜಿಗಳೂರ ಹಾಗೂ ಹೊಸಮನಿ ಮುಂದಿನ ದಾರಿಗೆ ಡಿವೈಎಸ್‌ಪಿ ಸುರೇಶ ಮಸೂತಿ ಪಾದಕ್ಕೆ ಬಿದ್ದು ಹೇಗಾದರೂ ಪಾರು ಮಾಡುವಂತೆ ಗೋಗರೆದಿದ್ದಾರೆ. ಈ ಸಂದರ್ಭದಲ್ಲಿ ನಗರ ಠಾಣೆಯಲ್ಲಿ ಸಿಪಿಐ ಕೆ.ಸಿ. ಪ್ರಕಾಶ ಇರಲಿಲ್ಲ, ಇಲಾಖೆ ಕೆಲಸದ ಮೇಲೆ ಬೆಂಗಳೂರಿಗೆ ತೆರಳಿದ್ದರು. ಬಹುಶಃ ಪ್ರಕಾಶ ಇದ್ದರೆ ಇಂಥ ಕ್ರೂರ ಹತ್ಯೆ ನಡೆಯುತ್ತಿರಲಿಲ್ಲ. ಡಿವೈಎಸ್‌ಪಿ ಮಸೂತಿಗೂ ಪ್ರಕಾಶ ಇಲ್ಲದ್ದು ಒಳ್ಳೆಯದೆ ಆಗಿತ್ತು. ರಮೇಶನನ್ನು ಕೊಂದ ಕೊಲೆಗಡುಕರೆಲ್ಲ ಇವನ ಪಕ್ಕಾ ಚೇಲಾಗಳಾಗಿದ್ದರಿಂದ ಪ್ರಕರಣ ಮುಚ್ಚಿ ಹಾಕಲು ಎಲ್ಲ ತಯಾರಿ ಜೊತೆಗೆ ಒಂದು ಕಥೆಯನ್ನೂ ತಯಾರಿಸಿ ಬಿಟ್ಟ. ಆದರೆ ಈ ವಿಷಯವನ್ನ ಎಸ್ಪಿ ರವಿಕುಮಾರ ನಾಯಕ್‌ನ ಗಮನಕ್ಕೆ ತರಲಿಲ್ಲ. ಹೇಗಾದರೂ ಬೆಳಕು ಹರಿಯುವುದರೊಳಗೆ ಇದರ ಚಿತ್ರಣ ಬದಲಾದರೆ ಸಾಕು ಎಂದು ಒಬ್ಬೊಬ್ಬರೂ ಒಂದೊಂದು ನಟನೆ ಶುರು ಹಚ್ಚಿದರು.


ಸಿ.ಸಿ.ಪಾಟೀಲ್

ಬೆಳಗ್ಗೆ 3-30ರ ಸುಮಾರಿಗೆ ಜಿಲ್ಲಾ ಆಸ್ಪತ್ರೆಯ ಶವಾಗಾರದ ಕೀಲಿ ಮುರಿದು ರಮೇಶನ ಶವವನ್ನು ಅಲ್ಲಿಟ್ಟು ಬಂದು, "ರಮೇಶನನ್ನು ನಾವು ರಾತ್ರಿ 12 ಗಂಟೆಗೆ ಬಿಟ್ಟು ಕಳುಹಿಸಿದ್ದೇವೆ. ಅವನನ್ನು ಯಾರೋ ಹೊಡೆದು ಕೊಂದುಹಾಕಿದ್ದಾರೆ. ನಮ್ಮ ಮಹಿಳಾ ಎಸ್.ಐ. ಲಮಾಣಿ ರಾತ್ರಿ ಗಸ್ತಿ ಡ್ಯೂಟಿಯಲ್ಲಿದ್ದಾಗ ಮುಳಗುಂದ ನಾಕಾ ಬಳಿ ಶವ ಸಿಕ್ಕಿದೆ. ಶವಾಗಾರಕ್ಕೆ ನಾವೇ ಸಾಗಿಸಿದ್ದೇವೆ" ಎಂದು ರಮೇಶನ ಮನೆಯವರಿಗೆ ಬೆಳಗ್ಗೆ 4 ಗಂಟೆಗೆ ಪೇದೆ ಪಾಟೀಲನೆ ಹೇಳಿ ಅಲ್ಲಿಂದ ಕಾಲ್ಕಿತ್ತಿದ್ದಾನೆ. ಈ ಸುದ್ದಿಯಿಂದ ಗದುಗಿನ ಇಡೀ ಸೆಟ್ಲ್‌ಮೆಂಟ್ ಏರಿಯಾದ ಜನ ಶವಾಗಾರದತ್ತ ಬಂದು ರಮೇಶನ ಶವ ನೋಡಿ ದೇಹದ ಮೇಲಿದ್ದ ಬಾಸುಂಡೆ ಮತ್ತು ಬೆಲ್ಟ್‌ನ ಕಲೆಗಳನ್ನ ಕಂಡು ಪೊಲೀಸರ ಹೊಡೆತದಿಂದಲೇ ಈತ ಸತ್ತಿದ್ದು ಎಂಬುದನ್ನ ಖಾತ್ರಿಪಡಿಸಿಕೊಂಡಿದ್ದಾರೆ. ಡಿವೈಎಸ್‌ಪಿ ಸುರೇಶ ಮಸೂತಿಯ ಷಡ್ಯಂತ್ರದಿಂದ ಒಂದು ಅಮಾಯಕ ಕುಟುಂಬಕ್ಕೆ ಅನ್ಯಾಯವಾಗುವುದನ್ನು ಕಂಡರೂ ವರಿಷ್ಠಾಧಿಕಾರಿ ರವಿಕುಮಾರ ನಾಯಕ್ ಕೈಚೆಲ್ಲಿ ಕುಳಿತುಬಿಟ್ಟರು.

ಪೊಲೀಸರ ಈ ಕಟ್ಟು ಕಥೆಯನ್ನು ಕೇಳಿ ರೊಚ್ಚಿಗೆದ್ದಿದ್ದ ಸೆಟ್ಲ್‌ಮೆಂಟ್‌ನ ಜನ ಮತ್ತು ರಮೇಶನ ಸ್ನೇಹಿತರು ನಿಸ್ಸಂದೇಹವಾಗಿ ಇದು ಲಾಕಪ್‌ಡೆತ್ ಮತ್ತು ಕೊಲೆ ಮಾಡಿ ತಪ್ಪಿಸಿಕೊಳ್ಳಲು ಖಾಕಿಗಳು ನಾಟಕ ಆಡಿದ್ದಾರೆ ಎಂದು ಆಸ್ಪತ್ರೆಯಲ್ಲಿ ಪೊಲೀಸರ ವಿರುದ್ಧ ಪ್ರತಿಭಟನೆಗೆ ಕುಳಿತರು. ಪಿಎಸ್‌ಐ ಸುರೇಶ ಕುಂಬಾರ ಮತ್ತವನ ಕೊಲೆಗಡುಕ ಪೇದೆಗಳನ್ನು ಸಸ್ಪೆಂಡ್ ಮಾಡುವಂತೆ ಒತ್ತಾಯಿಸಿದರು.

ಜಿಲ್ಲಾಧಿಕಾರಿ ಬಂದು ಪರಿಸ್ಥಿತಿ ಅವಲೋಕಿಸಿದ್ದಾರೆ. ಮರಣೋತ್ತರ ಪರೀಕ್ಷೆಯ ನಂತರ ಕ್ರಮ ಕೈಗೊಳ್ಳುವ ಆಶ್ವಾಸನೆ ಅವರಿಂದ ಸಿಕ್ಕಿದೆ. ಆದರೆ ಅನ್ಯಾಯವೆಸಗಿದ ಎಸ್‌ಐ ಕುಂಬಾರ ಹೆದರಿ ಊರುಬಿಟ್ಟಿದ್ದ. ಸೇರಿದ್ದ ನೂರಾರು ಜನ ಪಟ್ಟು ಸಡಿಲಿಸದಿದ್ದಾಗ ಡಿವೈಎಸ್‌ಪಿ ಮಸೂತಿ ನಿಂತಲ್ಲೆ ಸಂಘಟನೆ ಒಡೆಯುವ ಸಂಚು ರೂಪಿಸಿ ಪ್ರತಿಭಟನೆಯಲ್ಲಿದ್ದ ಸೋಕಾಲ್ಡ್ ದಲಿತ ಮುಖಂಡರಿಗೆ ಹಣದ ವಾಸನೆ ಹಚ್ಚಿ ಹೆಣದ ಮೇಲೆ ಚೌಕಾಶಿಗೆ ಬಿದ್ದುಬಿಟ್ಟ. ಅಲ್ಲಿಗೆ ರಮೇಶ ಪವಾರನ ಲಾಕಪ್‌ಡೆತ್ ಹವಾ ಠುಸ್ ಎಂದು ಹೋಯಿತು. ವಸೂಲಿ ದಂಧೆಯಲ್ಲೆ ಪಳಗಿದ ಸುರೇಶ ಮಸೂತಿ ರಮೇಶನ ಕುಟುಂಬಕ್ಕೆ ಮೂರು ಲಕ್ಷ ಮತ್ತು ಅವನ ಹೆಂಡತಿಗೆ ದಿನಗೂಲಿ ಆಧಾರದ ಮೇಲೆ ಠಾಣೆಯಲ್ಲಿ ನೌಕರಿ ಕೊಡಿಸುವ ಆಸೆ ಹುಟ್ಟಿಸಿದ. ಕೊನೆಗೆ ದಲಿತ ಮುಖಂಡರ ಮಾತಿಗೆ ಕಟ್ಟುಬಿದ್ದ ರಮೇಶನ ತಾಯಿ ರೇಣುಕವ್ವ 3 ಲಕ್ಷಕ್ಕೆ ಸೈ ಎಂದು ಸೊಸೆಗೆ ನೌಕರಿ ಬೇಡವೆಂದು ಪ್ರಕರಣಕ್ಕೆ ಅಂತ್ಯ ಹಾಡಿದಳಲ್ಲದೆ ಮಗನ ಅಂತ್ಯಸಂಸ್ಕಾರದ ಸಿದ್ಧತೆಗೂ ಹಸಿರು ನಿಶಾನೆ ತೋರಿದಳು.


ರಮೇಶ್ ಪತ್ನಿ ಯಶೋಧ

ಕಳೆದ ನವೆಂಬರ್ ಅಂತ್ಯಕ್ಕೆ ರಮೇಶ ಪವಾರನ ಕೈಹಿಡಿದಿದ್ದ ಯಶೋದಾ ಗಂಡನ ಹತ್ಯೆಯಿಂದ ಆಕ್ರೋಶಳಾಗಿದ್ದಳಾದರೂ ಪರಿಸ್ಥಿತಿ ಹಿಡಿದಿಟ್ಟಿತ್ತು. ರಮೇಶ ಸೆಟ್ಲ್‌ಮೆಂಟ್‌ನಂತಹ ಕ್ರೂರ ಏರಿಯಾದಲ್ಲಿ ಹುಟ್ಟಿ ಬೆಳೆದರೂ ಅದಕ್ಕೆ ವಿರುದ್ಧವಾಗಿದ್ದ. ಯಾವುದೇ ಕೆಟ್ಟ ಹವ್ಯಾಸವೂ ಅವನಲ್ಲಿ ಇರಲಿಲ್ಲ. ಸರಳ, ಸೌಮ್ಯ ಸ್ವಭಾವದ ಸಂಭಾವಿತ ಗಂಡ ತನ್ನಿಂದ ಮರೆಯಾದ ಎಂಬುದು ಅರಿವಿದ್ದರೂ ಸೋಕಾಲ್ಡ್ ದಲಿತ ನಾಯಕರ ಒಪ್ಪಂದದ ನೀತಿ ಅದನೆಲ್ಲ ಮುಚ್ಚಿಕೊಳ್ಳುವಂತಾಯಿತು.

ಅಮಾಯಕ ಜೀವವೊಂದನ್ನು ಕೊಂದು ಅರಗಿಸಿಕೊಳ್ಳುವ ಆತುರದಲ್ಲಿರುವ ಗದಗ ಜಿಲ್ಲಾ ಪೊಲೀಸ್‌ಗೆ ಇದೆಲ್ಲಾ ಸಾಮಾನ್ಯವಾಗಿದೆ. ಭಂಡನಂತೆ ಘರ್ಜಿಸುವ ಕೊಲೆಗಡುಕ ಪಿಎಸ್‌ಐ ಸುರೇಶ ಕುಂಬಾರ ಡಿವೈಎಸ್‌ಪಿ ಸುರೇಶ ಮಸೂತಿಯ ಹರುಕು ಬುದ್ಧಿಯ ನೆರವಿನಿಂದ ಪಾರಾಗಿ ನೌಕರಿ ಉಳಿಸಿಕೊಂಡಿರಬಹುದು. ಆದರೆ ಅವನ ಆತ್ಮಕ್ಕೆ ತಾನೇ ಪ್ರಶ್ನಿಸಿಕೊಂಡಾಗ ಇದರ ಪಾಪಪ್ರಜ್ಞೆಯ ಅರಿವಂತೂ ಅವನಿಗೆ ಖಂಡಿತ ಆಗುತ್ತೆ. ಆದರೆ ಕಾರಣವಿಲ್ಲದೆ ಅಮಾಯಕ ಹೆಂಡತಿ, ತಾಯಿ ಮತ್ತು ತಂಗಿಯನ್ನು ಅಗಲಿರುವ ರಮೇಶನ ಹತ್ಯೆಯ ಪ್ರಕರಣ ಒಬ್ಬ ಪ್ರಾಮಾಣಿಕ ದಕ್ಷ ಅಧಿಕಾರಿಯ ಕೈಗೆ ಸೇರಿದರೆ, ಡಿವೈಎಸ್‌ಪಿ ಮಸೂತಿ, ಪಿಎಸ್‌ಐ ಕುಂಬಾರ ಸೇರಿದಂತೆ ಅವನ ಪಟಾಲಂನ ದುಷ್ಟ ಪೇದೆಗಳು ಖಾಕಿ ಕಳಚಿ ಕಂಬಿ ಹಿಂದೆ ನಿಲ್ಲುವುದಂತೂ ಖರೆ.

• ಹುರಳಿಕುಪ್ಪಿ ವಿನಯ್



ಅಕ್ರಮಗಳ ತವರೂರು

ನಾಡಿಗೆ ಬೆಳಕು ಚೆಲ್ಲುವಂಥ ಮಹಾಪುರುಷರು ನಡೆದಾಡಿದ ಗದುಗಿನಲ್ಲಿ ಇಂದು ಎಲ್ಲ ರೀತಿಯ ಸಮಾಜ ವಿರೋಧಿ ಚಟುವಟಿಕೆಗಳು ಹಾಡುಹಗಲೇ ಉತ್ಸವ ಆಚರಿಸುತ್ತಿವೆ. ಇಲ್ಲಿಯ ಹೃದಯಭಾಗದಲ್ಲಿರುವ ವಿಶ್ವ ಲಾಡ್ಜ್, ಶಿವಾನಿ ಇನ್, ಆನಂದ, ಲಕ್ಷ್ಮಿ ಲಾಡ್ಜ್‌ಗಳಲ್ಲಿ ಭಯವಿಲ್ಲದೆ, ಉರುಳು ಸೇವೆ ನಡೆಯುತ್ತಿದೆ. ಇನ್ನು ವೀರೇಶ್ವರ ಲೈಬ್ರರಿಯಲ್ಲಿ ನಡೆಯುವ ಲಕ್ಷದ ಲೆಕ್ಕಕ್ಕೆ ಆಡುವ ಇಸ್ಪೀಟ್ ಆಟದಲ್ಲಿ ಸೋಕಾಲ್ಡ್ ಲೀಡರ್‌ಗಳಾದ ಎಸ್.ಬಿ.ಸಂಕಣ್ಣವರ್, ಬಸವರಾಜ್ ನಾಲ್ವಾಡ್, ಭದ್ರಕಾಳಿ ಶಿವಯ್ಯ, ಅಶೋಕ್ ಕಟ್ಟಿಮನಿಗಳಂತಹವರ ಜೊತೆ ಖಾಕಿಗಳೂ ಇಸ್ಪೀಟ್ ಎಲೆ ಎಳೆದಾಡುವುದು ಮಾಮೂಲಾಗಿದೆ.

ಮೊಬೈಲ್ ಕ್ಲಬ್‌ಗಳು ಇನ್ನೂ ಜೀವಂತವಾಗಿವೆ. ಬಹುತೇಕ ಎಲ್ಲ ಸಾವಜಿ ಖಾನಾವಳಿಗಳಲ್ಲಿ ಹೆಚ್ಚಿನ ದರಕ್ಕೆ ಮದ್ಯ 24x7 ಆಗಿದೆ. ಇವುಗಳ ರಕ್ಷಣೆಯ ಪಿತಾಮಹರಾದ ಡಿವೈಎಸ್‌ಪಿ ಮಸೂತಿ, ಎಸ್‌ಐ ಸುರೇಶ ಕುಂಬಾರ ಮತ್ತು ಮಂತ್ರಿ ಸಿ.ಸಿ. ಪಾಟೀಲರಂಥವರನ್ನು ಎದುರು ಹಾಕಿಕೊಂಡು ಎಸ್‌ಪಿ ರವಿಕುಮಾರ ನಾಯಕ ರೇಡು ಹಾಕಬೇಕಾಗಿದೆ.

ಮಸೂತಿಯ ತಾರಾತಿಗಡಿ

ಉಳ್ಳಾಗಡ್ಡಿ ಮಾರ್ಕೆಟ್‌ನಲ್ಲಿ ದಲ್ಲಾಳಿಯಾಗಬೇಕಾದವನನ್ನು ತಂದು ಗದುಗಿನಲ್ಲಿ ಡಿವೈಎಸ್‌ಪಿ ಮಾಡಿದಂತಾಗಿದೆ. ಈ ಸುರೇಶ ಮಸೂತಿ ರಣಹಸಿವಿನ ಮನುಷ್ಯ ಎಂಬುದರಲ್ಲಿ ಎರಡು ಮಾತಿಲ್ಲ. ರಮೇಶ ಪವಾರನ ಪ್ರಕರಣದಲ್ಲಿ ಆಡಿದ ಆಟವನ್ನು ಹಿಂದೆ ಬೆಳಗಾವಿ ಜಿಲ್ಲೆಯಲ್ಲಿ ಆಡಲು ಹೋಗಿ ಅಲ್ಲಿಯ ಸೆಟ್ಲ್‌ಮೆಂಟ್ ಯುವಕರಿಂದ ಒದೆ ತಿಂದು ಮುಖಕ್ಕೆ ಕುರುಪು ಹಾಕಿಸಿಕೊಂಡ ಸುರೇಶ ಮಸೂತಿ ಮುಖದ ಮೇಲೆ ಇಂದಿಗೂ ಅದರ ಕುರುಹುಗಳಿವೆ.

ಈತ ಧಾರವಾಡ ಗ್ರಾಮೀಣ ಶಾಸಕಿ ಸೀಮಾ ಮಸೂತಿಯ ಭಾವ. ಅದರ ಜೊತೆಗೆ ಜಿಲ್ಲಾ ಮಂತ್ರಿ ಉರ್ಫ್ ಸೀರೆ ಮಂತ್ರಿ ಸಿ.ಸಿ.ಪಾಟೀಲನ ಕ್ಲಾಸ್‌ಮೇಟ್ ಅಂತೆ. ಹೀಗಾಗಿ ಪಾಟೀಲನ ಚುನಾವಣೆ ಸಂದರ್ಭದಲ್ಲಿ ಅವನ ವಿರುದ್ಧ ಸ್ಪರ್ಧಿಸಿದ್ದ ಮಾಜಿ ಮಂತ್ರಿ, ಪ್ರಗತಿಪರ ಮುಖಂಡ ಬಿ.ಆರ್.ಯಾವಗಲ್ ಅವರು ಪ್ರಚೋದನಾಕಾರಿ ಭಾಷಣ ಮಾಡಿದ್ದಾರೆ ಎಂದು ಸುಳ್ಳು ಕೇಸು ಜಡಿದು ನಡುಬೀದಿಯಲ್ಲಿ ಬೇಡಿ ಹಾಕಿ ಠಾಣೆಗೆ ಎಳೆದು ತಂದಿದ್ದ ಮಸೂತಿಯನ್ನು ಆಗಿನ ಎಸ್.ಪಿ. ಡಿ.ರೂಪ ಹಿಗ್ಗಾ-ಮುಗ್ಗಾ ಜಾಡಿಸಿ ಸಸ್ಪೆಂಡ್ ಮಾಡಿದ್ದರು.



ಮಸೂತಿ

ಮುಂದೆ ರಾಜ್ಯದಲ್ಲಿ ಚೆಡ್ಡಿಗಳು ಅಧಿಕಾರ ಹಿಡಿದಿದ್ದೇ ತಡ, ಡಿ.ರೂಪರನ್ನು ಎತ್ತಂಗಡಿ ಮಾಡಿಸಿ ನೌಕರಿ ಗಿಟ್ಟಿಸಿಕೊಂಡಿದ್ದಲ್ಲದೆ, ಗದುಗಿಗೆ ಕೆಲಸಕ್ಕೆ ಬಾರದ ರೋಗಿಷ್ಟ ಕುಡುಕ ಎಸ್‌ಪಿ ಪ್ರಕಾಶನನ್ನು ತಂದು ಕೂರಿಸಿ ತನ್ನ ಎಲ್ಲಾ ಆಮದನಿ ತರುವ ದೋ ನಂಬರ್ ದಂಧೆಗಳಿಗೆ ಚಾಲನೆ ಕೊಟ್ಟ. ಈಗಂತೂ ಈತನ ಕ್ಲಾಸ್‌ಮೇಟ್ ಸಿ.ಸಿ.ಪಾಟೀಲನೇ ಜಿಲ್ಲಾ ಉಸ್ತುವಾರಿ ಮಂತ್ರಿ. ಇಬ್ಬರೂ ಸೇರಿಕೊಂಡು ಎಲ್ಲಾ ಅನಾಚಾರಗಳಿಗೂ ನೀರು ಗೊಬ್ಬರ ಹಾಕಿ ಬೆಳೆಸುತ್ತಿದ್ದಾರೆ.

ದಕ್ಷಿಣ ಕನ್ನಡ : ಯಕ್ಷಗಾನಕ್ಕೆ ಕಲ್ಲುಹಾಕಿದ ಕಲ್ಲಡ್ಕ ಭಟ್ಟನ ಭಂಡಾಟ

ದಕ್ಷಿಣ ಕನ್ನಡದ ಉದ್ದಗಲಕ್ಕೆ ಚೆಡ್ಡಿ ಚಾಂಡಾಲರ ಹಾವಳಿ ಮಿತಿ ಮೀರಿ ಹೋಗಿದೆ! ಕರಾವಳಿಯ ಅನಾಹುತಕಾರಿ ಆರೆಸ್ಸೆಸ್ 'ಡಾನ್' ಕಲ್ಲಡ್ಕ ಪ್ರಭಾಕರ ಭಟ್ಟನ ಹೆಡ್‌ಕ್ವಾಟರ್ಸ್ ಇರುವುದು ಇದೇ ಜಿಲ್ಲೆಯ ಕಲ್ಲಡ್ಕದಲ್ಲಿ. ಹೀಗಾಗಿ ಕ್ಷುಲ್ಲಕ ಘಟನೆಗೂ ಕೋಮು ಆಯಾಮ ಕ್ಷಣಾರ್ಧದಲ್ಲಿ ಬಂದುಬಿಡುತ್ತದೆ. ಚೆಡ್ಡಿ ವಿಪ್ರರಿಗೆ ಕೋಮು ಕುಟೋದ್ಯ ಮಾಡುವುದಕ್ಕೆ ಹಿಂದೂ ಹೆಣ್ಣಿನ ಮಾನ-ಗೋಪ್ರಾಣವೇ ಬೇಕೆಂದೇನಿಲ್ಲ; ಯಕ್ಷಗಾನ ಬಯಲಾಟದಂಥ ಸಣ್ಣ ಹರಕೆ ಆಟವೂ ಕಲ್ಲಡ್ಕ ಭಟ್ಟನ ಬಳಗದ ಭೂತ ನರ್ತನಕ್ಕೆ ಸಾಕು. ಹಿಂದುತ್ವ ಬರೀ ಬೂಟಾಟಿಕೆ. ಕುರ್ಚಿ ಧರ್ಮ ಮತ್ತು ದುಡ್ಡಿನ ಧರ್ಮ ಬಿಟ್ಟರೆ ಇನ್ಯಾವ ಧರ್ಮವೂ ಕಲ್ಲಡ್ಕ ಭಟ್ರಿಗೆ ಗೊತ್ತಿಲ್ಲ.

ಅಲ್ಪಸಂಖ್ಯಾತರನ್ನಷ್ಟೇ ಅಲ್ಲ, ಶೂದ್ರ ಹಿಂದೂಗಳನ್ನೂ ತುಳಿದು ವೈದಿಕಶಾಹಿ ಪ್ರಭುತ್ವ ಸ್ಥಾಪಿಸುವುದೇ ಭಟ್ಟನ ಅಸಲೀ ಹಿಂದುತ್ವ. ದಿನವೂ ಒಂದಲ್ಲ ಒಂದು ಕೋಮು ಕಿತಾಪತಿ ಮಾಡಿ ಧರ್ಮಕಾರಣದ ಅಮಲು ಇಡೀ ಜಿಲ್ಲೆಯಲ್ಲಿ ಹಾಗೇ ಉಳಿಸಿಕೊಂಡಿರುವ ಭಟ್ಟನ ಹಿಡನ್ ಹಿಕಮತ್‌ಗಳು ಈಗೀಗ ಜನರಿಗೆ ಅರ್ಥವಾಗತೊಡಗಿವೆ. ಅಮಾಯಕ ಶೂದ್ರರ ಕೈಗೆ ಕಲ್ಲು, ಕತ್ತಿ, ದೊಣ್ಣೆ ಕೊಟ್ಟು ಬೇಳೆ ಬೇಯಿಸಿಕೊಳ್ಳುವ ಸಂಘ ಪರಿವಾರದ ಖತರ್‌ನಾಕ್ ಕಿತಾಪತಿಗಳೂ ಜಗಜ್ಜಾಹೀರಾಗುತ್ತಿವೆ. ಹಿಂದುತ್ವದ ಹರಿಕಾರನಂತೆ, ದೇವರ ಏಜೆಂಟನಂತೆ ಹಾರಾಡುವ ಕಲ್ಲಡ್ಕ ಭಟ್ಟ ಮತ್ತವನ ವಿಪ್ರ ಟೋಳಿಗೆ ಧರ್ಮ-ದೇವರ ಬಗ್ಗೆ ಪ್ರಾಮಾಣಿಕ ಭಕ್ತಿ-ಗೌರವ-ನಂಬಿಕೆ ಯಾವುದೂ ಇಲ್ಲವೆಂಬುದನ್ನು ಈತ ಮೊನ್ನೆ ಕಲ್ಲಡ್ಕ ಬಳಿಯ ಸುಧೆಕಾರ್ ಎಂಬಲ್ಲಿ ಭಾವುಕ ಹಿಂದೂ ಶೂದ್ರರ ದೇವರ ಯಕ್ಷಗಾನ ಬಯಲಾಟಕ್ಕೆ ಅಡ್ಡಗಾಲು ಹಾಕಿ ವಿಕೃತಾನಂದ ಅನುಭವಿಸಿದ್ದು ಸಾಕ್ಷ್ಯಾಧಾರ ಸಮೇತ ಸಾಬೀತುಪಡಿಸಿದೆ!



ರಮಾನಾಥ್ ರೈ

ದಕ್ಷಿಣ ಕನ್ನಡದ ಧಾರ್ಮಿಕ ನಂಬಿಕೆಯೊಂದಿಗೆ ದೇವರ ಯಕ್ಷಗಾನ ಬಯಲಾಟ ಪ್ರದರ್ಶನ ಅನಾದಿಕಾಲದಿಂದ ಥಳಕು ಹಾಕಿಕೊಂಡು ಬಂದಿದೆ. ಇಂಥ ಯಕ್ಷಗಾನ ಆಡಿಸಲು ಬಂಟವಾಳದ ಕಲ್ಲಡ್ಕ ಬಳಿಯ ಸುಧೆಕಾರ್ ಎಂಬಲ್ಲಿಯ ಫ್ರೆಂಡ್ಸ್ ಸರ್ಕಲ್ ಮತ್ತು ಊರ ಸಮಸ್ತರು ನಿರ್ಧರಿಸಿದ್ದರು. 22-1-11ರ ರಾತ್ರಿ ಈ ಆಟ ನಡೆಸುವುದೆಂದು ದಿನಾಂಕವೂ ನಿಗದಿಪಡಿಸಿ ಬಜ್ಪೆ ಸುಂಕದಕಟ್ಟೆ ಶ್ರೀ ಅಂಬಿಕಾ ಅನ್ನಪೂರ್ಣೇಶ್ವರಿ ಯಕ್ಷಗಾನ ಮೇಳಕ್ಕೆ 12 ಸಾವಿರ ಕೊಟ್ಟು ಬುಕ್ ಸಹ ಮಾಡಲಾಗಿತ್ತು. ಈ ಶೂದ್ರರ-ದಲಿತರ ಬಯಲಾಟಕ್ಕೆ ಅಧಿಕಾರ ಬಲದಿಂದ 'ತಡೆಯಾಜ್ಞೆ' ತಂದ ಕಲ್ಲಡ್ಕ ಭಟ್ಟನ ಬ್ರಾಹ್ಮಣ ಬಣ ದೊಡ್ಡ ರಂಪ-ರಾದ್ಧಾಂತವನ್ನು ಎಬ್ಬಿಸಿಬಿಟ್ಟಿತು. ಅಲ್ಲಿಗೆ ಇಡೀ ದಕ್ಷಿಣ ಕನ್ನಡಕ್ಕೆ ಮಾತೆತ್ತಿದರೆ ಹಿಂದುತ್ವ ಎಂದು ಬೊಗಳುವ ಭಟ್ಟ ಪಕ್ಕಾ ಹಿಂದೂ ವಿರೋಧಿ-ಬ್ರಾಹ್ಮಣಶಾಹಿವಾದಿಯೆಂಬುದು ನಿಸ್ಸಂಶಯವಾಗಿ ಸಾಬೀತಾಗಿಹೋಯ್ತು.


ಬಾಳ್ತಿಲ ಗ್ರಾಮ ಪಂಚಾಯತಿ ವ್ಯಾಪ್ತಿಯ ಸುಧೆಕಾರ್‌ನ ಸರ್ವೇ ನಂ 10/2 ರಲ್ಲಿರುವ 2.6 ಎಕರೆ ಸರ್ಕಾರಿ ಜಮೀನಿನಲ್ಲಿ ಬಯಲಾಟ ನಡೆಸಲು ಎಲ್ಲ ಸಿದ್ಧತೆ ಫ್ರೆಂಡ್ಸ್ ಸರ್ಕಲ್ ಮತ್ತು ಊರ ಹಿರಿಯರು ಮಾಡಿ ಕೊಂಡಿದ್ದರು. ಈ ಜಾಗದ ಬಳಿಯೇ ಕಲ್ಲಡ್ಕ ಭಟ್ಟನ ಶ್ರೀರಾಮ ವಿದ್ಯಾಕೇಂದ್ರ ಟ್ರಸ್ಟ್‌ನ 'ಭರ್ಜರಿ' ಶಾಲೆಯಿದೆ. ಕಳ್ಳ ಕಬ್ಬಿಣದ ಅದಿರು ಉದ್ಯಮಿಗಳು, ದೋನಂಬರ್ ಬಿಸಿನೆಸ್‌ಮನ್‌ಗಳಿಂದ, ಚೆಡ್ಡಿ ರಾಜಕಾರಣಿಗಳಿಂದ 'ರಹಸ್ಯ ವಂತಿಗೆ' ಎತ್ತಿ ಭಟ್ಟ ಕಟ್ಟಿರುವ ಶಾಲೆಯಿದು. ಈ ಶಾಲೆಗೆ ಅಡ್ಡ ದಾರಿಯಿಂದ ಒಂದಿಷ್ಟು ಕಾಸು ಕೂಡಿಸಿ ಕೊಡುವಂತೆ ಬಿಜೆಪಿ ಶಾಸಕಿಯಾಗಿದ್ದ ರೆಬೆಲ್ ಶಕು ಅಕ್ಕನಿಗೆ ಆರೆಸ್ಸೆಸ್ ದಂಡ ಬಳಸಿ ಭಟ್ಟ ಬೆದರಿಸಿದ್ದೇ ಆಕೆ ಅಂದು ತಿರುಗಿ ಬೀಳಲು ಪ್ರಮುಖ ಕಾರಣವಾಗಿತ್ತು. ಇದು ಭಟ್ಟನ ಚೆಡ್ಡಿ ಚಟುವಟಿಕೆಗಳ ಪ್ರತಿಷ್ಠೆಯ ಶಾಲೆ. ಇಂಥ ಶಾಲೆ ಪಕ್ಕದ ಸರ್ಕಾರಿ ಜಮೀನಿನಲ್ಲಿ ತನ್ನ ವಿರೋಧಿಗಳು ಬಯಲಾಟ ನಡೆಸಬಾರದೆಂಬ ಕ್ಷುಲ್ಲಕ ಹಠಕ್ಕೆ ಭಟ್ಟ ಬಿದ್ದ.

ಈ ಜಾಗದಲ್ಲಿ ಕಳೆದ 12 ವರ್ಷದಿಂದ ಊರವರು ಹರಕೆ-ಬಯಲಾಟ ನಡೆಸುತ್ತ ಬಂದಿದ್ದಾರೆ. ಎಂದೂ ಯಾರೂ ಇಲ್ಲಿ ಆಟವಾಡಬಾರದೆಂದು ತಕರಾರು ತೆಗೆದಿದ್ದೇ ಇಲ್ಲ. ಈ ಬಾರಿ ಸ್ವಯಂಘೋಷಿತ ಹಿಂದೂ ಹಿರೇಮಣಿ ಕಲ್ಲಡ್ಕ ಭಟ್ಟ ತನ್ನ ಶ್ರೀರಾಮ ವಿದ್ಯಾ ಕೇಂದ್ರ ಟ್ರಸ್ಟ್‌ನ ಅಧ್ಯಕ್ಷ ನಾರಾಯಣ ಸೋಮಯಾಜಿ ಎಂಬ ಚೇಲಾನನ್ನು ತಹಶೀಲ್ದಾರ್ ರವಿಚಂದ್ರ ನಾಯಕ್ ಮತ್ತು ಪೊಲೀಸರ ಬಳಿ ಕಳಿಸಿ ಅಲ್ಲಿ ಆಟ ನಡೆಸಲು ಪರವಾನಗಿ ಕೊಡಕೂಡದೆಂದು ಕಂಪ್ಲೇಂಟು ಕೊಡಿಸಿದ್ದಾನೆ. ಜಿಲ್ಲೆಯ ಬಿಜೆಪಿ ಮಂತ್ರಿ-ಶಾಸಕ-ಎಂಪಿಗಳ ಗಾಡ್‌ಫಾದರ್ ಆಗಿರುವ ಚೆಡ್ಡಿ ಭಟ್ಟ ತೆರೆಮರೆಯಲ್ಲಿ ನಿಂತು ಕೈಚಳಕ ನಡೆಸಿದ್ದಾನೆ. ಒತ್ತಡಕ್ಕೆ ಕಂಗಾಲಾದ ಅಧಿಕಾರಿಗಳು ಆಟಕ್ಕೆ 'ತಡೆಯಾಜ್ಞೆ' ಕೊಟ್ಟು ತಲೆ ಉಳಿಸಿಕೊಂಡಿದ್ದಾರೆ, ಪಾಪ!

ಮನೆಹಾಳು-ಮತಾಂಧ ಭಟ್ಟನ ಪಲ್ಲಕ್ಕಿ ಹೊತ್ತು ಮೆರೆಸುತ್ತಿದ್ದ ಸುಧೆಕಾರು, ಕಲ್ಲಡ್ಕ ಕಡೆಯ ದಲಿತ-ಶೂದ್ರರು ಈ ಬಾರಿ ಸಕಾರಣವಾಗೇ ತಿರುಗಿ ಬಿದ್ದರು. ಭಟ್ಟನ ದಲಿತ-ಶೂದ್ರ ವಿರೋಧಿ ಹಿಡನ್ ಬುರ್ನಾಸ್ ಬುದ್ಧಿ ಊರವರೆದುರು ಅನಾವರಣಗೊಂಡಿತ್ತು. ಭಟ್ಟನ ದಗಾ-ದಗಲುಬಾಜಿತನ-ಸ್ವಾರ್ಥದ ಸೋಗಲಾಡಿ ಹಿಂದುತ್ವದಿಂದ ರೋಸಿದ ಜನ ಏನೇ ಆಗಲಿ, ಸರ್ಕಾರಿ ಜಾಗದಲ್ಲೇ ಬಯಲಾಟ ನಡೆಸುವುದಾಗಿ ಪಟ್ಟು ಹಿಡಿದು ಯಕ್ಷಗಾನಕ್ಕೆ ವೇದಿಕೆ ರೆಡಿಮಾಡಿದ ಜಾಗದಲ್ಲಿ ಪ್ರತಿಭಟನೆ ಶುರು ಮಾಡಿದರು. ಇದರಿಂದ ಕಂಗೆಟ್ಟ ಭಟ್ಟ ಅಲ್ಲಿ ಆಟವೇನಾದರೂ ಆಗಿಹೋದರೆ ತನಗೆ ಮುಖಭಂಗವೆಂದು ಗಡಿಬಿಡಿಗೆ ಬಿದ್ದ. ಸಂಘಟಕರನ್ನು ಹಣಿದಾದರೂ ಯಕ್ಷಗಾನ ನಡೆಯಗೊಡಬಾರದೆಂದು ಕ್ರಿಮಿನಲ್ ಕಾರ್ಯಾಚರಣೆ ಶುರು ಹಚ್ಚಿಕೊಂಡುಬಿಟ್ಟ. ತನ್ನ ದಾಸಾನುದಾಸನಾದ ಅನ್‌ಪಡ್ ಎಂಪಿ ನಳಿನ್‌ಕುಮಾರ್ ಕಟೀಲ್‌ನನ್ನು ಪುಂಡಾಟಕ್ಕೆ ಛೂಬಿಟ್ಟ!

ಬಿಜೆಪಿ ಮತ್ತು ಚೆಡ್ಡಿ ಚೋರರು ಸುಧೆಕಾರ್‌ಗೆ ದೌಡಾಯಿಸಿ 'ಬಾಸ್' ಮಾನ ಕಾಪಾಡಲು ಕಟಿಪಿಟಿ ಆರಂಭಿಸಿದರು. ಮಂಗಳೂರಿನ ಪಂಪ್‌ವೆಲ್, ಬೋಳಿಯಾರ್ ಮತ್ತು ಕೊಡ್ಮಾಣ್ ಮುಂತಾದೆಡೆಯಿಂದ ಭಜರಂಗಿ-ಹಿಂಜಾವೇ ರೌಡಿಗಳು 'ಶಸ್ತ್ರ' ಸನ್ನದ್ಧರಾಗಿ ಬಂದರು. ಬ್ರಹ್ಮಕಲಶೋತ್ಸವದಿಂದ 'ಬಂಡವಾಳ' ಸಂಗ್ರಹಿಸುವ 'ಖ್ಯಾತಿ'ಯ ಸಂಸದ ನಳಿನ್ ಕಟೀಲ್ ಯಕ್ಷಗಾನ ಕಲಾವಿದರಿಗೆ, ಮೇಳದವರಿಗೆ 'ಆಟ' ನಡೆಸಲು ಸಹಕರಿಸದಂತೆ ಫೋನ್ ಮಾಡಿ ಬೆದರಿಸಿದರು. ಬಯಲಾಟ ಸಂಘಟಕರಿಗೆ ಬಾರಿಸಿ ಓಡಿಸುವ ಸ್ಕೆಚ್ ಹಾಕಲಾಗಿತ್ತು.

ಆದರೆ ಊರವರು ಯಾವುದಕ್ಕೂ ಅಂಜದೆ-ಅಳುಕದೆ ಪ್ರತಿಭಟನೆ ನಡೆಸಿದರು. ರಾತ್ರಿ 9.30ರ ಹೊತ್ತಿಗೆ ಇನ್ನೇನು ಯಕ್ಷಗಾನ ಆರಂಭವಾಗೇ ಹೋಗುತ್ತೆ, ತನ್ನ ಹಿಂದುತ್ವದ ಹಿರಿತನಕ್ಕೆ ಕುಂದು ಬರುತ್ತದೆಂದು ಹೌಹಾರಿದ ಕಲ್ಲಡ್ಕ ಭಟ್ಟ ಪೊಲೀಸರಿಂದ ಬರೋಬ್ಬರಿ 30 ಜನರನ್ನು ಅರೆಸ್ಟ್ ಮಾಡಿಸಿ ಬಯಲಾಟ ನಡೆಯದಂತೆ ಮಾಡೇಬಿಟ್ಟ! ಬಂಧಿತರಲ್ಲಿ 7 ಜನ ಮಹಿಳೆಯರೂ ಇದ್ದರು. ಆ ಅಪರಾತ್ರಿ ಭಟ್ಟನ ಚೆಡ್ಡಿ ಗ್ಯಾಂಗ್ ಮತ್ತು ಯಕ್ಷಗಾನ ಸಂಘಟಕರ ನಡುವೆ ವಾದವಿವಾದ ಬಿರುಸಾಗಿ ನಡೆಯಿತು. ಈ ಸುದ್ದಿ ತಿಳಿದ ಗ್ರಾಮಸ್ಥರು ತಂಡೋಪತಂಡವಾಗಿ ಠಾಣೆಯ ಎದುರು ಜಮಾಯಿಸಿದರು. ಸ್ಥಳೀಯ ಕಾಂಗ್ರೆಸ್ ಶಾಸಕ ರಮಾನಾಥ್ ರೈ ಪೊಲೀಸ್ ಸ್ಟೇಷನ್ನಿಗೆ ಬಂದು ಬಂಧಿತರನ್ನು ಬಿಡಿಸಿ ಕರೆದೊಯ್ದರು. ಆತಂಕಿತ ಜನ ನಿಟ್ಟುಸಿರುಬಿಟ್ಟರು; ಭಟ್ಟನ ಡೋಂಗಿ ಹಿಂದುತ್ವ-ಹರಾಮಿತನಕ್ಕೆ ಶಾಪ ಹಾಕುತ್ತ ಲಟಿಕೆ ಮುರಿದರು.



ನಳಿನ್‌ಕುಮಾರ್

ಇಡೀ ದಕ್ಷಿಣ ಕನ್ನಡದ ಆಡಳಿತವನ್ನು ತನ್ನ ಬೆರಳ ಇಶಾರೆಯಲ್ಲಿ ಆಡಿಸುವ ಸರ್ವಶಕ್ತ ಸಂಘಪರಿವಾರಿ ಸರದಾರ ಕಲ್ಲಡ್ಕ ಭಟ್ಟನೇಕೆ ಇಷ್ಟು ಹತಾಶೆಯಿಂದ ಅಲ್ಪನಂತೆ ತುಂಡುಗುಪ್ಪಳ ಹಾಕಿದ್ದಾನೆ? ಅದೇ ಈ 'ಯಕ್ಷಗಾನ ತಡೆಯಾಜ್ಞೆ' ಎಂಬ ಪ್ರಸಂಗದ ಕ್ಲೈಮ್ಯಾಕ್ಸ್! ಕಳೆದ ಜಿಪಂ-ತಾಪಂ ಎಲೆಕ್ಷನ್‌ನಲ್ಲಿ ಬಿಜೆಪಿ ಜಿಲ್ಲೆಯಲ್ಲಿ ದಿಗ್ವಿಜಯವನ್ನೇ ಸಾಧಿಸಿದೆ; ಜಿಪಂ ಆಡಳಿತವನ್ನು ಸಾರಾಸಗಟಾಗಿ ವಶಪಡಿಸಿಕೊಂಡಿದೆ. ಆದರೆ ಭಟ್ಟನ ಹೋಮ್ ಕಾನ್‌ಸ್ಟ್ಯೂಯೆನ್ಸ್ 'ಗೋಳ್ತಮಜಲು'ದಲ್ಲಿ ಬಿಜೆಪಿ ಭರ್ಜರಿ ಮಣ್ಣು ಮುಕ್ಕಿದೆ. ಕರಾವಳಿಯ ಬಿಜೆಪಿ-ಆರೆಸ್ಸೆ[ಸ್] ಸೂತ್ರಧಾರನ ಜಿಪಂ ಕ್ಷೇತ್ರದಲ್ಲೇ ಬಿಜೆಪಿ ಮಕಾ[ಡೆ] ಮಲಗುತ್ತದೆಂದರೆ ಎಂಥ ಅಪಮಾನ ಅಲ್ಲವೇ? ಅಹ[...] ಕಟಾ!! ಭಟ್ಟರು ಈ ಸೋಲಿಗೆ ಕಾರಣರಾ[...] ಸುಧೆಕಾರು-ಕಲ್ಲಡ್ಕ-ಬಾಳ್ತಿಲ ಏರಿಯಾದ ಶೂದ್ರ-ದಲಿತ[...] ಹುಟ್ಟಡಗಿಸಲು ಅಂದೇ ಕಂತ್ರಿ ಷಡ್ಯಂತ್ರ ಶುರುಹಚ್ಚಿಕೊಂಡಿ[...]

ಗೋಳ್ತಮಜಲು ಭಟ್ಟನ ಪ್ರತಿಷ್ಠೆಯ ಕ್ಷೇತ್ರವಾಗಿತ್ತು. ಇಲ್ಲಿ ಬಿಜೆಪಿ ಸೋತಿದ್ದೇ ಇರಲಿಲ್ಲ. ಕಾಂಗ್ರೆಸ್ ಹಿಂದೊಮ್ಮೆ ಜಿಪಂ ಎಲೆಕ್ಷನ್‌ನಲ್ಲಿ ಸ್ವೀಪ್ ಮಾಡಿದಾಗ ಇದೊಂದ[ೇ] ಕ್ಷೇತ್ರ ಬಿಜೆಪಿ ಗೆದ್ದಿತ್ತು. ಉಳಿದೆಲ್ಲ ಕ್ಷೇತ್ರ ಕಾಂಗ್ರೆಸ್ ಪಾಲಾಗಿತ್ತು. ಈ ಬಾರಿ ನಿಷ್ಠಾವಂತ ಕಾರ್ಯಕರ್ತರು ಬೇಡ-ಬೇ[ಡ]ವೆಂದರೂ ಕಾಂಗ್ರೆಸ್‌ನಿಂದ ಬಂದಿದ್ದ ಒಂದು ಕಾಲದ ಭೂಗತ ರೌಡಿ ರಾಕೇಶ್ ಮಲ್ಲಿ ತಂದೆ ಸದಾನಂದ ಮಲ್ಲಿ[ಗೆ] ಭಟ್ಟ ಟಿಕೆಟ್ ಕೊಟ್ಟಿದ್ದ. ಇದರಿಂ[ದ] ಕೆರಳಿದ ಚೆಡ್ಡಿ ಹುಡುಗರಿಗೆ ಭಟ್ಟ[ನ] ಧರ್ಮಕಾರಣದ ಮರ್ಮವ[ೂ] ಗೊತ್ತಾಗಿ ಹೋಗಿತ್ತು. ಸುಧೆಕಾರ[್] ಫ್ರೆಂಡ್ಸ್ ಸರ್ಕಲ್ ಹುಡುಗರಂತೂ ಭಟ್ಟನಿಗೆ ನೇರಾನೇರ ತಿರುಗಿಬಿದ್ದಿದ್ದರು. ಈ ಸುಧೆಕಾರ್ ಫ್ರೆಂಡ್ಸ್ ಸರ್ಕಲ್‌[ನ] ದಲಿತರೇ ಶತಾಯಗತಾಯ ಹಠ[ಕ್ಕೆ] ಬಿದ್ದು ಬಿಜೆಪಿ ಮುಗಿಸಿದ್ದಾರೆಂ[ಬ] ಆಕ್ರೋಶ ಭಟ್ಟನಿಗೆ. ಈ ದಲಿತರಿ[ಗೆ] ಪಾಠ ಕಲಿಸುವ ಪಣ ತೊಟ್ಟಂತೆ ಜಿಪ[ಂ] ಎಲೆಕ್ಷನ್ ರಿಸಲ್ಟ್ ಬಂದ ಕ್ಷಣದಿಂದಲ[ೇ] ಭಟ್ಟ ಹಾರಾಡತೊಡಗಿದ್ದ. ಅ[...] ದ್ವೇಷಾಸೂಯೆ ಸುಧೆಕಾರ್ ಫ್ರೆಂಡ್[ಸ್] ಸರ್ಕಲ್‌ನ ದಲಿತರು-ಊರವರು ಆಡಿಸಬೇಕೆಂದಿದ್ದ ಯಕ್ಷಗಾನಕ್ಕೆ ಅಡ್ಡಗಾಲು ಹಾಕುವ ತನ[ಕ] ಬಂದಿದೆ....

'ಹಿಂದೂ ನಾವೆಲ್ಲಾ ಒಂದು' ಎಂದು ಬೋಗಸ್ ಸ್ಲೋಗನ್ ಒದರುವ ಕಲ್ಲಡ್ಕ ಭಟ್ಟನೇ ನಾಯಕನಾದ ಸೋಗಲಾಡಿ ಸಂಘಪರಿವಾರಿಗಳಲ್ಲಿ ಶೂದ್ರರ, ದಲಿತರ ಧಾರ್ಮಿಕ-ಸಾಮಾಜಿಕ ನಂಬಿಕೆ-ರೀತಿ-ರಿವಾಜಿನ ಬಗ್ಗೆ ನಿಕೃ[ಷ್ಟ] ಅಭಿಪ್ರಾಯವಿದೆ. ಶೂದ್ರರು-ದಲಿತರು ಚೆಡ್ಡಿ-ಕಾವಿ ವಿಪ್ರರಿ[ಗೆ] ಪಲ್ಲಕ್ಕಿ ಹೊರಲು-ಮತಾಂಧ ಯುದ್ಧಕ್ಕೆ ಗುರಾಣಿಯಾಗಲು ಅಷ್ಟೇ ಬೇಕು. ಕರಾವಳಿಯಲ್ಲಿ ಈ ವೈದಿಕ ವ್ಯವಸ್ಥೆಯನ್ನು ಸಂಘಪರಿವಾರದ ಪಾಪಿಗಳು ವ್ಯವಸ್ಥಿತವಾಗಿ ಸ್ಥಾಪಿಸಿ[...] ಕೊಂಡಿದ್ದಾರೆ. ಸದ್ಯಕ್ಕೆ ಕರಾವಳಿ ಆರೆಸ್ಸೆಸ್ ರಿಂಗ್‌ಮಾಸ್ಟರ್ ಕಲ್ಲಡ್ಕ ಪ್ರಭಾಕರ ಭಟ್ಟನ ಬಣ್ಣ ಆತನ ಚೆಡ್ಡಿ ಅ[...] ಕಲ್ಲಡ್ಕ-ಸುಧೆಕಾರ್-ಗೋಳ್ತಮಜಲು ಏರಿಯಾ ಸುತ್ತಮುತ್ತ ಬಯಲಾಗಿದೆ. ಈ 'ಅನಿವಾರ್ಯ ಅರಿವು' ದಕ್ಷಿಣ ಕನ್ನಡದ ದಶದಿಕ್ಕಿನಲ್ಲಿಯೂ ಮೂಡುವ ಜರೂರತ್ತಿದೆ. ಎಷ್ಟು ಬೇ[ಗ] ಭಟ್ಟನ ಹಿಂದುತ್ವದ ಬಂಡವಾಳ-ಭಂಡಾಟ ದಕ್ಷಿಣ ಕನ್ನಡದ ಜನರಿಗೆ ಅರ್ಥವಾಗುತ್ತದೋ ಜಿಲ್ಲೆಗೆ ಅಷ್ಟು ಒಳ್ಳೆಯದು.

• ನಹುಷ

ಬಳ್ಳಾರಿ: ಸುಟ್ಟ ಹಣ ಗಣಿ ಮಾಫಿಯಾದ್ದೇ?

ಬಿಸಿಲ ನೆಲ ಬಳ್ಳಾರಿಯಲ್ಲಿ ಇಂತಹುದೊಂದು ಗುಮಾನಿ ದಟ್ಟವಾಗಿದೆ. ನಗರದ ಹೊರವಲಯದಲ್ಲಿರುವ ಮಹಾದೇವ ತಾತನವರ ದೇವಸ್ಥಾನದ ಹಿಂಭಾಗದಲ್ಲಿ ಸುಡಲ್ಪಟ್ಟ ನೋಟುಗಳ ಸುತ್ತ ತರಹೇವಾರಿ ಕಥೆಗಳು ಹುಟ್ಟಿಕೊಂಡಿವೆ. ಇದೆಲ್ಲದರ ನಡುವೆ ಕೆಲವರ ಕಣ್ಣಲ್ಲಿ ಸುಟ್ಟ ನೋಟುಗಳಲ್ಲಿ ಗಣಿ ಮಾಫಿಯಾದ ಚಿತ್ರ ಕದಲಿದಂತೆ ಭಾಸವಾಗುತ್ತಿದೆ. ಅದರ ಜೊತೆಗೆ ಬಳ್ಳಾರಿಯಲ್ಲಿ ವ್ಯಾಪಕವಾಗಿರುವ ಖೋಟಾನೋಟು ಜಾಲವೂ ಹೊಸೆದುಕೊಂಡಿದೆ!

ಮೇಲ್ಕಂಡ ಗುಮಾನಿ-ಗೊಂದಲಗಳಿಗೆ ಕಾರಣವಾದದ್ದು ಮೊನ್ನೆ ರವಿವಾರ ಬೆಳ್ಳಂಬೆಳಗ್ಗೆ ತೆರೆದುಕೊಂಡ ವಿಚಿತ್ರ ಘಟನೆ. ಅಂದು ಮಹಾದೇವ ತಾತನವರ ದೇವಸ್ಥಾನದ ಬಾಜಿನಲ್ಲಿ ನಡೆದುಹೋಗುತ್ತಿದ್ದವರು ಪಕ್ಕದ ಕಾಲುವೆ ಬಳಿ ಕಂಡ ದೃಶ್ಯದಿಂದ ಹೌಹಾರಿದ್ದರು. ಯಾಕೆಂದರಲ್ಲಿ ಆ ಬಡ ಜನತೆ ಕನಸಲ್ಲೂ ಕಲ್ಪಿಸಿಕೊಳ್ಳದಷ್ಟು ಪ್ರಮಾಣದ ನೋಟುಗಳು ಅರ್ಧಂಬರ್ಧ ಸುಟ್ಟ ಸ್ಥಿತಿಯಲ್ಲಿ ಬಿದ್ದಿದ್ದವು. ಸುಟ್ಟಿದ್ದವೆಲ್ಲ ಹತ್ತು, ಐವತ್ತು, ನೂರು ಹಾಗೂ ಸಾವಿರದ ನೋಟುಗಳು. ಮೂರು ದೊಡ್ಡ ಚೀಲದಲ್ಲಿ ತಂದು ಸುರಿದು ಬೆಂಕಿ ಹಚ್ಚಿದಂತಿದ್ದ ಆ ದೃಶ್ಯ ಕೋಟ್ಯಂತರ ರೂಪಾಯಿ ಕರಕಲಾಗಿರುವುದನ್ನು ಸಾರಿ ಹೇಳುವಂತಿತ್ತು.

ಕ್ಷಣಾರ್ಧದಲ್ಲಿ ಊರ ತುಂಬಾ ಹರಡಿದ ಈ ಸುದ್ದಿ ತಲೆಗೊಂದರಂತೆ ರೂಮರ್‌ಗಳನ್ನು ಹುಟ್ಟಹಾಕಿತು. ಕೆಲವರು ಗೆದ್ದಲು ತಿಂದು ಹಾಳಾದ ನೋಟುಗಳನ್ನು ಸುಟ್ಟು ಹಾಕಲಾಗಿದೆ ಅಂದರೆ ಮತ್ತೆ ಕೆಲ ಮಂದಿ ಎಲ್ಲೋ ದರೋಡೆ ಮಾಡಿದ ಹಣವನ್ನು ಪೊಲೀಸರ ಭಯದಿಂದ ಸುಟ್ಟು ಹಾಕಿದ್ದಾರೆ ಅಂತ ಮಾತಾಡಿಕೊಂಡರು. ಇದೆಲ್ಲದರ ನಡುವೆ ತಗ್ಗಿದ ದನಿಯಲ್ಲಿ 'ಇದು ಖೋಟಾನೋಟು ಜಾಲದ್ದೇ ಕೆಲಸ' ಅಂತಲೂ ಗುಸುಗುಸು ಹರಡಿತು. ಇನ್ನೂ ತಗ್ಗಿದ ದನಿಯಲ್ಲಿ ಕೆಲವರು ಇದು ಗಣಿ ಮಾಫಿಯಾದ ದುಡ್ಡು ಅಂತಲೂ ಗುಸುಗುಸು ಮಾತಾಡಿಕೊಂಡರು.

ತೀರಾ ಈ ವಿಚಾರದ ಬೆನ್ನು ಬಿದ್ದರೆ ಸುಟ್ಟ ನೋಟುಗಳು ಗಣಿ ಮಾಫಿಯಾ ಹಾಗೂ ಖೋಟಾನೋಟು ದುಂಧೆಯೆಂಬ ವಿಚಾರಕ್ಕೆ ಹೆಚ್ಚು ಒತ್ತು ಸಿಗುತ್ತದೆ. ಬಳ್ಳಾರಿ ಸೀಮೆಯ ಖೋಟಾನೋಟು ಸಾಮ್ರಾಜ್ಯದ ಬಿರುಸು ಹಾಗೂ ಅದು ಇತ್ತೀಚೆಗೆ ತೆಗೆದುಕೊಂಡ ನಿಗೂಢ ತಿರುವುಗಳ ಅರಿವಿರುವವರ‍್ಯಾರೂ ಇದನ್ನು ತಳ್ಳಿ ಹಾಕುತ್ತಿಲ್ಲ. ಯಾಕೆಂದರೆ ಈ ಹಿಂದೆ ಸ್ವತಂತ್ರವಾಗಿದ್ದ ಖೋಟಾನೋಟು ಮಾಫಿಯಾ ಇತ್ತೀಚೆಗೆ ರಾಜಕೀಯ ಹಾಗೂ ಗಣಿ ಮಾಫಿಯಾಗಳೊಂದಿಗೆ ಕೈ ಜೋಡಿಸಿದೆ.


ಬಳ್ಳಾರಿಯ ಪಾಲಿಗೆ ಖೋಟಾನೋಟಿನ ಮಾಫಿಯಾ ಇಂದು ನಿನ್ನೆಯದಲ್ಲ. ಮೊದಲು ಈ ದಂಧೆಯ ಅಧಿನಾಯಕನಾಗಿದ್ದಾತ ಬಾಬ್‌ಜಿ ಎಂಬ ಖದೀಮ. ದೊಡ್ಡದೊಡ್ಡ ಮಟ್ಟದ ಡೀಲ್‌ಗಳಲ್ಲಿ ಲಕ್ಷಾಂತರ ರೂಪಾಯಿ ಕೈ ಬದಲಾಗುತ್ತಿತ್ತಲ್ಲಾ? ಅಂಥಾ ಕುಳಗಳೊಂದಿಗೆ ಸಖ್ಯ ಬೆಳೆಸಿಕೊಳ್ಳುತ್ತಿದ್ದ ಬಾಬ್‌ಜಿ ಆ ಹಣದ ಮಧ್ಯೆ ಖೋಟಾನೋಟುಗಳನ್ನಿಟ್ಟು ದಂಧೆ ನಡೆಸುತ್ತಿದ್ದ ಪಕ್ಕಾ ಕ್ರಿಮಿನಲ್ ಬುದ್ಧಿಯವನಾದ ಬಾಬ್‌ಜಿ ತರಹೇವಾರಿ ವಂಚನೆಗಳನ್ನು ಮಾಡುತ್ತಿದ್ದ. ಅದಕ್ಕಾಗಿಯೇ ಖಾಸಗಿ ಪೊಲೀಸ್ ಪಡೆಯೊಂದನ್ನು ಕಟ್ಟಿಕೊಂಡಿದ್ದ. ಒಂದು ಡೀಲ್‌ನ ಸಂಬಂಧ ವ್ಯಕ್ತಿಯೊಬ್ಬನಿಗೆ ಲಕ್ಷಾಂತರ ರೂಪಾಯಿ ಕೊಟ್ಟನೆಂದಿಟ್ಟುಕೊಳ್ಳಿ. ಆತ ದುಡ್ಡು ತೆಗೆದುಕೊಂಡು ಹೋಗುತ್ತಿದ್ದ ದಾರಿ ಮಧ್ಯದಲ್ಲೇ ತನ್ನ ಖಾಸಗಿ ಪೊಲೀಸ್ ಪಡೆಯ ಮೂಲಕ ತಡೆದು ಕಿತ್ತುಕೊಳ್ಳುತ್ತಿದ್ದ. ಹಾಗೆ ಒರಿಜಿನಲ್-ಡ್ಯೂಪ್ಲಿಕೇಟ್ ಹಣವೆಲ್ಲ ಮತ್ತೆ ಬಾಬ್‌ಜಿ ಬಳಿಯೇ ಗುಡ್ಡೆ ಬೀಳುತ್ತಿದ್ದವು.



ಸದ್ಯ ಈ ಬಳ್ಳಾರಿಯ ಖೋಟಾನೋಟಿನ ಜಗತ್ತನ್[ನು] ಗುರುತು ಪರಿಚಯವಿರದ ಅನೇಕರು ಆಳುತ್ತಿದ್ದಾರೆ. ಜೊತೆ[ಗೆ] ಅದರ ಕಾರ್ಯವೈಖರಿಯ ರೂಪುರೇಷೆಗಳೂ ಬದಲಾಗಿವೆ. ಚುನಾವಣಾ ಸಂದರ್ಭದಲ್ಲಿ ಇದು ತುತ್ತ ತುದಿಗೆ ಹೋಗು[...]ತ್ತದೆ. ಇತರೆ ಸಂದರ್ಭಗಳಲ್ಲಿ ಅದು ಈ ಭಾಗಗಳಲ್ಲಿ ನಡೆ[...]ಯುವ ಗಣಿ ದಂಧೆಯನ್ನೇ ಸಂಪೂರ್ಣವಾಗಿ ಆಶ್ರಯಿಸಿ[...]ಕೊಂಡಿದೆ. ಗಣಿ ದಂಧೆ ಉಚ್ಛ್ರಾಯ ಸ್ಥಿತಿಯಲ್ಲಿದ್ದ ಕಾಲದಲ್ಲಿ ತೋರಣಗಲ್ಲು, ಸಂಡೂರು, ಹೊಸಪೇಟೆಗಳಲ್ಲೆಲ್ಲಾ ಖೋಟಾ[...]ನೋಟಿನ ದಂಧೆ ಗರಿಗೆದರಿತ್ತು. ಗಣಿ ಕುಳಗಳು ಅಕ್ರಮವಾ[ಗಿ] ಕೋಟ್ಯಂತರ ರೂಪಾಯಿಗಳ ವ್ಯವಹಾರ ಮಾಡುತ್ತಿದ್ದಾ[ಗ] ಖೋಟಾ ದಂಧೆಯ ನೆರವಿಂದ ಅನೇಕರನ್ನು ಯಾಮಾರಿ[ಸಿ]ದ್ದಾರೆ. ಇನ್ನೂ ಹೇಸಿಗೆಯ ವಿಚಾರವೆಂದರೆ ದಿನವಿಡಿ[ೀ] ಮೈ ಮುರಿದು ದುಡಿಯುವ ಬಡ ಕಾರ್ಮಿಕರನ್ನೂ ಖೋಟಾನೋಟುಗಳನ್ನು ಕೊಟ್ಟು ಯಾಮಾರಿಸಲಾಗುತ್ತಿದೆ.

ಇದೀಗ ಇಂಥಾ ಖೋಟಾನೋಟಿನ ಜಾಲ ಗಣಿ ಮಾಫಿಯಾದ ನೆರಳಲ್ಲಿ ಹುಲುಸಾಗಿ ಬೆಳೆದು ನಿಂತು ಪಕ್ಕದ ಆಂಧ್ರ ಪ್ರದೇಶ ಮತ್ತಿತರ ರಾಜ್ಯದೊಳಗೂ ಮೈ ಚಾಚಿಕೊಂಡಿದೆ. ಬಳ್ಳಾರಿ, ರಾಯಚೂರು, ಸಿಂಧನೂರು, ಗದಗ, ಕೊಪ್ಪಳ ಮುಂತಾದೆಡೆಗಳಲ್ಲೂ ಕಾರ್ಯಕ್ಷೇತ್ರ ವಿಸ್ತರಿಸಿಕೊಂಡಿದೆ. ಒಂದು ಮೂಲದ ಪ್ರಕಾರ ಬಳ್ಳಾರಿಯೊಂದರಲ್ಲೇ ದಿನವೊಂದಕ್ಕೆ ಕನಿಷ್ಠ 25 ಲಕ್ಷ ಮೌಲ್ಯದ ಖೋಟಾನೋಟುಗಳು ಕೈ ಬದಲಾಗುತ್ತಿವೆ!

ಇನ್ನು ನೋಟು ಸುಟ್ಟ ಘಟನೆಗೆ ಬಂದರೆ, ಅದರಲ್ಲಿ ಹೆಚ್ಚಿನವು ಆರ್‌ಬಿಐ ಮುದ್ರಿತ ಅಸಲಿ ನೋಟುಗಳೆಂ[ಬ] ಅಂಶ ಮೇಲ್ನೋಟಕ್ಕೆ ಪತ್ತೆಯಾಗಿದೆ. ಅದರ ನಡುವಲ್ಲಿ[...]



ಕಲ್ಲಡ್ಕ ಭಟ್ಟನ ಬಣ್ಣ ಬಯಲು!

ಹಿಂದೂತ್ವದ ಭಂಡಾಟದಿಂದ ಬೇಳೆ ಬೇಯಿಸಿಕೊಳ್ಳು ುವ ಕರಾವಳಿ ಆರೆಸ್ಸೆಸ್‌ನ ದೊಣ್ಣೆ ನಾಯಕ ಕಲ್ಲಡ್ಕ ಾಕರ ಭಟ್ಟ ಅದೆಂಥ ಬೋಗಸ್ ಆಸಾಮಿಯೆಂಬುದು ರಿಗೆ ನಿಧಾನಕ್ಕೆ ಅರ್ಥವಾಗುತ್ತಿದೆ. ಈ ಡೋಂಗಿ ದೂತ್ವವಾದಿ ಅಮಾಯಕ ಹಿಂದೂಗಳ ದೇವರ ಕ್ಷಗಾನ ಬಯಲಾಟಕ್ಕೆ ಅಡ್ಡಿಪಡಿಸಿ ಅವರ ನಂಬಿಕೆ-ಾವನೆಗಳನ್ನು ಘಾಸಿಗೊಳಿಸಿದ್ದು ಕರಾವಳಿಯಲ್ಲಿ ರ್ಚಿತವಾಗುತ್ತಿದೆ. ಬಂಟ್ವಾಳ ಭಾಗದ ಜನರಂತೂ ಬೇಸರ ಂಡಿದ್ದಾರೆ. ಭಟ್ಟನ ಆರೆಸ್ಸೆಸ್ ಕೇಂದ್ರ ಕಲ್ಲಡ್ಕ ಏರಿಯಾದ ಾದವರು ಭಟ್ಟನ ವಿರುದ್ಧ ತಿರುಗಿಬಿದ್ದಿದ್ದಾರೆ. ಭಟ್ಟ ಚೆಡ್ಡಿ ಹ್ಮಣರಿಗೆ ಬಾಸ್ ಇರಬಹುದು, ನಮಗಲ್ಲ ಎಂದು ಧೇಕಾರ್‌ನ ದಲಿತರೇ ಹೆಚ್ಚಿರುವ ಫ್ರೆಂಡ್ಸ್ ಸರ್ಕಲ್ ಡುಗರು ಹೇಳುತ್ತಿದ್ದಾರೆ.

'ಕಲ್ಲಡ್ಕ ಭಟ್ಟನದು ಅದೆಂಥ ಹಿಂದೂತ್ವ? ಹರಕೆ ಕ್ಷಗಾನ ಆಡಿಸುತ್ತೇವೆಂದರೆ ಮುಸ್ಲಿಂ-ಕ್ರಿಶ್ಚಿಯನ್ನರೂ ಜಾಗ ಡುತ್ತಾರೆ. ಹಿಂದೂ ರಕ್ಷಕ-ಪೋಷಕನೆಂದು ಪೋಸು ಡುವ ಭಟ್ಟ ಮಾತ್ರ ಹಿಂದೂಗಳ ಆಟಕ್ಕೆ ಅಡ್ಡಗಾಲು ಕುತ್ತಾನೆಂದರೆ ಏನರ್ಥ? ಸಂಘಪರಿವಾರದ ಮತ್ತಿನಿಂದಾಗಿಯೇ ಪೊಲೀಸರು-ತಹಸೀಲ್ದಾರ್ 'ಆಟ' ್ದಿ ಮಾಡಿಸಿದ್ದಾರೆ. ಕಲ್ಲಡ್ಕ ಭಟ್ಟ-ಸೋಮಯಾಜಿಗಳಂಥ ಘೋಷಿತ ಹಿಂದೂ ಮುಂದಾಳುಗಳೇ ಹಿಂದೂ ತ್ರುಗಳು.

ಮುಸ್ಲಿಮರು ಹಿಂದೂ ವಿರೋಧಿಗಳಲ್ಲ. ಆರೆಸ್ಸೆಸ್ ರ್‌ಗಳ ಕಿತಾಪತಿಯಿಂದ ನಾವು ಇಷ್ಟು ದಿನ ಮುಸ್ಲಿಮರು ಂದೂ ವಿರೋಧಿಗಳೆಂದು ಭಾವಿಸಿದ್ದೆವು. ಆದರೆ ರೆಂದೂ ನಮ್ಮ ಆಚಾರ-ವಿಚಾರಕ್ಕೆ ವಿರೋಧ ಮಾಡಿಲ್ಲ. ುಸ್ಲಿಮರು ಹಿಂದೂ ವೈರಿಗಳಲ್ಲ ಎಂಬುದೀಗ ನಮಗೆ ನವರಿಕೆ ಆಗಿದೆ. ಕಲ್ಲಡ್ಕ ಭಟ್ಟನಂಥ ಹಿಂದೂವಾದಿಗಳೇ ಂದೂಗಳ ವೈರಿಗಳೆಂಬುದು 'ಆಟ' ಪ್ರಕರಣದಿಂದ ್ರಿಯಾಗಿದೆ. ಇನ್ನು ಮುಂದೆ ಕಲ್ಲಡ್ಕ ಭಟ್ ವಗೈರೆ ್ತಿ ಧುರೀಣರ ಲೀಡರಿಕೆ ನಾವು ಒಪ್ಪುವು ದಿಲ್ಲ" ದು ಸುಧೆಕಾರ್‌ನ ಫ್ರೆಂಡ್ಸ್ ಸರ್ಕಲ್ ಹುಡುಗರು ಧಿಕ್ಕಾರ ಕಿಬಿಟ್ಟಿದ್ದಾರೆ.

ಸಂಘಪರಿವಾರದ ಭೂಗತ ದೊರೆ ಕಲ್ಲಡ್ಕ ಭಟ್ಟನ ್ಣ ಬಯಲಾಗುತ್ತಿರುವುದು ಕರಾವಳಿಯಲ್ಲಿ ಹೊಸ ಭರವಸೆ ಡಿಸಿದೆ!

ಲಿ ನೋಟುಗಳು ಸುಟ್ಟು ಭಸ್ಮವಾಗಿವೆ. ಇವೆಲ್ಲಾ ಲಿ, ಇಷ್ಟೊಂದು ದೊಡ್ಡ ಮೊತ್ತದ ಹಣ ಸುಟ್ಟದ್ದು ಾಕೆ, ಸುಟ್ಟವರು ಯಾರು ಎಂಬುದು ಸದ್ಯದ ಪ್ರಶ್ನೆ.

ಇದಕ್ಕೆ ಗಣಿ ಮಾಫಿಯಾ ಮತ್ತು ಖೋಟಾ ನೋಟು ಾಫಿಯಾದ ಆಳ-ಅಗಲ ಬಲ್ಲ ಮಂದಿ ಬೇರೆ ತಿಯದ್ದೇ ಉತ್ತರ ನೀಡುತ್ತಾರೆ. ಆದರನ್ವಯ ಗಣಿ ಾಫಿಯಾ ಖೋಟಾನೋಟು ಜಾಲದ ಸಹಕಾರ ಂದಿಗೆ ಇತ್ತೀಚೆಗೆ ದೊಡ್ಡ ಮಟ್ಟದ ಡೀಲೊಂದನ್ನು ಿಸಿದೆ. ಈ ದಂಧೆಗೆ ತೀರಾ ಹೊಸಬರಾದವರ ಕೈಯಲ್ಲಿ ಕಳುಹಿಸಲಾಗಿದೆ. ಖೋಟಾನೋಟು ದಂಧೆಯ ಯಮಾನವೆಂದರೆ, ಆದರೊಳಗೆ ಬೇರೆ ಬೇರೆ ುಂಪುಗಳಿರುತ್ತವೆ. ತಾವೇ ರವಾನಿಸಿದ ಹಣವನ್ನು ತಾವೇ ಶಪಡಿಸಿಕೊಳ್ಳುವ ತಂತ್ರಗಾರಿಕೆಯೂ ಸದಾ ರಿಯಲ್ಲಿರುತ್ತವೆ. ಇಂಥಾ ತಂತ್ರಗಾರರೇ ಭಾರೀ ಮೊತ್ತದ ಸಾಗಿಸುತ್ತಿದ್ದ ಹೊಸಬರಿಗೆ ಪೊಲೀಸರು ಬೆನ್ನಟ್ಟಿರುವ ಹೆದರಿಕೆ ಹುಟ್ಟಿಸಿದ್ದಾರೆ. ದೊಡ್ಡ ಮಟ್ಟದಲ್ಲಿ ುಲಿಕೊಳ್ಳೋ ಹೆದರಿಕೆಗೆ ಸಿಕ್ಕ ಹೊಸಾ ವಂಚಕರು ಾವನ್ನು ಈ ರೀತಿ ಸುಟ್ಟು ತಲೆ ತಪ್ಪಿಸಿಕೊಂಡಿದ್ದಾರೆ.

ಸದ್ಯ ಬಳ್ಳಾರಿ ಸೀಮೆಯ ಯಾರೂ ಮೇಲ್ನೋಡ ಾರವನ್ನು ತಳ್ಳಿಹಾಕಲು ತಯಾರಿಲ್ಲ. ತೀರಾ ಸಾಮಾನ್ಯ ರನ್ನು ವಂಚಿಸುವ ಮಟ್ಟಕ್ಕಿಳಿದ ಖೋಟಾನೋಟು ಧೆಯನ್ನು ಮಟ್ಟಹಾಕಲು ಈ ಭಾಗದ ಪೊಲೀಸರಿಗೆ ಸಸ್ಸು ಇದ್ದಂತಿಲ್ಲ. ತೀರಾ ಗಣಿ ಮಾಫಿಯಾವೇ ಮುಲಾಗಿರುವಾಗ ಮನಸ್ಸಿದ್ದರೂ ಏನು ಮಾಡ ಲೀಕೆಂಬ ಹಂಬಹನ ಬಹುತೇಕರಿಗೆ ಇದ್ದರೂ ಬಹುದು!

ಗೃಹಮಂತ್ರಿ ಅಶೋಕ್‌ಗೆ ಕದ್ದ ಭೂಮಿ ಕುಣಿಕೆಯಾಯ್ತು!

ಯಡ್ಡಿ ಕ್ಯಾಬಿನೆಟ್ಟಿನ ಬಹುತೇಕರು ಪೈಪೋಟಿಗೆ ಬಿದ್ದವರಂತೆ ಭೂಮಿ ನುಂಗುತ್ತಿರುವುದು ಕಣ್ಣಮುಂದಿನ ಸತ್ಯ. ಸದ್ಯ ಯಡ್ಡಿ ವಿರುದ್ಧ ಕ್ರಿಮಿನಲ್ ಕೇಸ್ ದಾಖಲಿಸಲು ಖುದ್ದು ರಾಜ್ಯಪಾಲರೇ ಅಂಕಿತ ಹಾಕಿದ್ದಾಗಿದೆ. ಬಿಜೆಪಿ ಭೂಹಗರಣಗಳ ವಿರುದ್ಧ ಸಮರ ಸಾರಿರುವ ವಕೀಲರಾದ ಸಿರಾಜುದ್ದೀನ್ ಪಾಷ ಹಾಗೂ ಕೆ.ಎಸ್.ಬಾಲರಾಜ್ ದೂರಿನಲ್ಲಿ ಗೃಹ ಸಚಿವ ಆರ್. ಅಶೋಕ್‌ರ ಭೂಕಬಳಿಕೆಗಳ ಬಗೆಗೂ ಉಲ್ಲೇಖವಿತ್ತು. ನೀಡಿದ ಆ ಬಗ್ಗೆ ಪ್ರಸ್ತಾಪವಾಗದಿರುವುದು ಅನೇಕ ಗುಮಾನಿಗಳಿಗೆ ಕಾರಣವಾಗಿದ್ದು ಸತ್ಯ. ಆದರೀಗ ಆರ್. ಅಶೋಕ್ ಯಾರ ಮೇಲೆ ಕೈಯಿಟ್ಟರೂ ಬಚಾವಾಗ ಲಾರದಂತೆ ಕದ್ದ ಭೂಮಿ ಕುಣಿಕೆಯಾಗಿ ಎದುರು ನಿಂತಿದೆ.

'ಪತ್ರಿಕೆ' 2007 ರಲ್ಲೇ ಅಶೋಕ್‌ರ ನೆರಳಲ್ಲಿ ನಡೆದ ಬಹುತೇಕ ಭೂ ಹಗರಣಗಳ ಬಗ್ಗೆ ನಿಖರವಾಗಿ ಬೆಳಕು ಚೆಲ್ಲಿತ್ತು. ಭೂಕಬಳಿಕೆ ವಿರುದ್ಧ ಕಣಕ್ಕಿಳಿದಿದ್ದ ಎ.ಟಿ. ರಾಮಸ್ವಾಮಿ ನೇತೃತ್ವದ ಜಂಟಿ ಸದನ ಸಮಿತಿಗೂ ಆ ಭೂಗಳವು ವೃತ್ತಾಂತ ಮನವರಿಕೆಯಾಗಿತ್ತು. ಅದಲ್ಲದೇ ಪದ್ಮನಾಭನಗರದ ಸುತ್ತ ಅಶೋಕನೇ ಸಾಕಿಕೊಂಡಿದ್ದ ಮಹಾನ್ ಭೂಗಳ್ಳರ ಪಡೆಯೂ ಬೆತ್ತಲಾಗಿತ್ತು. ಆದರೆ ಆ ಹೊತ್ತಿಗಾಗಲೇ ಸಾರಿಗೆ ಸಚಿವರಾಗಿದ್ದ ಅಶೋಕ್ ಹ್ಯಾಗೋ ಬಚಾವಾಗಿದ್ದರು. ಆದರೀಗ ಎಲ್ಲಾ ಅಕ್ರಮಗಳೂ ಬಲವಾಗಿ ಅಟಕಾಯಿಸಿಕೊಂಡಿವೆ. ಯಾಕೆಂದರೆ ಅಶೋಕ್ ಮುಂದಾಳತ್ವದಲ್ಲಿ ನಡೆದ ಚಿಕ್ಕಲ್ಲಸಂದ್ರ ಕೆರೆ ಕಬಳಿಕೆಯೊಂದೇ ಅಖಂಡ 250 ಕೋಟಿ ಮೊತ್ತದ್ದು!


ಈ ಬೃಹತ್ ಕೆರೆಯನ್ನು ಯಶಸ್ವಿಯಾಗಿ ಮುಚ್ಚಿ ಮಹಡಿ ಮೇಲೆ ಮಹಡಿ ಎಬ್ಬಿಸಿದವನು ಇದೀಗ ಪದ್ಮನಾಭನಗರ ವಾರ್ಡ್‌ನ ಕಾರ್ಪೊರೇಟರ್ ಆಗಿರುವ ಎಲ್. ಶ್ರೀನಿವಾಸ್. ಈತ ಲಾಗಾಯ್ತಿನಿಂದಲೂ ಅಶೋಕ್ ಪಾಳೆಯದಲ್ಲೇ ಗುರುತಿಸಿಕೊಂಡಾತ. ಇಂದಿಗೂ ಈತ ಅಶೋಕನ ನೆಚ್ಚಿನ ಬಂಟ. ಅಖಂಡ 250 ಕೋಟಿಯ ಭೂಮಿ ನುಂಗಿದರೂ ಶ್ರೀನಿವಾಸನ ವಿರುದ್ಧ ಒಂದೇ ಒಂದು ಕೇಸು ದಾಖಲಾಗಿಲ್ಲವೆಂದರೆ ಅದಕ್ಕೆ ಕಾರಣ ಅಶೋಕ್ ಅಲ್ಲದೆ ಬೇರಿನ್ನೇನೂ ಅಲ್ಲ.

2007 ರಲ್ಲಿ ಚಿಕ್ಕಲ್ಲಸಂದ್ರದ ಕೆರೆಯ ಅವಶೇಷದ ಮೇಲೆ ನಿಂತು ತಲಾಶ್ ನಡೆಸಿದ ಎ.ಟಿ. ರಾಮಸ್ವಾಮಿ ಇದು 200 ಕೋಟಿ ಮೊತ್ತದ ಕಬಳಿಕೆ ಅಂತ ಅಂದಾಜು ಹಾಕಿದ್ದರು. ಆದರೆ ಆ ಸಂದರ್ಭದಲ್ಲಿದ್ದ ರೇಟಿಗನುಗುಣವಾಗಿಯೇ ನೋಡ ಹೋದರೆ, ಪದ್ಮನಾಭನಗರದ ಕಿಡ್ನಿ ಫೌಂಡೇಷನ್ನಿನ ಆಸುಪಾಸಲ್ಲಿ ಒಂದು ಚದರ ಅಡಿಗೆ 4 ರಿಂದ 5 ಸಾವಿರ ರೂಪಾಯಿ ಬೆಲೆಯಿತ್ತು. ಈ ಏರಿಯಾಗಳಿಗೆ ಹೊಂದಿಕೊಂಡಂತಿರುವ ಚಿಕ್ಕಲ್ಲಸಂದ್ರದ ಸರ್ವೆ ನಂಬರ್ 76 ರ ಹನ್ನೆರಡು ಎಕರೆ 26 ಗುಂಟೆ ಭೂಮಿ ಹಾಗೂ 83 ಎಕರೆ 23 ಗುಂಟೆ ಕೆರೆ ಪ್ರದೇಶ ಅಶೋಕ್ ಪಟಾಲಂನ ಪಾಲಾಗಿದೆ. ಈ ಭೂಮಿಯ ವಿಸ್ತೀರ್ಣಕ್ಕೂ ಆಗಿದ್ದ ಬೆಲೆಗೂ ತಳುಕು ಹಾಕಿದರೆ ಒಟ್ಟಾರೆ ಹಗರಣದ ಮೊತ್ತ 250 ಕೋಟಿಯ ಗಡಿ ದಾಟುತ್ತದೆ.

ಇಷ್ಟೊಂದು ದೊಡ್ಡ ಮಟ್ಟದಲ್ಲಿ ಸರ್ಕಾರಿ ಭೂಮಿ ನುಂಗಿದ ಭೂಗಳ್ಳರು ಹಾಗೂ ಅವರು ಅನುಸರಿಸಿದ ಮಾರ್ಗಗಳ ವಿವರ ಮತ್ತೂ ಬೆಚ್ಚಿಬೀಳಿಸುವಂತಿದೆ. ಇದು ಪದ್ಮನಾಭ ನಗರದ ಹಾಲಿ ಕಾರ್ಪೊರೇಟರ್ ಎಲ್. ಶ್ರೀನಿವಾಸ್, ಬಿಜೆಪಿ ಯುವ ಮೋರ್ಚಾದ ಉಪಾಧ್ಯಕ್ಷನಾಗಿದ್ದ ಎಂ. ಆಂಜನಪ್ಪ ಹಾಗೂ ಬಿಜೆಪಿಯ ಪದ್ಮನಾಭನಗರ ವಾರ್ಡ್ ಕಮಿಟಿ ಅಧ್ಯಕ್ಷನಾಗಿದ್ದ ಉತ್ತರಹಳ್ಳಿಯ ಜಯಣ್ಣ ಮುಂತಾದ ಖದೀಮರ ಟೀಮು ನಡೆಸಿದ ವಂಚನೆ. ಪದ್ಮನಾಭನಗರದ ಸುತ್ತಮುತ್ತ ಪುಂಡಾಟ ನಡೆಸುತ್ತಿದ್ದ ಇವರೆಲ್ಲರನ್ನು ಬಿಜೆಪಿಗೆ ಕರೆತಂದು ಸ್ಥಳೀಯ ನಾಯಕರನ್ನಾಗಿಸಿದ್ದೇ ಗೃಹ ಮಂತ್ರಿ ಆರ್. ಅಶೋಕ್!

ಈ ಪಡೆ ಒಂದಿಡೀ ಕೆರೆಯನ್ನೇ ನುಂಗಿ ನೊಣೆಯುವ ಮೂಲಕ ಅಶೋಕನ ಋಣ ತೀರಿಸಿದಂತಿದೆ. ಈ ಇಡೀ ವಂಚನೆಯಲ್ಲಿ ಅಶೋಕ್ ಕೈವಾಡವೇ ಅತಿಯಾಗಿ ಕೆಲಸ ಮಾಡಿರುವುದಕ್ಕೆ ಬೇಕಾದಷ್ಟು ಪುರಾವೆಗಳಿವೆ. ಇದೀಗ ಕುರುಹುಗಳೇ ಇಲ್ಲದಂತೆ ಮಾಯವಾಗಿದೆಯಲ್ಲಾ ಚಿಕ್ಕಲ್ಲಸಂದ್ರ ಕೆರೆ? ಅದನ್ನು 1984 ರಲ್ಲೇ ಕೆರೆ ಸಂರಕ್ಷಣೆಗೆಂದು ನೇಮಿಸಿದ್ದ ಲಕ್ಷ್ಮಣರಾವ್ ಸಮಿತಿ ಅರಣ್ಯ ಇಲಾಖೆಗೆ ವಹಿಸಿತ್ತು. ಸರ್ಕಾರ 1997 ರಲ್ಲಿ ಅದನ್ನು ಅರಣ್ಯ ಇಲಾಖೆಗೆ ವಹಿಸಿ ಆದೇಶ ಹೊರಡಿಸಿತ್ತು. ಅರಣ್ಯ ಇಲಾಖೆ ಸರ್ಕಾರದ ಆದೇಶದಡಿ ಮುಂದುವರೆಯುವ ಮುನ್ನವೇ ಪದ್ಮನಾಭನಗರವೆಂಬುದು ಚಿಕ್ಕಲಸಂದ್ರ ಕೆರೆಯವರೆಗೂ ಬೆಳೆದು ಬಂದಿತ್ತು!


ಅದೇ ಹೊತ್ತಿಗೆ ಸರಿಯಾಗಿ ತುಂಬಿದ ಕೆರೆ ನುಂಗಲು ಚಿಕ್ಕಲ್ಲಸಂದ್ರದ ಪಟೇಲ ಮುನಿಯಪ್ಪನ ಪುತ್ರ ಆಂಜನಪ್ಪ ಲಕ್ಷ್ಮಯ್ಯ ಮತ್ತವನ-ಮಗ ಎಲ್. ಶ್ರೀನಿವಾಸ್, ಉತ್ತರಹಳ್ಳಿ



ಅಶೋಕ್

ಪಂಚಾಯ್ತಿಯ ಮಾಜಿ ಛೇರ್ಮನ್ ರಾಮಚಂದ್ರನ ಮಗ ರಮೇಶ್ ಹಾಗೂ ಬಳ್ಳಾರಿ ನಾಗಪ್ಪ ಮತ್ತು ಮಕ್ಕಳ ಪಡೆ ಹೊಂಚಿ ಕೂತಿತ್ತು. ಇದಕ್ಕೆ ಸರಿಯಾಗಿ ಚಿಕ್ಕಲಸಂದ್ರದ ಜೋಡಿದಾರರಾದ ಶಾರದಮ್ಮ ಮತ್ತು ರಾಮಸ್ವಾಮಿ ವಿರುದ್ಧ ಗೇಣಿ ಕಾಯ್ದೆ ಪ್ರಕಾರ ಕೆಲ ರೈತರು 1972ರಲ್ಲಿ ಹೈಕೋರ್ಟ್ ಮೆಟ್ಟಿಲೇರಿದ್ದರು. ಇದನ್ನೇ ಗುರಿಯಾಗಿಟ್ಟುಕೊಂಡ ಪುಂಡರ ಪಡೆ ಕೆರೆಯ ಭೂಮಿ ತಮಗೇ ಸೇರಿದ್ದು ಅಂತ ನಕಲಿ ದಾಖಲೆ ಸೃಷ್ಟಿಸಲು ಶುರುವಿಟ್ಟಿತು. ಅದರನ್ವಯ ಸರ್ವೆ ನಂ. 76 ಮತ್ತು 83 ಅನ್ನು ತಮ್ಮ ಹೆಸರಿಗೆ ಖಾತೆ ಮಾಡುವಂತೆ ಕೋರಿದ ಅರ್ಜಿಯನ್ನು ಅದಾಗಲೇ ವಿಚಾರಣೆ ಹಂತದಲ್ಲಿದ್ದ ಪ್ರಕರಣದ ನಡುವೆ ತೂರಿಸಿತು.

ಇದಾದದ್ದೇ ಬೆಂಗಳೂರಿನ ಮೂಲೆಮೂಲೆಗಳಿಂದ ಕಸ ಮಣ್ಣು ತಂದು ತುಂಬಿದ ಕೆರೆಗೆ ಸುರಿಯಲಾಯ್ತು. ಒಂದೇ ವಾರದಲ್ಲಿ ಕೆರೆ ಮುಚ್ಚಿಹೋಯ್ತು. ಅದಾದ ಬಳಿಕ ಒಂದೊಂದಾಗಿ ಬೃಹತ್ ಕಟ್ಟಡಗಳು ತಲೆ ಎತ್ತಲಾರಂಭಿಸಿದವು. ಈ ಅಕ್ರಮದ ಬಗ್ಗೆ ಅಡಿಗಡಿಗೆ ಪತ್ರಿಕೆಗಳು ಚಾಟಿ ಬೀಸಿದವು. ಜನ ಬಿಡದೇ ದೂರು ಹಿಡಿದು ಅಲೆದರು. ಆದರೆ ಆಗ ಉತ್ತರಹಳ್ಳಿ ಭಾಗದಲ್ಲಿ ಶಾಸಕನಾಗಿದ್ದ ಶ್ರೀನಿವಾಸ್ ಖುದ್ದಾಗಿ ಎಲ್ಲವನ್ನು ಹತ್ತಿಕ್ಕಿದ. ಇದರ ನಡುವಲ್ಲೇ ಆರ್. ಅಶೋಕ್ ಉತ್ತರಹಳ್ಳಿಯಿಂದ ಶಾಸಕನಾಗಿ ಎದ್ದು ಬಂದದ್ದೇ ಅಖಂಡ ಭೂಹಗರಣಗಳಿಗೂ ಜೀವ ಬಂದಂತಾಗಿತ್ತು. ಶಾಸಕನಾಗಿ ಬಂದ ಅಶೋಕ್ ಮಾಡಿದ ಮೊದಲ ಕೆಲಸವೆಂದರೆ, ನಾಗರಾಜ ಎಂಬಾತನನ್ನು ಬೆಂಗಳೂರು ದಕ್ಷಿಣ ತಾಲ್ಲೂಕಿಗೆ ತಹಶೀಲ್ದಾರನಾಗಿ ನೇಮಿಸಿದ್ದು! ತದನಂತರ ಈ ನಾಗರಾಜನೇ ಕೆರೆಗಳ್ಳರಿಗೆ ಖಾತೆ ಮಾಡಿಸಿಕೊಟ್ಟ.



ಶ್ರೀನಿವಾಸ್

ಇದಾದ ಬಳಿಕ ಕೆರೆಗಳ್ಳರ ಗುಂಪಿನ ಒಬ್ಬೊಬ್ಬರಿಗೇ ರಾಜಕೀಯ ಕಾಯಕಲ್ಪ ಕೊಡಹತ್ತಿದ ಅಶೋಕ್ ಎಂ. ಆಂಜನಪ್ಪನನ್ನು ಬಿಜೆಪಿಯಿಂದ ತಾಲ್ಲೂಕು ಪಂಚಾಯ್ತಿ ಸದಸ್ಯನನ್ನಾಗಿಸಿದರು. ಆಂಜನಪ್ಪ ಖೊಟ್ಟಿ ಖಾತೆಯಿಟ್ಟುಕೊಂಡು ಕೆರೆಯನ್ನು ಮಾರಿದವರಲ್ಲಿ ಮೊದಲಿಗ. ಅದಾಗಲೇ ಈ ಪಟಾಲಂನ ಪ್ರಭಾವಿ ಎಲ್. ಶ್ರೀನಿವಾಸನಿಗೂ ಅಶೋಕ್ ಸ್ವತಃ ಬಿಜೆಪಿಯಿಂದ ಟಿಕೆಟ್ ಕೊಡಿಸಿ ಪದ್ಮನಾಭನಗರದಲ್ಲಿ ಗೆಲ್ಲಿಸಿಕೊಂಡಿದ್ದರು. ಹಾಗೆ ಗೆದ್ದು ಬಂದ ಶ್ರೀನಿವಾಸ್ ಕೆರೆ ನುಂಗೋ ಕೆಲಸದಲ್ಲಿ ಅವಿರತ ಶ್ರಮಿಸಿದ್ದ ರಮೇಶನಿಗೆ ಪದ್ಮನಾಭನಗರ ವಾರ್ಡಿನ ಬಿಜೆಪಿ ಅಧ್ಯಕ್ಷಗಿರಿ ಕೊಡಿಸಿದ್ದ.

ಈ ಕೆರೆ ಕಬಳಿಕೆ ವಿಚಾರದ ಬಗ್ಗೆ ರೆವಿನ್ಯೂ ಇಲಾಖೆಯಿಂದ ತನಿಖೆಗೆ ಆದೇಶ ಬರುವ ಹೊತ್ತಿಗಾಗಲೇ ವಂಚಕರ ಒಂದಿಡೀ ಪಡೆ ಸೆಟಲ್ ಆಗಿಹೋಗಿತ್ತು. ಅಶೋಕ್ ಅಂತೂ ಆರೋಗ್ಯ ಮಂತ್ರಿಯಾಗಿ ಗೆಟಪ್ಪು ಬದಲಿಸಿದ್ದರು. ಮಂತ್ರಿಗಿರಿಯ ಪವರನ್ನೆಲ್ಲಾ ಮಾಡಿದ ಅನ್ಯಾಯ ದಕ್ಕಿಸಿಕೊಳ್ಳಲೆಂದೇ ಬಳಸಿಕೊಂಡ ಅಶೋಕ್ ತನ್ನ ಶಿಷ್ಯ ಬೆಟ್ಟಯ್ಯನನ್ನು ಬೆಂಗಳೂರು ದಕ್ಷಿಣ ಭಾಗಕ್ಕೆ ತಹಶೀಲ್ದಾರ್ ಆಗಿ ಕೂರಿಸಿದರು. ಖೊಟ್ಟಿ ದಾಖಲೆ ಸೃಷ್ಟಿಸಿ ಕೆರೆ ನುಂಗಲು ನೆರವಾಗಿದ್ದ ನಾಗರಾಜನನ್ನು ಅಸಿಸ್ಟೆಂಟ್ ಕಮಿಷನರ್ ಹುದ್ದೆಗೇರಿಸಿದರು. ಈ ಹೊತ್ತಿಗೆ ಸರಿಯಾಗಿ ಈ ಕೆರೆ ನುಂಗಾಟದ ತನಿಖೆ ನಡೆಸಿ ವರದಿ ಕೊಡುವಂತೆ ಹೈಕೋರ್ಟ್ ಎ.ಸಿ. ನಾಗರಾಜನಿಗೆ ಆದೇಶಿಸಿತ್ತು. ವಂಚಕರಿಗೆ ನಿಯತ್ತನ್ನು ಅಡ ಇಟ್ಟಿದ್ದ ಆತ ವಿವಿಧ ಗೇಮ್ ಆಡಿ ಕೆರೆ ನುಂಗಿದವರನ್ನು ಬಚಾವಾಗಿಸಿದ.

ಈ ರೀತಿ ವ್ಯವಸ್ಥಿತವಾಗಿ ಅಗಾಧ ವಿಸ್ತೀರ್ಣದ ಕೆರೆಯನ್ನು ನುಂಗಲಾಗಿದೆ. ಇವತ್ತಿಗೂ ಹೈಕೋರ್ಟಿಗೆ ಈ ಬಗ್ಗೆ ವರದಿ ಒಪ್ಪಿಸಿಲ್ಲ. ಕದ್ದ ಜಾಗ ವಶಪಡಿಸಿಕೊಂಡೂ ಇಲ್ಲ. ಆ ಪ್ರದೇಶದಲ್ಲೀಗ ಕೆರೆಯ ಕುರುಹೇ ಇಲ್ಲದಂತೆ ಗಗನಚುಂಬಿ ಅಪಾರ್ಟ್‌ಮೆಂಟುಗಳು ಕಟ್ಟಡಗಳೆದ್ದಿವೆ. ಭೂಮಿ ಕದ್ದು ಕಾಸು ಹೊಡಕೊಂಡವರು ವಿವಿಧ ಹಂತಗಳಲ್ಲಿ ಆರಾಮಾಗಿದ್ದಾರೆ. ಇದೆಲ್ಲದರ ಸೂತ್ರಧಾರ ಅಶೋಕ್ ಈಗ ಗೃಹಮಂತ್ರಿ!

ಇನ್ನು 2006ರಲ್ಲಿ ಅಶೋಕನ ಭೂಲೂಟಿಯ ಬಗ್ಗೆ 'ಪತ್ರಿಕೆ' ಇಂಚಿಂಚು ವರದಿ ಮಾಡಿತ್ತು. ಅದು ದಯಾನಂದ ಪೈ ಹಾಗೂ ಅಶೋಕ್ ಕೂಡಿ 1,200 ಕೋಟಿಯ ಅರಣ್ಯ ಭೂಮಿ ನುಂಗಿದ ಕುರಿತಾದ ಭೀಕರ ವಿಚಾರ!


ಉತ್ತರಹಳ್ಳಿ ಮನವಾರ್ತೆ ಕಾವಲ್‌ನ ಸರ್ವೆ ನಂಬರ್ 5 ರಲ್ಲಿ ನೀಲಗಿರಿ ಮರಗಳಿಂದ ತುಂಬಿದ್ದ ಮುನ್ನೂರು ಎಕರೆಯ ಮೈನರ್ ಫಾರೆಸ್ಟ್ ಅನ್ನು 1963 ಕ್ಕೂ ಪೂರ್ವದಲ್ಲೇ ಕಿರು ಅರಣ್ಯವೆಂದು ಕೇಂದ್ರ ಸರ್ಕಾರ ನೋಟಿಫೈ ಮಾಡಿತ್ತು. ಇದರಿಂದಾಗಿ ನುಂಗುವ ತುಮುಲ ಇದ್ದರೂ ಯಾರೂ ಕೂಡಾ ಆ ಬಗ್ಗೆ ಪ್ರಯತ್ನಿಸಿರಲಿಲ್ಲ. ಆದರೆ 2001 ರ ಹೊತ್ತಿಗೆ ಮಹಾನ್ ಭೂವಂಚಕ ದಯಾನಂದ ಪೈನ ಕಾಕದೃಷ್ಟಿ ಈ ಅರಣ್ಯದ ಮೇಲೆ ಬಿತ್ತು. ಈ ಸಲುವಾಗಿ ವಂಚಕ ಪೈ ಕೈಯಿಟ್ಟದ್ದು ಆರೋಗ್ಯ ಸಚಿವನಾಗಿದ್ದ ಆರ್. ಅಶೋಕ್ ಹೆಗಲ ಮೇಲೆ. ಪೈನ ಆಮಿಷಗಳಿಗೆ ಪೂರ್ತಿ ಮನಸೋತ ಅಶೋಕ್ ಆ ಸಂದರ್ಭದಲ್ಲಿ ಭೂಮಂಜೂರಾತಿ ಸಮಿತಿಗೂ ಅಧ್ಯಕ್ಷರಾಗಿದ್ದರಲ್ಲಾ? ಅದರಡಿಯಲ್ಲಿ ಬಡವರಿಗೆ ಹಂಚಿದಂತೆ ದಾಖಲೆ ಸೃಷ್ಟಿಸಿ ಇಡೀ ಅರಣ್ಯಭೂಮಿಯನ್ನು ದಯಾನಂದ ಪೈ ಮಡಿಲಿಗೆ ಹಾಕಲು ಕಾರ್ಯತಂತ್ರ ರೂಪಿಸಿದರು.

ಅಖಂಡ 300 ಎಕರೆಯ ಈ ಕಾಡು ಆಸುಪಾಸಿನ ಗ್ರಾಮಸ್ಥರಿಂದ ತುರಳ್ಳಿ ಕಾಡು ಅಂತಲೇ ಕರೆಸಿಕೊಳ್ಳುತ್ತದೆ. ಇದನ್ನ ಏಕಾಏಕಿ ಪೈ ಮಡಿಲಿಗೆ ಹಾಕಲು ಅಶೋಕ್‌ಗೆ ದಾರಿಗಳಿರಲಿಲ್ಲ. ನಂತರ ಬಂಟರು-ಪಂಟರುಗಳಿಂದೆಲ್ಲ ತಲಾಶ್ ನಡೆಸಿದ ಅಶೋಕ್‌ಗೆ ಸರಿಯಾದುದೊಂದು ದಾರಿ ತೆರೆದುಕೊಂಡಿತು. ಹೊಸಳ್ಳಿ ಮತ್ತು ಗಾಣಿಗರ ಪಾಳ್ಯದ ಗ್ರಾಮಸ್ಥರು ಈ ಭೂಮಿಯನ್ನು ತಮಗೆ ಕೊಡಬೇಕೆಂದು 1978 ರಲ್ಲಿ ಹೈಕೋರ್ಟಿಗೆ ಅರ್ಜಿ ಹಾಕಿದ್ದ ವಿಚಾರ ಅಶೋಕ್‌ಗೆ ತಿಳಿಯಿತು. ಹಾಗೆ ತುರಳ್ಳಿ ಕಾಡು ತಮಗೇ ಬೇಕು ಅಂತ ಕೇಸು ಹಾಕಿದ್ದದ್ದು ಗಾಣಿಗರ ಪಾಳ್ಯದ ರಾಮಸ್ವಾಮಿ, ಬೈಯಣ್ಣ, ಸಂಪಂಗಿ, ಅಬ್ಬಯ್ಯ, ಶ್ರೀನಿವಾಸ, ಶೇಖರ, ದಾಸಪ್ಪ ಚನ್ನಮ್ಮ ಮುಂತಾದವರು. ಅಶೋಕ್ ಇವರನ್ನೆಲ್ಲ 2001 ರ ಸುಮಾರಿಗೆ ಬಿಜೆಪಿಗೆ ಸೆಳೆದುಕೊಂಡರು. ಆ ಹೊತ್ತಿಗಾಗಲೇ ಈ ಕೇಸನ್ನು ಹೈಕೋರ್ಟ್ ಭೂಮಂಜೂರಾತಿ ಸಮಿತಿಗೆ ವರ್ಗಾಯಿಸಿತ್ತು.

ತದನಂತರ ಅಶೋಕ್ ರೆವಿನ್ಯೂ ಇನ್ಸ್‌ಪೆಕ್ಟರ್ ಚಿಕ್ಕಮುನಿಯಪ್ಪನನ್ನು ಪಳಗಿಸಿಕೊಂಡು ಸಾಗುವಳಿ ಚೀಟಿ ಕೊಡುವ ಕುರಿತಾಗಿ ವರದಿ ಬರೆಸಿಕೊಂಡರು. 2006ರ ಏಪ್ರಿಲ್ ತಿಂಗಳಲ್ಲಿ ಈ ಚಿಕ್ಕ ಮುನಿಯಪ್ಪ ಹಾಗೂ ತಹಶೀಲ್ದಾರ್ ನಾರಾಯಣಸ್ವಾಮಿ ಸೇರಿಕೊಂಡು ಸರ್ವೆ ನಡೆಸಿದಂತೆ ಮಾಡಿ ಭೂ ಮಂಜೂರಾತಿಗೆ ಸುತ್ತೋಲೆ ಹೊರಡಿಸಿದರು. ಅರಣ್ಯ ಪ್ರದೇಶವನ್ನು ಈ ರೀತಿ ಮಂಜೂರಾತಿ ಮಾಡುವುದು ಪಕ್ಕಾ ಕಾನೂನುಬಾಹಿರ ಅಂಶ. ಆದರಿದಕ್ಕೆ ಬೆಂಗಳೂರು ಜಿಲ್ಲಾಧಿಕಾರಿ ಸಾದಿಕ್ ಅಸ್ತು ಅಂದರು.

ಹೀಗೆ ತುರಳ್ಳಿ ಕಾಡನ್ನು ಅರ್ಜಿದಾರರಿಗೆ ಮಂಜೂರು ಮಾಡಿದಂತೆ ತೋರಿಸಿಕೊಂಡು, ನಂತರ ದಯಾನಂದ ಪೈ ಖರೀದಿಸಿದಂತೆ ನಟಿಸಿ ಕಬಳಿಸುವುದು- ಅಶೋಕ್‌ನ ಸಂಕ್ಷಿಪ್ತ ಸ್ಕೆಚ್ಚು. ಸದ್ಯ ಮೇಲ್ನೋಡ ಎರಡೇ ಪ್ರಕರಣಗಳ ಬಗ್ಗೆ ವಿಸ್ತೃತ, ನಿಷ್ಪಕ್ಷಪಾತ ತನಿಖೆಯಾದರೆ ಅಶೋಕ್ ಪರಪ್ಪನ ಅಗ್ರಹಾರ ಸೇರಬೇಕಾಗುತ್ತದೆ. ಪದ್ಮನಾಭನಗರದಲ್ಲಿ ಅಶೋಕ್ ಸಾಕಿಕೊಂಡಿರುವ ಚೇಲಾಗಳಿಂದ ಇತರೆ ಫೈಲುಗಳೂ ಕಿಕ್ಕಿರಿಯುತ್ತವೆ.

ಇಷ್ಟರಲ್ಲೇ ಇಂಥಾ ಸಾಧ್ಯತೆಗಳು ವಾಸ್ತವ ರೂಪ ಪಡೆಯುವ ಸೂಚನೆಗಳಿವೆ. ವಕೀಲರಿಬ್ಬರು ಕೊಟ್ಟ ಭೂಕಬಳಿಕೆ ಕುರಿತ ದಾಖಲೆಗಳು ಆರ್. ಅಶೋಕ್‌ನಿಗೆ ಮುಳುಗು ನೀರಾಗಲಿರುವುದು ನಿಶ್ಚಿತ. ಆದಾದಲ್ಲಿ ಪದ್ಮನಾಭನಗರದ ಸುತ್ತ ಅಳಿದುಳಿದಿರುವ ಸರ್ಕಾರಿ ಜಮೀನುಗಳಾದರೂ ಉಳಿದಾವು!



ಮುಖ್ಯಮಂತ್ರಿಯೇ ಕಳ್ಳ ಯಡ್ಡಿ ಕದ್ದದ್ದು 4 ಸಾವಿರ ಕೋಟಿ!

ಈ ರಾಜ್ಯದ ಹಾಲಿ ಮುಖ್ಯಮಂತ್ರಿಯನ್ನು ಇನ್ನು ಮುಂದೆ ಯಾರೂ ಯಡಿಯೂರಪ್ಪ ಎಂದಾಗಲಿ ಅಥವಾ ಸರ್ಕಾರದ ಮುಖಂಡನೆಂದಾಗಲೀ ಕರೆಯಲಾಗದು.

ಅವನೀಗ ಆರೋಪಿ ನಂಬರ್ ಒನ್!

ಬಹುಶಃ ಸ್ವತಂತ್ರ ಭಾರತದ ಇತಿಹಾಸದಲ್ಲೇ ಯಾವ ರಾಜ್ಯದ ಮುಖ್ಯಮಂತ್ರಿಯ ವಿರುದ್ಧವೂ ಅಕ್ರಮ ಆಸ್ತಿ ಗಳಿಕೆ, ಸರ್ಕಾರಿ ಖಜಾನೆಗೇ ಕನ್ನ ಹಾಕಿದ, ಕಾಯ್ದೆ ಕಾನೂನು ಉಲ್ಲಂಘಿಸಿ ಮಕ್ಕಳಿಂದ ದುಡ್ಡು ಲೂಟಿ ಮಾಡಿಸಿರುವ ಆರೋಪದ 15 ಕ್ರಿಮಿನಲ್ ಕೇಸುಗಳು ಏಕಕಾಲಕ್ಕೆ ದಾಖಲಾದ ಉದಾಹರಣೆಯಿಲ್ಲ.

ಬಿಜೆಪಿಯ ಯಡ್ಡಿ ಈಗ ಆ ಕ್ರಿಮಿನಲ್ ದಾಖಲೆ ನಿರ್ಮಿಸಿದ್ದಾನೆ. ಆಶ್ಚರ್ಯ ಅಂದರೆ ಯಡ್ಡಿ ಇದನ್ನು ಲೆಕ್ಕಿಸದೆ ಮುಖ್ಯಮಂತ್ರಿ ಹುದ್ದೆಯಲ್ಲಿ ಮುಂದುವರೆದಿರುವುದು!

ಪರಮಾಶ್ಚರ್ಯವೆಂದರೆ ಬಿಜೆಪಿ ಹೈಕಮಾಂಡ್ ಈಗಲೂ ಯಡ್ಡಿಯ ಬೆಂಬಲಕ್ಕೇ ನಿಂತಿರುವುದು!!

ಈಗ ಹೊರಬೀಳುತ್ತಿರುವ ದಾಖಲೆಗಳ ಆಧಾರದಲ್ಲೇ ಹೇಳಬೇಕೆಂದರೆ ಕಳೆದ ಎರಡು ಮೂರು ವರ್ಷದಲ್ಲಿ ಯಡ್ಡಿ ಅಂಡ್ ಸನ್ಸ್ ರಾಜ್ಯದಲ್ಲಿ ಕೊಳ್ಳೆ ಹೊಡೆದಿರುವ ಸಂಪತ್ತಿನ ಒಟ್ಟು ಬೆಲೆ ನಾಲ್ಕು ಸಾವಿರ ಕೋಟಿ ರೂಪಾಯಿಗಿಂತಲೂ ಜಾಸ್ತಿ ಇದೆ.



ಶಿವಮೊಗ್ಗದ ವಕೀಲರಾದ ಸಿರಾಜಿನ್ ಭಾಷಾ ಹಾಗೂ ಕೆ.ಎನ್. ಬಾಲರಾಜ್ ಇದುವರೆಗೂ ಸಂಗ್ರಹಿಸಿರುವ ಆಸ್ತಿ ವಹಿವಾಟಿನ ದಾಖಲೆಗಳು, ಲ್ಯಾಂಡ್ ಡಿ ನೋಟಿಫಿಕೇಷನ್ ಡೀಲ್‌ಗಳು, ಯಡ್ಡಿ ಫ್ಯಾಮಿಲಿಯವರ ರಿಯಲ್ ಎಸ್ಟೇಟ್ ಕಂಪನಿಗಳ ಅಕ್ರಮ ವ್ಯವಹಾರಗಳ ಒಟ್ಟು ಮೊತ್ತ ಇದು.

ನೆನಪಿಡಿ. ಇದರಲ್ಲಿ ಯಡ್ಡಿಯ ಗಣಿ ದಂಧೆಯ ಲೂಟಿಯ ಮೊತ್ತ ಸೇರಿಲ್ಲ. ಟ್ರಾನ್ಸ್‌ಫರ್ ಡೀಲ್‌ಗಳಿಂದ ಸೂರೆ ಮಾಡಿದ ಹಣ, ಹೈಪವರ್ ಕಮಿಟಿ ಮೂಲಕ ವಿವಿಧ ಖಾಸಗಿ ಕಂಪನಿಗಳ ಯೋಜನೆಗೆ ಅಸ್ತು ಅನ್ನುವಾಗ ಪಡೆದ ಕಿಕ್‌ಬ್ಯಾಕ್‌ಗಳು ಇದರಲ್ಲಿ ಸೇರಿಲ್ಲ.

ಇದನ್ನೆಲ್ಲಾ ಹೊರತುಪಡಿಸಿಯೇ ಯಡ್ಡಿಯ ಲೂಟಿ ನಾಲ್ಕು ಸಾವಿರ ಕೋಟಿ ರೂಪಾಯಿಯೆಂದರೆ ಇನ್ನು ಇವೂ ಸೇರಿಕೊಂಡರೆ ಯಡ್ಡಿ ಕಮಾಯಿಸಿರುವ ಹಣದ ಮೊತ್ತ ಎಷ್ಟಕ್ಕೆ ತಲುಪಬಹುದು ಯೋಚಿಸಿ ನೋಡಿ.

ಡಿ ನೋಟಿಫಿಕೇಶನ್ ಹಾಗೂ ಕುಮಾರಸ್ವಾಮಿ

ಈ ಯಡ್ಡಿ ತನ್ನ ವಿರುದ್ಧ ಡಿ ನೋಟಿಫಿಕೇಶನ್ ಹಗರಣದ ಆರೋಪ ಬಂದಾಗೆಲ್ಲಾ 'ಯಾಕೆ ಕುಮಾರಸ್ವಾಮಿ ಡಿನೋಟಿಫೈ ಮಾಡಿಲ್ಲವಾ, ಅದೇನೂ ಕಾನೂನುಬಾಹಿರವಲ್ಲ' ಎಂದೇ ರಾಗ ಹಾಡುತ್ತಾನೆ. ಜನಸಾಮಾನ್ಯರಿಗೂ ಈ ಪ್ರಶ್ನೆ ಸರಿಯಲ್ಲವ" ಅಂತಲೂ ಅನ್ನಿಸಬಹುದು.

ಆದರೆ ಸತ್ಯಾಂಶ ಬೇರೆಯೇ ಇದೆ. ಯಾವುದೇ ಉದ್ದೇಶಕ್ಕಾಗಿ ಒಮ್ಮೆ ಜಮೀನು ನೋಟಿಫೈ ಆಗಿ ನಂತರ ಮುಂದಿನ ಹಂತದಲ್ಲಿ 16(2) ಕಾಯ್ದೆಯಡಿ ಅಂತಿಮ ಅಧಿಸೂಚನೆಗೆ ಒಳಪಟ್ಟುಬಿಟ್ಟರೆ ನಂತರ ಸಾಕ್ಷಾತ್ ಭಗವಂತನೇ ಬಂದರೂ ಅದೇ ಜಮೀನನ್ನು ಡಿ ನೋಟಿಫೈ ಮಾಡಿಸಲಾಗದು.

ಕುಮಾರಸ್ವಾಮಿ ಮುಖ್ಯಮಂತ್ರಿಯಾಗಿದ್ದಾಗ ಅನೇಕ ಸಂದರ್ಭದಲ್ಲಿ ಜಮೀನುಗಳ ಡಿ ನೋಟಿಫಿಕೇಶನ್ ಆಗಿದೆಯಾದರೂ ಅವೆಲ್ಲಾ ನಿಯಮ 16(2) ಆಗುವ ಮುನ್ನವೇ ಡಿ ನೋಟಿಫೈ ಆದಂತವು. ಜೊತೆಗೆ ಆಗಲು ಆಯಾ ಸಂಬಂಧಿಸಿದ ಪುನರ್ ಪರಿಶೀಲನಾ ಸಮಿತಿಗಳ ಶಿಫಾರಸ್ಸು ಬಂದ ಮೇಲಷ್ಟೇ ಡಿ. ನೋಟಿಫೈ ಆದ ಲ್ಯಾಂಡ್‌ಗಳವು.

ಆದರೆ ಯಡ್ಡಿ ಮಾಡಿರುವ ಡಿ ನೋಟಿಫಿಕೇಶನ್‌ಗಳು ಯಾವುದೇ ಕಮಿಟಿಯಿಂದ ಶಿಫಾರಸ್ಸಾದವುಗಳಲ್ಲ. ಜೊತೆಗೆ ಬಹುತೇಕ 16(2) ಆಗಿದ್ದ ಭೂಮಿಯನ್ನೇ ಯಡ್ಡಿ ಡಿ ನೋಟಿಫೈ ಮಾಡಿದ್ದಾನೆ. ಇದು ಒಂದು ಅಪರಾಧವಾದರೆ ಹಾಗೆ ಡಿ ನೋಟಿಫೈ ಆದ ಜಮೀನುಗಳನ್ನೇ ಯಡ್ಡಿ ಮಕ್ಕಳು ಖರೀದಿಸಿರುವುದು ಎರಡನೇ ಕ್ರಿಮಿನಲ್ ಅಪರಾಧವಾಗಿದೆ.

ಈ ಯಡ್ಡಿ ಎಲ್ಲೆಲ್ಲಿ ಯಾವಾಗ್ಯಾವಾಗ ಕೋಟಿಗಟ್ಟಲೆ ಬೆಲೆಯ ಭೂಮಿಯನ್ನು ಡಿ ನೋಟಿಫೈ ಮಾಡಿ ತನ್ನ ಮಕ್ಕಳ ಕಂಪನಿಗಳು ನೂರಾರು ಕೋಟಿ ಲಾಭ ಗಳಿಸಲು ನೆರವಾಗಿದ್ದಾನೆಂಬುದರ ದಾಖಲೆಗಳನ್ನೇ ವಕೀಲರಾದ ಸಿರಾಜಿನ್ ಹಾಗೂ ಬಾಲರಾಜ್ ರಾಜ್ಯಪಾಲರಿಗೆ ಸಲ್ಲಿಸಿದ್ದು.

ಆ ದಾಖಲೆಗಳನ್ನು ಚೆಕ್ ಮಾಡಿದ ನಂತರವೇ ರಾಜ್ಯಪಾಲರು ಯಡ್ಡಿ ಅಂಡ್ ಸನ್ಸ್ ವಿರುದ್ಧ prevention of corruption act ನಡಿ ಕ್ರಿಮಿನಲ್ ಕೇಸ್ ದಾಖಲಿಸಲು ಅನುಮತಿ ನೀಡಿದ್ದು.

ಈ ಯಡ್ಡಿಯ ಭ್ರಷ್ಟಾಚಾರದ ಮಹಾನ್ ಸಾಮ್ರಾಜ್ಯದಲ್ಲಿ ಪ್ರಮುಖವಾಗಿ ಕೇಳಿಬರುತ್ತಿರುವ ಹೆಸರುಗಳೆಂದರೆ ಮಕ್ಕಳಾದ ರಾಘವೇಂದ್ರ, ವಿಜಯೇಂದ್ರ, ಅಳಿಯ ಸೋಹನ್ ಕುಮಾರ್. ಕಳ್ಳ ಮಂತ್ರಿಯಾಗಿದ್ದ ಕೃಷ್ಣಯ್ಯ ಶೆಟ್ಟಿಯದ್ದು ಇವರ ಜೊತೆಗಿರುವ ಹುಟ್ಟಾ ವಂಚಕರ ಹೆಸರುಗಳೆಂದರೆ ಅದು ಆದರ್ಶ ಡೆವಲಪರ್ಸ್‌ನ ಮಾಲೀಕರದ್ದು.

ಬಿ.ಎಂ. ಜಯಶಂಕರ, ಬಿ.ಎಂ. ಕರುಣೇಶ್, ಸುಧಾ ಜಯಶಂಕರ, ರವಿಕುಮಾರ್ ಹಾಗೂ ನಿಶ್ಚಯ್ ಜಯಶಂಕರ್ ಎಂಬ ಕಳ್ಳರ ಕೂಟ ಕಟ್ಟಿರುವ ಆದರ್ಶ ಕಂಪನಿಯು ಮುಖ್ಯಮಂತ್ರಿ ಯಡ್ಡಿಯನ್ನು Accused No 1 ಆಗಿ ನಿಲ್ಲಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದಾರೆ.

ಈ ವಂಚಕರ ಸಹವಾಸ ಮಾಡಿದ ನಂತರವೇ ಯಡ್ಡಿ ಅಂಡ್ ಸನ್ಸ್‌ಗೆ ರಿಯಲ್ ಎಸ್ಟೇಟ್ ಕಂಪನಿಗಳನ್ನು ಸ್ಥಾಪಿಸುವ, ಕಳ್ಳ ಲೆಕ್ಕ ಸುಳ್ಳು ಪತ್ರ ಸೃಷ್ಟಿಸುವ ಚೋರ ವಿದ್ಯೆ ಕರಗತವಾಯಿತು. ಆ ಪ್ರಕ್ರಿಯೆಯಲ್ಲೇ ಯಡ್ಡಿ ಮಕ್ಕಳು ಧವಳಗಿರಿ ಪ್ರಾಪರ್ಟೀಸ್, ಭಗತ್ ಹೋಮ್ಸ್ ಪ್ರೈ ಲಿ. ಆಕರ್ಷ್ ಡೆವಲಪರ್ಸ್ ಪ್ರೈ ಲಿ ಎನ್ನುವ ಕಂಪನಿಗಳನ್ನು ತೇಲಿಬಿಟ್ಟಿದ್ದರು.


ಈ ಯಡ್ಡಿ ಫ್ಯಾಮಿಲಿ ಹಾಗೂ ಆದರ್ಶ ಡೆವಲಪರ್ಸ್‌ನ ಜಯಶಂಕರ್ ಫ್ಯಾಮಿಲಿ ಇಬ್ಬರೂ ಲಿಂಗಾಯತರೆ. ಇವರಿಬ್ಬರೂ ಒಂದಾಗಿ ಕರ್ನಾಟಕ ರಾಜ್ಯವನ್ನು ಹೇಗೆ ಲೂಟಿ ಮಾಡಿದರೆಂಬುದನ್ನು ಬರೆದರೇ ಹತ್ತು ವಾರಕ್ಕಾಗುವಷ್ಟಿದೆ. ಅದರ ಮೊದಲ ಕಂತಾಗಿ ಶಿವಮೊಗ್ಗ ನಗರದಲ್ಲಿ ಹಾಗೂ ಬೆಂಗಳೂರಿನಲ್ಲಿ ಇವರು ಏನೇನು ಅವ್ಯವಹಾರ ನಡೆಸಿದರೆಂಬುದನ್ನು ಇಲ್ಲಿ ಕಾಣಿಸಿದೆ. ಆರೋಪಿ ನಂ. ಒನ್ ಯಡ್ಡಿ ಉಪಮುಖ್ಯಮಂತ್ರಿಯಾಗಿದ್ದಾಗ ರಾಜಮಹಲ್ ವಿಲಾಸ ಬಡಾವಣೆಯಲ್ಲಿದ್ದ ತನ್ನ ಬಂಗಲೆ ನಂಬರ್ 381, 80 ಅಡಿರಸ್ತೆ, 3 ನೇ ಹಂತ ಇದನ್ನು ಆದರ್ಶ್ ಡೆವಲಪರ್ಸ್‌ಗೆ ಬಾಡಿಗೆಗೆ ಕೊಟ್ಟಿದ್ದಾಗಿ ದಾಖಲೆ ತೋರಿಸುತ್ತಾನೆ. ಅದಕ್ಕೂ ಮುನ್ನ ಆದರ್ಶದವರಿಂದ ಯಡ್ಡಿ 50 ಲಕ್ಷ ಪಡೆದು ನಂತರ ಅದೇ ಹಣವನ್ನು ತಿಂಗಳ ಬಾಡಿಗೆ ಲೆಕ್ಕದಲ್ಲಿ ಮುರಿದುಕೊಂಡಿದ್ದಾಗಿ ತನ್ನ ವಾರ್ಷಿಕ ಆದಾಯದ ಸ್ಟೇಟ್‌ಮೆಂಟ್‌ನಲ್ಲಿ ತೋರಿಸಿದ್ದಾನೆ. ಆದರೆ ಆದರ್ಶದವನು ಯಡ್ಡಿಯ ಮನೆಗೆ ಕಾಲಿಡಲೇ ಇಲ್ಲ ಹಾಗೂ ಯಡ್ಡಿ ಆ ಮನೆ ಬಿಟ್ಟು ಆಚೆಗೆ ಹೋಗಲೂ ಇಲ್ಲ. ಇದನ್ನು 'ಲಂಕೇಶ್' ಈ ಹಿಂದೆಯೇ ದಾಖಲಿಸಿದೆ. ಈ ನಂಟು ಹಾಗೆ ಮುಂದುವರೆದು ಎರಡೂ ಫ್ಯಾಮಿಲಿಗಳು ಸೇರಿ ಮೆಸರ್ಸ್ ಆಕರ್ಷ್ ಪ್ರಾಪರ್ಟೀಸ್ ಎನ್ನುವ ರಿಯಲ್ ಎಸ್ಟೇಟ್ ಕಂಪನಿ ಸ್ಥಾಪನೆಯಾಯಿತು. ಅದರಲ್ಲಿ ಜಯಶಂಕರ್‌ನಿಗೆ 80%, ಅವನ ಹೆಂಡತಿ ಸುಧಾಗೆ 10% ಷೇರು ಇದ್ದರೆ ಯಡ್ಡಿ ಮಕ್ಕಳು ಅಳಿಯನ ಧವಳಗಿರಿ ಪ್ರಾಪರ್ಟೀಸ್ ಕಂಪೆನಿಗೆ 10%, ಷೇರ್ ಇತ್ತು.

ನಂತರ ಇವರ ನಡುವೆ Give & Take ಕಳ್ಳದಂಧೆ ಶುರುವಾಯಿತು. ಆದರ್ಶ ಡೆವಲಪರ್ಸ್‌ನ ಮಾಲೀಕ ಜಯಶಂಕರನ ತಮ್ಮ ಕರುಣೇಶ್ ದಿನಾಂಕ 11.8.2006 ರಲ್ಲಿ ಶಿವಮೊಗ್ಗ ಸಿಟಿಯಲ್ಲಿ ಖಾತಾ ಸಂಖ್ಯೆ 134/131/226 ಆಸ್ತಿ ಸಂಖ್ಯೆ 150 ವಿಸ್ತೀರ್ಣ 4738 ಚದರಡಿ ಜಾಗವನ್ನು 39.60 ಲಕ್ಷ ರೂಪಾಯಿ ಖರೀದಿಸುತ್ತಾನೆ.

ಇದೇ ಕರುಣೇಶ್ 8.9.2006 ರಲ್ಲಿ ಶಿವಮೊಗ್ಗದ ಖಾತಾ ಸಂಖ್ಯೆ 134/134/128 ರ 8750 ಚದರಡಿ ಜಾಗವನ್ನು 1 ಕೋಟಿ 5 ಲಕ್ಷಕ್ಕೆ ಖರೀದಿಸುತ್ತಾನೆ. (ಸಬ್ ರಿಜಿಸ್ಟರ್ ದಾಖಲೆ ಪುಟ ಸಂಖ್ಯೆ 1819/06-07). ಈ ಡೀಲ್ ಮುಗಿದ ನಂತರ ಅದೇ ಕರುಣೇಶ 14.12.2009 ರಲ್ಲಿ ಈ ಎರಡೂ ಆಸ್ತಿಗಳನ್ನು ಯಡ್ಡಿ ಫ್ಯಾಮಿಲಿಯ ಧವಳಗಿರಿ ಪ್ರಾಪರ್ಟೀಸ್‌ಗೆ ಕೇವಲ 95 ಲಕ್ಷಕ್ಕೆ ಮಾರಿಕೊಳ್ಳುತ್ತಾನೆ. ಇಲ್ಲಿ ಒಂದು ವಿಚಾರ ನೆನಪಿಡಿ. ಕರುಣೇಶ್ 2006 ರಲ್ಲಿ ಇವನ್ನು ಖರೀದಿಸಿದಾಗ ತೆತ್ತ ಹಣ ಒಂದು ಕೋಟಿ ನಲವತ್ತು ಲಕ್ಷ ಚಿಲ್ಲರೆ. 2009 ರ ವೇಳೆಗೆ ಆ ಆಸ್ತಿಯ ಬೆಲೆ

ತನಿಖಾ ಆದೇಶ ಖುದ್ದು ಟೈಪ್ ಮಾಡಿದ ರಾಜ್ಯಪಾಲ!

ಜನವರಿ 21 ರಂದು ಯಡ್ಡಿ ವಿರುದ್ಧ ಭ್ರಷ್ಟಾಚಾರದ ಕ್ರಿಮಿನಲ್ ಕೇಸ್ ದಾಖಲಿಸಲು ವಕೀಲರಿಬ್ಬರಿಗೆ ಅನುಮತಿ ನೀಡುವ ಆದೇಶವನ್ನು ರಾಜ್ಯಪಾಲ ಹಂಸರಾಜ್ ಭಾರದ್ವಾಜ್ ತಾವೇ ಖುದ್ದು ಬೆರಳಚ್ಚು ಮಾಡಿದರಂತೆ!



ಇದರರ್ಥ ಅವರಿಗೆ ಸಿಬ್ಬಂದಿಯ ಕೊರತೆಯಿತ್ತು ಎಂದಲ್ಲ, ಬದಲಾಗಿ ತಮ್ಮ ತೀರ್ಮಾನ ಹಾಗೂ ತಾವು ನೀಡಬಹುದಾದ ಆದೇಶದ ಮಾಹಿತಿ ರಾಜಭವನದಲ್ಲಿರುವ ತಮ್ಮ ಸಿಬ್ಬಂದಿಯ ಗಮನಕ್ಕೂ ಬರಕೂಡದು, ಅದು ಕೊನೆಯ ಕ್ಷಣದವರೆಗೂ ರಹಸ್ಯವಾಗಿರಬೇಕೆಂಬುದೇ ರಾಜ್ಯಪಾಲರ ಉದ್ದೇಶವಾಗಿತ್ತು ಎನ್ನಲಾಗಿದೆ.

ಹಾಗಾಗಿ ವಕೀಲರಾದ ಸಿರಾಜಿನ್ ಭಾಷಾ ಹಾಗೂ ಬಾಲರಾಜ್ ನೀಡಿದ್ದ ದೂರು, ಲಗತ್ತಿಸಿದ್ದ ಸಾವಿರಾರು ಪುಟಗಳ ದಾಖಲೆಗಳನ್ನೆಲ್ಲಾ ಸ್ವತಃ ತಾವೇ ಪರಿಶೀಲಿಸಿದ ರಾಜ್ಯಪಾಲರು ಕೆಲ ದಾಖಲೆಗಳನ್ನು ಸರ್ಕಾರದಿಂದಲೂ ತರಿಸಿಕೊಂಡು ಕ್ರಾಸ್ ಚೆಕ್ ಮಾಡಿಕೊಂಡರು. ಯಡ್ಡಿಯ ಸರ್ಕಾರ ಇಲ್ಲೂ ಸ್ವಲ್ಪ ಕಳ್ಳಾಟ ನಡೆಸಿ ಗವರ್ನರ್ ಕೇಳಿದ್ದ ದಾಖಲೆಗಳ ಪೈಕಿ ಕೆಲವನ್ನು ಮಾತ್ರ ಒದಗಿಸಿ ಉಳಿದಿದ್ದನ್ನು ಮುಚ್ಚಿಟ್ಟಿತ್ತು, ಆದರೂ ಲಭ್ಯ ಅಧಿಕೃತ ದಾಖಲೆಗಳೇ ಯಡ್ಡಿ ವಿರುದ್ಧದ ನಿರ್ಧಾರ ತೆಗೆದುಕೊಳ್ಳಲು ಸಾಕಿತ್ತಾದ್ದರಿಂದ ರಾಜ್ಯಪಾಲ ಮುಂದುವರೆದರು. ಆದೇಶ ಸಂಖ್ಯೆ GS-275/EST-2010ಯ ಎಂಟು ಪುಟಗಳ ತನಿಖಾ ಆದೇಶವನ್ನು ತಾವೇ ಕಂಪ್ಯೂಟರಿನ ಮುಂದೆ ಕುಳಿತು ಟೈಪ್ ಮಾಡಿದರು. ಹಾಗೆ ರೆಡಿಯಾಗಿ ಶುಕ್ರವಾರ ಸಂಜೆ ಹೊರಬಿದ್ದ ಆದೇಶದ ಸಂಗತಿ ಯಡ್ಡಿ ಗ್ಯಾಂಗ್‌ಗೆ ತಿಳಿಯಿತಾದರೂ ಅದರ ಪ್ರತಿ ಸೋಮವಾರದವರೆಗೂ ಯಡ್ಡಿ ಕೈಗೆ ಸಿಗಲಿಲ್ಲ.

ಉರಿವ ಮನೆಯಲ್ಲೂ ಗಳ ಹಿರಿದ ಯಡ್ಡಿ

20 ನಿಮಿಷದಲ್ಲಿ 40 ಸಾವಿರ ಕೋಟಿ ರೂಪಾಯಿ ಖಾಸಗಿ ಯೋಜನೆಗಳಿಗೆ ಒಪ್ಪಿಗೆ!

ಕಳ್ಳತನ ಮಾಡಲು ಮನೆ ಹೊಕ್ಕ ಕಳ್ಳ ಹೊರಹೋಗುವಾಗ ಕಣ್ಣಿಗೆ ಬೀಳುವ ಸಣ್ಣಪುಟ್ಟ ವಸ್ತುಗಳನ್ನೂ ಬಿಡದೆ ದೋಚುವಂತೆ ಯಡ್ಡಿ ವರ್ತಿಸುತ್ತಿದ್ದಾರೆ.

ಜನವರಿ 23ರ ಭಾನುವಾರ ರಾತ್ರಿ ನಡೆದ ವಿದ್ಯಮಾನಗಳೇ ಇದಕ್ಕೆ ಸಾಕ್ಷಿಯಾಗಿದೆ. ಭಾರಿ ಬಂಡವಾಳದ ಖಾಸಗಿ ಯೋಜನೆಗಳಿಗೆ ಅನುಮೋದನೆ ನೀಡುವ ಉನ್ನತ ಮಟ್ಟದ ಸಮಿತಿಯ ಸಭೆಯನ್ನು ಭಾನುವಾರ ರಾತ್ರಿ ತರಾತುರಿಯಲ್ಲಿ ನಡೆಸಿದ್ದಾರೆ ಯಡ್ಡಿ. ಕೇವಲ 20 ನಿಮಿಷ ನಡೆದ ಆ ಸಭೆಯಲ್ಲಿ ಅನೇಕ, ಖಾಸಗಿ ಹೂಡಿಕೆದಾರರ ಸುಮಾರು 55 ಯೋಜನೆಗಳಿಗೆ ಯಡ್ಡಿ ನೇತೃತ್ವದಲ್ಲಿ ನಡೆದ ಸಭೆ ಒಪ್ಪಿಗೆ ನೀಡಿದೆ.



ಇದೆಲ್ಲದರ ಅಂದಾಜು ಬಂಡವಾಳದ ಮೊತ್ತ 40 ಸಾವಿರ ಕೋಟಿ ರೂಪಾಯಿಗಳು!

ವಕೀಲರಾದ ಸಿರಾಜಿನ್ ಭಾಷಾ ಹಾಗೂ ಬಾಲರಾಜ್‌ರಿಗೆ ಯಡ್ಡಿ ವಿರುದ್ಧ ಭ್ರಷ್ಟಾಚಾರದ ಕೇಸ್ ದಾಖಲಿಸಲು ರಾಜ್ಯಪಾಲ ಭಾರದ್ವಾಜ್ ಜನವರಿ 21 ರಂದು ಅನುಮತಿ ನೀಡಿದರು. ಈ ಸುದ್ದಿ ತಿಳಿಯುತ್ತಿದ್ದಂತೆ ಶನಿವಾರ 'ಕರ್ನಾಟಕ ಬಂದ್'ಗೆ ವ್ಯವಸ್ಥೆ ಮಾಡಿ ಮುಂಬೈ ಹಾಗೂ ದೆಹಲಿಗೆ ಓಡಿಹೋದ ಯಡ್ಡಿ ವಾಪಸ್ ಬಂದದ್ದು ಭಾನುವಾರ ರಾತ್ರಿ. ತನ್ನ ಕುರ್ಚಿ ಉಳಿಸಿಕೊಳ್ಳುವ ಲಾಬಿ ಮಾಡಲು ದೆಹಲಿಗೆ ಹೋಗಿದ್ದ ಯಡ್ಡಿ ಅದಕ್ಕೂ ಮುನ್ನ ಮುಂಬೈನಲ್ಲಿ ಈ ಖಾಸಗಿ ಕಂಪನಿಗಳ ಮಾಲೀಕನೊಂದಿಗೆ ಡೀಲ್ ಫೈನಲೈಸ್ ಮಾಡಿಕೊಂಡಿದ್ದರು. ಭಾನುವಾರ ರಾತ್ರಿ ದೆಹಲಿಯಿಂದ ಬಂದ ತಕ್ಷಣ ರಾತ್ರಿ 8ಕ್ಕೆ ಹೈ ಪವರ್ ಕಮಿಟಿ ಸಭೆ ಸೇರಿತು. ಆದರೆ 8.30 ರಷ್ಟರಲ್ಲೇ ಯಡ್ಡಿ ಸಭೆ ಮುಗಿಸಿ ಬೇರೆಡೆಗೆ ಹೊರಟುಹೋದರು. ಅಂದರೆ 20 ನಿಮಿಷವೂ ಚರ್ಚಿಸದೆ ಈ ಬೃಹತ್ ಯೋಜನೆಗಳಿಗೆ ಅನುಮೋದನೆ ನೀಡಲಾಗಿದೆ ಎಂದರ್ಥ.

ಹಾಗೆ ಅಸ್ತು ಎನಿಸಿಕೊಂಡ ಯೋಜನೆಗಳ ಪೈಕಿ ಕೋಲಾರದ ನರಸಾಪುರ ಕೈಗಾರಿಕಾ ಪ್ರದೇಶದಲ್ಲಿ ತಲೆ ಎತ್ತಲಿರುವ ಮಹೀಂದ್ರಾ ಏರೋಸ್ಪೇಸ್ ಪ್ರೈವೇಟ್ ಲಿಮಿಟೆಡ್‌ನ ವಿಮಾನ ಬಿಡಿ ಭಾಗ ತಯಾರಿಕಾ ಪ್ರಾಜೆಕ್ಟ್ ಒಂದು. ಅದರ ಬಂಡವಾಳ 284 ಕೋಟಿ ರೂಪಾಯಿಗಳು.

ಫ್ರಾನ್ಸ್‌ನ ಸೀಮೇಲ್ದರ್ ಎಲೆಕ್ಟ್ರಿಕ್ ಇಂಡಿಯಾ ಪ್ರೈ ಲಿ ಕಂಪನಿ ಅತ್ತಿಬೆಲೆ ಬಳಿ ಸ್ಥಾಪಿಸಲಿರುವ 53 ಕೋಟಿ ರೂ.ನ ಕೈಗಾರಿಕೆ ಯೋಜನೆ ಇನ್ನೊಂದು.

ಬಿಡದಿ ಬಳಿ ಟಯೋಟಾ ಕಿರ್ಲೋಸ್ಕರ್‌ರವರ ವಾಹನ ಬಿಡಿ ಭಾಗ ತಯಾರಿಕಾ ಯೋಜನೆ. ಇದರ ಅಂದಾಜು ವೆಚ್ಚವೇ 500 ಕೋಟಿ ರೂ. ಹಾರೋಹಳ್ಳಿ ಕೈಗಾರಿಕಾ ಪ್ರದೇಶದಲ್ಲಿ ಇಂಡೋ ನಿಸ್ಸಾನ್ ಕಂಪನಿ ವಿಶ್ವದ ಅತೀ ದೊಡ್ಡ ನೂಡಲ್ಸ್ ತಯಾರಿಕಾ ಘಟಕ ಹಾಕಲು 160 ಕೋಟಿ ರೂಪಾಯಿ ಯೋಜನೆಗೆ ಒಪ್ಪಿಗೆ.

ಇದೆಲ್ಲ ಒಂದು ತೂಕವಾದರೆ ಸಚಿವ ಮುರುಗೇಶ್ ನಿರಾಣಿಯದ್ದೇ ಇನ್ನೊಂದು ತೂಕ. ಹಾಲಿ ಯಡ್ಡಿ ಸಂಪುಟದಲ್ಲಿ ಬೃಹತ್ ಕೈಗಾರಿಕಾ ಸಚಿವನಾಗಿರುವ ನಿರಾಣಿ ಸಾಹೇಬರ ನಿರಾಣಿ ಸಿಮೆಂಟ್ಸ್ ಪ್ರೈ. ಲಿ ಕಂಪನಿಯ ಪೋರ್ಟ್‌ಲ್ಯಾಂಡ್ ಸಿಮೆಂಟ್ ಉತ್ಪಾದನಾ ಯೋಜನೆಗೂ ಇದೇ ಮೀಟಿಂಗ್‌ನಲ್ಲಿ ಯಡ್ಡಿ ಅಸ್ತು ಎಂದಿದ್ದಾರೆ. 960 ಕೋಟಿ ರೂಪಾಯಿಗಳ ಈ ಯೋಜನೆಗೆ ಒಪ್ಪಿಗೆ ನೀಡುವಾಗ ಖುದ್ದು ನಿರಾಣಿ ಸಾಹೇಬರೂ ಅದೇ ಸಭೆಯಲ್ಲಿದ್ದರು. ಇದು ಕಾನೂನಿನ ಸ್ಪಷ್ಟ ಉಲ್ಲಂಘನೆ. ಯಡ್ಡಿಯ ಅಧಿಕಾರಿಗಳಿಗೆ ಇದು ಗೊತ್ತಿರಲಿಲ್ಲ ಎಂದೇನಲ್ಲ. ಆದರೆ ನಿರಾಣಿ 'ನಾನು ಸಿಮೆಂಟ್ ಕಂಪನಿಯ ಹುದ್ದೆಗೆ ರಾಜೀನಾಮೆ ಕೊಟ್ಟಿದ್ದೀನಿ' ಎಂದರಂತೆ. ನಿಯಮಾನುಸಾರ ಆಗಿದಿದ್ದರೆ ಈ ಪ್ರತಿ ಯೋಜನೆಯ ಸಾಧಕ-ಬಾಧಕಗಳ ಚರ್ಚೆಯಾಗಿ, ಪ್ರಸೆಂಟೇಶನ್ ನಡೆದು ವಿವಿಧ ಇಲಾಖೆಗಳ ಅಭಿಪ್ರಾಯ ಒಪ್ಪಿಗೆ ಸಿಕ್ಕ ಮೇಲೆಯೇ ಹೈಪವರ್ ಕಮಿಟಿ ತನ್ನ ಸಮ್ಮತಿ ನೀಡಬೇಕಾಗಿತ್ತು. ಜೊತೆಗೆ ಈ ಎಲ್ಲಾ ಯೋಜನೆಗಳಿಗೂ ರಾಜ್ಯದ ಹಲವೆಡೆ ಸಾವಿರಾರು ಎಕರೆ ಭೂಸ್ವಾಧೀನ ಮಾಡಬೇಕಾಗುತ್ತದೆ.

ಆದರೆ ಯಡ್ಡಿ ಇದ್ಯಾವುದನ್ನು ಕೇರ್ ಮಾಡಿಲ್ಲ. ಬಹುಶಃ ತನ್ನ ಅಧಿಕಾರ ಉಳಿಯುವುದಿಲ್ಲ ಎನ್ನುವ ಅನುಮಾನ ಬಂದಿರಬೇಕು.

ಹಾಗಾಗಿ ಸಿಎಂ ಕುರ್ಚಿಯಿಂದ ಇಳಿಯುವ ಮೊದಲು ಅವಕಾಶ ಸಿಕ್ಕಷ್ಟೂ ದುಡ್ಡು ದೋಚಿಕೊಂಡು ಹೋಗಿ ಬಿಡಬೇಕೆಂಬ ದುರಾಸೆಯಿಂದ ಯಡ್ಡಿ ಈ ಕೆಲಸ ಮಾಡಿದ್ದಾರೆ. ಯಡ್ಡಿಯಂಥ ಮೂರನ್ನು ಬಿಟ್ಟ ಮುಖ್ಯಮಂತ್ರಿ ಕರ್ನಾಟಕದ ಇತಿಹಾಸದಲ್ಲೇ ಇರಲಿಲ್ಲ ಬಿಡಿ.

ಕೋಟಿ ರೂಪಾಯಿಗಳು. ಆದರೂ ಅವನು 95 ಲಕ್ಷಕ್ಕೆ ಅಂದರೆ ಮೂರು ಕೋಟಿ ರೂ. ...ಮ ಬೆಲೆಗೆ ರಾಘವೇಂದ್ರನಿಗೆ ಮಾರಿಕೊಳ್ಳುತ್ತಾನೆ. ...ದೇನಾಯಿತು ನೋಡಿ.

ಕರುಣೇಶ್ ಶಿವಮೊಗ್ಗ ಸಿಟಿಯಲ್ಲಿ ಖಾತಾ ...4/131/226 ಆಸ್ತಿ ಸಂಖ್ಯೆ 150 ವಿಸ್ತೀರ್ಣ ...13 ಚದರಡಿಯ ಜಾಗವನ್ನು (ದಾಖಲೆ ಸಂಖ್ಯೆ ...-07) 11.8.2006 ರಲ್ಲಿ 57.06 ಲಕ್ಷಕ್ಕೆ ...ತ್ತಾನೆ. ನಂತರ ಇದು ಜನಾರ್ದನ ರೆಡ್ಡಿಯ ...ರಂ ಮೈನಿಂಗ್ ಕಂಪನಿಯ ಹಣ ಪಾವತಿ ... ಪುನಃ ಧವಳಗಿರಿ ಕಂಪನಿಯ ಪಾಲಾಗುತ್ತದೆ. ...ಮೊಗ್ಗ ಸಬ್ ರಿಜಿಸ್ಟ್ರಾರ್ ಸೇಲ್ ಡೀಲ್ ಸಂಖ್ಯೆ ...7-08 ದಿ. 28.11.2007 ರಂದು ... ಸಿಟಿಯ ಮಧ್ಯದ ಆಸ್ತಿಯೊಂದನ್ನು 27.52 ...ರೀದಿಸಿ ನಂತರ ಅದರ ಬೆಲೆ 75 ಲಕ್ಷಕ್ಕೆ ... ರಾಘವೇಂದ್ರನಿಗೆ 7.55 ಲಕ್ಷಕ್ಕೆ ಮಾರುತ್ತಾನೆ. ...ಮೊಗ್ಗ ಖಾತಾ ಸಂಖ್ಯೆ 131/131/226 ರ ...ಡ್ P32/09-10 ರಲ್ಲಿ ದಿ. 14.12.2009 ... 1 ಕೋಟಿ 5 ಲಕ್ಷಕ್ಕೆ ಕರುಣೇಶ್ ಇನ್ನೊಂದು ...ೀದಿಸುತ್ತಾನೆ. ಅದರ ಆಸ್ತಿಮೌಲ್ಯ 2 ಕೋಟಿಗೆ ... ಅದನ್ನು ಕೇವಲ 35.50 ಲಕ್ಷಕ್ಕೆ ದವಳಗಿರಿ ... ದಾಟಿಸಿ ಬಿಡುತ್ತಾನೆ.

...ವು ಶಿವಮೊಗ್ಗ ಸಿಟಿಯಲ್ಲೇ ಒಂದು ಡಜನ್‌ಗೂ ...ೀಲ್‌ಗಳಾಗಿವೆ.

...ರ್ಶ ಡೆವಲಪರ್ಸ್‌ನವರು ಯಡ್ಡಿ ಫ್ಯಾಮಿಲಿಗೆ ...ಪಕಾರ ಮಾಡಿದ್ದು ಬೇರೊಂದು ರೀತಿಯ ...ರ ಪಡೆಯಲಿಕ್ಕೆ.

ಆದರ್ಶದವರ ಡೀಲ್‌ಗಳು

...ಳ್ಳ ಕರುಣೇಶ್ ಶಿವಮೊಗ್ಗ ಸಿಟಿಯಲ್ಲಿ 108 ... ಒಂದು ತ್ರೀ ಸ್ಟಾರ್ ಹೋಟೆಲ್ ನಿರ್ಮಿಸಲು ...ರ್ಕಾರದ ಸಿಂಗಲ್ ವಿಂಡೋ ಕ್ಲಿಯರೆನ್ಸ್ ಕಮಿಟಿ ... ಒಪ್ಪಿಗೆ ಪಡೆಯುತ್ತಾನೆ. ಅದಕ್ಕೆ ಬೇಕಾದ ... ನೀರು, ವಿದ್ಯುತ್ etc., ಪುಗಸಟ್ಟೆ ...ಬದಾದ ಬೆಲೆಯಲ್ಲಿ ಕೈಗಾರಿಕಾ ಸಚಿವ ...ಂದ ಮಂಜೂರಾಗುತ್ತದೆ.

...ಡ್ಡಿಯ ಪರಮಾಪ್ತೆ 'ಪುತ್ರಿ' ಶೋಭಾ ಕರಂದ್ಲಾಜೆ ... ಕೋಟಿ ರೂಪಾಯಿಗಳನ್ನು ಆದರ್ಶ್ ...ಂದ ಧನಸಹಾಯವಾಗಿ ಪಡೆಯುತ್ತಾಳೆ. ಯಡ್ಡಿ ...ಗತ್ ಹೋಮ್ಸ್ ಕಂಪನಿಗೆ 92 ಲಕ್ಷ ರೂಪಾಯಿ ...ದರ್ಶದವರಿಂದ ಬಡ್ಡಿ ರಹಿತ ಮುಂಗಡವಾಗಿ ...ರುತ್ತದೆ.

...ಂಕ 19.11.2008 ರಂದು ನಡೆದ ಹೈ ... ಕ್ಲಿಯರೆನ್ಸ್ ಕಮಿಟಿಯ ಮೀಟಿಂಗ್‌ನಲ್ಲಿ ...ರಪ್ಪನು 28 ಎಕರೆ ಭೂಮಿಯನ್ನು ಆದರ್ಶ ... ಮಂಜೂರು ಮಾಡುತ್ತಾನೆ. ದೇವನಹಳ್ಳಿ ಏರ್‌ಪೋರ್ಟ್ ಹತ್ತಿರದ ಬಂದಿಕೊಡಿಗೇಹಳ್ಳಿಯ ಈ ಜಮೀನಿನಲ್ಲಿ ಎಲೆಕ್ಟ್ರಾನಿಕ್ ಹಾರ್ಡ್‌ವೇರ್ ಪಾರ್ಕ್ ಸಾಫ್ಟ್‌ವೇರ್ ಪಾರ್ಕ್ ಹಾಗೂ ಜ್ಯೂವೆಲರಿ ಪಾರ್ಕ್ ಮಾಡುತ್ತೇನೆಂದು ಆದರ್ಶದವನು ಹೇಳಿಕೊಂಡಿರುತ್ತಾನೆ. ಈ ಭೂಮಿ ಮಾರ್ಕೆಟ್ ಬೆಲೆಯೇ ಅಂದಾಜು 200 ಕೋಟಿ ರೂಪಾಯಿಗಳು.

ರಾಜ್ಯ ಸರ್ಕಾರದ ಉದ್ಯೋಗ ಮಿತ್ರ ಇಲಾಖೆಯ ವತಿಯಿಂದ ಸಂಖ್ಯೆ kum/SLSWCC-21/Ad/92/ 2006-07ದಿನಾಂಕ 23.5.2006 ರಂದು ಶಿವಮೊಗ್ಗದ ಮಾಚೇನಹಳ್ಳಿಯಲ್ಲಿ ಆದರ್ಶ ಕಂಪೆನಿಗೆ ಐ.ಟಿ. ಪಾರ್ಕ್ ಸ್ಥಾಪಿಸಲು 25 ಎಕರೆ ಭೂ ಮಂಜೂರಾತಿ ಮಾಡಿಸುತ್ತಾನೆ ಯಡ್ಡಿ.



ಬೆಂಗಳೂರಿನ ವರ್ತೂರು ಹೋಬಳಿ ಭೋಗನಹಳ್ಳಿ ಸರ್ವೆ ನಂ 89/1p, 89/p, 112/1p, 112/2 ರಲ್ಲಿ 28 ಎಕರೆಯಷ್ಟು ಜಮೀನನ್ನು ವಸತಿ ಯೋಜನೆಗಾಗಿ ಯಡ್ಡಿ ಆದರ್ಶಗೆ ಕೊಡಿಸುತ್ತಾನೆ.

ಬೆಂಗಳೂರು ಉತ್ತರ ತಾಲ್ಲೂಕಿನ ಕಮ್ಮನಹಳ್ಳಿ- 180/1, 180/2, 177/1, 179/1 ಇತ್ಯಾದಿ ಸರ್ವೆ ನಂಬರುಗಳಲ್ಲಿ ಒಟ್ಟು 24 ಎಕರೆ 6 ಗುಂಟೆ ಭೂಮಿ ವಸತಿ ಯೋಜನೆಯ ಹೆಸರಿನಲ್ಲಿ ಮತ್ತೆ ಆದರ್ಶ ಡೆವಲಪರ್ಸ್‌ಗೇ ಯಡ್ಡಿ ಕೊಡಿಸುತ್ತಾನೆ.

ಆದರ್ಶ ಡೆವಲಪರ್ಸ್‌ನ ಭೂಗಳ್ಳರು ಬೆಂಗಳೂರಿನ ವೈಟ್‌ಫೀಲ್ಡ್, ಭೋಗನಹಳ್ಳಿ ದೇವರ ಬಿಸನಹಳ್ಳಿ ಬಳಿ ನಿರ್ಮಿಸಿರುವ ತಲಾ ಐದೈದು ಕೋಟಿ ರೂ. ಬೆಲೆಯ ವಿಲ್ಲಾಗಳನ್ನು ಸರ್ಕಾರಿ ಭೂಮಿ ಕೆರೆ, ಕಾಲುವೆಗಳನ್ನೇ ಒತ್ತುವರಿ ಮಾಡಿ ಕಟ್ಟಿದ್ದಾರೆ.

ಈ ಅಕ್ರಮಗಳಿಗೆ ಯಡ್ಡಿ ಮತ್ತವನ ಬಜೆಪಿ ಸರ್ಕಾರದ ಬೆಂಗಾವಲು ಇದ್ದೇ ಇತ್ತು.

ಕಳ್ಳ ಮುಖ್ಯಮಂತ್ರಿ ಯಡ್ಡಿಯ ಹಗಲು ದರೋಡೆಯ ಸಣ್ಣ ಸ್ಯಾಂಪಲ್ ಮಾತ್ರ ಇದು. ಈ ಆರೋಪಗಳಿಗೆಲ್ಲಾ ಪಕ್ಕಾ ದಾಖಲೆಗಳಿವೆ. ಅದೀಗ ಕೋರ್ಟ್ ಮುಂದಿದೆ.

ಆದರೂ ಆರೋಪಿ ನಂಬರ್ ಒನ್ ಮುಖ್ಯಮಂತ್ರಿ ಕುರ್ಚಿ ಬಿಟ್ಟು ಅಲ್ಲಾಡುತ್ತಿಲ್ಲ. ಬಿಜೆಪಿ ಹೈಕಮಾಂಡು ಯಡ್ಡಿಯನ್ನು ಕಿತ್ತೆಸೆಯುತ್ತಿಲ್ಲ.

ಇದಕ್ಕಿಂತ ದುರಂತ ಬೇರೇನಿದೆ.

ಯಡ್ಡಿ ಭ್ರಷ್ಟಾಚಾರದ ಬಾವುಟ ಹಿಡಿದು ಕರ್ನಾಟಕ ಪೂರ್ತಿ ತಿರುಗುತ್ತಿರುವಾಗ ಈ ಬಿಜೆಪಿಗಳು ಕಾಶ್ಮೀರದಲ್ಲಿ ತ್ರಿವರ್ಣ ಧ್ವಜ ಹಾರಿಸುತ್ತೇನೆಂದು ಹೋಗುತ್ತಾರೆ.

..... ಮಾನಗೇಡಿಗಳು.

• ಪಾರ್ವತೀಶ್

...ಹ ಮಂತ್ರಿ ಅಶೋಕ್ ನೆತ್ತಿಯ ಮೇಲೆ ತೂಗು ಕತ್ತಿ

...ಖ್ಯಮಂತ್ರಿ ಯಡ್ಡಿ ವಿರುದ್ಧ ಭ್ರಷ್ಟಾಚಾರದ ಕ್ರಿಮಿನಲ್ ಕೇಸ್ ದಾಖಲಿಸಲು ಅನುಮತಿ ನೀಡಿರುವ ...ರು ಅದೇ ಆರೋಪಗಳನ್ನು ಎದುರಿಸುತ್ತಿರುವ ಗೃಹಮಂತ್ರಿ ಅಶೋಕ್ ವಿರುದ್ಧ ಪ್ರಕರಣ ದಾಖಲಿಸಲು ...ಕೆ ಅನುಮತಿ ನೀಡಿಲ್ಲ? ಇದೊಂದು ಸಂಕೀರ್ಣವಾಗಿರುವ ಕಾನೂನು ಹಾಗೂ ನಿಯಮಾವಳಿಯ ಪ್ರಶ್ನೆ. ...ಲ್ಲಾಗಿ ಹೇಳಬೇಕೆಂದರೆ ಅಶೋಕ್ ವಿರುದ್ಧ ಪ್ರಕರಣ ದಾಖಲಿಸಲು ರಾಜ್ಯ ಬಿಜೆಪಿ ಸರ್ಕಾರದ ಕ್ಯಾಬಿನೆಟ್‌ನ ...ಕಂತೆ! ಹಾಗೆಂದು ರಾಜ್ಯಪಾಲರೇ ಸೂಚಿಸಿದ್ದಾರೆ ಎನ್ನಲಾಗಿದೆ.

...ತ ಅಶೋಕ್‌ನ ವಿಚಾರವು ಸಂವಿಧಾನದ ನೀತಿ, ರಾಜ್ಯ ಕ್ಯಾಬಿನೆಟ್‌ನ ಪಾತ್ರ, ರಾಜ್ಯಪಾಲರ ಮಿತಿ, ...ೋರ್ಟಿನ ಆದೇಶಗಳು ಹಾಗೂ ಭ್ರಷ್ಟಾಚಾರ ನಿಯಂತ್ರಣ ಕಾಯ್ದೆ 1988 ರ ಅನೇಕ ಅಂಶಗಳ ಸುತ್ತಾ ... ರಾಜ್ಯವೊಂದರ ಮುಖ್ಯಮಂತ್ರಿಯನ್ನು ಮೆಜಾರಿಟಿ ಶಾಸಕರನ್ನು ಹೊಂದಿರುವ ಪಕ್ಷದ ಶಾಸಕರು ಆರಿಸುತ್ತಾರೆ. ...ಜ್ಯಪಾಲರು ಆ ವ್ಯಕ್ತಿಯನ್ನು ಮುಖ್ಯಮಂತ್ರಿ ಹುದ್ದೆ ನಿರ್ವಹಿಸಲು ಆಹ್ವಾನಿಸುತ್ತಾರೆ. ಯಾವುದೇ ಮುಖ್ಯಮಂತ್ರಿಯ ...ಭ್ರಷ್ಟಾಚಾರದ ದೂರುಗಳು ಸಾಕ್ಷಿ ಪುರಾವೇ ಸಮೇತ ರಾಜ್ಯಪಾಲರ ಗಮನಕ್ಕೆ ಬಂದಲ್ಲಿ ಅವರು ಯಾರ ...ಗೂ ಕಾಯದೆ ದೂರು ದಾಖಲಿಸಲು ಒಪ್ಪಿಗೆ ನೀಡಬಹುದು. ಹಾಗಾಗಿಯೇ ಯಡ್ಡಿ ವಿರುದ್ಧದ ವಿಚಾರಣೆಗೆ ... ಕೊಡದಂತೆ ರಾಜ್ಯ ಕ್ಯಾಬಿನೆಟ್ ನಿರ್ಣಯ ಮಾಡಿ ರಾಜ್ಯಪಾಲರಿಗೆ ಮನವಿ ಮಾಡಿದರೂ ಸಹ ರಾಜ್ಯಪಾಲರು ...ರೆ ಕೊಟ್ಟಿರಲಿಲ್ಲ.

... ಅಶೋಕ್ ವಿಚಾರಕ್ಕೆ ಬೇರೆಯದ್ದೇ ಆಯಾಮವಿದೆ. ತನ್ನ ಮಂತ್ರಿಮಂಡಲದ ಸಚಿವರನ್ನು ಆರಿಸಿ ...ವುದು ಮುಖ್ಯಮಂತ್ರಿ. ಹಾಗಾಗಿ ಅಂತಹ ಸಚಿವನೊಬ್ಬನ ಭ್ರಷ್ಟಾಚಾರದ ಬಗ್ಗೆ ದೂರುಗಳು ಮೊದಲು ...ಂತ್ರಿಯ ಬಳಿ ಹೋಗಬೇಕು, ತನಿಖೆಗೆ ಆದೇಶಿಸುವ ಬಗ್ಗೆ ಮೊದಲು ಕ್ಯಾಬಿನೆಟ್‌ನಲ್ಲಿ ನಿರ್ಧಾರವಾಗಬೇಕು ... ಭಾರದ್ವಾಜ್ ನಿಲುವಾಗಿದೆ. ಆದರೆ ವಕೀಲರಾದ ಸಿರಾಜಿನ್ ಹಾಗೂ ಬಾಲರಾಜ್ ಅಶೋಕ್ ವಿರುದ್ಧದ ... ಮುಖ್ಯಮಂತ್ರಿಗೆ ನೀಡದೆ, ಆ ನಿಯಮದ ಪ್ರಕ್ರಿಯೆ ಹಾದು ಬರದೆ ನೇರವಾಗಿ ರಾಜ್ಯಪಾಲರಿಗೇ ದೂರು ...ದು ಈ ಹಕ್ಷಣದ ತೊಡಕಾಗಿದೆ. ಒಂದು ವೇಳೆ ಇವರಿಬ್ಬರೂ ಮುಖ್ಯಮಂತ್ರಿಗೇ ದೂರು ನೀಡಿ, ಅಲ್ಲೂ ...ದೇ ಹೋದಾಗ ನಂತರ ರಾಜ್ಯಪಾಲರ ಬಳಿ ಹೋಗದಿದ್ದರೆ ಇಷ್ಟರಲ್ಲಿ ಅಶೋಕನ ವಿರುದ್ಧವೂ ಡಜನ್‌ಗಟ್ಟಲೆ ...ಸ ಕೇಸ್‌ಗಳು ಬಿದ್ದಿರುತ್ತಿದ್ದವೇನೊ.

... ಸುಪ್ರೀಂಕೋರ್ಟ್‌ನಲ್ಲಿ ಈಗಾಗಲೇ ಈ ಥರದ ಪ್ರಕರಣದಲ್ಲಿ ಏನು ಮಾಡಬೇಕೆಂಬ ತೀರ್ಪುಗಳೂ ...ಮಧ್ಯ ಪ್ರದೇಶ ಸರ್ಕಾರ V/s ಸುಪ್ರೀಂಕೋರ್ಟ್ ನಡುವೆ ನಡೆದ ಒಂದು ಪ್ರಕರಣದ ತೀರ್ಪಿನಲ್ಲಿ ಇದರ ...ವಾಗಿ ಹೇಳಲಾಗಿದೆ. ಭ್ರಷ್ಟಾಚಾರ ನಿಯಂತ್ರಣ ಕಾಯ್ದೆ 1988 ರ ನಿಯಮ 197 CRPC ಪ್ರಕಾರ ...ಗಳ ಬಗ್ಗೆ ಕಾನೂನು ಕ್ರಮಕ್ಕೆ ಆದೇಶಿಸುವ ಸ್ವತಂತ್ರ ರಾಜ್ಯಪಾಲರಿಗಿದೆ.

...ಜಿನ್ ಹಾಗೂ ಬಾಲರಾಜ್‌ರ ಪರ ವಕಾಲತ್ತು ವಹಿಸಿರುವ ವಕೀಲರಾದ ಸಿ.ಎಚ್. ಹನುಮಂತರಾಯ ...ಪ್ಪನ್‌ರವರು ರಾಜ್ಯಪಾಲರ ಬಳಿ ಇದನ್ನೇ ಪ್ರಸ್ತಾಪಿಸಿದ್ದಾರೆ. ಅಶೋಕ್ ವಿರುದ್ಧವೂ ಕ್ರಿಮಿನಲ್ ಕೇಸ್ ... ಅನುಮತಿಗೆ ಒತ್ತಾಯಿಸುತ್ತಿದ್ದಾರೆ. ಭ್ರಷ್ಟನೇ ಮುಖ್ಯಮಂತ್ರಿಯಾಗಿರುವಾಗ ಇನ್ನೊಬ್ಬ ಭ್ರಷ್ಟ ಸಚಿವನ ...ಕರಣ ದಾಖಲಿಸಲು ಒಪ್ಪಿಗೆ ನೀಡುವನೆಂದು ನಿರೀಕ್ಷಿಸುವುದಾದರೂ ಹೇಗೆ ಸಾಧ್ಯ?

ಅಶೋಕನಿಗೇನು ಹೆಚ್ಚು ದಿನ ಕಾಯಬೇಕಾಗಿಲ್ಲ, ಅವನ ತಲೆಯ ಮೇಲೆ ತೂಗುತ್ತಿರುವ ಕತ್ತಿಯು ಯಾವ ...ದರೂ ರುಂಡ ಹಾರಿಸುವ ಸಾಧ್ಯತೆಯಿದೆ.

ಆದರ್ಶ ಡೆವಲಪರ್ಸ್

ಬಿಳಿದಾಳೆ ಜಯಶಂಕರನ ವಂಚಕ ಪುರಾಣ

ಬಿ.ಎಂ. ಜಯಶಂಕರ ಅಲಿಯಾಸ್ ಬಿಳಿದಾಳೆ ಮಾದಯ್ಯನ ಮಗ ಜಯಶಂಕರ ಬಹುಶಃ ಕರ್ನಾಟಕ ಕಂಡ ನಟೋರಿಯಸ್ ಭೂಗಳ್ಳರಲ್ಲಿ ಒಬ್ಬ. ವಕೀಲರಾದ ಸಿರಾಜಿನ್ ಹಾಗೂ ಬಾಲರಾಜ್ ಯಡಿಯೂರಪ್ಪನ ವಿರುದ್ಧ ದಾಖಲಿಸುತ್ತಿರುವ ಭ್ರಷ್ಟಾಚಾರದ ಕೇಸುಗಳಲ್ಲಿ ಒಂದು ವೇಳೆ ಯಡ್ಡಿ ಜೈಲಿಗೆ ಹೋದರೆ ಅದಕ್ಕೆ ಈ ಜಯಶಂಕರನೇ ಅರ್ಧ ಕಾರಣವಾಗುತ್ತಾನೆ.

ತುಮಕೂರಿನ ಸಿದ್ಧಗಂಗಾ ಮಠದಲ್ಲಿದ್ದುಕೊಂಡು ಇಂಜಿನಿಯರಿಂಗ್ ಓದಿದ ಜಯಶಂಕರ ಸಾವಿರದೊಂಭೈನೂರಾ ಎಂಭತ್ತರ ದಶಕದಲ್ಲಿ ಬೆಂಗಳೂರು ಜಲಮಂಡಳಿಯಲ್ಲಿ ಕೆಲವು ವರ್ಷ ಕೆಲಸ ಮಾಡಿಕೊಂಡಿದ್ದ. ಅಲ್ಲಿ ಒಂದು ಸಾರಿ ಅವಕಾಶ ಸಿಕ್ಕಾಗ ಒಂದೇ ಸಾರಿ ಹದಿನೈದು ಲಕ್ಷ ರೂಪಾಯಿಯಷ್ಟು ಸರ್ಕಾರಿ ಹಣ ಕದ್ದು, ಅದರ ತನಿಖೆಯಾಗುವ ಮೊದಲೇ ಕೆಲಸ ಬಿಟ್ಟು ತಪ್ಪಿಸಿಕೊಂಡುಬಿಟ್ಟ. ಅಷ್ಟರಲ್ಲಿ ಜಯಶಂಕರ ದಾವಣಗೆರೆಯ ಆಗರ್ಭ ಶ್ರೀಮಂತರಾದ ಗರಡಿ ಮನೆತನದ ಸುಧಾ ಎಂಬಾಕೆಯನ್ನು ಮದುವೆಯಾಗಿದ್ದ. ಈ ಸುಧಾ ಎಂಬಾಕೆಯ ತಂಗಿಯ ಗಂಡ ರವಿಕುಮಾರ್ ಕೂಡ ಪ್ರಳಯಾಂತಕನಾಗಿದ್ದ.


ಸರ್ಕಾರಿ ಹಣ ಕದ್ದು ತಲೆ ತಪ್ಪಿಸಿಕೊಂಡ ಜಯಶಂಕರ ತಾನು ಕದ್ದ ಹಣವನ್ನೇ ಮೂಲ ಬಂಡವಾಳ ಮಾಡಿಕೊಂಡು 1988 ರಲ್ಲಿ ಬೆಂಗಳೂರಿನ ಕೆ.ಆರ್. ರಸ್ತೆಯಲ್ಲಿ ಗರಡಿ ಅಪಾರ್ಟ್‌ಮೆಂಟ್ ಕಟ್ಟಿದ. ಆದರ್ಶ ಡವಲಪರ್ಸ್ ಸಂಸ್ಥೆಯ ಮೊದಲ ಪ್ರಾಜೆಕ್ಟ್ ಅದು. ಈ ಪ್ರಾಜೆಕ್ಟ್‌ನಲ್ಲಿ ಕೊಂಚ ಕಾಸು ಮಾಡಿಕೊಂಡ ಜಯಶಂಕರ ಬೆಂಗಳೂರು ಸುತ್ತಮುತ್ತ ಅಪಾರ್ಟ್‌ಮೆಂಟ್ ಕಟ್ಟಡಗಳ ನಿರ್ಮಾಣ ಮುಂದುವರೆಸಿದ. ಕುಮಾರಸ್ವಾಮಿ ಲೇಔಟ್, ಕನಕಪುರ ರಸ್ತೆ ವೈಟ್‌ಫೀಲ್ಡ್, ಬನ್ನೇರುಘಟ್ಟ ರಸ್ತೆ ಹೀಗೆ ಒಂದರ ಹಿಂದೆ ಒಂದರಂತೆ ಆದರ್ಶ ಡವಲಪರ್ಸ್‌ನ ಪ್ರಾಜೆಕ್ಟುಗಳು ತಲೆ ಎತ್ತಿದವು.

ತೊಂಭತ್ತರ ದಶಕದಲ್ಲಿ ಬೆಂಗಳೂರಿಗೆ ಅನ್ಯ ರಾಜ್ಯಗಳಿಂದ ವಲಸೆ ಬರುತ್ತಿದ್ದ ಅಪ್ಪರ್ ಮಿಡಲ್ ಕ್ಲಾಸ್‌ನವರ ಸಂಖ್ಯೆ ಜಾಸ್ತಿಯಾಗುತ್ತಿತ್ತು. ಜಾಗತೀಕರಣ, ಖಾಸಗೀಕರಣದ ಆರ್ಥಿಕ ನೀತಿಗಳು ಉದ್ಘಾಟನೆಯಾಗುತ್ತಿದ್ದ ಕಾಲ ಅದು. ಇಂಥವರಿಗೆಲ್ಲಾ ಫ್ಲಾಟ್ ಖರೀದಿಸಿ ಇಲ್ಲೇ ನೆಲೆಸುವುದು ಸಲೀಸಾದ ಕೆಲಸವಾಗಿತ್ತು. ಆ ಅವಕಾಶವನ್ನು ಚೆನ್ನಾಗಿ ಬಳಸಿಕೊಂಡ ಜಯಶಂಕರ ಬೃಹತ್ ಕೈಗಾರಿಕಾ ಸಚಿವನಾಗಿದ್ದ ಆರ್.ವಿ. ದೇಶಪಾಂಡೆಯ ಸಖ್ಯ ಬೆಳೆಸಿಕೊಂಡ. ಜನತಾದಳದ ಮುಖ್ಯಮಂತ್ರಿ ಜೆ.ಎಚ್. ಪಟೇಲ್ ಹಾಗೂ ಕಾಂಗ್ರೆಸ್ ಮುಖ್ಯಮಂತ್ರಿ ಎಸ್.ಎಂ. ಕೃಷ್ಣ ಇಬ್ಬರ ಕಾಲಾವಧಿಯಲ್ಲೂ ಇದೇ ದೇಶಪಾಂಡೆ ಬೃಹತ್ ಕೈಗಾರಿಕಾ ಸಚಿವನಾಗಿ ಲೂಟಿ ಹೊಡೆಯಲು ಶುರುಮಾಡಿದ್ದ.

ಬೆಂಗಳೂರಿನ ಹೊರವಲಯಗಳಲ್ಲಿ ಕೈಗಾರಿಕಾ ಉದ್ದೇಶದ ನೆಪ ತೋರಿಸಿ ಅಮಾಯಕ ರೈತರ ಭೂಮಿ ಕಿತ್ತು ಜಯಶಂಕರನಂತಹ ರಿಯಲ್ ಎಸ್ಟೇಟ್ ಕಳ್ಳರ ಕೈಗೆ ದಾಟಿಸುವ ದಂಧೆಯಲ್ಲಿ ದೇಶಪಾಂಡೆ ಪಳಗಿದ. ಆದರ್ಶ ಡವಲಪರ್ಸ್, ಪುರುವಂಕರ, ದಯಾನಂದ ಪೈ, ಮಂತ್ರಿ ಡವಲಪರ್ಸ್ ಮುಂತಾದ ಭೂಗಳ್ಳರೆಲ್ಲಾ ಸಿಂಗಲ್ ವಿಂಡೋ ಸಿಸ್ಟಂ ಮೂಲಕ ಸಾವಿರಾರು ಎಕರೆ ಭೂಮಿ ಕದ್ದರು. ಇವರೆಲ್ಲರಿಂದ ಕೈತುಂಬಾ ಕಮಿಷನ್ ಕಿತ್ತ ದೇಶಪಾಂಡೆ ನೂರಾರು ಕೋಟಿ ಕಮಾಯಿಸಿಕೊಂಡ. ಒಂದು ಹಂತದಲ್ಲಿ ಜಯಶಂಕರ ತನ್ನ ಆದರ್ಶ ಡವಲಪರ್ಸ್ ಬಗ್ಗೆ ಹೇಳಿಕೊಳ್ಳುತ್ತಾ 'ಒಂದು ಸಾವಿರ ಎಕರೆ **land bank** ಇರುವ ಕಂಪನಿ ತನ್ನದು ಎಂದಿದ್ದ. ಇವನಿಗೆ ಈಗಲೂ ಬೆಂಗಳೂರು, ಹೈದರಾಬಾದ್ ಹಾಗೂ ಗೋವಾದಲ್ಲಿ ಸಾವಿರಾರು ಎಕರೆ ಜಮೀನಿದೆ.

ಆದರ್ಶ ಡವಲಪರ್ಸ್ ಕೊಬ್ಬಿ ಬೆಳೆಯುತ್ತಿದ್ದಂತೆ ತನ್ನ ಹೆಂಡತಿ ಸುಧಾ, ತಮ್ಮ ಬಿ.ಎಂ. ಕರುಣೇಶ್ ಹಾಗೂ ಷಡ್ಡಕ ರವಿಕುಮಾರ್‌ನನ್ನು ಕಂಪನಿಯ ನಿರ್ದೇಶಕರಾಗಿ ತಂದು ಕೂರಿಸಿಕೊಂಡ ಜಯಶಂಕರ್. ಇವನ ಏಕೈಕ ಸುಪುತ್ರ ನಿಶ್ಚಯ್ ಜಯಶಂಕರ್ ಆಸ್ಟ್ರೇಲಿಯಾದ ಬಾಂಡ್ ಯೂನಿವರ್ಸಿಟಿಯಲ್ಲಿ ಮ್ಯಾನೇಜ್‌ಮೆಂಟ್ ಕೋರ್ಸ್ ಓದಿ ಬಂದಿದ್ದಾನೆ. ಈ ನಿಶ್ಚಯ್ ಕೂಡ ಈಗ ಆದರ್ಶ ಗ್ರೂಪ್‌ನ ಡೈರೆಕ್ಟರ್ ಆಗಿದ್ದಾನೆ.

ಕುಮಾರಸ್ವಾಮಿ ಮುಖ್ಯಮಂತ್ರಿಯಾಗಿದ್ದಾಗ ಜಯಶಂಕರನ ಭೂಗಳ್ಳತನಕ್ಕೆ ಹೆಚ್ಚು ಅವಕಾಶ ಸಿಗಲಿಲ್ಲ. ಆದರೆ ಆಗ ಉಪಮುಖ್ಯಮಂತ್ರಿಯಾಗಿದ್ದ ಯಡ್ಡಿ ಜೊತೆ ಅವನು ಸಖ್ಯ ಬೆಳೆಸಿಕೊಂಡ. ಸಿದ್ಧಗಂಗಾ ಮಠದ ವಿದ್ಯಾರ್ಥಿಯಾಗಿದ್ದ ಜಯಶಂಕರನಿಗೆ ಶಿವಕುಮಾರ ಸ್ವಾಮಿಗಳ ಜೊತೆಗೂ ನಂಟಿತ್ತು. ನಂತರ ಯಡ್ಡಿ ಚುನಾವಣೆ ಗೆಲ್ಲಲು, ಲಿಂಗಾಯತರ ಜಾತಿ ಬೆಂಬಲ ಗಳಿಸಿಕೊಂಡು ಮುಖ್ಯಮಂತ್ರಿ ಕುರ್ಚಿ ಏರಲು, ಪಡೆದ ಕುರ್ಚಿ ಉಳಿಸಿಕೊಳ್ಳಲು ಶಿವಕುಮಾರನ ಸ್ವಾಮಿ ಬೆಂಗಾವಲಾಗಿ ನಿಂತುಬಿಟ್ಟರು. ಹೀಗೆ ಯಡ್ಡಿ ಹಾಗೂ ಸಿದ್ಧಗಂಗಾ ಮಠದ ನಡುವೆ ನಂಟು ಕುದುರಿಸಿಕೊಟ್ಟವನೇ ಜಯಶಂಕರ್. ಇದೊಂದು ರೀತಿಯ ಲಿಂಗಾಯತರ **tri party syndicate** ನಂತೆ ಇತ್ತು. ಒಬ್ಬ ಬಲಿಷ್ಠ ರಾಜಕಾರಣಿ, ಇನ್ನೊಬ್ಬ ಶ್ರೀಮಂತ ರಿಯಲ್ ಎಸ್ಟೇಟ್ ಉದ್ಯಮಿ, ಮತ್ತೊಬ್ಬ ಪ್ರಭಾವಶಾಲಿ ಮಠಾಧೀಶ.



ಈ ಮೂವರೂ ಲಿಂಗಾಯತರು ಒಂದು ಗುಂಪಾಗಿ ಕೆಲಸ ಮಾಡುತ್ತಾ ಒಬ್ಬರಿಂದ ಮತ್ತೊಬ್ಬರು ಲಾಭ ಮಾಡಿಕೊಂಡು ದುಂಡಗಾಗುತ್ತಾ ಹೋದರು.

ಯಡ್ಡಿಗೆ ಭೂಗಳ್ಳತನ, ಡಿ ನೋಟಿಫಿಕೇಶನ್ ದಂಧೆಯನ್ನು, ಅವರ ಲಾಭವನ್ನು ಜಯಶಂಕರ್ ಕಲಿಸಿಕೊಟ್ಟ. ಜಯಶಂಕರನ ಮೂಲಕ ರಿಯಲ್ ಎಸ್ಟೇಟ್ ಕಂಪನಿಗಳನ್ನು ಸ್ಥಾಪಿಸುವ, ಕದ್ದ ಹಣವನ್ನು ಯಾವ್ಯಾವ ದಿಕ್ಕಿಗೆ ಸಾಗಿಸಬೇಕೆಂಬ ಚೋರವಿದ್ಯೆಯನ್ನು ಯಡ್ಡಿ ಅಂಡ್ ಸನ್ಸ್ ಕಲಿತರು. ಈ ಚೋರಗುರು-ಚಂಡಾಲ ಶಿಷ್ಯರ ಉದ್ಯಮ ಸಾಮ್ರಾಜ್ಯ ಹಾಗೂ ರಾಜಕೀಯ ಅಧಿಕಾರವನ್ನು ಉಳಿಸಲು ಅನೈತಿಕ ಮಾರ್ಗ ಹಿಡಿಯುವ ಕೆಟ್ಟ ವಿದ್ಯೆಯನ್ನು ಶಿವಕುಮಾರ ಸ್ವಾಮಿಗಳು ಕಲಿತರು. ಅದರ ಪ್ರತಿಫಲವಾಗಿಯೇ ಶಿವಕುಮಾರ ಸ್ವಾಮಿ 'ಕರ್ನಾಟಕ ರತ್ನ' ಆದರು. ಸಿದ್ಧಗಂಗಾ ಮಠಕ್ಕೆ ಸರ್ಕಾರದಿಂದ ಹತ್ತಾರು ಕೋಟಿ ರೂಪಾಯಿಗಳ ಅನುದಾನವನ್ನು ಲಪಟಾಯಿಸಿಕೊಂಡರು.

ಈ ಶಿವಕುಮಾರ್ ಸ್ವಾಮಿ ಯಡ್ಡಿಗೆ ಆಪತ್ತು ಬಂದಾಗೆಲ್ಲಾ ರಕ್ಷಣೆಗೆ ಬಂದು ನಿಲ್ಲುತ್ತಿದ್ದರಲ್ಲವೆ?


ಈಗ ಯಡ್ಡಿಯ ಕಳ್ಳತನಗಳೆಲ್ಲಾ ಜಗಜ್ಜಾಹೀರಾಗುತ್ತಿದೆ. ಆದರೂ ಸಾರ್ವಜನಿಕ ಹಾಗೂ ಕರ್ನಾಟಕದ ಹಿತದೃಷ್ಟಿಯಿಂದ ಯಡ್ಡಿ ವಿರುದ್ಧ ಶಿವಕುಮಾರಸ್ವಾಮಿ ಒಂದೇ ಒಂದು ಹೇಳಿಕೆಯನ್ನು ನೀಡುತ್ತಿಲ್ಲವೇಕೆ?

ಈ ಪ್ರಶ್ನೆಗೆ ಉತ್ತರ ಈ ಮೂವರ ಮಧ್ಯದ ನಂಟಿನಲ್ಲೇ ಇವೆ.

ಯಡ್ಡಿ ಫ್ಯಾಮಿಲಿಗೂ ಆದರ್ಶ ಕಂಪನಿಯ ಜಯಶಂಕರನಿಗೂ ಬ್ಯುಸಿನೆಸ್ ನಂಟು ಬೆಳೆದು ಗಟ್ಟಿಯಾಗುತ್ತಿದ್ದಂತೆ ಈ ಖದೀಮರಿಬ್ಬರೂ ಸೇರಿಕೊಂಡು ಆಕರ್ಷ ಡವಲಪರ್ಸ್ ಎನ್ನುವ ಕಂಪೆನಿ ಹುಟ್ಟುಹಾಕಿ ಬೆಂಗಳೂರು, ಶಿವಮೊಗ್ಗದಲ್ಲೆಲ್ಲಾ ರಿಯಲ್ ಎಸ್ಟೇಟ್ ದಂಧೆಗೆ ಕೈ ಹಾಕಿದರು. ಕೋಟ್ಯಂತರ ರೂಪಾಯಿ ಹಣ ಆದರ್ಶ ಡವಲಪರ್ಸ್, ದವಳಗಿರಿ ಪ್ರಾಪರ್ಟೀಸ್ ಹಾಗೂ ಆಕರ್ಷ ಡವಲಪರ್ಸ್ ನಡುವೆ ಕೈ ಬದಲಾಗಿ ಹರಿದಾಡಿತು. ಈ ಡೀಲ್‌ಗಳ ಒಂದು ಭಾಗವಾಗಿಯೇ ಸಚಿವೆ ಶೋಭಾ ಕರಂದ್ಲಾಜೆಯ ಕೊಡಗಿನಲ್ಲಿ 166 ಎಕರೆಯ ಕಾಫಿ ಎಸ್ಟೇಟ್ ಖರೀದಿಸಿದಳು. ಕಳೆದ ಒಂದೂವರೆ ವರ್ಷದಲ್ಲಿ ಯಡ್ಡಿ ಅಂಡ್ ಸನ್ಸ್ ಹಾಗೂ ಜಯಶಂಕರ್ ಅಂಡ್ ಫ್ಯಾಮಿಲಿಯ ಲಿಂಗವಂತರು ಸೇರಿಕೊಂಡು ಅರ್ಧ ಡಜನ್‌ಗೂ ಹೆಚ್ಚು ಪಾಲುದಾರಿಕೆ ಕಂಪನಿಗಳನ್ನು ಹುಟ್ಟು ಹಾಕಿದ್ದಾರೆ. ಆಕರ್ಷ್ ಪ್ರಾಪರ್ಟೀಸ್, ಆಕರ್ಷ್ ಇನ್‌ಫ್ರೋಟೆಕ್ ಅಂಡ್ ಇನ್‌ಫ್ರಾಸ್ಟ್ರಕ್ಚರ್ಸ್ ಪ್ರೈ ಲಿ. ಆಕರ್ಷ್ ರಿಯಾಲ್ಟಿ ಪ್ರೈ. ಲಿ. ಮೆಸರ್ಸ್ ಆರ್ಕಿಡ್ಸ್ ಅಪಾರ್ಟ್‌ಮೆಂಟ್ಸ್ ಪ್ರೈ. ಲಿ, ಆದರ್ಶ ಪ್ರೈಂ ಪ್ರಾಜೆಕ್ಟ್ ಪ್ರೈ. ಲಿ ಹೀಗೆ ಚಾಂಪಿಯನ್ ಬ್ಯುಸಿನೆಸ್‌ಮನ್‌ಗಳ ರೀತಿ ಒಂದರಹಿಂದೆ ಒಂದರಂತೆ ಜಂಟಿ ಕಂಪನಿಗಳನ್ನು ತೇಲಿಬಿಟ್ಟು ಸರ್ಕಾರಿ ಖಜಾನೆಗೆ ಕನ್ನ ಕೊರೆದು ತಮ್ಮ ಆಸ್ತಿ ವ್ಯವಹಾರ ಬೆಳೆಸಿಕೊಂಡಿದ್ದಾರೆ.

ಮತ್ತೊಂದೆಡೆ ಈ ಜಯಶಂಕರ್ ಎಂಥ ಖದೀಮನೆಂದರೆ ತನ್ನ ಅಪಾರ್ಟ್‌ಮೆಂಟ್ ಕಟ್ಟಡಗಳು, ವಿಲ್ಲಾಗಳ ನಿರ್ಮಾಣ ಕೆಲಸದ, ವಿದ್ಯುತ್ ಗುತ್ತಿಗೆದಾರ, ಮರಳು, ಕಬ್ಬಿಣ, ಸಿಮೆಂಟ್ ಸರಬರಾಜು ಮಾಡಿದ ನೂರಾರು ಜನರಿಗೆ ಕೊಡಬೇಕಿದ್ದ ಹಣವನ್ನೇ ಕೊಡದೆ ಕೈ ಎತ್ತಿದ್ದಾನೆ. ಇದೆಲ್ಲದರ ಮೊತ್ತವೇ ಹಲವಾರು ಕೋಟಿ ರೂಪಾಯಿಗಳಷ್ಟಿದೆ. ಹಣ ವಸೂಲಿ ಮಾಡಿಕೊಳ್ಳಲು ಕೆಲವು ಗುತ್ತಿಗೆದಾರರು ಈಗ ಕೋರ್ಟ್ ಮೆಟ್ಟಿಲೇರಿದ್ದಾರೆ.

ಭ್ರಷ್ಟಾಚಾರದ ಆರೋಪದಡಿ ನಾಳೆ ಯಡ್ಡಿ ಜೈಲಿಗೆ ಹೋಗಬೇಕಾದ ಪರಿಸ್ಥಿತಿ ಬಂದರೆ ಆದರ್ಶ ಜಯಶಂಕರನೂ ಜೊತೆಗೇ ಜೈಲಿಗೆ ಹೋಗಬೇಕಾಗುತ್ತದೆ.



ಸಿರಾಜಿನ್ ಭಾಷಾ ಮತ್ತು ಬಾಲರಾಜ್ ಸಂದರ್ಶನ

"ಭ್ರಷ್ಟಾಚಾರದ ವಿರುದ್ಧ ಹೋರಾಟವೇ ನಮ್ಮ ಗುರಿ"

ಈಗ ಇಡೀ ದೇಶದ ಗಮನ ಸೆಳೆದುಕೊಂಡಿರುವ ಶಿವಮೊಗ್ಗದ ವಕೀಲರಾದ ಸಿರಾಜಿನ್ ಭಾಷಾ ಹಾಗೂ ಬಾಲರಾಜ್ ಅತೀ ಸರಳ ನಡವಳಿಕೆಯವರು. ಬೆಂಗಳೂರಿನ ಶೇಷಾದ್ರಿಪುರಂನ ಲಿಂಕ್ ರಸ್ತೆ ಹಾದು ಮುಂದಕ್ಕೆ ಸಾಗಿದರೆ ಅವರ ಪುಟ್ಟ ಆಫೀಸು. ಹೊರಗಡೆ 'ಜಸ್ಟೀಸ್ ಲಾಯರ್ಸ್' ಎನ್ನುವ ಬೋರ್ಡೊಂದಿದೆ. ಅವರ ಕಚೇರಿಯ ಎಡಭಾಗಕ್ಕೆ ಫೋರ್ಟಿಸ್ ಆಸ್ಪತ್ರೆಯೂ, ಬಲಭಾಗದ ಅನತಿ ದೂರದಲ್ಲಿ ಭೂಮಾಫಿಯಾಗಳಿಂದ ಕೊಲೆಯಾದ ಬಿಲ್ಡರ್ ಸುಬ್ಬರಾಜನ ಬೃಹತ್ ಕಟ್ಟಡಗಳಿವೆ. ಹೈಕೋರ್ಟ್‌ನಲ್ಲಿ ಪ್ರಾಕ್ಟೀಸ್ ಮಾಡಬೇಕೆಂದು ಈಗ್ಗೆ ಒಂದೂವರೆ ವರ್ಷದ ಹಿಂದೆ ಸಿರಾಜಿನ್ ಹಾಗೂ ಬಾಲರಾಜ್ ಬೆಂಗಳೂರಿಗೆ ಬಂದರು.

ಇವರಿಬ್ಬರ ಹಿನ್ನೆಲೆ ಹಾಗೂ ಗೆಳೆತನ ಇಂತಿದೆ.

ತೀರ್ಥಹಳ್ಳಿ ಇವರಿಬ್ಬರ ಹುಟ್ಟೂರು. ಸಿರಾಜಿನ್ ಭಾಷಾರ ತಂದೆ ಅಬ್ದುಲ್ ರಜಾಕ್ ಆ ಪ್ರಾಂತ್ಯದ ಹೆಸರುವಾಸಿ ಕೃಷಿಕರಾಗಿದ್ದರು. ಜೊತೆಗೆ ಪ್ರಸಿದ್ಧ ಸಮಾಜವಾದಿ ಹೋರಾಟಗಾರ ಶಾಂತವೇರಿ ಗೋಪಾಲಗೌಡರ ಸ್ನೇಹ ಒಡನಾಟವೂ ರಜಾಕರಿಗಿತ್ತು. ಹಾಗೆ ನೋಡಿದರೆ ಸಿರಾಜಿನ್ ಮತ್ತವರ ಸೋದರರಾದ ಮನ್ಸೂರ್, ಮಕ್ಬೂಲ್ ಎಲ್ಲರೂ ಗೋಪಾಲಗೌಡರ ವ್ಯಕ್ತಿತ್ವದಿಂದ ಪ್ರಭಾವಿತರಾದವರೆ. ಸಿರಾಜಿನರ ಅಣ್ಣ ಮನ್ಸೂರ್ ಈಗ್ಗೆ ಇಪ್ಪತ್ತು ವರ್ಷಗಳ ಹಿಂದೆಯೇ ಅಂತರ್‌ಧರ್ಮೀಯ ಮದುವೆಯಾಗುವಾಗ ಶಿವಮೊಗ್ಗದಲ್ಲಿ ಚೆಡ್ಡಿಗಳು ಗದ್ದಲವೆಬ್ಬಿಸಿದ್ದರು. ಮನ್ಸೂರ್ ಈಗ ಕರ್ನಾಟಕದ ಹೆಸರುವಾಸಿ ಚಾರ್ಟರ್ಡ್ ಅಕೌಂಟ್‌ಗಳಲ್ಲೊಬ್ಬರು. ಸಿರಾಜಿನ್‌ರ ಇನ್ನೊಬ್ಬ ಅಣ್ಣ ಮಕ್ಬೂಲ್ ಸಹ ಮರಾಠ ಮಹಿಳೆಯನ್ನು ಮದುವೆಯಾಗಿ ಮುಂಬೈನಲ್ಲಿದ್ದಾರೆ.

ತೀರ್ಥಹಳ್ಳಿಯಲ್ಲಿ ಪದವಿ ಓದಿದ ಸಿರಾಜಿನ್ ಹಾಗೂ ಬಾಲರಾಜ್ 1982ರ ವೇಳೆಗೆ ಲಾ ಓದಲು ಶಿವಮೊಗ್ಗಕ್ಕೆ ಬಂದಾಗ ಮಿತ್ರರಾದರು. ಲಾ ಓದಿದ ನಂತರ ಸಿರಾಜಿನ್ ಎಡಪಂಥೀಯ ಜನಪರ ಹೋರಾಟಗಳಲ್ಲಿ ಸಕ್ರಿಯರಾದರು. ಅವರಿಗೆ ರಂಗಕರ್ಮಿ ಸಿಜಿಕೆ ಹಾಗೂ ಸಮುದಾಯ ತಂಡದೊಂದಿಗೆ ಒಡನಾಟವೂ ಇತ್ತು. ನಂತರ ವಡ್ಡರ್ಸೆ ರಘುರಾಮ ಶೆಟ್ಟರ 'ಮುಂಗಾರು' ದಿನ ಪತ್ರಿಕಾ ತಂಡ ಸೇರಿದ ಸಿರಾಜಿನ್ ಇಡೀ ಮಲೆನಾಡಿನ ತುಂಬಾ ಓಡಾಡಿ 'ಮುಂಗಾರು'ಗಾಗಿ ದುಡಿದರು. ಆ ನಂತರವೇ ಅವರು ಫುಲ್‌ಟೈಂ ಲಾಯರ್ ಆಗಿ ಶಿವಮೊಗ್ಗದಲ್ಲಿ ಕೆಲಸ ಆರಂಭಿಸಿದ್ದು.

ಮತ್ತೊಂದೆಡೆ ಲಾ ಮುಗಿಸಿದ ಬಾಲರಾಜ್ ರೈತಸಂಘದ ಒಡನಾಟದಲ್ಲಿದ್ದರು. ಸ್ವತಃ ಎನ್.ಆರ್.ಪುರ ತಾಲ್ಲೂಕು ರೈತ ಸಂಘದ ಅಧ್ಯಕ್ಷರಾಗಿ ಪ್ರೊ. ಎಂ.ಡಿ.ನಂಜುಂಡಸ್ವಾಮಿಯವರೊಂದಿಗೂ ವರ್ಷಾನುಗಟ್ಟಲೆ ಓಡಾಡಿದರು. ರೈತ ಸಂಘಟನೆಯ ಹಿರಿಯ ನಾಯಕರಾಗಿದ್ದ ರುದ್ರಪ್ಪ, ಸುಂದರೇಶ್ ಎಲ್ಲರೂ ಬಾಲರಾಜ್‌ಗೆ ಪರಿಚಿತರೇ ಆಗಿದ್ದರು.

ಬಡವರ, ದಮನಿತರ ಪರ ಕೇಸ್‌ಗಳನ್ನು ನಡೆಸುತ್ತಾ ಅಸಹಾಯಕ ಜನರಿಂದ ಹಣವನ್ನೇ ಪಡೆಯದೇ ವಾದಿಸುತ್ತಿದ್ದ ಸಿರಾಜಿನ-ಬಾಲರಾಜ್ ಜೋಡಿ ಶಿವಮೊಗ್ಗೆಯಲ್ಲಿ 'ಲವ-ಕುಶ' ಎಂದೇ ಫೇಮಸ್ ಆಗಿದ್ದಾರೆ.

ಅಪಾರವಾದ ಓದು, ಸಾಮಾಜಿಕ ಕಾಳಜಿಗಳು ಹಾಗೂ ಸರಳತೆ ಇವರಿಬ್ಬರ ವ್ಯಕ್ತಿತ್ವದಲ್ಲಿ ಎದ್ದು ಕಾಣುವ ಅಂಶಗಳು. ಇವೆಲ್ಲಾ ಒಬ್ಬರಲ್ಲಿರುವಾಗ ಸಹಜವಾಗಿಯೇ ಇನ್ನೊಂದು ಅದರಲ್ಲಿ ಸೇರುತ್ತದೆ.

ಅದು ದಿಟ್ಟತನ.

ಆಳುವ ಪಕ್ಷದ ಮುಖ್ಯಮಂತ್ರಿಯನ್ನೇ ಎದುರು ಹಾಕಿಕೊಳ್ಳುವುದೆಂದರೆ ಇಡೀ ಸರ್ಕಾರ, ಪೊಲೀಸು, ಆಡಳಿತ ಯಂತ್ರದ ವಿರೋಧ ಕಟ್ಟಿಕೊಂಡಂತೆಯೇ ಲೆಕ್ಕ. ಯಡಿಯೂರಪ್ಪ ಕಳ್ಳ-ಸುಳ್ಳನೆಂಬುದು ಬೇರೆ ಮಾತು ಬಿಡಿ. ಆದರೂ ಇವತ್ತಿಗೂ ಇಡೀ ಕರ್ನಾಟಕ ರಾಜ್ಯದ ಅತ್ಯಂತ ಶಕ್ತಿಶಾಲಿ ಮನುಷ್ಯ ಆತ. ಅಂತವನನ್ನೇ ಕೋರ್ಟಿನ ಕಟಕಟೆಗೆ ತಂದು ನಿಲ್ಲಿಸಲು ತಯಾರಾಗುವವರಿಗೆ ಅಪಾರ ಧೈರ್ಯ ಮತ್ತು ಸಿದ್ಧತೆ ಬೇಕೇ ಬೇಕಾಗುತ್ತದೆ.

ಅಂತಹ ಧೈರ್ಯ ಪ್ರದರ್ಶಿಸಿರುವ ಲವ-ಕುಶರ ಹತ್ತಡಿ ಉದ್ದಗಲದ ಚಿಕ್ಕ ಆಫೀಸ್‌ನಲ್ಲಿ 'ಲಂಕೇಶ್' ನಡೆಸಿದ ಮಾತುಕತೆ ಇಲ್ಲಿದೆ...

ಲಂಕೇಶ್ : ನೀವಿಬ್ಬರೂ ಬೆಂಗಳೂರಿಗೆ ಬಂದಿದ್ದು ಯಾವಾಗ, ಯಾಕೆ?

- ಒಂದೂವರೆ ವರ್ಷ ಆಯಿತು. ಹೈಕೋರ್ಟ್‌ನಲ್ಲಿ ಕೆಲಸ ಮಾಡುವ ಉದ್ದೇಶದಿಂದ ಶಿವಮೊಗ್ಗ ಬಿಟ್ಟು ಬಂದೆವು.

ಲಂಕೇಶ್ : ನಿಮ್ಮ ಜಸ್ಟೀಸ್ ಲಾಯರ್ಸ್ ಒಂದು ವಕೀಲರ ಸಂಘಟನೆಯಾ?

-(ನಗುತಾ) ಖಂಡಿತಾ ಅಲ್ಲ. ನಮ್ಮದು ಜಸ್ಟೀಸ್ ಲಾಯರ್ಸ್ ಫೋರಂ ಆಗಲಿ ಫರ್ಮ್ ಆಗಲಿ ಅಲ್ಲ. ನಾವು ಬರೀ ಜಸ್ಟೀಸ್ ಲಾಯರ್ಸ್ ಅಷ್ಟೆ.

ಲಂಕೇಶ್ : ರಾಜ್ಯಪಾಲ ಭಾರದ್ವಾಜ್‌ರನ್ನು ಇದುವರೆಗೂ ಎಷ್ಟು ಬಾರಿ ಭೇಟಿಯಾಗಿದ್ದೀರಿ?

-ಒಂದು ಸಾರಿಯೂ ಇಲ್ಲ.

ಲಂಕೇಶ್ : ಅಂದರೆ!

-ನೋಡಿ ನಾವು ಏನಿದ್ದರೂ ರಾಜ್ಯಪಾಲರ ಕಾರ್ಯದರ್ಶಿಯನ್ನು ಭೇಟಿಯಾಗಿದ್ದೀವಿ ಅಷ್ಟೆ. ಮನವಿ ದಾಖಲೆ ಕೊಡುವಾಗ, ಅನುಮತಿ ಕೇಳುವಾಗಲೂ ಕಾರ್ಯದರ್ಶಿಯೊಂದಿಗೇ ಭೇಟಿಯಾಯಿತೇ ವಿನಃ ನೇರವಾಗಿ ರಾಜ್ಯಪಾಲರ ಜೊತೆ ಭೇಟಿ ಮಾತುಕತೆ ನಡೆಯಲೇ ಇಲ್ಲ.

ಲಂಕೇಶ್ : ಸರ್ಕಾರದ ಹಗರಣಗಳ ಬಗ್ಗೆ ಈಗ ಲೋಕಾಯುಕ್ತರಿಂದ ತನಿಖೆ ಆಗುತ್ತಿದೆ. ಹಾಗಿದ್ದರೂ ನೀವ್ಯಾಕೆ ರಾಜ್ಯಪಾಲರ ಹತ್ತಿರ ದೂರು ನೀಡಿ ಪ್ರಕರಣ ದಾಖಲಿಸಲು ಅನುಮತಿ ಕೇಳಿದ್ದೀರಿ?

-(ನಿರುದ್ವೇಗದಿಂದ ಆದರೆ ದೃಢವಾದ ಧ್ವನಿಯಲ್ಲಿ) ನೋಡಿ **Lokayukta Act is entirely different from prevention of corruption Act.)**

ಲಂಕೇಶ್ : ಇರಬಹುದು. ಆದರೆ ನೀವು ದೂರನ್ನು ದಾಖಲೆ ಸಹಿತ ಲೋಕಾಯುಕ್ತರಿಗೆ ಕೊಡಬಹುದಿತ್ತಲ್ಲವಾ?

-ನಾವು ಆ ಪ್ರಯತ್ನವನ್ನು ಮಾಡದೇ ಬಿಟ್ಟಿಲ್ಲ. ಆದರೆ ಲೋಕಾಯುಕ್ತ ಪೊಲೀಸರು ನಮ್ಮ ದೂರು ತೆಗೆದುಕೊಳ್ಳಲಿಲ್ಲ.

ಲಂಕೇಶ್ : ಯಾಕೆ, ಅದಕ್ಕೆ ಕಾನೂನಿನಲ್ಲಿ ಅವಕಾಶ ಇರಲಿಲ್ಲವಾ?

-ಯಾಕಿಲ್ಲ, ಇದೆ. ನಾವು ಡಿಸೆಂಬರ್ 17,18,19.. ಹೀಗೆ ಪ್ರತಿದಿನ ದೂರು ಕೊಡಲು ಹೋದಾಗಲೂ ಆಗಲೇ ಇಲ್ಲ. ಕೊನೆಗೆ ದೂರನ್ನು ರಿಜಿಸ್ಟರ್ಡ್ ಪೋಸ್ಟ್ (RPED) ಮುಖಾಂತರ ಕಳಿಸಿದರೂ ಉಪಯೋಗ ಆಗಲಿಲ್ಲ. ಹಾಗಾಗಿ ನಾವು ರಾಜ್ಯಪಾಲರ ಹತ್ತಿರ ಹೋಗಬೇಕಾಗಿ ಬಂತು.

ಲಂಕೇಶ್ : ಈಗ ನೀವು ಯಡಿಯೂರಪ್ಪ ಹಾಗೂ ಇತರರ ವಿರುದ್ಧ ಒಟ್ಟು 15 ಪ್ರಕರಣ ಸೇರಿಸಿ 5 ಕೇಸ್ ಹಾಕಿದ್ದೀರಿ. ಅದರ ದಾಖಲೆ-ಸಂಗ್ರಹ, ತನಿಖೆ, ತಯಾರಿಯ ಕೆಲಸ ಶುರುಮಾಡಿದ್ದು ಯಾವಾಗ?

-ಕಳೆದ ಆರೆಂಟು ತಿಂಗಳಿಂದ ನಾವೀ ಕೆಲಸ ಮಾಡುತ್ತಿದ್ದೆವು.

ಲಂಕೇಶ್ : ಅದು ಸರಿ ಸ್ವತಃ ನೀವಿಬ್ಬರೂ ಲಾಯರ್‌ಗಳಾಗಿದ್ದರೂ ನಿಮ್ಮ ಕೇಸ್‌ನಲ್ಲಿ ವಾದಿಸಲು ಸಿ.ಹೆಚ್. ಹನುಮಂತರಾಯರನ್ನು ಯಾಕೆ ಕರೆತಂದಿದ್ದೀರಿ?

-ನಾವೇ ವಾದಿಸಲು ಕಾನೂನಿನಲ್ಲಿ ಅವಕಾಶವಿದೆ. ಆದರೆ ದೂರುದಾರರು ವಾದಿಸುವವರೂ ಎರಡೂ ನಾವೇ ಆಗಿ ಬಿಟ್ಟರೆ ಕೆಲಸದ ಒತ್ತಡ ಜಾಸ್ತಿಯಾಗಿ ಯಾವುದರ ಮೇಲೂ **concentrate** ಮಾಡೋಕಾಗಲ್ಲ ಅನಿಸಿತು. ನಮ್ಮ ವಕೀಲರಾದ ಸಿ.ಹೆಚ್.ಹನುಮಂತರಾಯರು ನುರಿತ ಕ್ರಿಮಿನಲ್ ಲಾಯರ್. ಹಾಗಾಗಿ ಅವರಿಗೆ ವಾದಿಸಲು ಕೇಳಿದೆವು.

ಲಂಕೇಶ್ : ಈ prevention of corruption Act ನ ವಿಶೇಷ ಅಂಶ ಏನು?

-ಇದರಲ್ಲಿ ಜೈಲು ಶಿಕ್ಷೆ ಹಾಗೂ ದಂಡ ಹಾಕುವ ಎರಡೂ ಅವಕಾಶಗಳಿವೆ. ಈ ಕಾಯ್ದೆಯ ಪುಸ್ತಕ (ಕೈಲಿಡಿದು ತೋರಿಸುತಾ) ಬಹಳ ಚಿಕ್ಕದಾದರೂ ಪರಿಣಾಮ ಮಾತ್ರ ಅಗಾಧ.

ಲಂಕೇಶ್ : ನೀವು ಅಕ್ರಮಗಳ ದಾಖಲೆಗಳನ್ನು ಎಲ್ಲೆಲ್ಲಿ ಹೇಗೆ ಪಡೆದಿರಿ?

-ನಮಗೆ ಜಾಸ್ತಿ ದಾಖಲೆಗಳು ಸಿಕ್ಕಿದ್ದು ಮಾಹಿತಿ ಹಕ್ಕಿನ ಮೂಲಕ.

ಲಂಕೇಶ್ : ಇದನ್ನೆಲ್ಲ ಪತ್ತೆ ಮಾಡಬೇಕು ಅಂತ ಯಾಕೆನ್ನಿಸಿತು?

-ಶಿವಮೊಗ್ಗದಲ್ಲಿ ಯಾವ ಸಬ್‌ರಿಜಿಸ್ಟ್ರಾರ್ ಆಫೀಸ್‌ಗೆ ಹೋದರೂ ಇವರದ್ದೇ ಆಸ್ತಿ ರಿಜಿಸ್ಟರ್ ವ್ಯವಹಾರ ನಡೀತಿರೋದು ಕಾಣುತ್ತಿತ್ತು. ಬೇರೆ ಜನರದ್ದು ಏನಿದ್ದರೂ ರಿಜಿಸ್ಟಾರ್ ಮದುವೆ ಮಾತ್ರ ನಡೀತಿದ್ದವು (ನಗು). ಏನಾಗ್ತಿದೆ, ಇವರೆಲ್ಲ ಏನು ನಡೆಸುತ್ತಿದ್ದಾರೆಂದು ಪತ್ತೆ ಮಾಡಬೇಕು ಅನಿಸಿತು. ಜೊತೆಗೆ ಬಿಡಿಎ ವೆಬ್‌ಸೈಟ್‌ನಲ್ಲೂ ನಮಗೆ ಅನೇಕ ದಾಖಲೆ ಸಿಕ್ಕವು. ನಾವು ಈ ಕೆಲಸ ಶುರುಮಾಡಿದ ಮೇಲೆ ಬೇರೆ ಅನೇಕರು ಬಂದು ಮಾಹಿತಿ-ದಾಖಲೆ ಕೊಡಲು ಶುರುಮಾಡಿದರು.

ಲಂಕೇಶ್ : ನಿಮ್ಮ ಹೋರಾಟಕ್ಕೆ ವಕೀಲರ ಬಳಗದ ಪ್ರತಿಕ್ರಿಯೆ ಹೇಗಿದೆ?

-ನಿಜಕ್ಕೂ ಚೆನ್ನಾಗಿದೆ.

ಲಂಕೇಶ್ : ಈ ಕೇಸ್‌ಗಳಲ್ಲಿ ತೀರ್ಪು ಬರಲು ಎಷ್ಟು ದಿನ ಬೇಕಾಗಬಹುದು.

-ನೋಡಿ ಸುಪ್ರೀಂಕೋರ್ಟ್‌ನ ಚೀಫ್ ಜಸ್ಟೀಸ್ ಕಪಾಡಿಯಾರೆ 'ಸಾರ್ವಜನಿಕ ಹಿತಾಸಕ್ತಿಯ ಗ್ರಾಫ್ಟ್ ಕೇಸ್‌ಗಳು ಬೇಗ ಬಗೆಹರಿಯುವಂತಿರಬೇಕು' ಎಂದು ಹೇಳಿದ್ದಾರೆ. ಇಲ್ಲೂ ಹಾಗೇ ಆಗುತ್ತೆ ಅಷ್ಟೆ.

ಲಂಕೇಶ್ : ಯಡಿಯೂರಪ್ಪ ರಾಜೀನಾಮೆ ಕೊಡಲಿ ಅಂತ ಒತ್ತಾಯಿಸುತ್ತೀರಾ?

-(ಖಚಿತ ಧ್ವನಿಯಲ್ಲಿ) ಅದು ನಮಗೆ ಸಂಬಂಧಿಸಿದ್ದಲ್ಲ.

ಲಂಕೇಶ್: ನಿಮಗೆ ರಾಜಕೀಯ ಉದ್ದೇಶ ಇಲ್ಲದಿರಬಹುದು. ಆದರೆ ಯಡಿಯೂರಪ್ಪ ಈಗ ಆರೋಪಿ ನಂಬರ್ ವನ್. ಜೊತೆಗೆ ಮುಖ್ಯಮಂತ್ರಿಯೂ ಆಗಿದ್ದಾರೆ. ಸಾಕ್ಷ್ಯ ನಾಶಪಡಿಸುವ, ದಾಖಲೆ ತಿರುಚುವ, ಸಂಭವ ಇರಲ್ಲವೇ? ಹಾಗಾಗಿ ಆತನ ರಾಜೀನಾಮೆ ಕೇಳೋದು ಸೂಕ್ತ ಅಲ್ಲವೇ?.

-ಅಂತ ಸಂದರ್ಭ ಬಂದಾಗ ಮುಂದೆ ನೋಡೋಣ.

ಲಂಕೇಶ್ : ನಿಮಗೆ ಯಾರಿಂದಲಾದರೂ ಏನಾದರೂ ತೊಂದರೆ ಆಗ್ತಿದೆಯಾ?

-(ಇಬ್ಬರೂ ಒಟ್ಟಿಗೆ) ಸಂದರ್ಭ ಬಂದರೆ **we are prepared to go to jail.** ಕೆಲವು ಸಾರಿ ಇಂಥ ಕೆಲಸ ಪ್ರಾಣಕ್ಕೂ ಆಪತ್ತು ತರಬಹುದು. ಆದರೆ ನಾವು ಈ ಕೇಸ್‌ನಲ್ಲಿ ಮುಂದುವರೆಯಲು ದೃಢ ನಿರ್ಧಾರ ಮಾಡಿದ್ದೇವೆ.

ಲಂಕೇಶ್ : ಯಡಿಯೂರಪ್ಪ ನಿಮಗೆ ಪರಿಚಯವಾ...

-ಹೌದು ಶಿವಮೊಗ್ಗದ ಜ್ಯೂಯೆಲ್ ರಾಕ್ ಹೋಟೆಲ್‌ನಲ್ಲಿ ನಾವು ಬೇಕಾದಷ್ಟು ಸಾರಿ ಭೇಟಿಯಾಗುತ್ತಿದ್ದೆವು. ಅವರು ಆಗ ವಿರೋಧ ಪಕ್ಷದ ನಾಯಕರಾಗಿದ್ದರು. ಆಯನೂರು ಮಂಜುನಾಥ್, ಕೃಷ್ಣಭಟ್ ಸಹ ನಮಗೆ ಪರಿಚಯವಿದ್ದಾರೆ.

ಇಷ್ಟು ಮಾತನಾಡುವಷ್ಟರೊಳಗಾಗಿ ಸಿರಾಜಿನ್ ಹಾಗೂ ಬಾಲರಾಜ್‌ರಿಗೆ ಯಾವುದೋ ಫೋನ್ ಕರೆ ಬಂತು. ಅವರಿಬ್ಬರೂ ಹೊರಟುನಿಂತರು. ಹತ್ತು ಅಡಿ ಉದ್ದ ಅಗಲದ ಅವರ ಆಫೀಸ್‌ನ ತುಂಬಾ ಕಾನೂನು ಪುಸ್ತಕಗಳಿದ್ದವು. ಸ್ವತಃ ಅವರಿಬ್ಬರಿಗಿದ್ದದ್ದು ಸಾಧಾರಣ ಕುರ್ಚಿಗಳು, ವಿಸಿಟರ್‌ಗಳಿಗೆ ಪ್ಲಾಸ್ಟಿಕ್ ಕುರ್ಚಿಗಳಿದ್ದವು. ಇಷ್ಟು ಆರ್ಡಿನರಿ ತರದ ಆಫೀಸ್‌ನೊಳಗೆ ಕುಳಿತಿದ್ದ ಅವರು ಮಾತ್ರ ಆರ್ಡಿನರಿ ಜನರ ತರ ಕಾಣಲಿಲ್ಲ.... ಅಸಾಧ್ಯರಿವರು.

▶▶ 5

100 ಕೋಟಿ ಭೂದರೋಡೆ

ಎಂಭತ್ತು ಸಾವಿರ ಕೊಡ್ತೀನಿ. ಅದರ ಹೊರತಾಗಿಯೂ ನಿಮಗೆ ಸೈಟು ಬೇಕು ಅಂದ್ರೆ ಪ್ರತಿ ಸೈಟಿಗೆ ನೀವು ಒಂದೂಕಾಲು ಲಕ್ಷ ಕೊಡಬೇಕು!

ಕೃಷ್ಣಪ್ಪನ ರೌಡಿ ಗ್ಯಾಂಗ್ ಕಂಡೇ ಬೆಚ್ಚಿಬಿದ್ದ ನಿವೇಶನದಾರರು ಬಂದಷ್ಟು ಬರಲಿ ಎಂದು ಕೃಷ್ಣಪ್ಪ ಕೊಡಿಸಿದ ಚೆಕ್ಕು ಪಡೆದು ಸಹಿ ಹಾಕಿಕೊಟ್ಟರೆ ಇನ್ನೂ ಕೆಲವರು ಕೋರ್ಟ್ ಕಟಕಟೆ ಹತ್ತಿದರು. ಇನ್ನೂ ವಿಪರ್ಯಾಸವೆಂದರೆ ಕೃಷ್ಣಪ್ಪ ಸೈಟುದಾರರಿಗೆ ಕೊಡಿಸಿದ್ದ ಚೆಕ್ಕುಗಳೇ ನಕಲಿಯಾಗಿತ್ತು. ಯಾರದೋ ಹೆಸರಲ್ಲಿ ಅಕೌಂಟು ತೆರೆದು, ಯಾರದೋ ಚೆಕ್ಕುಗಳಿಗೆ ಇನ್ನಾರದೋ ಸಹಿ ಹಾಕಿಸಿ ಕೃಷ್ಣಪ್ಪ ವಂಚಿಸಿದ್ದ. ಅತ್ತ ಸೈಟೂ ಇಲ್ಲ ಇತ್ತ ಕೊಟ್ಟ ದುಡ್ಡೂ ಇಲ್ಲ. ಮತ್ತೊಂದೆಡೆ ಕ್ಲಾಸಿಕ್ ಡೆವಲಪರ್ಸ್‌ಗೂ ಉಂಡೆ ನಾಮ. ಇನ್ನೊಂದೆಡೆ ರೈತರಿಗೂ ಮಕ್ಮಲ್ ಟೋಪಿ!

ಹೀಗೆ ಒಂದೇ ಕಲ್ಲಲ್ಲಿ ಅನೇಕ ಹಕ್ಕಿಗಳನ್ನು ಹೊಡೆದು ಮುಗಿಸಿದ ಕೃಷ್ಣಪ್ಪ 2005ರ ಹೊತ್ತಿಗೆ ಬಾಲಾಜಿ ಲ್ಯಾಂಡ್ ಡೆವಲಪರ್ಸ್ ಎಂಬ ಹೊಸ ಬ್ಯಾನರ್ ಹುಟ್ಟು ಹಾಕಿ ಇಡೀ ಭೂದರೋಡೆಗೇ ಹೊಸ ಹೆಸರು ಕೊಟ್ಟಿದ್ದ. ಅದಕ್ಕೊಂದು ನೆಲಮಂಗಲಕ್ಕೆ ಅಧಿಪತಿಯಂತಿದ್ದ ಬಿನ್ನಮಂಗಲ ಕೃಷ್ಣಪ್ಪನಿಗೂ ಮಸ್ಕಾ ಹೊಡೆದ. ಉಜಾಲಾ ಪೌಲ್ಟ್ರಿ ಫಾರಂ ಮತ್ತು ಉಜ್ವಲ್ ಇಂಟರ್‌ನ್ಯಾಷನಲ್ ಮಾಲೀಕ ಮಾಕಳಿ ರವಿ ಎಂಬ ನಟೋರಿಯಸ್ ಆಸಾಮಿಯನ್ನೂ ಜೊತೆ ಹಾಕಿಕೊಂಡ. ಗೆಜ್ಜರದಹಳ್ಳಿ ಸಿದ್ಧಪ್ಪ, ಪಂಚೆ ಭೈರಣ್ಣ, ಶಿವನಪುರದ ನಂಜಪ್ಪ ಮುಂತಾದ ಲೋಕಲ್ ಪಾಳೇಗಾರರನ್ನೂ ಸರಿಮಾಡಿಕೊಂಡ.

ಒಂದೆಡೆ ಸೈಟು ವಂಚಿತರು ಪೊಲೀಸ್ ಕಂಪ್ಲೇಂಟು ಕೋರ್ಟು ಎಂದು ಬೊಬ್ಬೆ ಹಾಕುತ್ತಿದ್ದರೆ ಇನ್ನೊಂದೆಡೆ ಜಮೀನು ಕಳಕೊಂಡ ರೈತರ ಆರ್ತನಾದ ಮುಗಿಲು ಮುಟ್ಟಿತ್ತು. ಇಷ್ಟೆಲ್ಲ ಭಾನಗಡಿ ಮಾಡಿಯೂ ತನ್ನ ಇ.ಕೆ. ಎನ್‌ಕ್ಲೇವ್ ಲೇಔಟಿನ ಹೊಸ ಅಂಗಡಿ ತೆರೆದ ಕೃಷ್ಣಪ್ಪ ನಿಜಕ್ಕೂ ಮಂಜೂರಾದ ನಕ್ಷೆಯ ಪ್ರಕಾರವೇ ಬಡಾವಣೆ ಮಾಡುತ್ತಾನಾ? ಅಲ್ಲಿ ಸೈಟು ಕೊಂಡವರಿಗೆ ಮೋಸ ಆಗುವುದಿಲ್ಲವಾ?

ಇಡೀ ಲೇಔಟೇ ಮೋಸ!

ಅಸಲಿಯತ್ತೇನೆಂದರೆ ಇಡೀ ಇ.ಕೆ. ಎನ್‌ಕ್ಲೇವ್‌ನ ವ್ಯವಹಾರವೇ ದೊಡ್ಡ ವಂಚನೆ. 52.15 ಎಕರೆಯಲ್ಲಿ ಅರ್ಧಕ್ಕರ್ಧ ಸರ್ಕಾರಿ ಗೋಮಾಳ. ಉಳಿಕೆ ರೈತರ ಜಮೀನಿನಲ್ಲಿ ಅರ್ಧ ಭಾಗ ದಲಿತರ ಭೂಮಿ. ಅಳಿದುಳಿದದ್ದು ರೈತರದ್ದಾದರೂ ಅದರ ಮೇಲೆ ಈ ಹಿಂದೆ ಸೈಟು ಕೊಂಡವರು ಕೇಸು ಹಾಕಿದ್ದಾರೆ. ಜೊತೆಗೆ ಈಗಾಗಲೇ ಕೃಷ್ಣಪ್ಪ ಕೊಟ್ಟಿದ್ದ ಬೋಗಸ್ ಚೆಕ್ಕುಗಳ ವಿರುದ್ಧ ನೂರಾರು ಮಂದಿ ನಿವೇಶನದಾರರು ವಿವಿಧ ಕೋರ್ಟುಗಳಲ್ಲಿ ಮೊಕದ್ದಮೆ ಹೂಡಿದ್ದಾರೆ. ಇದೆಲ್ಲ ತೀರ್ಮಾನವಾಗುವುದು ಯಾವ ಕಾಲಕ್ಕೋ. ಹಾಗೊಮ್ಮೆ ಕೋರ್ಟು ಕೃಷ್ಣಪ್ಪನ ವಿರುದ್ಧ ನಿವೇಶನದಾರರ ಪರವಾಗೇ ತೀರ್ಪಿತ್ತರೂ ಅಲ್ಲಿ ಲೈಔಟು ನಿರ್ಮಿಸುವುದಾಗಲಿ, ಮನೆ ಕಟ್ಟುವುದಾಗಲಿ ಸಾಧ್ಯವೇ ಇಲ್ಲ. ಏಕೆಂದರೆ ಅದು ಅರ್ಕಾವತಿ ನದಿಯ ಜಲಾನಯನ ಪ್ರದೇಶದ ವ್ಯಾಪ್ತಿಗೆ ಬರುತ್ತದೆ. ತಿಪ್ಪಗೊಂಡನಹಳ್ಳಿ ಜಲಾಶಯಕ್ಕೆ ಒಳಹರಿಯುವ ನೀರು ಮತ್ತು ಗುಣಮಟ್ಟ ಕಡಿಮೆಯಾಗುತ್ತಿರುವುದನ್ನು ಮನಗಂಡ ಬೆಂಗಳೂರು ನಗರ ಜಿಲ್ಲಾ ಪಂಚಾಯ್ತಿ ನದಿ ಪಾತ್ರದ ಎಲ್ಲಾ ಅನಧಿಕೃತ ಬಡಾವಣೆ ಮತ್ತು ಕೈಗಾರಿಕಾ ಶೆಡ್ಡುಗಳನ್ನು ಖುಲ್ಲಾಗೊಳಿಸುವಂತೆ ಈಗಾಗಲೇ ಸಂಬಂಧಪಟ್ಟ ಎಲ್ಲಾ ಪಂಚಾಯ್ತಿ ಕಾರ್ಯದರ್ಶಿಗಳಿಗೆ ಆದೇಶ ಹೊರಡಿಸಿದೆ. ಈ ಬಗ್ಗೆ 2010 ರ ಜುಲೈ 27 ರಂದೇ ಆದೇಶ ಹೊರಬಿದ್ದಿದೆ. 2010 ಏಪ್ರಿಲ್ 25 ರಂದು ನಗರಾಭಿವೃದ್ಧಿ ಇಲಾಖೆ ಮತ್ತು 2010 ಏಪ್ರಿಲ್ 3 ರಂದು ಬಿಡಿಎ ಕಮೀಷನರ್ ಕೂಡ ಅನಧಿಕೃತ ಬಡಾವಣೆಗಳನ್ನು ತೆರವುಗೊಳಿಸುವಂತೆ ಮೇಲಿಂದ ಮೇಲೆ ಆದೇಶ ಹೊರಡಿಸಿದ್ದಾರೆ.

ಅರ್ಕಾವತಿ ನದಿ

ಇದನ್ನೇ ಆಧರಿಸಿ ಈ ಭಾಗದ ಮಾಚೋಹಳ್ಳಿ, ದಾಸನಪುರ, ಆಲೂರು ಮತ್ತು ಮಾದನಾಯ್ಕನಹಳ್ಳಿ ಗ್ರಾಮ ಪಂಚಾಯ್ತಿಗಳು ಇದೇ ಜನವರಿ 24 ರಂದು ಜಿಲ್ಲಾ ಟಾಸ್ಕ್ ಫೋರ್ಸ್ ವತಿಯಿಂದಲೇ ಈ ಭಾಗದ ಅನಧಿಕೃತ ಲೇಔಟುಗಳನ್ನು ಖಾಲಿ ಮಾಡಿಸುವಂತೆ ನಿರ್ಣಯ ಕೈಗೊಂಡಾಗಿದೆ. ಈ ಪ್ರಕಾರ ಯಾವತ್ತಿದ್ದರೂ ಕೃಷ್ಣಪ್ಪರ ಲೇಔಟು ನೆಲಸಮಗೊಳ್ಳಲೇಬೇಕು.

ಇದು ಗೊತ್ತಿದ್ದೂ ಇ.ಕೆ. ಅರ್ಥಾತ್ ಮುಂಗಾರು ಮಳೆ ಕೃಷ್ಣಪ್ಪ ಏಕೆ ತನ್ನ ಅನಧಿಕೃತ ಲೇಔಟ್ ನಿರ್ಮಾಣ ಕೈಬಿಟ್ಟಿಲ್ಲ? ಗೌಡಹಳ್ಳಿ, ಶಿವನಪುರ ಮತ್ತು ಗೆಜ್ಜಗದಹಳ್ಳಿ ಮಧ್ಯದ ಇ.ಕೆ. ಎನ್‌ಕ್ಲೇವ್‌ನ ಅಸಲೀ ಉದ್ದೇಶವೇನು?

ಅದು ಐವತ್ತೆಕರೆಯಷ್ಟಿರುವ ಸರ್ಕಾರಿ ಜಮೀನನ್ನು ಕಬಳಿಸುವುದು. ಇದು ಇತ್ತೀಚೆಗಷ್ಟೇ ಲೋಕಾಯುಕ್ತಕ್ಕೆ ಸಿಕ್ಕಿಬಿದ್ದ ಜೈಲುಪಾಲಾದ ಸ್ಪೆಷಲ್ ಡಿಸಿ ರಾಮಾಂಜಿನಪ್ಪನ ಕೈಚಳಕ. ಹೀಗೆ ರೆಡ್ಡಿಗಳಿಗೆ ದರಖಾಸ್ತು ಮಂಜೂರಾದಂತೆ ಮಾಡಿ ನಂತರ ಅದನ್ನು ಕೃಷ್ಣಪ್ಪನ ಲೇಔಟಿಗೆ ಜಮೆ ಮಾಡಲಾಗಿದೆ. ಈ ಬಗ್ಗೆ ತನಿಖೆಯಾದರೆ ರಾಮಾಂಜಿನಪ್ಪನ ಜೊತೆ ಡೀಸಿ ರಾಮೇಗೌಡ ಸೇರಿದಂತೆ ಅನೇಕರು ಜೈಲು ಪಾಲಾಗುತ್ತಾರೆ. ಇದಲ್ಲದೇ ಗೌಡಹಳ್ಳಿಯ ಸ.ನಂ. 5 ರಲ್ಲಿ 22 ಎಕರೆ ಸರ್ಕಾರಿ ಗೋಮಾಳವಿದೆ. ಪಕ್ಕದ ಸ.ನಂ. 59 ರಲ್ಲಿ ಮತ್ತೆ 12 ಎಕರೆ ಗೋಮಾಳದ ಭೂಮಿಯಿದೆ. ಈಗಾಗಲೇ ಆಕ್ರಮಿಸಿಕೊಂಡ 12 ಎಕರೆ ಜೊತೆಗೆ ಈ 34 ಎಕರೆ ಗೋಮಾಳವೂ ಸೇರಿಕೊಂಡರೆ, ಅಕ್ಕಪಕ್ಕದ ಅರ್ಕಾವತಿ ಹಳ್ಳದ ಐದಾರು ಎಕರೆಯನ್ನು ಒತ್ತುವರಿ ಮಾಡಿಕೊಳ್ಳುವುದು ಕೃಷ್ಣಪ್ಪನ ಹುನ್ನಾರ.

100 ಕೋಟಿ ಲೂಟಿ

ಈಗಾಗಲೇ ಮಂಜೂರಾದ ನಕ್ಷೆಯನ್ನೇ ತೋರಿಸಿ ಅದರ ಪಕ್ಕದಲ್ಲಿರುವ ಐವತ್ತೆಕರೆಯಷ್ಟು ಗೋಮಾಳವನ್ನು ಕಬಳಿಸುವುದು. ಅಲ್ಲಿಗೆ ಕಾಂಪೌಂಡ್ ಹಾಕಿ ಸೈಟು ವಿಂಗಡಿಸುವುದು. ಅದನ್ನೇ ಗಿರಾಕಿಗಳಿಗೆ ಮಾರುವುದು. ಮುಂದೊಮ್ಮೆ ಸೈಟುದಾರ ಮನೆ ಕಟ್ಟಲೆಂದು ಹೋದನೆಂದರೆ ಸೈಟಿಗೂ ನಕ್ಷೆಗೂ ಸಂಬಂಧವೇ ಇರುವುದಿಲ್ಲ. ಸರ್ಕಾರಿ ಗೋಮಾಳದಲ್ಲಿ ಕಟ್ಟಡ ನಿರ್ಮಿಸ ಹೊರಟರೆ ಅಧಿಕಾರಿಗಳು ಬಿಡುವುದಿಲ್ಲ. ಭೂಮಿ ಸರ್ಕಾರದ್ದು, ದುಡ್ಡು ಕೃಷ್ಣಪ್ಪನದು.

ಸೈಟೊಂದನ್ನು ಕನಿಷ್ಠ ಹತ್ತು ಲಕ್ಷಕ್ಕೆ ಮಾರಿದರೂ 1000 ಸೈಟುಗಳಿಂದ 100 ಕೋಟಿ ಹುಟ್ಟುತ್ತದೆ. ಇದರಲ್ಲಿ ಅಧಿಕಾರಿಗಳಿಗೆ ಲಂಚ, ಬ್ರೋಕರ್ ಕಮೀಷನ್, ರೈತರಿಗೆ ಪುಡಿಕಾಸು ಇತ್ಯಾದಿ ಖರ್ಚೆಂದು 20 ಕೋಟಿ ಕಳೆದರೂ ಉಳಿಕೆ 80 ಕೋಟಿ ಕೃಷ್ಣಪ್ಪನ ಜೇಬು ಸೇರುತ್ತದೆ.


ದರೋಡೆಯಾದರೆ ಸರ್ಕಾರಿ ಭೂಮಿ-ಬೀದಿಗೆ ಬಿದ್ದವರು ಮುಗ್ಧ ನಿವೇಶನದಾರರು ತಾನೆ? ಎಮ್ಮೆಲ್ಸಿ ಕೃಷ್ಣಪ್ಪ 'ಮುಂಗಾರು ಮಳೆ' ನಿರ್ಮಿಸಿ ಹೊಡೆದ ಲಾಟರಿಗಿಂತಲೂ ಒಂದಷ್ಟು ಬೋಗಸ್ ದಾಖಲೆ ಸೃಷ್ಟಿಸಿ, ಇನ್ನಷ್ಟು ಪುಂಡರನ್ನು ಸಾಕಿಕೊಂಡರೆ ಅದರ ಹತ್ತು ಪಟ್ಟು ದೋಚಬಹುದಲ್ಲವೆ?

-ರಾ. ಸೋಮನಾಥ

ಶಾಸಕ ಚಿಕ್ಕನಗೌಡನ ಅಕ್ರಮ ಕಲ್ಲು ಗಣಿ ದಂಧೆ

ಲೈಸೆನ್ಸ್ ಇಲ್ಲದೆ ಸೇಫಾಗಿ ನಡೆದಿದೆ ಮೈನಿಂಗ್!

ಅಕ್ರಮ ದಂಧೆಗಳೇ ನಮ್ಮ ತಂದೆ ತಾಯಿ, ಕಪ್ಪು ಹಣವೇ ನಮ್ಮ ಉಸಿರು, ಲೂಟಿಕೋರರಾದ ನಮ್ಮನ್ನು ಪೊರೆಯುವ ಬಿಜೆಪಿಯೇ ನಮ್ಮ ಪಕ್ಷ ಎಂದು ಮಂತ್ರ ಪಠಿಸುವ ಕೇಸರಿ ಪಿಂಡಗಳು ಕಬ್ಬಿಣದ ಅದಿರನ್ನು ಕದ್ದು ಸಾರಿ ಸಾವಿರಾರು ಕೋಟಿ ನುಂಗಿ ಹಾಕಿದ್ದು ಹಳೇ ಕಥೆ. ...ಸ ಕಥೆಯ ಕೇಂದ್ರ ಬಿಂದು ಕಳೆದ ನಾಲ್ಕು ವರ್ಷಗಳಿಂದ ...ವಿಲ್ಲದೆ ಧಾರವಾಡ ಜಿಲ್ಲೆಯ ಕುಂದಗೋಳ ತಾಲೂಕಿನ ...ದರಗುಂಚಿ ಮತ್ತು ಮುರಾರಿ ಹಳ್ಳಿ ಪ್ರದೇಶದಲ್ಲಿ ನಡೆಯು...ರುವ ಅಕ್ರಮ ಕಲ್ಲು ಗಣಿಗಾರಿಕೆ. ಆ ಮೂಲಕ ನೂರಾರು ...ೋಟಿ ರೂಪಾಯಿ ಬೆಲೆಬಾಳುವ ಕಲ್ಲು ಖದೀ ಮನ...ಲಾಗಿದೆ. ಸರ್ಕಾರದಿಂದ ಪರವಾನಗಿ ...ತೆಯದೆ ಅಧಿಕಾರದ ಪವರಿನಡಿಯಲ್ಲಿ ಈ ...ೂಟಿ ನಡೆದಿದೆ. ಕುಂದಗೋಳದ ಎಸ್.ಐ. ...ಕ್ಕನಗೌಡ ಎಂಬ ನಾಲಾಯಕ್ ಶಾಸಕನೇ ...ೀ ಸ್ಟೋನ್ ಮೈನಿಂಗ್ ಧಣಿ.


ಚಿಕ್ಕಣ್ಣ ಗೌಡ

ಕಲಘಟಗಿ ಕ್ಷೇತ್ರದಿಂದ ಎರಡು ಬಾರಿ ...ರಿಸಿಬಂದಿದ್ದ ಈತ ಕಳೆದ ಬಾರಿ ಮೀಸಲಾತಿ ...ದಲಾವಣೆಯಿಂದ ಕುಂದಗೋಳಕ್ಕೆ ವಕ್ಕರಿಸಿದ್ದ ...ಲ್ಲಿಗೆ ಕಾಲಿಟ್ಟದ್ದೆ ತಡ ಅಕ್ರಮ ದಂಧೆಗೆ ...ಾತ. ಸುಮಾರು ಐದು ಎಕರೆ ಪ್ರದೇಶದಲ್ಲಿ ...ರಡು ಕಡೆ ಕಲ್ಲು ಗಣಿ ಈತ ನಡೆಸುತ್ತಿದ್ದರೂ ...ದರಲ್ಲಿ ತನ್ನ ಪಾತ್ರ ಇಲ್ಲ ಎಂದು ತೋರಿಸಲು ತನ್ನ ...ಮ್ಮ ರುದ್ರನಗೌಡನನ್ನು ಮುಂದಿಟ್ಟುಕೊಂಡಿದ್ದಾನೆ. ...ಾರವಾಡ ಸೇರಿದಂತೆ ನೆರೆಯ ಜಿಲ್ಲೆಯಲ್ಲಿ ಅದ್ಯಾವುದೇ ...ರ್ಕಾರಿ ಕಾಮಗಾರಿ ನಡೆದರೂ ಅದಕ್ಕೆ ತನ್ನಿಂದಲೇ ಕಲ್ಲು ...ಮತ್ತು ಖಡಿ ಖರೀದಿಸಬೇಕು ಎಂಬ ...ರ್ಮಾನು ಹೊರಡಿಸಿರುವ ಚಿಕ್ಕನಗೌಡ ...ತ್ತೀಚಿಗೆ ಬರೀ ರಸ್ತೆ ಕಾಮಗಾರಿಯೊಂದ ...ದಲೇ ಹತ್ತು ಕೋಟಿಗೂ ಹೆಚ್ಚು ಹಣ ...ಳಿಸಿದ್ದಾನೆ. ಅಂದರೆ, ಕಳೆದ ನಾಲ್ಕು ...ರ್ಷಗಳಿಂದ ಅದೆಷ್ಟು ಕೋಟಿ ಹಣ ಕಳ್ಳ ...ಾಸಕ ಚಿಕ್ಕನಗೌಡನ ತಿಜೋರಿ ಸೇರಿರ...ಹುದು ನೀವೇ ಊಹಿಸಿ!


ದರ್ಶಣ ಜೈನ್


ಹುಬ್ಬಳ್ಳಿ ಹೊರವಲಯದ ರಾಷ್ಟ್ರೀಯ ...ದ್ದಾರಿಗೆ ಹೊಂದಿಕೊಂಡಿರುವ ಅದರ...ಂಚಿಯೇ ಚಿಕ್ಕನಗೌಡನ ಸ್ವಗ್ರಾಮ. ಇಲ್ಲೀತ ...ಜಾರೋಷವಾಗಿ ಅಕ್ರಮ ಸ್ಟೋನ್ ಮೈನಿಂಗ್ ದಂಧೆ...ಯನ್ನು ನಡೆಸುತ್ತಿದ್ದಾನೆ. 2008ರಲ್ಲೇ ಈ ದಂಧೆಯನ್ನು ...ಕ್ಕನಗೌಡ ಪ್ರಾರಂಭಿಸಿದ್ದರೂ ಈತನಕ ಇದರತ್ತ ಯಾವೊಬ್ಬ ...ಧಿಕಾರಿಯೂ ಕಣ್ಣು ಕೂಡಾ ಹಾಯಿಸಿಲ್ಲ, ಗಣಿಗಾರಿಕೆಗಾಗಿ ...ನುಮತಿ ಕೋರಿ ತಾನು ಅರ್ಜಿ ಕೊಟ್ಟದ್ದೇ ಸಾಕೆಂದು ...ವಿಸಿದ ಈ ಭೂಪ ಪರವಾನಗಿ ಸಿಗದಿದ್ದರೂ ಗುಂಡಿ ತೋಡಲು ಶುರುಹಚ್ಚಿಕೊಂಡಿದ್ದ ಇವರ ಗೆಬರುವಿಕೆಯಿಂದಾಗಿ ಈಗ ಐವತ್ತು-ಅರವತ್ತು ಅಡಿ ಆಳದ ತೆಗ್ಗುಗಳು ಈಗ ಬಾಯ್ತೆರೆದು ನಿಂತಿವೆ. ಗಣಿಗಾರಿಕೆಗೆ ಸಂಬಂಧಿಸಿದ ಕಂದಾಯ, ಗಣಿ ಮತ್ತು ಭೂವಿಜ್ಞಾನ, ಪರಿಸರ ಇಲಾಖೆಗಳ ಕಣ್ಣಿಗೆ ಮಣ್ಣೆರಚಿ ಒಂದು ನಯಾಪೈಸ ರಾಜಧನ ಕಟ್ಟದೆ ಬಿಂದಾಸಾಗಿ ಚಿಕ್ಕನಗೌಡ ನೆಲಗೆಬರಿ ಕಲ್ಲು ಮಾರುತ್ತಿದ್ದಾನೆ.

ಇವನ ಈ ಅಕ್ರಮ ದಂಧೆಗೆ ಆಶ್ರಯವಾಗಿ ನಿಂತಿರುವ ಜಿಲ್ಲಾ ಉಸ್ತುವಾರಿ ಮಂತ್ರಿ ಜಗದೀಶ ಶೆಟ್ಟರ, ನೀರು ಮಂತ್ರಿ ಬಸವರಾಜ ಬೊಮ್ಮಾಯಿ ಮತ್ತು ಸಂಸದ ಪ್ರಲ್ಹಾದ ಜೋಷಿ, ಸರ್ಕಾರಿ ಮತ್ತು ಖಾಸಗಿ ಗುತ್ತಿಗೆದಾರರಿಗೆ ಬೆದರಿಸಿ ಇವನಿಂದನೇ ಕಲ್ಲು ಹಾಗೂ ಖಡಿ ಖರೀದಿಸಲು ಒತ್ತಾಯಿಸುತ್ತಿದ್ದಾರೆ. ಈ ಘಟಾನುಘಟಿಗಳನ್ನು ಎದುರು ಹಾಕಿಕೊಳ್ಳಲಾಗದೆ, ಬೇರೆ ದಾರಿ ಇಲ್ಲದೆ ಚಿಕ್ಕನಗೌಡ ಹೇಳಿದ ರೇಟಿಗೆ ಎಲ್ಲರೂ ಜೈ ಎನ್ನುವಂತಾಗಿದೆ. ಇನ್ನು ಹುಬ್ಬಳ್ಳಿ-ಲಕ್ಷ್ಮೇಶ್ವರ ಮಧ್ಯೆ ಪ್ರಾರಂಭವಾಗಿರುವ ನಾಲ್ಕು ಪಥದ ರಾಜ್ಯ ಹೆದ್ದಾರಿ ಕಾಮಗಾರಿಗೆ ಸಂಪೂರ್ಣ ಇದೇ ಕ್ವಾರಿಯಿಂದ ಖಡಿ ಸಪ್ಲೈ ಆಗಿದೆ. ಹೆದ್ದಾರಿ ಗುತ್ತಿಗೆ ಕಂಪನಿಯಿಂದ ಸುಮಾರು ಹತ್ತು ಕೋಟಿ ಪೇಮೆಂಟ್ ಗೌಡನಿಗೆ ಆಗಿದೆ ಎಂಬ ರೂಮರ್ ಕೂಡ ಹೊರಬಿದ್ದಿದೆ.

ಇರೋದೆ ಒಂದು

ಜನಸೇವೆಗೆಂದು ಚುನಾಯಿತನಾದ ಗೌಡ, ಓಟು ಹಾಕಿದ ಜನರ ಬಗ್ಗೆ ಒಂದು ಕ್ಷಣವೂ ಆಲೋಚನೆ ಮಾಡುವುದಿಲ್ಲ ಎನ್ನುವುದಕ್ಕೆ ಹಾಳು ಸುರಿಯುತ್ತಿರುವ ಕುಂದಗೋಳವೇ ಸಾಕ್ಷಿ. ಆದರೆ ತಾನು ಮಾತ್ರ ಸಕತ್ತಾಗಿ ಮೇಯ್ದು ದುಂಡಗಾಗಿದ್ದಾನೆ. ಹಾಗೆಯೇ ಸರ್ಕಾರದ ಕಣ್ಣಿಗೆ ಭರಪೂರ ಮಣ್ಣೆರಚಿದ್ದಾನೆ. ಇದಕ್ಕೆ ತಾಜಾ ಉದಾಹರಣೆಯೆಂದರೆ ಗಣಿಗಾರಿಕೆಗಾಗಿ ಇಲಾಖೆಯಿಂದ ಕೇವಲ ಒಂದು ಎಕರೆಗೆ ಅನುಮತಿ ದೊರಕಿದೆ. ಆದರೆ ಈ ಗೌಡ ಇಡೀ ಹೊಲವನ್ನೇ ಅಗೆಯುತ್ತಿದ್ದಾನೆ.

ಅದರಗುಂಚಿಯ ಮುರಾರಹಳ್ಳಿ ಗ್ರಾಮದಲ್ಲಿ ಸರ್ವೆ ನಂಬರ್ 52ರಲ್ಲಿ 2 ಎಕರೆ 16 ಗುಂಟೆ ಹಾಗೂ ಸರ್ವೆ



ನಂಬರ್ 53ರಲ್ಲಿ ಒಂದು ಎಕರೆ ಜಮೀನು ಇವನದ್ದಿದೆ. ಆಗಸ್ಟ್ 24-2010ರಂದು ಈತನಿಗೆ ಒಂದು ಎಕರೆಯಲ್ಲಿ ಗಣಿ ಮತ್ತು ಭೂವಿಜ್ಞಾನ ಇಲಾಖೆಯಿಂದ ಮದ್ದು ಹಾರಿಸದೇ ಗಣಿಗಾರಿಕೆ ನಡೆಸುವಂತೆ ಪರವಾನಗಿ ನೀಡಲಾಗಿದೆ. ಆದರೆ ಚಿಕ್ಕನಗೌಡ ಉಳಿದ 2 ಎಕರೆ 16 ಗುಂಟೆ ಜಾಗದಲ್ಲೂ ಪರವಾನಗಿಯಿಲ್ಲದೆ ಗಣಿಗಾರಿಕೆ ನಡೆಸುತ್ತಿದ್ದಾನೆ. ಸಾಲದೆಂಬಂತೆ ಭಾರಿ ಪ್ರಮಾಣದ ಮದ್ದು ಹಾರಿಸೋ ಮೂಲಕ ಕ್ವಾರಿ ಪಕ್ಕದಲ್ಲೇ ವಾಸ ಮಾಡುವ ಜನರಿಗೆ ಸಾವಿನ ಭಯ ತಂದಿಟ್ಟಿದ್ದಾನೆ. ಅಸಲಿಗೆ ಗೌಡ 2008ರಿಂದ ಇದೇ ಹೊಲದಲ್ಲಿ ಕ್ರಶರ್ ಮಷೀನ್‌ನಿಂದ ಗಣಿಗಾರಿಕೆ ಶುರುಹಚ್ಚಿಕೊಂಡಿದ್ದ. ಆದರೆ ಇವನಿಗೆ ಇಲಾಖೆಯ ಪರವಾನಗಿ ಸಿಕ್ಕಿದ್ದು ಕಳೆದ ವರ್ಷ ಆಗಸ್ಟ್‌ನಲ್ಲಿ, ಅಲ್ಲಿಯವರೆಗೂ ಶಾಸಕ ಚಿಕ್ಕನಗೌಡ ತನ್ನ ತಮ್ಮ ರುದ್ರಗೌಡನೊಂದಿಗೆ ಸೇರಿಕೊಂಡು ಅಕ್ರಮ ಕಲ್ಲು ಗಣಿಗಾರಿಕೆ ಮಾಡಿದ್ದಾನೆ. ರಸ್ತೆಯಿಂದ ಐವತ್ತು ಮೀಟರ್ ದೂರದಲ್ಲಿ ಗಣಿ ಕೊರೆಯುವಂತೆ ಇಲಾಖೆ ಶರತ್ತು ವಿಧಿಸಿದ್ದರೂ ಅದನ್ನೆಲ್ಲ ಗಾಳಿಗೆ ತೂರಿ ಅದರಗುಂಚಿ-ಛಬ್ಬಿ ರಸ್ತೆಗೆ ಹೊಂದಿಕೊಂಡೇ ಐವತ್ತು-ಅರವತ್ತು ಅಡಿ ಆಳದ ಗುಂಡಿ ತೋಡಿದ್ದಾನೆ.

ಇನ್ನು ಬಿ.ಅರಳಿಕಟ್ಟಿ ಗ್ರಾಮದಲ್ಲಿ ಚಿಕ್ಕನಗೌಡನಿಗೆ ಕೇಳೋ ಅರಸನಿಲ್ಲ, ಹೇಳೋ ಪ್ರಧಾನಿಯಿಲ್ಲದಂತಾಗಿದೆ. ಇಲ್ಲಿ ಇವನನ್ನು ವಿರೋಧಿಸುವವರೇ ಇಲ್ಲದಂತಾಗಿದೆ. ಇವರು ನಡೆಸುವ ಗಣಿಗಾರಿಕೆಗೆ ಯಾವ ಪರವಾನಗಿಯೂ ಇಲ್ಲ, ಆದರೂ ಧಿನಾ ನೂರಾರು ಟಿಪ್ಪರ್ ಖಡಿ ಬಿಂದಾಸಾಗಿ ಹುಬ್ಬಳ್ಳಿ ಮಾರುಕಟ್ಟೆ ಸೇರುತ್ತಿದೆ. ಕಳೆದ ಐದು ವರ್ಷದಿಂದ ಮದ್ದು ಹಾರಿಸಿ ಕಲ್ಲು ಒಡೆಯಲಾಗುತ್ತಿದೆ.

ಶಾಸಕನ ಸಹೋದರ ರುದ್ರನಗೌಡ ಹೆಸರಲ್ಲಿರುವ 2 ಎಕರೆ 2 ಗುಂಟೆ ಜಾಗದಲ್ಲಿ ಒಂದು ಎಕರೆಯಲ್ಲಿ ಗಣಿಗಾರಿಕೆ ನಡೆಸಲು ಲೀಸ್‌ಗಾಗಿ ಇಲಾಖೆಯ ಪರವಾನಗಿ ಕೋರಿದ್ದರು. ಆದರೆ ಈವರೆಗೂ ಲೀಸ್ ಪರವಾನಗಿ ಸಿಕ್ಕಿಲ್ಲ, ಆದರೂ ರಾಜಾರೋಷವಾಗಿ ಸಂಪೂರ್ಣ 2 ಎಕರೆ 2 ಗುಂಟೆ ಜಾಗದಲ್ಲೂ ಅಕ್ರಮವಾಗಿ ಗಣಿಗಾರಿಕೆ ನಡೆಸುತ್ತಿದ್ದಾರೆ. ಈ ಭಂಡ ಗೌಡದ್ವಯರ ಉಪಟಳದಿಂದ ಬೇಸತ್ತ ಅದೆಷ್ಟೋ ಜನ ಸಾಕಷ್ಟು ಬಾರಿ ಜಿಲ್ಲಾಧಿಕಾರಿ ದರ್ಪಣ್ ಜೈನ್, ತಹಶೀಲ್ದಾರ್, ಗಣಿ ಮತ್ತು ಭೂ ವಿಜ್ಞಾನ ಇಲಾಖೆ ಅಧಿಕಾರಿ ಉಮೇಶ ಬಗರಿ ಮತ್ತು ಹಿರಿಯ ಭೂವಿಜ್ಞಾನಿ ಸೂಡಿ ಇವರಿಗೆ ಮನವಿ ಮಾಡಿದರೂ ಪ್ರಯೋಜನವಾಗಿಲ್ಲ.

ರೂಪಾಯಿ ಕಟ್ಟದೆ ಕೋಟಿ ನುಂಗಿದ ಗೌಡ

ಸುಮಾರು ಐದು ಎಕರೆ ಹೊಲದಲ್ಲಿ ಕಳೆದ ಐದು ವರ್ಷದಿಂದ ಅಕ್ರಮವಾಗಿ ಗಣಿಗಾರಿಕೆ ನಡೆಸುತ್ತ ಬಂದಿರುವ ಶಾಸಕ ಚಿಕ್ಕನಗೌಡ ಮತ್ತು ಅವನ ಸಹೋದರ ರುದ್ರಗೌಡ ಸರ್ಕಾರಕ್ಕೆ ಒಂದು ರುಪಾಯಿಯೂ ರಾಯಲ್ಟಿ ಕಟ್ಟದೆ ಅಧಿಕಾರದ ದರ್ಪದಲ್ಲಿ ನುಣುಚಿಕೊಂಡಿದ್ದಾರೆ. ಇಲಾಖೆ ಪ್ರಕಾರ ಅಂದಾಜು ಎರಡು ಕೋಟಿ ರೂಪಾಯಿಯಷ್ಟು ರಾಜಧನ ಇಲಾಖೆಗೆ ಪಾವತಿಸಬೇಕು. ಗಣಿ ಮತ್ತು ಭೂ ವಿಜ್ಞಾನ ಇಲಾಖೆ ನಿಯಮಾವಳಿ ಪ್ರಕಾರ ರಾಜಧನ ತುಂಬದಿದ್ದಲ್ಲಿ ಒಟ್ಟು ಮೊತ್ತದ ಐದು ಪಟ್ಟು ಹೆಚ್ಚು ದಂಡವನ್ನು ಭರಿಸಬೇಕು. ಆದರೆ, ಗೌಡ ಮಾತ್ರ ಇದಕ್ಕೆಲ್ಲಾ ಕ್ಯಾರೆ ಅನ್ನುತ್ತಿಲ್ಲ, ಅಲ್ಲದೇ ತನ್ನ ಹೆಸರಲ್ಲೊಂದು, ಸಹೋದರನ ಹೆಸರಿನಲ್ಲಿ ಇನ್ನೊಂದು ಹಾಗೂ ಇನ್ನೋರ್ವ ಸಹೋದರನ ಹೆಸರಲ್ಲಿ ಮತ್ತೊಂದು - ಹೀಗೆ ಮೂರು ಕ್ರಶರ್‌ಗಳು ಪರಿಸರ ಇಲಾಖೆ ನಿಯಮಾವಳಿಗಳನ್ನು ಗಾಳಿಗೆ ತೂರಿ ಕಾರ್ಯನಿರ್ವಹಿಸುತ್ತಿವೆ. ಯಾವುದಕ್ಕೂ ಲೆಕ್ಕಪತ್ರವಿಲ್ಲ, ಲೈಸನ್ಸ್ ಇಲ್ಲದೆ ನಡೆಯುತ್ತಿರುವ ಈ ಕಳ್ಳ ಗಣಿಗಾರಿಕೆಗೆ ಹೆಸ್ಕಾಮ್‌ನಿಂದ ಹೈಪವರ್ ವಿದ್ಯುತ್ ಇಪ್ಪತ್ನಾಲ್ಕು ಗಂಟೆ ಸರಬರಾಜಾಗುತ್ತಿದೆ.

ಕಳೆದ ಹದಿನೈದು ವರ್ಷಗಳಿಂದ ಈ ಸಹೋದರರು ತಮ್ಮ ಅಧಿಕಾರದ ಪವರ್ ಉಪಯೋಗಿಸಿಕೊಂಡು ಅಧಿಕಾರಿಗಳನ್ನು ಹೆದರಿಸಿ ತಿಂಗಳಿಗಿಷ್ಟು ಅಂತ ತಿರುಪೆ ಹಾಕಿ ಬಿಂದಾಸಾಗಿ ದಂಧೆ ನಡೆಸುತ್ತಿದ್ದಾರೆ. ಇವರು ನಡೆಸುವ ಅಕ್ರಮ ದಂಧೆಗಳ ಲೆಕ್ಕ ನೋಡಿದರೆ ಇವರನ್ನು ಎಂದೋ ಕಂಬಿ ಹಿಂದೆ ಕಾಣಿಸಬೇಕಿತ್ತು, ಆದರೆ ಇನ್ನೂ ಬಯಲಲ್ಲಿ ನಿಂತಿದ್ದಾರೆ ಈ ಖದೀಮರು. ಇದು ಬಿಜೆಪಿ ಸರ್ಕಾರದ ವ್ಯವಸ್ಥೆಗೆ ಹಿಡಿದ ಕೈಗನ್ನಡಿ.

• ಹುರಳಿಕೊಪ್ಪಿ ವಿನಯ್

ಕೊಪ್ಪಳ: ಬಡವರ ಸೂರಿಗೂ ಕೈಯಿಟ್ಟ ಕರಡಿ ಶಿಷ್ಯ!

ಅತಿ ಹಿಂದುಳಿದ ಜಿಲ್ಲೆ ಅಂತ ಕೊಪ್ಪಳ ಏಕೆ ಕರೆಯಿಸಿಕೊಳ್ಳುತ್ತೆ ಅನ್ನೋದಕ್ಕೆ ಸಾಕಷ್ಟು ಸಬೂಬುಗಳಿರಬಹುದು. ...ದರೆ ಅದಕ್ಕೆ ಪ್ರಮುಖ ಕಾರಣ ಇಲ್ಲಿನ ಹೆಗ್ಗಣಗಳೇ ...ದರೆ ತಪ್ಪಾಗುವುದಿಲ್ಲ. ಸಂಸದ ಶಿವರಾಮೇಗೌಡ ಮತ್ತು ...ಸಕ ಸಂಗಣ್ಣ ಕರಡಿಯಂತಹ ದಗಲುಬಾಜಿ ರಾಜಕಾರಣಿಗಳ ...ದೆ ಬಕೇಟು ಹಿಡಿಯುವ ರಣ ಹಸಿವಿನ ಅಧಿಕಾರಿ ...ಗ್ಗಣಗಳ ದೊಡ್ಡ ದಂಡೇ ಇಡೀ ಜಿಲ್ಲೆಯನ್ನು ಮುಕ್ಕಿಹಾಕು...ಿ. ಇದಕ್ಕೆ ಒಂದು ಸೂಕ್ತ ಉದಾಹರಣೆ ಇಲ್ಲಿನ ಕರ್ನಾಟಕ ...ಸಿಂಗ್ ಬೋರ್ಡ್(ಕೆಹೆಚ್‌ಬಿ)ನಲ್ಲಿ ನಡೆದಿರುವ ದರೋಡೆ. ...ತ ಮತ್ತು ಮಧ್ಯಮ ವರ್ಗದ ಜನರಿಗೆ ಸೂರು ನೀಡಬೇಕಿ...ವ ಕೆಹೆಚ್‌ಬಿ ಅಧಿಕಾರಿಗಳು ಕೋಟಿಗಟ್ಟಲೆ ಹಣ ...ಗಿ ಹಾಕಿದ್ದಾರೆ. ಕೆಹೆಚ್‌ಬಿಯ ಸಹಾಯಕ ಕಾರ್ಯ...ರ್ವಾಹಕ ಅಭಿಯಂತರ ಹೆಚ್.ವೈ. ನಿಲೊಗಲ್ ಪ್ರತಿ ...ಹಂತದಲ್ಲೂ ಅವ್ಯವಹಾರ ಮಾಡಿದ್ದಾನೆ. ಶಾಸಕ ಸಂಗಣ್ಣನ ...ಣಿ ಬಳಿಯುವ ಈತ ಕೋಟ್ಯಾಂತರ ರೂಪಾಯಿ ...ಗಿ ನೀರು ಕುಡಿದಿದ್ದಾನೆ.


ಖರೀದಿಯಲ್ಲೇ ಕೋಟಿ ಕದ್ದರು


...ಕೆಹೆಚ್‌ಬ ಉದ್ದೇಶಿತ 40 ಮನೆಗಳ ನಿರ್ಮಾಣಕ್ಕೆಂದು ...ಪ್ಪಳದ ಜಿಲ್ಲಾಧಿಕಾರಿ ಕಚೇರಿ ಹತ್ತಿರದ ಜಮೀನನ್ನು ...07ರಲ್ಲಿ ಆಯ್ಕೆ ಮಾಡಲಾಗಿತ್ತು, ನಂತರ ಜಮೀನು ...ಭಾರಿಗೆ ಸಂಬಂಧಿಸಿದಂತೆ ಮಾಲೀಕರಿಂದ ...ಗೆ ಕೂಡಾ ದೊರಕಿತ್ತು, ಆದರೆ ವಾಸ್ತವದಲ್ಲಿ ...ದಿದ್ದೆ ಬೇರೆ. ಒಟ್ಟು 46 ಎಕರೆ 29 ಗುಂಟೆ ...ಯನ್ನು ಯೋಜನೆಗಾಗಿ ಖರೀದಿ ಮಾಡಲು ...ಚ್‌ಬಿ ಜಮೀನು ಮಾಲೀಕರಿಗೆ ಪ್ರತಿ ಎಕರೆಗೆ ... ಲಕ್ಷ ದರ ನಿಗದಿಗೊಳಿಸಿತ್ತು, ಡಿ.ಸಿ ಕಚೇರಿ ...ದ ಸರ್ವೆ ನಂ. 358/..., 360/1..., ...7/3, 327/7, 328/1 ಜಮೀನುಗಳ ...ಲೀಕರಾದ ಮಹೇಶ ಗಂಗಾವತಿ, ಬಸವರಾಜ ...ಪತಿ, ಸಣ್ಣ ಹುಸೇನವ್ವ, ಮಂಜುನಾಥ ...ೂರ, ಮರ್ದಾನಸಾಬ ಕಿನ್ನಾಳ, ಮಂಜುನಾಥ ಹುಲ್ಲತ್ತಿ ...ಬಿವವರಿಗೆ ಸರ್ಕಾರಿ ನಿಯಮದ ಪ್ರಕಾರ ಹಣ ...ಂದಾಯವಾಗಲೇ ಇಲ್ಲ, ಕೆಹೆಚ್‌ಬಿ ನಿಯಮದ ಅನುಸಾರ ...ಮಾಲೀಕರಿಗೆ ಕ್ರಾಸ್ ಚೆಕ್ ಮೂಲಕ ಹಣ ನೀಡಬೇಕಿತ್ತು,



ಕ್ರಾಸ್ ಚೆಕ್ ಮೂಲಕ ಹಣ ಕೊಟ್ಟರೆ ಕಮೀಷನ್‌ಗೆ ಕತ್ತರಿ ಬೀಳುತ್ತದೆಂದು ಲೆಕ್ಕಹಾಕಿದ ನಿಲೊಗಲ್ ಸರ್ಕಾರಿ ಆದೇಶವನ್ನು ಗಾಳಿಗೆ ತೂರಿ ಹೊಸ ಸ್ಕೀಂವೊಂದನ್ನು ಜಾರಿಗೆ ತಂದ.

ರೈತರ ಹೆಸರಲ್ಲಿ ಪ್ರತಿ ಎಕರೆಗೆ ಏಳು ಲಕ್ಷದಂತೆ ಅವರವರ ಪಹಣಿ ಪತ್ರದ ಅನುಸಾರ ಸಿದ್ಧವಾಗಿದ್ದ ಕ್ರಾಸ್ ಚೆಕ್‌ಗಳನ್ನು ಭ್ರಷ್ಟ ನಿಲೊಗಲ್ ಹರಿದು ಕಸದ ಬುಟ್ಟಿಗೆ ಹಾಕಿದ. ಈ ವ್ಯವಹಾರದಲ್ಲಿ ಮಧ್ಯಸ್ಥಿಕೆ ವಹಿಸಿಕೊಳ್ಳಲು ಅಡಕಸುಬಿ ಸುನಿಲ್ ಕುಮಾರ ಎಂಬಾತನನ್ನು ಛೂಬಿಟ್ಟ. ರೈತರಿಗೆ ಗೊತ್ತಾಗದಂತೆ ಅವರಿಂದ ಪರ್ಸೆಂಟೇಜ್‌ಗೆ ತಕ್ಕಂತೆ ಲೆಕ್ಕ ಹಾಕಿ ಒಂದು ಪತ್ರ ಬರೆಯಿಸಿಕೊಂಡ ಸುನಿಲ್ ಕುಮಾರ್ ಅದಕ್ಕೆ ರೈತರಿಂದ ಸಹಿ ಪಡೆದ. ಆ ಪತ್ರದಲ್ಲಿ ಇಂತಿಷ್ಟು ಹಣ ಸುನಿಲ್ ಕುಮಾರ ಹೆಸರಿಗೆ ಸಂದಾಯ ಮಾಡಿ ಎಂದು ಬರೆಯಲಾಗಿತ್ತು, ಉಳಿದ ಹಣಕ್ಕೆ ಮಾತ್ರ ಅಸಲಿ ರೈತರ ಹೆಸರಿಗೆ ಚೆಕ್ ನೀಡಲಾಯಿತು. ಹೀಗೆ ಸುನಿಲ್ ಕುಮಾರನ ಹೆಸರಿಗೆ ಬರೋಬ್ಬರಿ ಒಂದು ಕೋಟಿ ಇಪ್ಪತ್ತೂರು ಲಕ್ಷ ಹಣ ಸಂದಾಯವಾಗಿ ನಿಲೊಗಲ್ ತಿಜೋರಿ ಸೇರಿತು.



ನಿಲೊಗಲ್


ಶಿವರಾಮೇಗೌಡ

ಕೆಹೆಚ್‌ಬಿಗೆ ಭೂಮಿ ನೀಡಿದ್ದ ನಿಲೋಗಲ್‌ನ ಮೋಸವನ್ನರಿತ ಸಣ್ಣ ಹುಸೇನವ್ವ ಎಂಬ ರೈತ ಮಹಿಳೆ ನಿಲೊಗಲ್ ವಿರುದ್ಧ ಜಿಲ್ಲಾಧಿಕಾರಿಗೆ ದೂರು ನೀಡಿದಳು. ಆ ಪ್ರಕಾರ ಇವನ ಮೇಲೆ ಇಲಾಖೆ ತನಿಖೆ ಕೂಡ ಜರುಗಿತು. ತನಿಖೆ ಕೈಗೊಂಡ ಉಪವಿಭಾಗಾಧಿಕಾರಿ ಗಂಗೂಬಾಯಿ ಮಾನಕರ್ ಅವರು ನಿಲೊಗಲ್ ಪಕ್ಕಾ 420 ಎಂದು ಸರ್ಕಾರಕ್ಕೆ ವರದಿ ನೀಡಿದರು. ಇವನ ವಿರುದ್ಧ ಸರ್ಕಾರಕ್ಕೆ ವಂಚನೆ, ಹಣ ದುರುಪಯೋಗ ಹಾಗೂ ಜನರಿಗೆ ಮೋಸ ಮಾಡಿದ ಪ್ರಕರಣ ದಾಖಲಾಯಿತು. ಆದರೂ ಭ್ರಷ್ಟ ನಿಲೊಗಲ್‌ನನ್ನು ಬಂಧಿಸುವ ಕೆಲಸ ಮಾತ್ರ ಕಳೆದ ಮೂರು ವರ್ಷಗಳಿಂದ ಆಗಿಲ್ಲ. ಶಾಸಕ ಸಂಗಣ್ಣ ಮತ್ತು ಸಂಸದ ಶಿವರಾಮೇಗೌಡನ ನೆರಳಲ್ಲಿ ಈತ ಇಂದಿಗೂ ತನ್ನ ಲೂಟಿ ಕಾಯಕವನ್ನು ನಿಯತ್ತಾಗಿ ಮುಂದುವರೆಸಿದ್ದಾನೆ.

ಹಳ್ಳದಲ್ಲಿ ಮನೆಕಟ್ಟಿದರು

ಹೌಸಿಂಗ್ ಬೋರ್ಡ್ ಹಳ್ಳದಲ್ಲಿ ಮನೆಕಟ್ಟಿ ಬಡವರಿಗೆ ನೀಡುತ್ತಿದೆ. ಜಿಲ್ಲಾಧಿಕಾರಿ ಕಚೇರಿ ಹತ್ತಿರ ಕೆಹೆಚ್‌ಬಿ ಖರೀದಿಸಿರುವ ಜಮೀನು ಮನೆ ನಿರ್ಮಾಣಕ್ಕೆ ಯೋಗ್ಯವಾದುದಲ್ಲ. ಮಳೆಗಾಲದ ನಾಲ್ಕೈದು ತಿಂಗಳು ತುಂಬಿ ಹರಿಯುವ ಹಳ್ಳದ ಪಕ್ಕದಲ್ಲೇ ಈ ಜಾಗವಿದೆ. ಕಪ್ಪು ಎರಿ ಮಣ್ಣಿನ ಈ ನೆಲದಲ್ಲಿ ಮನೆಗಳಿಗೆ ಗಟ್ಟಿ ಅಡಿಪಾಯ ಹಾಕುವುದು ಅಸಾಧ್ಯ, ಅಲ್ಲದೆ, ಕಳೆದ 2009ರ ಅತಿವೃಷ್ಟಿ ಹಾಗೂ ತೀವ್ರ ಮಳೆಗಾಲದಲ್ಲಿ ಹಳೇ ಹಳ್ಳದ ಪ್ರವಾಹಕ್ಕೆ ಈಡಾದ ಪ್ರದೇಶವಿದು. ಈ ಜಾಗೆಯಲ್ಲಿ ಸ್ವಂತ ಸೂರಿನ ಬಗ್ಗೆ ಕನಸು ಕಟ್ಟಿಕೊಂಡಿರುವ ಬಡ ಮತ್ತು ಮಧ್ಯಮ ವರ್ಗದ ಜನ ಅದು ಹೇಗೆ ಬದುಕುತ್ತಾರೆ ಎಂಬ ಪ್ರಶ್ನೆ ಮನೆ ನಿರ್ಮಾಣದ ಹಂತದಲ್ಲಿರುವಾಗಲೆ ಭಯ ಸೃಷ್ಟಿಸಿದೆ.


ಸಂಗಣ್ಣ ಕರಡಿ

ಜಾಡಿಸಿ ಒದ್ದರೆ ಬೀಳುವಂಥಾ ಮನೆಗಳು

ನಿಲೊಗಲ್ ಬೇಕಾಬಿಟ್ಟಿ ಕಾಮಗಾರಿಗೆ ಹಸಿರು ನಿಶಾನೆ ತೋರಿಸಿ ಬಿಟ್ಟಿದ್ದಾನೆ. ಕೆಹೆಚ್‌ಬಿ ನಿರ್ಮಿಸುತ್ತಿರುವ ಮನೆಗಳ ಲೇಔಟ್‌ನಲ್ಲಿ ಮೊದಲಿಗೆ ರಸ್ತೆ, ಚರಂಡಿ, ನೀರು, ವಿದ್ಯುತ್ ಸಂಪರ್ಕಗಳಂತಹ ಮೂಲಭೂತ ಸೌಕರ್ಯಗಳನ್ನು ನಿಯಮದ ಪ್ರಕಾರ ಕಲ್ಪಿಸಬೇಕು. ಆದರೆ ಅದ್ಯಾವುದೂ ಇಲ್ಲಿ ನಡೆದಿಲ್ಲ, ಬದಲಾಗಿ ರಸ್ತೆ ನಿರ್ಮಾಣಕ್ಕೆ 40 ಎಮ್.ಎಮ್.ನ ಖಡಿ ಹಾಕದೆ, ಕೇವಲ ಕೆಂಪು ಮೊಹರಂ ಮಣ್ಣನ್ನು ಹಾಕಲಾಗಿದೆ. ಇನ್ನು ಚರಂಡಿ, ವಿದ್ಯುತ್ ಕಂಬಗಳ ಸುಳಿವೇ ಇಲ್ಲ, ಆದರೂ ಮನೆ ನಿರ್ಮಾಣಕ್ಕೆ ಎಸ್.ಪಿ.ಆರ್ ಕಂಪನಿ ಮುಂದಾಗಿದೆ.

ಇಲ್ಲಿ ಎರಡು ಗುಂಪಿನಲ್ಲಿ 40 ಮನೆಗಳು ನಿರ್ಮಾಣವಾಗಬೇಕಿದೆ. ಮೊದಲನೆಯದು 30x50 ಅಳತೆಯ ಎಮ್.ಐ.ಜಿ. ಗುಂಪಿನ 20 ಮನೆಗಳು. ಇಂತಹ ಪ್ರತಿ ಮನೆಯ ನಿರ್ಮಾಣದ ವೆಚ್ಚ 10 ಲಕ್ಷ. ಅಂದರೆ 20 ಮನೆಗಳಿಗೆ ಒಟ್ಟು ಎರಡು ಕೋಟಿ ರೂ. ಎರಡನೆಯದು 20x30 ಅಳತೆಯ ಎಲ್.ಐ.ಜಿ. ಗುಂಪಿನ 20 ಮನೆಗಳು. ಇವುಗಳ ತಲಾ ವೆಚ್ಚ ಆರು ಲಕ್ಷ. ಅಂದರೆ 20 ಮನೆಗಳಿಗೆ ಒಟ್ಟು ಒಂದು ಕೋಟಿ ಇಪ್ಪತ್ತು ಲಕ್ಷ ರೂ.

ಆದರೆ ಈ ಮನೆಗಳ ಪಿಲ್ಲರ್ 9x6 ಅಳತೆಯ ಬದಲು ಕೇವಲ 6x6ರಲ್ಲಿವೆ. ಕೆಳಗೆ ಬುನಾದಿಯಿಲ್ಲದೆ ಒಳಗೋಡೆಗಳ ಬೇಸ್‌ಮೆಂಟ್ ಕಟ್ಟಿದ್ದಾರೆ. ಬರೀ ಬೀಮ್ ಹಾಕಿದ್ದಾರೆ. ಅದರ ಮೇಲೆ ಒಂಬತ್ತು ಇಂಚಿನ ಒಳಗೋಡೆ ಬದಲು ಒಂದು ಇಟ್ಟಿಗೆಯ ಗೋಡೆಯನ್ನು ಕಟ್ಟುತ್ತಿದ್ದಾರೆ. ಇವುಗಳಿಗೆ ಬಳಸಲಾಗುತ್ತಿರುವ ಇಟ್ಟಿಗೆಗಳಂತೂ ಸಂಪೂರ್ಣ ಕಳಪೆ ಮಟ್ಟದ್ದಾಗಿವೆ. ಮಳೆ ಬಂದರೆ ತೇಲಿ ಹೋಗುವಂಥ ಇಂತಹ ಮನೆಗಳ ನಿರ್ಮಾಣದ ಸಾರಥ್ಯ ವಹಿಸಿರುವ ನಿಲೊಗಲ್ ಬರುವ ದಿನಗಳಲ್ಲಿ ಅದೆಷ್ಟೋ ಜನರ ಪ್ರಾಣ ತೆಗೆಯಲು ಸ್ಕೆಚ್ ಹಾಕಿದ್ದಾನೆ.

ಇಷ್ಟೆಲ್ಲ ಅವ್ಯವಹಾರ ನಡೆಯುತ್ತಿದ್ದರೂ ಜನಹಿತ ಬಯಸುವ ಭರವಸೆಯೊಂದಿಗೆ ಚುನಾಯಿತರಾದ ಶಾಸಕ ಸಂಗಣ್ಣ ಕರಡಿ ಮತ್ತು ಸಂಸದ ಶಿವರಾಮೇಗೌಡ ಜೊತೆಗೂಡಿ ನಿಲೊಗಲ್‌ನನ್ನು ಜೈಲಿಗೆ ಅಟ್ಟುವುದನ್ನು ಬಿಟ್ಟು ಬಗಲಲ್ಲಿಟ್ಟುಕೊಂಡು ಮುಗ್ಧ ಬಡ ಮತ್ತು ಮಧ್ಯಮ ವರ್ಗದ ಜನರ ಬದುಕಿನ ಆಸೆ ಮತ್ತು ಜೀವದ ಜೊತೆ ಚೆಲ್ಲಾಟವಾಡುತ್ತಿರುವುದು ಜನದ್ರೋಹವಲ್ಲವೇ?

• ವರದಿಗಾರ

ಬೌದ್ಧಿಕ ದಿವಾಳಿತನವನ್ನು ಬಿಂಬಿಸುವ 'ಅವಮಾನ'ದ ವ್ಯಾಖ್ಯಾನ



'ಪ್ರಜಾವಾಣಿ'ಯ ಜನವರಿ 16, 2011ರ ಸಾಪ್ತಾಹಿಕ ಪುರವಣಿಯಲ್ಲಿ ಕೆ.ವಿ. ಅಕ್ಷರ ಅವರ 'ಹರಕೆ ಹರಾಜು: ಯಾವುದು ಸಹಜ? ಯಾವುದು ಅವಮಾನ?' ಲೇಖನಕ್ಕೆ ನನ್ನದೊಂದು ಪ್ರತಿಕ್ರಿಯೆ.

ಅಕ್ಷರ ಅವರ ವಿಚಾರಲಹರಿ ನಮ್ಮ ಸಮಸಮಾಜದ ಕನಸು ಕಾಣುವ ಮನಸ್ಸುಗಳಿಗೆ ಮಾಡಿದ ಅವಮಾನದಂತೆಯೂ ಅಕ್ಷರರಂಥವರ ಅಕ್ಷರದ ಬೌದ್ಧಿಕತೆಗೆ ಬಡಿದಿರುವ ಪೂರ್ವಗ್ರಹದ ಬಾಧೆಯಂತೆಯೂ ಕಾಣುತ್ತಿದೆ. ತಮ್ಮ ವಿಚಾರದ ಕೊನೆಯಲ್ಲಿ ಅವರು '... ಇವುಗಳಲ್ಲಿ ಯಾವುದೇ ಒಂದರ ಪರವಾಗಿ ವಕಾಲತ್ತು ಮಾಡುವುದೂ ನನ್ನ ಉದ್ದೇಶವಲ್ಲ' ಎಂದು ಹೇಳುವಲ್ಲಿಯೇ ತಾವು ಯಾವುದರ ಪರವಾಗಿದ್ದಾರೆಂಬುದನ್ನು ತೋರಿಸಿಕೊಂಡಿದ್ದಾರೆ. ಅದಕ್ಕೆ ಸಾಕ್ಷಿ ಅವರ ಲೇಖನದ ಆರಂಭದಲ್ಲೇ ಇದೆ. ಮೇಲ್ವರ್ಗದ ಜನ ತಿಂದುಂಡ ಎಂಜಲೆಲೆಯ ಮೇಲೆ ಜನರು ಉರುಳಾಡುವುದು ಅವರಿಗೆ ನಗಣ್ಯವೆನ್ನಬಹುದಾದ ಘಟನೆ. ಅವರ



ಲೇಖನದ ಶೀರ್ಷಿಕೆಯೇ ಹೇಳುವಂತೆ ಅದು ಈ ಸಮಾಜದಲ್ಲಿ ನಡೆಯಬಹುದಾದ 'ಸಹಜ' ಕ್ರಿಯೆ. ಅವರ ಪ್ರಕಾರ ಅದು ಮನುಷ್ಯನೊಬ್ಬನಿಗೆ ಮಾಡುವ ಅವಮಾನವೇನೂ ಅಲ್ಲ; ಅಸಮಾನತೆಯನ್ನು ಮತ್ತಷ್ಟು ಉತ್ತೇಜಿಸುವ, ಪಾವಿತ್ರ್ಯ-ಅಪಾವಿತ್ರ್ಯದ ಹುಸಿಯನ್ನು ವೈಭವೀಕರಿಸುವ, ಶ್ರೇಷ್ಠ-ಕನಿಷ್ಠದ ತಾರತಮ್ಯ ಬಿತ್ತುವ, ಮೇಲು-ಕೀಳನ್ನು ಎತ್ತಿ ಹಿಡಿಯುವ ಆಚರಣೆಯಂತೆ ಅದನ್ನು ನೋಡಬೇಕಿಲ್ಲ. ಹಾಗಾಗಿ ಅವರು ಅಂತಹುದೊಂದು ಮೌಢ್ಯದ ಪರವಾಗಿದ್ದಾರೆಂದು ಹೇಳಬಹುದು.

ಅವಮಾನ ಎನ್ನುವುದರ ಕುರಿತೂ ಅಕ್ಷರ ಅವರು ತಮಗೆ ಗೊಂದಲವಿರುವುದಾಗಿ ಹೇಳಿಕೊಂಡಿದ್ದಾರೆ; ಇದು ತಪ್ಪೇನೂ ಅಲ್ಲ, ಯಾಕೆಂದರೆ ಅಪಮಾನವೆಂಬುದನ್ನು ಅಕ್ಷರರಂಥವರೇನೂ (ಸಾಮಾಜಿಕವಾಗಿ, ದೈಹಿಕವಾಗಿ) ಅನುಭವಿಸಿದವರಲ್ಲವಲ್ಲ! ಸ್ವತಃ ಅಪಮಾನಿತನಿಗೇ ತನಗೆ ಆಗುತ್ತಿರುವುದು ಅಪಮಾನ ಎಂದು ಗೊತ್ತಿಲ್ಲದಿರುವುದರಿಂದ ಅದು ಅವಮಾನ ಅಥವಾ ಶೋಷಣೆ ಎನ್ನಿಸಿಕೊಳ್ಳುವುದಿಲ್ಲ ಎನ್ನುವುದು ಅಕ್ಷರ ಅವರ ವಾದ. ಹಾಗಾದರೆ ಮಲ ತಿನ್ನಿಸಿಕೊಂಡ, ತಲೆಯ ಮೇಲೆ ಮಲ ಸುರಿದುಕೊಂಡ ದಲಿತರಿಗೆ, ಬೆತ್ತಲೆ ಹರಕೆ ಸಲ್ಲಿಸುವ ಹೆಣ್ಣುಮಕ್ಕಳಿಗೆ ತಾವು ಅನುಭವಿಸುತ್ತಿರುವುದು ಅವಮಾನವೆಂದು ತಿಳಿದಿಲ್ಲವಾದರೆ ಅದನ್ನು ಅಕ್ಷರ ಅವರ ಪ್ರಕಾರ ಅಪಮಾನವೆಂದು ಭಾವಿಸಕೂಡದು! ಬದಲಿಗೆ ಅದನ್ನೊಂದು ಸಹಜವಾದ ಸಾಮಾಜಿಕ ಕ್ರಿಯೆಯೆಂಬಂತೆ ನೋಡಬೇಕು; ಅಥವಾ ನಮ್ಮ ಸಮಾಜ ಇರುವುದು ಹೀಗೆಯೇ ಎಂದು ನಾವೆಲ್ಲರೂ ತಿಳಿದುಕೊಳ್ಳಬೇಕು. ನಮ್ಮ ಅನುಭವಕ್ಕೆ ಬಾರದ ಯಾವುದನ್ನೂ ನಾವು ಶೋಷಣೆ ಎಂದಾಗಲೀ, ಅತ್ಯಾಚಾರವೆಂದಾಗಲೀ ಕರೆಯಕೂಡದು ಎಂಬ ಅಕ್ಷರ ಅವರ ವಾದ ಕೇವಲ ವಿತಂಡವಾದವಾಗಿದೆ. ಹೀಗೆ ವಿತಂಡವಾದ ಹೂಡುತ್ತಾ ಹೋಗುವುದೇ ಆದರೆ, ನಾವು ಕೊಲೆಗೀಡಾಗುವ ಮನುಷ್ಯನನ್ನು, ಅತ್ಯಾಚಾರಕ್ಕೊಳಗಾಗುವ ಹೆಣ್ಣುಮಗಳೊಬ್ಬಳನ್ನು, ದಬ್ಬಾಳಿಕೆಗೊಳಗಾಗುವ ಶೋಷಿತನೊಬ್ಬನನ್ನು ಸುಲಭವಾಗಿ 'ಬ್ರೈನ್ ವಾಷ್' ಮಾಡಿ 'ನಿಮ್ಮ ಮೇಲೆ ನಡೆಯುತ್ತಿರುವುದು ಕೊಲೆ, ಅತ್ಯಾಚಾರ, ದಬ್ಬಾಳಿಕೆ, ಶೋಷಣೆ ಅಲ್ಲ' ಎಂದು ನಂಬಿಕೆ ಹುಟ್ಟಿಸುವುದು ಸುಲಭ ಎಂದಾಯಿತು!

ತನಗೆ ಅವಮಾನ ಆಗುತ್ತಿದೆಯೋ ಇಲ್ಲವೋ ಎಂಬುದನ್ನು ತೀರ್ಮಾನಿಸುವಾತ ಸ್ವತಃ ಆ ಅವಮಾನಿತನೇ ಆಗಿರಬೇಕೇ ಹೊರತು, ಆತನ ಪರವಾಗಿ ಇನ್ನೊಬ್ಬರು 'ಅವನಿಗೆ ಅವಮಾನವಾಗುತ್ತಿದೆ ಎಂದು ತೀರ್ಮಾನಿಸಲಾಗದು' ಎಂಬ ಅಕ್ಷರ ಅವರ ಇನ್ನೊಂದು ಥಿಯರಿ ಅಪ್ರಬುದ್ಧವಾದುದು. ಹಾಗೆ ಶೋಷಣೆ-ಅವಮಾನದ ಅರಿವನ್ನು ಶೋಷಿತರು-ಅವಮಾನಿತರಲ್ಲಿ ಬಿತ್ತದೆ ಹೋಗಿದ್ದರೆ ಜಗತ್ತಿನಲ್ಲಿ ಇಷ್ಟೆಲ್ಲ ಮಾನವಂತರು ಇಷ್ಟೆಲ್ಲ ಮಾನವಪರ ಚಳವಳಿಗಳಿಗೆ ಸಾಕ್ಷಿಗಳಾಗಲು ಸಾಧ್ಯವೇ ಆಗುತ್ತಿರಲಿಲ್ಲ; ಗಾಂಧಿ, ಅಂಬೇಡ್ಕರ್ ರಂಥವರು ಅಪಮಾನಿತರ ಪರವಾದ ನಾಯಕರಾಗಿ ಉಳಿಯಲು ಸಾಧ್ಯವಾಗುತ್ತಿರಲಿಲ್ಲ. ಸ್ವತಃ ಸಂಸ್ಕೃತಿ ಚಿಂತಕರಾದ ಅಕ್ಷರ ಅಂಥವರಿಗೆ ಇದು ಗೊತ್ತಿಲ್ಲದ ಸಂಗತಿಯೇನಲ್ಲ.

ಮೇಲ್ವರ್ಗದ ಜನ ತಿಂದುಂಡ ಎಂಜಲೆಲೆಗಳ ಮೇಲೆ ಜನ ಹೊರಳಾಡುವುದು ಮೌಢ್ಯ, ಶ್ರೇಷ್ಠತೆಯನ್ನು ಪ್ರತಿಷ್ಠಾಪಿಸುವುದರ ಕುತಂತ್ರ ಎಂಬುದು 2011ರಲ್ಲಿ ಬದುಕುತ್ತಿರುವ ಅಕ್ಷರರಂಥ 'ವಿಚಾರವಂತ'ರಿಗೆ ಅವಮಾನ ಎನ್ನಿಸಿದ್ದಕ್ಕಿಂತಲೂ ಕ್ರಿಕೆಟಿಗರ ಹರಾಜು ಪ್ರಕ್ರಿಯೆಯೇ ದೊಡ್ಡ ಅವಮಾನ ಎಂದು ಭಾವಿಸುವ ಅವರ ವೈಚಾರಿಕತೆಯೇ ಅರೆಬರೆಯಾದುದು. ಕ್ರಿಕೆಟಿಗರು ಹರಾಜಾಗುವುದು ಈ ದೇಶ ತಲುಪಿರುವ ಬೌದ್ಧಿಕ ದಿವಾಳಿತನಕ್ಕೆ ಉದಾಹರಣೆ ಎಂಬುದರಲ್ಲಿ ಎರಡು ಮಾತಿಲ್ಲ. ಕ್ರಿಕೆಟಿಗರನ್ನು ಸಮೂಹಸನ್ನಿಯ ತೆರದಿ ಆರಾಧಿಸುವ, ಸೌಂದರ್ಯ ಸ್ಪರ್ಧೆಗಳ, ರಿಯಾಲಿಟಿ ಶೋಗಳ ವಿಕೃತಿಯನ್ನು ಪೂಜಿಸುವ, ಟೀವಿ ಚಾನೆಲ್‌ಗಳ ಜ್ಯೋತಿಷ್ಯ-ಭವಿಷ್ಯವನ್ನು ಕುರುಡಾಗಿ ಅನುಕರಿಸುವ ಮಧ್ಯಮವರ್ಗದವರ ಅರೆತಿಳಿವಳಿಕೆಯಂತೆಯೇ ಇದೂ ಕೂಡ. ಅದರ ಬಗ್ಗೆ ಮಾತನಾಡಬೇಕಾದುದು ಎಲ್ಲಾ ಪ್ರಜ್ಞಾವಂತರ ಆದ್ಯತೆ ಕೂಡ. ಆದರೆ ಎಂಜಲೆಲೆಯ ಘಟನೆಗೂ ಕ್ರಿಕೆಟಿಗರ ಹರಾಜಿಗೂ ತಮ್ಮ ವಿಚಾರವನ್ನು ತಳುಕು ಹಾಕಿ ನೋಡುವ ಅಕ್ಷರ ಅವರ ಚಿಂತನೆಯೇ ಅಸ್ಪಷ್ಟತೆಯಿಂದ ಕೂಡಿದೆ. ಅಥವಾ ಅವರೇ ಹೇಳುವ ಹಾಗೆ ಮನುಷ್ಯನೊಬ್ಬನಿಗೆ ಅವಮಾನವಾಗುವುದಕ್ಕಿಂತಲೂ ಕ್ರಿಕೆಟಿಗರ ಮಾನಗೇಡಿತನವೇ ಅವರಿಗೆ ದೊಡ್ಡ ಅವಮಾನವಾಗಿ ಕಂಡಿರುವುದರ ಹಿಂದೆ ಅಕ್ಷರ ಅವರ ಸಾಮಾಜಿಕ ಚಿಂತನೆಯ ಆಯ್ಕೆ ಇದೆ.

ಇದನ್ನೊಂದು ಸಂಸ್ಕೃತಿ ಚಿಂತನೆಯಂತೆ ಬಿಂಬಿಸಲು ನೋಡುವ ಅಕ್ಷರರಂಥವರ ಬೌದ್ಧಿಕವಿಲಾಸದ ಬಗ್ಗೆ ವಿಷಾದವಾಗುತ್ತಿದೆ.

• ಮಂಜುನಾಥ್‌ಲತಾ

ವಾಮನ ಪಾದ

'ಹರಕೆ ಹರಾಜು: ಯಾವುದು ಸಹಜ? ಯಾವುದು ಅವಮಾನ?' ಎಂಬ ಲೇಖನದಲ್ಲಿ ಕೆ.ವಿ.ಅಕ್ಷರ ಅವರು ಅವಮಾನ ಎಂಬ ಪದವನ್ನು ವಿಚಿತ್ರ ತರ್ಕಗಳಿಂದ ಪುನರ್ ವ್ಯಾಖ್ಯಾನಿಸಿದ್ದಾರೆ. 'ಸ್ಥಳದ ದೃಷ್ಟಿಯಿಂದಾಗಲೀ, ಪರಿಣಾಮದ ವ್ಯಾಪ್ತಿಯಿಂದಾಗಲೀ, ಹಾಗೂ ಒಳಗೊಂಡ ಹಣದ ಪ್ರಮಾಣದಿಂದಾಗಲೀ ಅಷ್ಟೇನೂ ಮುಖ್ಯವಲ್ಲದ ಯಾವುದೋ ಒಂದು ಸಣ್ಣ ಊರಿನ, ಒಂದು ಪುಟ್ಟ ದೇವಸ್ಥಾನದಲ್ಲಿ, ಒಂದಷ್ಟು ಜನ ನಡೆಸುವ ಮಡೆಸ್ನಾನದ ಬಗ್ಗೆ ಎಷ್ಟೆಲ್ಲ ಜನ ಪ್ರತಿಕ್ರಿಯಿಸುತ್ತಿರುವಾಗ, ಕೋಟಿಗಟ್ಟಲೆ ರೂಪಾಯಿಗೆ ಹರಾಜಾಗುತ್ತ ಮಾನ ಮರ್ಯಾದೆ ಕಳೆದುಕೊಂಡು ಅವಮಾನಿತರಾಗುತ್ತಿರುವ ಕ್ರಿಕೆಟಿಗರ ಬಗ್ಗೆ ಯಾರೂ ಸೊಲ್ಲೇ ಎತ್ತುತ್ತಿಲ್ಲವಲ್ಲ ಎಂಬುದು ಅವರ ವೇದನೆ.



ಕ್ರಿಕೆಟ್ ಎಂಬುದು ಆಟವಲ್ಲ, ಧರ್ಮವಾಗಿರುವ ಈ ದೇಶದಲ್ಲಿ ಆಟಗಾರರಿಗೆ ಯಾವುದು ಮುಖ್ಯ? ದೇಶವೋ? ದೇಶಕ್ಕಾಗಿ ಆಡುವುದೋ? ದೇಶದ ಜನರ ಸಂಕಟ, ನೋವು, ಹಗರಣಗಳೋ? ಫಿಟ್ನೆಸ್ ಕಾಪಾಡಿಕೊಂಡು ಅದನ್ನು ನಗದೀಕರಿಸಿಕೊಳ್ಳುವುದೋ? ಅಭಿಮಾನಿಗಳ ಆರಾಧನೆಯೇ ಬಂಡವಾಳವಾದ ಜಾಹೀರಾತುಗಳೋ? ಅತಿ ಶ್ರೀಮಂತ ಬಿಸಿಸಿಐ ಸಂಸ್ಥೆ ಹಾಗೂ ಅದರ ಆಟಗಾರರನ್ನು ವರ್ತಮಾನದ ಯಾವುದೂ ಬಾಧಿಸುವಂತೆ ಕಾಣದು. ಇಂಥವರ ಹೆಸರಲ್ಲಿ ಜನ ಗುಡಿ, ಸಂಘ ಕಟ್ಟಿ, ಹೋಮ ಮಾಡಿ ಭಕ್ತಿ ಪ್ರದರ್ಶಿಸುತ್ತಾರೆ. ಟ್ವೆಂಟಿ ಟ್ವೆಂಟಿ ಎಂಬ ಹೊಚ್ಚಹೊಸ ವಿಕೃತ ಜೂಜಿನ ಹಿನ್ನೆಲೆಯಲ್ಲಿ ಈ ಅಭಿಮಾನಕ್ಕೆ ಆಟಗಾರರು ಅರ್ಹರೇ? ಈ ವಿಷಯದ ಬಗ್ಗೆ ನಿಜಕ್ಕೂ ಚರ್ಚೆಯಾಗಬಹುದಿತ್ತು.

ಆದರೆ ಆ ಬರಹದ ಮುಖ್ಯ ಕಾಳಜಿ ಆಟಗಾರರ ಹರಾಜಿನ ನೈತಿಕ ಪ್ರಶ್ನೆಯಲ್ಲ, ಬದಲಿಗೆ ನಂಬಿಕೆಯ ಜಗತ್ತಿನೊಳಗೆ ವಿಚಾರವಾದಿಗಳ 'ಅಕ್ರಮ' ಪ್ರವೇಶ ನಿಷೇಧಿಸುವುದೇ ಆಗಿದೆ. ಹಾಗೆಯೇ ಕ್ರಿಕೆಟಿಗರ ಹರಾಜನ್ನು ರೋಮಿನ ಗ್ಲಾಡಿಯೇಟರುಗಳ ಹರಾಜಿಗೆ, ಅವರ ಅವಮಾನವನ್ನು ಮಡೆಸ್ನಾನಕ್ಕೆ ಹೋಲಿಸಲಾಗಿದೆ! ಇದೆಂಥ ಹೋಲಿಕೆ? ಒಂದೆಡೆ ಅವಮಾನಿತನೇ ದಮನಿತನಾಗಿದ್ದರೆ, ಮತ್ತೊಂದೆಡೆ ಅವಮಾನಿತ ಕ್ರಿಕೆಟಿಗ ಐಶ್ವರ್ಯತಾರೆಯಾಗಿ ಹೊಮ್ಮುವ ಐಪಿಎಲ್ ಎಂಬ ಪ್ರಮೇಯವಿದೆ! ಹರಾಜು ಎಂಬ ಪದ ಸಾಮಾನ್ಯವಾಗಿರುವುದೊಂದನ್ನು ಬಿಟ್ಟರೆ ಎಲ್ಲಿಯ ಗ್ಲಾಡಿಯೇಟರ್? ಎಲ್ಲಿಯ ಕ್ರಿಕೆಟಿಗರು? ತಮ್ಮ ಯಜಮಾನನ ಜೂಜು-ಅಹಮಿಕೆಯ ತೆವಲಿಗೆ ಮೈ ಬೆಳೆಸಿ, ಹುಸಿ ಕದನದಲ್ಲಿ ರಕ್ತ ಸುರಿಸುತ್ತಿದ್ದ ಗುಲಾಮ ಗ್ಲಾಡಿಯೇಟರುಗಳ ಅವಮಾನ, ನೋವನ್ನು; ಕೋಟಿಗಟ್ಟಲೆಗೆ ಬಿಕರಿಯಾದ ಬಗ್ಗೆ ಸಂಭ್ರಮಾಶ್ಚರ್ಯ ವ್ಯಕ್ತಪಡಿಸುವ ಆಟಗಾರನಿಗೆ ಹೋಲಿಸಬಹುದೆ? ತನ್ನ ವೈಯಕ್ತಿಕ ಕಷ್ಟಗಳೆದುರಿಗೆ ಉಂಡೆಲೆ ಮೇಲೆ ಉರುಳಲೂ ಅಸಹ್ಯಪಡದ ಭಕ್ತರ ಮನೋವೇದನೆಯನ್ನು, ಕೋಟಿಗಟ್ಟಲೇ ಹಣ ಪಡೆಯಬೇಕಾದ ಆಟಗಾರರ 'ಅವಮಾನ'(?)ಕ್ಕೆ ಹೋಲಿಸಬಹುದೆ? ಹೋಲಿಕೆ ಸಮಪಾತಳಿಯಲ್ಲಿ ನಡೆಯಬೇಕು. ಇವೆರಡನ್ನೂ ಒಂದೇ ನೆಲೆಗೆ ತಂದು ವಿಶ್ಲೇಷಿಸಲು ಇರುವ ಪ್ರಮಾಣ ಯಾವುದು?

ವೈಯುಕ್ತಿಕ ತಲ್ಲಣಗಳು ಭಕ್ತನಿಗೂ, ನಾಸ್ತಿಕನಿಗೂ, ಬಡವನಿಗೂ, ಸಿರಿವಂತನಿಗೂ ಇವೆ. ಹೊರಬರುವ ದಾರಿಗಳನ್ನು ಅವರವರೇ ಕಂಡುಕೊಳ್ಳಬೇಕು. 'ಅವರಿಷ್ಟ ಬಂದಂತೆ ಅವರು ಮಾಡಿಕೊಳ್ಳುತ್ತಾರೆ' ಎಂಬ ಮಾನವ ಹಕ್ಕು-ಸ್ವಾತಂತ್ರ್ಯದ ಪ್ರತಿಪಾದನೆಯ ಗಡಿಯನ್ನು ಎಲ್ಲಿಯತನಕ ವಿಸ್ತರಿಸಬಹುದು? ನಂಬಿಕೆ ಆಚರಣೆಗಳ ಮೌನ ಜಗತ್ತಿನಲ್ಲಿ, ನಡುವಣ ಗೋಡೆ ಇದ್ದರೂ ತಿಳಿಯುವುದಿಲ್ಲ, ಬಿದ್ದರೂ ಸದ್ದಾಗುವುದಿಲ್ಲ. ಇಂತಹ ಸೂಕ್ಷ್ಮ ವಿಷಯದ ಕುರಿತು ಗಟ್ಟಿ ಮಾತು, ಉಪದೇಶ ಅಪೇಕ್ಷಾರ್ಹವಲ್ಲ. ಗೊತ್ತು, ಆದರೆ 'ಚಕ್ರವರ್ತಿ ತೊಟ್ಟ ಬಟ್ಟೆ' ಹೇಗಿದೆಯೆಂಬ ನಗ್ನ ಸತ್ಯ ಹೇಳಲು ಮಗುವಾದರೂ ಬರಲೇಬೇಕಲ್ಲವೆ? ಹೀಗೆ ಸತ್ಯ ಹೇಳಹೊರಟವರನ್ನೆ ಕಲಿತ ಪಂಡಿತರು ಮಾನವ ಹಕ್ಕು, ಸ್ವಾತಂತ್ರ್ಯದ ಹೆಸರಿನಲ್ಲಿ ಕತ್ತಿ ಹಿರಿದು ಹತ್ತಿಕ್ಕ ಹೊರಡುವುದನ್ನು ನೋಡಿದರೆ, ಕವಿಮಾತಿನ ಸತ್ಯ ಅರಿವಾಗುತ್ತದೆ. 'ಆವಾವ ಆಭರಣಗಳಂ ತೊಟ್ಟೊಡೆ ತೊಗಲ್ ಪೊನ್ನಾಗುವುದೇ?'

ಮೇಲಿನ ಕುರ್ಚಿಯಲ್ಲಿ ಕುಳಿತವ, ಅವಮಾನಿತ, ವೀಕ್ಷಕ ಎಂಬ ಚಿತ್ರಣದೊಂದಿಗೆ ಆ ಬರಹದಲ್ಲಿ ಉಲ್ಲೇಖಿಸಿರುವ 'ರೂಪಕ' ಒಂದಿದೆ. ಆಹಾ ಎಂಥ ರೂಪಕ!! ಇನ್ನೊಂದು ರೂಪಕದ ಮೂಲಕವೇ ಇದಕ್ಕುತ್ತರಿಸಬೇಕು. ಮೊನ್ನೆ ಬೂದಾಳು ನಟರಾಜ್ ಹಾವೇರಿಯಲ್ಲಿ ಮಾತನಾಡುತ್ತಾ ಹೇಳಿದರು: 'ಕ್ರಿಸ್ಟೋಫರ್ ಕೊಲಂಬಸ್ ಮೊದಲ ವಸಾಹತುಶಾಹಿ ಎನ್ನುತ್ತಾರೆ. ಆದರೆ ಮೊದಲ ವಸಾಹತುಶಾಹಿ ವಾಮನ. ಅವನು ತಲೆ ಮೇಲಿಟ್ಟು ತುಳಿದ ಕಾಲನ್ನು ಇನ್ನೂ ಆಚೆ ಸರಿಸಲಾಗಿಲ್ಲ.' ವಾಮನ ಪಾದದ ಅಗಲ, ಶಕ್ತಿ ಇರುವುಗಳನ್ನು ತಿಳಿಸುವುದು ಇಂಥ ಬರಹಗಳೇ.

ಅವಮಾನದ ಮೂಲ ಇರುವುದು ಭೂತದಲ್ಲಿ, ಅನುಭವವಾಗುತ್ತಿರುವುದು ವರ್ತಮಾನದಲ್ಲಿ. ಇಂಥ ಹೊತ್ತಲ್ಲಿ ಅಮೂರ್ತ ನೋವಿನಿಂದ ಭವಿಷ್ಯದಲ್ಲಾದರೂ ಬಿಡುಗಡೆ ದೊರೆವ ಕಡೆಗೆ ಒಂದೆರಡು ಹೆಜ್ಜೆ ಮುಂದಿಡಬೇಕಾದರೆ ಅಂತಃಕರಣವಿಲ್ಲದ ಹೋಲಿಕೆ, ತರ್ಕಗಳಿಂದ ಖಂಡಿತ ಸಾಧ್ಯವಿಲ್ಲ.

• ಡಾ. ಎಚ್. ಎಸ್. ಅನುಪಮಾ

ಹೀಗೊಂದು ಗೋವಿನ ಹಾಡು

ಈ ತನಕ ಇದ್ದೆ ಇನ್ನಿಲ್ಲ
ಅಮ್ಮಾ ನೀನೆಂದರೆ ನನಗೆ
'ಗೋವಿನ ಹಾಡು' ನೆನಪಾಗುತ್ತದೆ.

ಬಡವಳಾದ ನಿನ್ನನ್ನು
ಸಂಪತ್ತಿನ ಬಗ್ಗೆ ಕೇಳಿದರೆ
ಹೆಮ್ಮೆಯಿಂದ ಮಕ್ಕಳ ಮುಖ ನೋಡುತ್ತಿದ್ದೆ.
ಕೂಲಿ ಮಾಡಿ, ಮಕ್ಕಳಿಗೆ ತುತ್ತುಣಿಸಿ,
ನೀನು ತಿನ್ನುತ್ತಿದ್ದೋ-
ಕಣ್ಣೀರ ಕುಡಿದು ಮಲಗುತ್ತಿದ್ದೋ
ನಿನಗೇ ಗೊತ್ತು.

ಬೆಳಗಾಗ ಮಡಿಯುಟ್ಟು-ತಲೆಬಾಚಿ,
ಮಕ್ಕಳನ್ನೆಲ್ಲ ಒಪ್ಪಮಾಡಿ,
'ನೇಗಂಜಿ ಬಾಳು......' ಎಂದು
ಕಿವಿಮಾತ ಹೇಳುತ್ತಿದ್ದೆ.
ಕಷ್ಟಗಳ ಮುಚ್ಚಿಟ್ಟು
ಕೊರತೆಗಳ ಬಚ್ಚಿಟ್ಟು
ಬಡತನಕೆ ಗೌರವ ತಂದು ಗೌರಮ್ಮನಾದೆ


ಅಂತಿಂತು ಪರದಾಡಿ
ಮಕ್ಕಳಿಗೆ ನೆಲೆ ಮಾಡಿ
ಅವಸಕ್ಕಸೆ ಎಂದು ಆಕಾಶಕ್ಕೆ
ಕೈ ಮುಗಿಯುತ್ತಿದ್ದೆ.

ಅಮ್ಮಾ, ನೀನುಟ್ಟು ಬಿಟ್ಟುಹೋದ ಹತ್ತಿಸೀರೆ
ಇದನ್ನು ನಾನು ಉಡುವುದಿಲ್ಲ;
ಉಟ್ಟು ಹರಿಯುವುದಿಲ್ಲ;
ಅಳಲು ಒತ್ತರಿಸಿದಾಗ ಹೊದ್ದು ಮಲಗುತ್ತೇನೆ.


ಅಮ್ಮ ನೆನಪಾದಾಗಲೆಲ್ಲಾ
'ಗೋವಿನ ಹಾಡು' ನೆನಪಾಗುತ್ತದೆ
ಕಾಡಿನಲ್ಲಿ ವ್ಯಾಘ್ರ, ಕೊಂದು ತಿನ್ನುವುದಿಲ್ಲ
ಆದರೆ ಇಲ್ಲಿ 'ವ್ಯಾಘ್ರ' ಕೊಂದು ತಿಂದಿದ್ದಾನೆ!


ನಾನೀಗ ತಬ್ಬಲಿ.

• ಪ್ರೇಮಲೀಲಾ ಕಲ್ಕೆರೆ



ಮಂಗನ ಬ್ಯಾಟೆ





4

ದಿನಗಳು ಕಳೆದಂತೆ ಮಂಗಗಳ ಹಾವಳಿ ಎಷ್ಟು ನಾಯಿತೆಂದರೆ ಅನೇಕರು ಮನೆಯನ್ನೇ ಬದಲಾಯಿಸ ಾಭಿಸಿದರು. ದಿನದಿನಕ್ಕೂ ಮಂಗಗಳ ವಿರುದ್ಧ ಮುನ್ಸಿ ಟಿಗೆ ಅರ್ಜಿ ಮೇಲೆ ಅರ್ಜಿಗಳು ಬರುವುದು ಯಿತು.

ತ್ತೀಚೆಗೆ ಮುನ್ಸಿಪಾಲಿಟಿಯವರು ನೆಲದ ಮೇಲೆ ತುವ ಬೀದಿ ನಾಯಿಗಳನ್ನು ಹಿಡಿಯುವ ವ್ಯವಸ್ಥೆ ಕೊಂಡಿದ್ದಾರೆ. ಅದಕ್ಕೂ ಮುಂಚೆ ಬೀದಿ ದನಗಳನ್ನೂ ಪಾಲಿಟಿಯವರು ಹಿಡಿದು ಅವುಗಳನ್ನು ಹರಾಜು ತ್ತಿದ್ದರು. ಆದರೆ ಯಾವಾಗ ರಾಮ ಸೈನಿಕರ ಕಾಟ ವಾಯಿತೋ ಆಗ ಅಂತಹ ಹರಾಜುಗಳು ನಿಂತು ದವು. ಪರಿಣಾಮವಾಗಿ ಪೇಟೆಯ ರಸ್ತೆಗಳು ದನಗಳ ಯಿಂದ ತುಂಬಿರುತ್ತೆ ಮುನ್ಸಿಪಾಲಿಟಿಯವರಿಗೆ ಪ್ಲಾಸ್ಟಿಕ್ ಗೆ ಸಗಣಿ ಬಾಚುವುದೇ ದೊಡ್ಡ ಕೆಲಸವಾಗಿದೆ.

ಪೇಟೆ ನಾಯಿಗಳಿಗೆ ವರ್ಷಕ್ಕೊಂದು ಬಾರಿ ಹುಚ್ಚು ಯುವುದು ಗ್ಯಾರಂಟಿ. ಹುಚ್ಚು ನಾಯಿಗಳು ಮೊದಲು ವುದೇ ಜಾನುವಾರುಗಳಿಗೆ. ಹಾಲು ಕರೆಯದ ಹಸು ದ ಹಿಡಿದು ಮುದಿಯಾದ ಎತ್ತುಗಳನ್ನೂ ಮಾರಬಾರ ಜಾನುವಾರು ಹತ್ಯೆ ನಿಷೇಧ ಕಾನೂನನ್ನು ಜಾರಿಗೆ ಬಿಜೆಪಿ ಸರ್ಕಾರ ಕಳೆದ ವರ್ಷ ಪ್ರಯತ್ನಿಸಿತ್ತು. ಅಕಸ್ಮಾತ್ ಜಾರಿಗೆ ಬಂದು ಹುಚ್ಚು ನಾಯಿಗಳು ದನಗಳನ್ನು ಕಚ್ಚಿ ಆ ದನಗಳಿಗೆಲ್ಲ ಹುಚ್ಚು ಹಿಡಿದು, ಯಲ್ಲಿ ಕಂಡ ಕಂಡವರ ಮೇಲೆ ಅವು ಏರಿ ಗಲಾರಂಭಿಸಿದರೆ ಏನಾಗಬಹುದು ಎಂದು ಯಾರೂ ಚಿಸಿರುವಂತಿಲ್ಲ. ಇಂತಹ ಕಾನೂನನ್ನು ಮಾಡಿದವ ಬುದ್ಧಿ ನೆಟ್ಟಗಿದೆಯಾ? ನನಗಂತೂ ಸ್ಪಷ್ಟವಾಗಿದೆ, ವಾದ ಜಾನುವಾರುಗಳನ್ನು ಸಾಕುವುದು ಕಡ್ಡಾಯ ದರೆ ಮುಂದೊಂದು ದಿನ ಜನರಿಗೆ ಈ ಬೀದಿ ಳ ಹಾವಳಿಯನ್ನು ತಡೆಯಲಾಗದೆ ಜಾನುವಾರುಗಳ ದ್ಧವೇ ಎಲ್ಲರೂ ಹೋರಾಟ ಮಾಡುವ ದಿನ ಬರುತ್ತದೆ.

ಅದೆಲ್ಲ ಇರಲಿ, ನಮ್ಮ ಕಡೆ ಸಾಬರ ಮೇಲಿನ ಸಿಟ್ಟಿ ಗಿ ಜನರಿಗೆ ತೊಂದರೆ ಕೊಡುತ್ತಿದ್ದ ಮಂಗಗಳನ್ನೂ ರು' ಎಂದು ರಾಮ ಸೈನಿಕರು ಗಲಾಟೆ ಮಾಡಿದ್ದರಿಂದ ಮಂಗಗಳ ಸಹವಾಸಕ್ಕೆ ಯಾರೂ ಹೋಗುತ್ತಿರಲಿಲ್ಲ. ಾಮವಾಗಿ ಮಂಗಗಳು ತಮ್ಮ ಸಾಮ್ರಾಜ್ಯವನ್ನು ತುಂಬ ವಿಸ್ತರಿಸಿಕೊಂಡವು. ಇವುಗಳ ಕಾಟವನ್ನು ಾರದೆ ಹಣ್ಣಿನ ಅಂಗಡಿ ಶೆಟ್ಟರ ಮಗ ಗೋಪಾಲನಿಗೆ ಾ ಸಿಟ್ಟು ಬಂತು. ಅವುಗಳನ್ನು ನಿಯಂತ್ರಿಸಲು ಮಾತ್ರೆ ಹಾಕಿ ನೋಡಿದ, ನಿದ್ರೆ ಮಾತ್ರೆ ಹಾಕಿ ಿದ. ಅವುಗಳಿಂದ ಏನೂ ಪ್ರಯೋ ಾಗಲಿಲ್ಲ. ಕೊನೆಗೊಂದು ದಿನ ್ಗಿ ಬಾಳೆಗೊನೆಗೆ ವಿಷ ಹಾಕಿ ನಲ್ಲಿಟ್ಟ. ಅದನ್ನು ತಿಂದ ಒಂದು ಮಂಗಗಳು ಯಾರ್ಯಾರದ್ದೋ ಮನೆ ಲ್ಲಿ ಸತ್ತು ನಾರಲಾರಂಭಿಸಿದವು. ತುಂಬ ಸತ್ತ ಮಂಗಗಳದ್ದೇ ನಾತ. ದರ ಬಗ್ಗೆ ಗೊತ್ತಾದಾಗ ಾಲ ಆ ಆರೋಪವನ್ನು ಅಂಗಡಿ ಹೊಂದಿದ್ದ ಸಾಬರ ಮೇಲೆ . ನಮ್ಮೂರ ಪೇಟೆಯಲ್ಲಿ ಕೊಂಕಣಿ ಕೋಮಟಿಗರನ್ನು ಬಿಟ್ಟರೆ ಸಾಬ ವ್ಯಾಪಾರ. ಸಿದ್ದಿ ಸಾಹೇಬರ ಅಂಗ ದೊಡ್ಡ ಅಂಗಡಿ ಅಂತ ಹೆಸರು. ಅರ್ಧ ವ್ಯಾಪಾರವನ್ನು ಅವರೇ ಮಾಡುತ್ತಿದ್ದರು. ದ ಊರಿನ ಇತರೆ ವ್ಯಾಪಾರಸ್ಥರಿಗೆಲ್ಲ ಅವರ ಮೇಲೆ ಆದರೆ ಸಾಬರ ವಿರುದ್ಧ ಏನನ್ನೂ ಮಾಡುವುದಕ್ಕೆ ದ ಆಗುತ್ತಿರಲಿಲ್ಲ. ಸಾಬರು ಅದೆಲ್ಲಿಂದ ಸಾಮಾನು ತರುತ್ತಿದ್ದರೋ, ಅದನ್ನ ಅರ್ಧ ದುಡ್ಡಿಗೆ ಮಾರಾಟ ತ್ತಿದ್ದರು. ಸಾಲವನ್ನೂ ಕೊಡುತ್ತಿದ್ದರು. ಪೇಟೆಯಲ್ಲಿ ್ದ ಬಟ್ಟೆ, ಬಂಗಾರ, ದಿನಸಿ, ಇತರೆ ವ್ಯಾಪಾರಗಳಿದ್ದವು. ಮರ್ಜೆನ್ಸಿಯಲ್ಲಿ ಜೈಲಿಗೆ ಹೋಗಿಬಂದ ಮೇಲೆ ್ಲ ಒಬ್ಬ ಜನಸಂಘಿ ಆಕ್ಕಪಕ್ಕದಲ್ಲಿ ಹಿಂದೂ ಸಂಘಟನೆ ಕಟ್ಟಿಕೊಂಡು ಬಾಬ್ರಿ ಮಸೀದಿ, ರಾಮ ಮಂದಿರ ಗಲಾಟೆ ಶುರು ಮಾಡಿದ. ನಮ್ಮೂರಲ್ಲೂ ರಾಮ ಅಂತಹ ಒಂದು ಸಂಘ ಕಟ್ಟಿದರು. ಮನೆಯಲ್ಲಿ ೀರು ಕೇಳೋರು ಇಲ್ಲದೆ ಅದು ಇದು ಕೆಲಸ ತ್ತಿದ್ದ ಒಂದಷ್ಟು ಹುಡುಗರು ಆ ಸಂಘವನ್ನು ಂಡರು. ಹಿಂದೂಗಳೆಲ್ಲ ಒಂದಾದ್ದರಿಂದ ಸಾಬರ ವ್ಯವಹಾರ ಇಟ್ಟುಕೊಳ್ಳಬಾರದು ಅಂತೆಲ್ಲ ಲೆಬ್ಬಿಸಿದರು.

ವು ಸ್ಪಿಸ್ಪದ ಒಬ್ಬ ಹುಡುಗ ಸಾಬರ ಅಂಗಡಿಯ ಹೋಗುತ್ತಿದ್ದ ಹುಡುಗಿಯನ್ನು 'ನನ್ನನ್ನು ಲವ್ ಅಂತ ಒತ್ತಾಯ ಮಾಡಿದ್ದನಂತೆ. ಅವಳು ಒಪ್ಪಿರಲಿಲ್ಲ, ಒಂದೂ ಹುಡುಗಿಯರನ್ನು ಸಾಬರು ಕೆಲಸಕ್ಕೆ ಳ್ಳುವುದು ಅಂತ ಕ್ಯಾತೆ ತೆಗೆದು ಒಂದು ಸಾರಿ ಮಾಡಿದ್ದರು. ಆದರೆ ಆ ಹುಡುಗಿ 'ನಮ್ಮನೇಲಿ ಕೆಲಸ ಮಾಡ್ಕೋದು. ನನ್ನ ಕೆಲಸದಿಂದ ' ಅಂತ ಗಂಡನ್ನು ಬಿಡಿಸಿಕೊಂಡಿದ್ದಳು. ಅವಳು ಕೆಲಸಕ್ಕೆ ಹೋಗುವುದನ್ನು ಮುಂದುವರೆಸಿದ್ದಳು. ಅವಳಂತೆ ಇತರೆ ಜಾತಿಯ ಸುಮಾರು ಇಪ್ಪತ್ತು ಹುಡುಗರು ಸಾಬರ ಅಂಗಡಿಗಳಲ್ಲಿ ಕೆಲಸಕ್ಕಿದ್ದರು.

ಒಂದು ದಿನ ಬೆಳಗ್ಗೆ ಅಂಗಡಿ ಹುಡುಗರೆಲ್ಲ ಮತ್ತು ಸಾಬರ ಮಗ ಅಂಗಡಿಯ ಬಾಗಿಲು ತೆಗೆದು ನೋಡುತ್ತಾರೆ... ಅಂಗಡಿಯೊಳಗೆ ಹಾರಿದ್ದ 7-8 ಮಂಗಗಳು ವಾಪಸ್ ಹೊರಗೆ ಹೋಗ ಲಾರದೇ ಅಲ್ಲೇ ರಾತ್ರಿ ಬೆಳಗು ಮಾಡಿ ದ್ದಾವೆ. ಆಗ ಅಂಗಡಿ ಹುಡುಗರು ಸಿಕ್ಕಿದ್ದೇ ಚಾನ್ಸ್ ಅಂತ ಗೋಡನ್ ಒಳಗಿದ್ದ ಮಂಗಗಳನ್ನು ಬಡಿದು ರಸ್ತೆಯಲ್ಲಿ ರಾಶಿ ಹಾಕಿದರು. ಮಂಗನ ಕಾಟದಿಂದ ತತ್ತರಿಸಿದ್ದ ಅಕ್ಕಪಕ್ಕದ ಅಂಗಡಿಯವರೂ 'ಇವನ್ನು ಹೀಗೆ ಬಡಿದು ಸಾಯಿಸಬೇಕು' ಅಂತ ಹೇಳುವ ಹೊತ್ತಿಗೆ ರಾಮ ಸೈನಿಕರಿಗೆ ವಿಷಯ ತಿಳಿಯಿತು.

ಅವರೆಲ್ಲ ಬಂದು 'ಮಂಗಗಳು ನಮ್ಮ ದೇವರು, ಅವುಗಳನ್ನು ಹೇಗೆ ಹೊಡೀತಿದ್ದೀಯಾ?' ಅಂತೆಲ್ಲ ಗಲಾಟೆ ಮಾಡಿ ಸಾಬರ ಮಗನನ್ನು ಹೊಡೆದು ತರಾಟೆಗೆ ತೆಗೆದುಕೊಳ್ಳಲಾರಂಭಿಸಿದರು. ಸಾಬರ ಅಂಗಡಿಯಿಂದ ಸಾಲ ಪಡೆದು ಕೈಎತ್ತಿದ್ದ ಜನರೂ ರಾಮ ಸೈನಿಕರ ಜೊತೆಗೂಡಿ ಮಂಗಗಳ ಹೆಣಗಳನ್ನಿಟ್ಟುಕೊಂಡು ಸಾಬರ ಅಂಗಡಿಯ ಎದುರೇ ಭಜನೆ ಶುರು ಮಾಡಿದರು. ಮಧ್ಯಾಹ್ನದ ಹೊತ್ತಿಗೆ ಅಕ್ಕಪಕ್ಕದ ಊರಿನ ಹುಡುಗರೆಲ್ಲ ತಮ್ಮ ಹಣೆಗಳ ಮೇಲೆ ಉದ್ದುದ್ದ ನಾಮ ತಿಕ್ಕಿಕೊಂಡು ಬಂದು ಭಜನೆ ಮಾಡುತ್ತಿದ್ದವರನ್ನು ಸೇರಿ ಕೊಂಡರು.

ಸಿದ್ದಿ ಸಾಹೇಬರು ಎಷ್ಟೇ ಕೇಳಿಕೊಂಡರೂ ಅವರು ಒಪ್ಪಲಿಲ್ಲ. ಕೊನೆಗೆ ಪೊಲೀಸು ಗಿಲೀಸು ಎಲ್ಲ ಬಂದು ಸಾಬರ ಮಗನನ್ನು ಊರು ಬಿಡಿಸಬೇಕು, ಆತನನ್ನು ಗಡಿಪಾರು ಮಾಡಬೇಕು, ಇಲ್ಲದಿದ್ದರೆ ಅವರ ಅಂಗಡಿಗೆ ಬೆಂಕಿ ಹಚ್ಚುತ್ತೀವಿ ಅಂತೆಲ್ಲ ಗಲಾಟೆ ಮಾಡಿದರು. ಇದೆಲ್ಲ ಮುಗಿದು ಊರು ಮತ್ತೆ ತಣ್ಣಗಾಗುವ ಹೊತ್ತಿಗೆ ಒಂದು ವಾರವೇ ಕಳೆಯಿತು. ಅಲ್ಲಿಯತನಕ ಮಂಗಗಳ ಕಾಟಕ್ಕೆ ಹೆದರಿದ್ದ ಸಾಬರು ಇದಾದ ಮೇಲೆ ಮಂಗಗಳ ವಾರಸುದಾರರಿಗೂ ಹೆದರಲಾರಂಭಿಸಿ, ಅದೇನೇ ಆದರೂ ಮಂಗಗಳೂ ಮತ್ತು ಹಿಂದೂಗಳೂ ಒಂದು ಅಂತ ಸಹಿಸಿಕೊಂಡು ಸುಮ್ಮನಾದರು!

ಕೆಲವು ಮಂಗಗಳು ಶೃಂಗೇರಿ ಮಠದ ಗೋಪುರದಲ್ಲಿ ಆಶ್ರಯ ಪಡೆದಿದ್ದವು. ಮೊದಮೊದಲು ದೇವಸ್ಥಾನಕ್ಕೆ ಬಂದ ಭಕ್ತರು ಪೂಜೆ ಮಾಡಿಸಿದ ನಂತರ ತೆಂಗಿನ ಕಾಯಿ ಮತ್ತು ಬಾಳೆಹಣ್ಣುಗಳನ್ನು ಮಂಗಗಳಿಗೆ ಕೊಡುತ್ತಿದ್ದರು. ಮಂಗಗಳು ಕೈಯೊಡ್ಡಿ ತಮ್ಮಿಂದ ಅವುಗಳನ್ನು ತೆಗೆದು ಕೊಂಡು ಹೋಗುತ್ತಿದ್ದದ್ದನ್ನು ಕಂಡು ಮಂಗಗಳ ಮೇಲೆ ದೈವಕೃಪೆ ಇದೆ ಎಂದು ಭಕ್ತರು ಭಾವಿಸುತ್ತಿದ್ದರು. ದೇವಸ್ಥಾನದ ಆವರಣದಲ್ಲಿ ಪ್ರಾಣಿಹಿಂಸೆ ಮಾಡಬಾರದು ಎಂತಲೇ ಮಂಗಗಳಿಗೆ ಯಾರೂ ಹೊಡೆಯುತ್ತಿರಲಿಲ್ಲ. ಹೀಗೆ ಜನ ಭಯ ಭಕ್ತಿಯಿಂದ ಕೊಡುತ್ತಿದ್ದ ಹಣ್ಣುಕಾಯನ್ನು ಧಾರಾಳವಾಗಿ ತೆಗೆದುಕೊಂಡು ಹೋಗುತ್ತಿದ್ದ ಮಂಗಗಳು ನಿಧಾನವಾಗಿ ಬದಲಾದವು. ಅವುಗಳ ದಬ್ಬಾಳಿಕೆ ಎಷ್ಟಾಯಿತೆಂದರೆ ಮಠದ ದೇವರಿಗಿಂತ ಈ ಮಂಗಗಳಿಗೆ ಹೆಚ್ಚು ಹೆದರುವ ಕಾಲ ಬಂತು. ಆದರೂ ಮಂಗಗಳ ಈ ಉಪದ್ರವವನ್ನು ದೇವರಿಗೋಸ್ಕರ ಸಹಿಸಿಕೊಳ್ಳಬೇಕು ಅಂತ ಅದನ್ನೂ ಮಠದವರು ಅಭ್ಯಾಸ ಮಾಡಿಕೊಂಡರು.


ಒಂದು ದಿನ ಮಠದ ಜಗದ್ಗುರುಗಳು ಸೇತುವೆ ಮೂಲಕ ನದಿಯನ್ನು ದಾಟಿ ದೇವಸ್ಥಾನಕ್ಕೆ ಬರುವ ಕಾರ್ಯಕ್ರಮವಿತ್ತು. ಅಪರೂಪಕ್ಕೆ ಆಶ್ರಮದಿಂದ ಹೊರಗೆ ನಡೆದು ಬರುತ್ತಿದ್ದ ಸ್ವಾಮಿಗಳು ಆ 300 ಅಡಿ ಉದ್ದದ ಸೇತುವೆಯನ್ನು ದಾಟಲು 10-15 ನಿಮಿಷ ತೆಗೆದುಕೊಳ್ಳುತ್ತಿದ್ದರು. ಅತ್ಯುತ್ತಮ 'ಝೆಡ್' ಕ್ಯಾಟಗರಿಯ ಸೆಕ್ಯೂರಿಟಿ ಪಡೆದುಕೊಂಡಿರುವ ಸ್ವಾಮೀಜಿಗಳು ಮುಂದೆ ನಡೆಯುತ್ತಿದ್ದರೆ ಅವರ ಪಾಳೆಯದ ಎಲ್ಲರೂ ಅವರ ಹಿಂದೆ ನಡೆದು ಹೋಗಬೇಕು. ಸ್ವಾಮೀಜಿ ಅವರ ಮುಂದೆ ಯಾರೂ ಹಾದು ಹೋಗುವಂತಿಲ್ಲ.

ಸ್ವಾಮಿಗಳು ಸೇತುವೆಯನ್ನು ದಾಟುವ ಹೊತ್ತಲ್ಲಿ ಸಾರ್ವಜನಿಕರಿಗೆ ಸೇತುವೆ ಸಂಚಾರವನ್ನು ನಿಷೇಧ ಮಾಡಲಾಗುತ್ತಿತ್ತು. ಆದರೆ ಮಠದ ಮಂಗಗಳು ಈ ನಿರ್ಬಂಧವನ್ನು ಲೆಕ್ಕಿಸುತ್ತಿರಲಿಲ್ಲ.

ಆ ದಿನ ಸ್ವಾಮೀಜಿಗಳು ಹೊಳೆ ಆಚೆಯ ತಮ್ಮ ಆಶ್ರಮದಿಂದ ಶ್ವೇತ ಛತ್ರಿಯೊಂದಿಗೆ ಹೊರಟರು. ಅವರ ಹಿಂದೆ ಶಿಷ್ಯರು, ಭಕ್ತರು ಇತ್ಯಾದಿ ಮಹಾ ಜನರಿದ್ದರು. ಸ್ವಾಮಿಗಳ ಜೊತೆಗೆ ಆಧುನಿಕ ಆಯುಧಗಳನ್ನು ಹೊತ್ತಿದ್ದ ಸರ್ಕಾರಿ ಬ್ಲಾಕ್ ಕ್ಯಾಟ್ ಕಮಾಂಡೋಗಳೂ ಇದ್ದರು. ಸೇತುವೆಯ ಎರಡೂ ಬದಿಯಿಂದ ಸಾರ್ವಜನಿಕರ ಪ್ರವೇಶ ನಿರ್ಬಂಧ ಮಾಡಿದ್ದ ಪೊಲೀಸರು ಮತ್ತು ಮಠದ ಗಸ್ತಿನವರು ನಿಂತಿದ್ದರು. ಸೇತುವೆಯ ಮೇಲೆ ಸ್ವಾಮಿಗಳು ಗಜ ಗಾಂಭೀರ್ಯದಿಂದ ಒಂದು ಕೈಯಲ್ಲಿ ಬದಿರಿನ ದಂಡ, ಇನ್ನೊಂದು ಕೈಯಲ್ಲಿ ಕಾಷಾಯ ವಸ್ತ್ರ ಹಿಡಿದುಕೊಂಡು ಮುಂದೆ ಸಾಗಿದರು.

ಜನರ ಓಡಾಟ ಇಲ್ಲದಿದ್ದಾಗ ಸೇತುವೆ ಮೇಲೆ ಬಿದ್ದಿದ್ದ ಮಂಡಕ್ಕಿ ಹುಡುಕಿ ತಿನ್ನುವುದರಲ್ಲಿ ಮಠದ ಮಂಗಗಳು ತಲ್ಲೀನವಾಗಿದ್ದವು. ಸ್ವಾಮಿಗಳು ಸೇತುವೆಯನ್ನು ಅರ್ಧ ದಾಟಿ ಆಗಿತ್ತು. ಆಗ ಹೊಸ ಕೂಸಿಗೆ ಕೆಲ ದಿನಗಳ ಹಿಂದೆಯಷ್ಟೇ ಜನ್ಮ ನೀಡಿದ್ದ ತಾಯಿ ಮಂಗ ತನ್ನ ಮರಿಯನ್ನು ಸೇತುವೆ ಮೇಲೆ ಇಳಿಸಿ ಮಂಡಕ್ಕಿ ಕಾಳುಗಳಿಗಾಗಿ ಹುಡುಕುತ್ತಿತ್ತು.

ಅಪರೂಪಕ್ಕೆ ಮಠದಿಂದ ಹೊರಗೆ ಬಂದಿದ್ದ ಕಾವಿಧಾರಿ ಸ್ವಾಮಿಗಳನ್ನು ಕಂಡು ಆ ಮಂಗನ ಮರಿ ತನ್ನ ತಾಯಿಗೆ ಅದೇನೆಂದು ದೂರು ನೀಡಿತೋ ಯಾರಿಗೂ ಗೊತ್ತಾಗಲಿಲ್ಲ. ಆದರೆ ತನ್ನ ಕಂದನ ದೂರು ಕೇಳಿದ ಆ ತಾಯಿ ಮಂಗನಿಗೆ ಅದೆಷ್ಟು ಕೋಪ ಉಕ್ಕಿಬಂತೆಂದರೆ ಅದು ಸ್ವಾಮಿಗಳ ಮೇಲೆ ಇದ್ದಕ್ಕಿದ್ದಂತೆ ಎಗರಿತು.



• ಕಲ್ಕುಳಿ ವಿಠ್ಠಲ ಹೆಗ್ಡೆ

ಈ ಹಠಾತ್ ದಾಳಿಯಿಂದ ಕಂಗಾಲಾದ ಸ್ವಾಮಿಗಳು ಮತ್ತು ಅವರ ಹಿಂಬಾಲಕರು "ಹಾ, ಹೂ" ಎಂದು ಅರಚುವ ಹೊತ್ತಿಗೆ ಎಲ್ಲೆಲ್ಲೂ ಇದ್ದ ಅಷ್ಟೂ ಮಂಗಗಳ ಸೈನ್ಯ ಝೆಡ್ ಸೆಕ್ಯೂರಿಟಿಯವರ ಮೇಲೆ, ಸ್ವಾಮಿಗಳಿಗೆ ಛತ್ರಿ ಹಿಡಿದಿದ್ದವರ ಮೇಲೆ, ಅವರೊಂದಿಗಿದ್ದ ಇತರೆ ಛತ್ರಿಗಳ ಮೇಲೆ ಕ್ಷಣ ಮಾತ್ರದಲ್ಲಿ ದಾಳಿ ಮಾಡಿದವು. ಹಲವಾರು ಜನರ ಮುಖ ಮೈಗಳನ್ನು ಪರಚಿಹಾಕಿದವು.

ಝೆಡ್ ಸೆಕ್ಯೂರಿಟಿಯಲ್ಲಿದ್ದ ಹಲವು ಬ್ಲಾಕ್ ಕ್ಯಾಟ್‌ಗಳು ಮಫ್ತಿಯಲ್ಲಿರುತ್ತಿದ್ದರು. ಅಂದರೆ ಬ್ರಾಹ್ಮಣರ ತರಹ ಪಂಚೆ ಹೊದ್ದು ತಮ್ಮ ಬಗಲಲ್ಲಿ ಎಕೆ 47 ಬಂದೂಕುಗಳನ್ನು ಇಟ್ಟುಕೊಂಡಿರುತ್ತಿದ್ದರು. ಅವರಿಂದಲೂ ಮಂಗಗಳ ದಾಳಿಯನ್ನು ಎದುರಿಸಲಾಗಲಿಲ್ಲ. ಗುರುಗಳ ರಕ್ಷಣೆ ಮಾಡುವುದನ್ನು ಮರೆತ ಅವರೆಲ್ಲರಿಗೂ ತಮ್ಮನ್ನು ರಕ್ಷಿಸಿಕೊಳ್ಳುವುದೇ ಸಾಕು ಸಾಕಾಯಿತು. ಬ್ಲಾಕ್ ಕ್ಯಾಟ್ ಕಮಾಂಡೋ ತರಬೇತಿ ಪಡೆಯುವಾಗ ಪಾಪ, ಅವರಿಗೆ ಮಂಗಗಳ ಸಂಭವನೀಯ ದಾಳಿಯನ್ನು ಎದುರಿಸುವ ತರಬೇತಿ ನೀಡಿರಲಿಲ್ಲವೆಂದು ಕಾಣುತ್ತದೆ.

ಈ ದಾಳಿಯಲ್ಲಿ ಪಾಪ ಸ್ವಾಮಿಗಳು ಬಿದ್ದು ಬಿಟ್ಟರಂತೆ. ಅವರಿಗೆ ಎಲ್ಲೆಲ್ಲಿ ಗಾಯವಾಯಿತು ಎಂಬುದೂ ಗೊತ್ತಾಗಲಿಲ್ಲ, ಆದರೆ ಸ್ವಾಮಿ ಗಳು ಅಲ್ಲಿಂದ ವಾಪಸ್ ಆಶ್ರಮಕ್ಕೆ ಹೊರಟುಹೋದರು. ಅವರ ಮೇಲಾದ ಮಂಗಗಳ ದಾಳಿಯ ಸುದ್ದಿ ತಿಳಿಯುತ್ತಿದ್ದಂತೆ ಇಡೀ ಜಿಲ್ಲಾಡಳಿತ ಮಠಕ್ಕೆ ಧಾವಿಸಿತು.

ದೇವರು ದೊಡ್ಡವನಾದ್ದರಿಂದ ಸ್ವಾಮಿ ಗಳಿಗೆ ಈ ದಾಳಿಯಲ್ಲಿ ಹೆಚ್ಚೇನೂ ಪೆಟ್ಟಾಗಿಲ್ಲ, ಒಂದೆರಡು ವಾರದಲ್ಲಿ ಎಲ್ಲಾ ಸರಿಯಾಗುತ್ತದೆ ಎಂಬ ಸುದ್ದಿ ಮಠದ ಒಳಗಿಂದ ಬಂತು. ಪುರಸಭಾಧ್ಯಕ್ಷರನ್ನು, ಪೊಲೀಸ್ ಇನ್ಸ್‌ಪೆಕ್ಟರ್ ಅನ್ನು ಉಸ್ತುವಾರಿ ಸಚಿವರು ತರಾಟೆಗೆ ತೆಗೆದುಕೊಂಡರು ಎಂಬ ಸುದ್ದಿಯೂ ಎಲ್ಲೆಡೆ ಹರಡಿತು.

ಆದರೆ ಸಮಸ್ಯೆ ಮಾತ್ರ ಬಗೆಹರಿದಿರಲಿಲ್ಲ. ಈ ಮಂಗಗಳ ಹಾವಳಿ ತಡೆಯೋದು ಹೇಗೆ ಎಂಬುದೇ ಮಠಕ್ಕೆ ದೊಡ್ಡ ಪ್ರಶ್ನೆ ಯಾಗಿ ಉಳಿಯಿತು. ಮಂಗಗಳನ್ನು ಸಾಯಿಸುವ ಬಗ್ಗೆ ರಾಮನ ಸೈನ್ಯದವರನ್ನು ಹೇಗಾದರೂ ಒಪ್ಪಿಸಬಹುದು. ಆದರೆ ಪ್ರಾಣಿದಯಾ ಸಂಘದವರನ್ನು ಒಪ್ಪಿಸುವುದು ಅಸಾಧ್ಯ ಎಂಬುದು ಅವರಿಗೆ ಗೊತ್ತಿತ್ತು. ಆಗ ಮಂಗಗಳನ್ನೆಲ್ಲ ಹಿಡಿದು ಕಾಡಿಗೆ ಬಿಡುವುದೇ ಸರಿ ಎಂಬ ನಿರ್ಧಾರಕ್ಕೆ ಬರಲಾಯಿತು. ಕೂಡಲೇ ಈ ಮಂಗನ ಬೇಟೆಗೆ ಬೇಕಿದ್ದ ಬಜೆಟ್ ಅನ್ನು ಬಿಡುಗಡೆ ಮಾಡಿದ್ದೂ ಆಯಿತು.

ಆಗ ಇನ್ನೊಂದು ಸಮಸ್ಯೆ ಎದುರಾಯಿತು. ಈ ಮಂಗಗಳನ್ನೆಲ್ಲ ಜೀವಂತ ಹಿಡಿಯುವುದು ಹೇಗೆ ಎಂಬುದೇ ಪ್ರಾಬ್ಲಮ್ ಆಗಿತ್ತು.

ಆಗ ಎಲ್ಲರ ನೆನಪಿಗೆ ಬಂದವನೇ ನಮ್ಮ ಸಿದ್ದ.

ಆಗ ಅರಣ್ಯ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದ ಸಿದ್ದನನ್ನು ಕರೆದುಕೊಂಡು ಬರುವಂತೆ ಅರಣ್ಯ ಸಂರಕ್ಷಣಾಧಿಕಾರಿಗಳು ಫರ್ಮಾನು ಹೊರಡಿಸಿದರು.

ಸಿದ್ದನ ಮನೆ ಮುಂದೆ ಹಠಾತ್ತಾಗಿ ರೇಂಜ್ ಫಾರೆಸ್ಟರ್‌ಗಳ ಎರಡೆರಡು ಜೀಪ್‌ಗಳು ಬಂದುನಿಂತವು. ಅವರನ್ನು ಕಂಡಕೂಡಲೇ ಸಿದ್ದ ತನ್ನ ಕತೆ ಮುಗಿಯಿತು ಎಂದೇ ಭೀತಿಗೊಂಡ. "ಏನು ಗ್ರಹಚಾರ ಕಾದಿದೆಯೋ. ಇಲ್ಲಿಂದ ಓಡಿಹೋಗೋಣ ಅಂದ್ರೆ ಅವರ ಕಣ್ಣಿಗೆ ಬಿದ್ದಾಗಿದೆ" ಎಂದೆಲ್ಲ ಸಿದ್ದ ಪೇಚಾಡಿದ. ಆಗ "ನಮಸ್ಕಾರ ಸಿದ್ದಯ್ಯನೋರೆ" ಅಂದರು ಹೆಗಲ ಮೇಲೆ ಮೂರು ನಕ್ಷತ್ರಗಳನ್ನು ಹೊಂದಿದ್ದ ರೇಂಜರ್. ಅದನ್ನು ಕೇಳಿ ಸಿದ್ದನಿಗೆ ಇನ್ನೂ ಹೆಚ್ಚು ಹೆದರಿಕೆ ಆಯಿತು. ಇವರು ಉಪಾಯ ಮಾಡಿ ತನ್ನನ್ನು ಎತ್ತಿಹಾಕಿಕೊಂಡು ಹೋಗಲು ಪ್ಲಾನ್ ಮಾಡಿಕೊಂಡು ಬಂದಿದ್ದಾರೆ ಅಂದುಕೊಂಡ. ಆದರೂ ವಿಧಿ ಇಲ್ಲದೆ "ನಮಸ್ಕಾರ ಸಾರ್" ಅಂದ. "ನಿಮ್ಮಿಂದ ತುರ್ತಾಗಿ ಒಂದು ಸಹಾಯ ಆಗಬೇಕಿತ್ತು, ನೀವು ಮಠದ ಮಂಗಗಳನ್ನು ಹಿಡಿಯಬೇಕು" ಅಂದರು ರೇಂಜರ್. ಆಗ ಸಿದ್ದನಿಗೆ ಧೈರ್ಯ ಬಂತು. "ಏನ್ ಸ್ವಾಮಿ, ಏನು ಸಮಾಚಾರ?" ಅಂದ.

"ಹೇಗಾದರೂ ಮಾಡಿ ಮಠದಲ್ಲಿರುವ ಮಂಗಗಳನ್ನು ಜೀವಂತ ಹಿಡಿದು ಬೋನಿಗೆ ಹಾಕಬೇಕು" ಅಂದರು ಅವರು.

"ಅದೆಂಗಾಗ್ತದೆ ಸಾರ್? ಅದು ಬಟ್ಟು ಬ್ಯಾಟೆ ಮಾಡೋದಾದ್ರೆ ಹೇಳಿ."

"ಅಯ್ಯೋ ಮಾರಾಯ ಹಾಂಗೆ ಮಾಡಂಗಿಲ್ಲ. ಅವನ್ನ ಜೀವಂತ ಹಿಡೀಬೇಕು. ಹಾಗೆ ಹಿಡಿದ ಮೇಲೆ ಅವನ್ನು ಅಭಯಾರಣ್ಯದಲ್ಲಿ ಬಿಡಬೇಕು. ನಮ್ಮ ಇಡೀ ಸ್ಟಾಫ್ ನಿನ್ನ ಸಹಾಯಕ್ಕೆ ಬರ್ತಿವಿ" ಅಂದರು ಸಾಹೇಬರು.


ಮಠದ ಮತ್ತು ಪೇಟೆಯಲ್ಲಿನ ಮಂಗಗಳನ್ನು ನೋಡಿದ್ದ ಸಿದ್ದ "ಅವನ್ನು ನಾನೇ ಕಾಡಿನಿಂದ ತಂದು ಬಿಟ್ಟಿದ್ದು. ಈಗ ಮಠದ ಮತ್ತು ಪ್ಯಾಟೆಯ ಕೂಳು ತಿಂದೂ ತಿಂದೂ ನನ್ನಷ್ಟೇ ಎತ್ತರ ಬೆಳೆದವೆ. ಅವನ್ನು ಹಿಡಿಯೋದು ಹುಡುಗಾಟಕೇನ? ಜೀವ ಸಹಿತ ಹಿಡೀಬೇಕಾದರೆ ಬೋನು ಬೇಕು" ಅಂದ.

"ಎಲ್ಲಾ ವ್ಯವಸ್ಥೆ ಮಾಡ್ತಿವಿ. ಫಾರೆಸ್ಟ್‌ನೋರ ಹತ್ತಿರ ಹುಲಿ ಹಿಡಿಯೋ ಬೋನಿದೆ."

"ಅದು ಮಂಗಗಳಿಗೆ ಆಗೋಲ್ಲ" ಎಂದ ಸಿದ್ದ.

ಈ ಸಿದ್ದ ಬೇರೊಂದು ಪ್ಲಾನ್ ಮಾಡುತ್ತಿದ್ದ.

(ಮುಂದುವರೆಯುವುದು)



ವಿಶಾಲ ಹೃದಯದ ಮೇರು ಗಾಯಕ

ಭೀಮಸೇನ ಗುರುರಾಜ ಜೋಶಿಯವರ ಹೆಸರು ಕೇಳುತ್ತಿದ್ದ ಹಾಗೆ ಮೈ ಪುಳಕಗೊಳ್ಳುವುದು, ನರ-ನಾಡಿಗಳಲ್ಲಿ ಹೊಸ ಶಕ್ತಿ ಸಂಚಾರವಾಗುವುದು ಎಲ್ಲಾ ಸಂಗೀತ ಪ್ರೇಮಿಗಳ ಅನುಭವದಂತೆ ನನ್ನ ಅನುಭವವೂ ಕೂಡ. ಇಂದು ಅವರು ನಮ್ಮೊಡನೆ ಇಲ್ಲ ಎನ್ನುವ ಸತ್ಯವನ್ನು ಜೀರ್ಣಿಸಿಕೊಳ್ಳುವುದು ಅಷ್ಟೊಂದು ಸುಲಭ ಸಾಧ್ಯವಲ್ಲ. ಕೇವಲ ರೇಡಿಯೋ ಹಾಗೂ ಟೇಪ್‌ರೆಕಾರ್ಡರ್‌ಗಳ ಮೂಲಕವಷ್ಟೇ ಅವರ ಸಂಗೀತವನ್ನು ಆನಂದಿಸುತ್ತಿದ್ದ ನನಗೆ 1977 ರ ಜುಲೈ-ಆಗಸ್ಟ್ ತಿಂಗಳಿನ ಮಳೆಗಾಲದ ಯಾವುದೋ ಒಂದು ಸಂಜೆ (ದಿನಾಂಕ ನೆನಪಿಲ್ಲ) ಬೆಂಗಳೂರಿನ ಟೌನ್‌ಹಾಲಿನಲ್ಲಿ ಏರ್ಪಡಿಸಿದ್ದ ಅವರ ಕಛೇರಿಯಲ್ಲಿ ಅವರ ಗಾಯನವನ್ನು ಕೇಳಿದ ನೆನಪು ಅವಿಸ್ಮರಣೀಯವಾಗಿ ಉಳಿದಿದೆ. ನಾನಲ್ಲಿಗೆ ತಲುಪುವಷ್ಟರಲ್ಲಿ ಕಛೇರಿ ಪ್ರಾರಂಭವಾಗಿದ್ದು ರಾಗ್ ಯಮನ್ ವಿಲಂಬಿತ್ ಖ್ಯಾಲ್ ಸಂಪೂರ್ಣಗೊಳ್ಳುತ್ತಿತ್ತು, ಸಭಾಂಗಣದ ಒಳಗೆ ಸ್ಥಳಾವಕಾಶವಿಲ್ಲದೆ ಸಾಕಷ್ಟು ಜನ ಹೊರಗೆ ನಿಂತಿದ್ದರು. ಮಳೆ ಶುರುವಾಗಿದ್ದು ಜೋರಾಗಿಯೇ ಹನಿಯಲಾರಂಭಿಸಿತು. ಜನಸಂದಣಿಯ ಅಂಚಿನಲ್ಲಿ ಸೂರಿನಾಚೆ ನಿಂತಿದ್ದ ನಮ್ಮಂತಹವರಿಗೆ ಮಳೆಯಲ್ಲಿ ನೆನೆಯುತ್ತಾ ಸಂಗೀತ ಕೇಳಿಸಿಕೊಳ್ಳುವುದನ್ನು ಬಿಟ್ಟರೆ ಅಲ್ಲಿಂದ ಹೊರಡುವುದೊಂದೇ ಪರ್ಯಾಯ. ಆದರೆ ಅಲ್ಲಿಂದ ಯಾರೂ ಹೋಗಲಿಲ್ಲ ಅಥವಾ ಯಾರಿಗೂ ಹೋಗಲಾಗಲಿಲ್ಲ. ಧೃತ್ ಖ್ಯಾಲ್ "ಏರಿ ಆಲಿಪಿಯಾ ಬಿನ್"ದ ಅಬ್ಬರದ ಆದರೆ ಅಷ್ಟೇ ಆಪ್ಯಾಯಮಾನವಾದ ತಾನ್‌ಗಳ ಸುರಿಮಳೆ ಶುರುವಾದ ಹಾಗೆ ಹೊರಗಡೆಯ ಮಳೆಯ ಹೊಡೆತ ನಮ್ಮನ್ನು ಕಾಡಲೇ ಇಲ್ಲ, ಅಲ್ಲಿಯವರೆಗೂ ಸುಮಾರು ಸಂಗೀತ ಕಛೇರಿಗಳನ್ನು ಕೇಳಿಸಿಕೊಂಡಿದ್ದ ನನಗೆ ಅಂದಿನ ಅನುಭವದ ಜೊತೆ ಹೋಲುವ ಯಾವುದೇ ಬೇರೊಂದು ಅನುಭವ ನೆನಪಿಗೆ ಬರುತ್ತಿಲ್ಲ, ಯಾವುದೇ ಒಂದು ತಾನು ಇನ್ನೊಂದರಂತಾಗಲಿ ಅಥವಾ ಹೀಗೆಯೇ ಬರಬಹುದೆಂದು ಊಹಿಸುವ ರೀತಿಯಲ್ಲಿರದೆ, ಪ್ರತಿಯೊಂದು ಹಂತದಲ್ಲೂ ಹೊಸಹೊಸ ಸೌಂದರ್ಯಾನುಭವವನ್ನು ಸೃಷ್ಟಿಸುತ್ತಾ ನಮ್ಮ ಮೈ-ಮನಸ್ಸುಗಳನ್ನು ವಶಪಡಿಸಿಕೊಂಡು ಬಿಟ್ಟಿದ್ದವು. ಹಿಂದೂಸ್ತಾನಿ ಸಂಗೀತವನ್ನು ಅಲ್ಲಿಯವರೆಗೂ ಲೈವ್ ಕೇಳಿರದ ನನಗಂತೂ, ಬಹುಶಃ ಜಗತ್ತಿನ ಸೃಷ್ಟಿಕಾರ್ಯವನ್ನು ವೀಕ್ಷಿಸುವ ಅವಕಾಶವೇನಾದರೂ ದೊರಕಿದ್ದಿದ್ದರೆ ನನ್ನಲ್ಲಿ ಉಂಟಾಗಬಹುದಿದ್ದ ಅನುಭವಗಳೆಲ್ಲವೂ ಸಂಚರಿಸುತ್ತಿದ್ದಂತೆ ಭಾಸವಾಗುತ್ತಿತ್ತು. ಗಾಯಕನ ಮುಖದರ್ಶನಕ್ಕೆ ಪ್ರಯತ್ನಿಸಿ ಅದು ಸಾಧ್ಯವಾಗದೆ ಹಾಗೇ ನಿಂತಿದ್ದು ಗಾಯನ ಮಾತ್ರ ಕೇಳಿಸಿಕೊಳ್ಳುತ್ತಿದ್ದ ನನಗೆ ಅವರ ಮೊದಲ ದರ್ಶನವಾದದ್ದು ಅಷ್ಟೇ ವಿಶಿಷ್ಟವಾದ ರೀತಿಯಲ್ಲಿ, ಮಧ್ಯಂತರದ ಸಮಯದಲ್ಲಿ ಸ್ವಚ್ಛ ಶ್ವೇತವರ್ಣದ ಜುಬ್ಬಾ-ಪೈಜಾಮ ಧರಿಸಿದ್ದ ಅಷ್ಟೇನೂ ಎತ್ತರವಲ್ಲದ, ಆದರೆ ಆರೋಗ್ಯಪೂರ್ಣ ಮೈಕಟ್ಟಿನ ಒಬ್ಬ ವ್ಯಕ್ತಿ ಜನರ ಮಧ್ಯದಿಂದ ಸಭಾಂಗಣದಿಂದ ಹೊರಗೆ ಬಂದು ನಿಂತಾಗ. ಸುತ್ತಲೂ ವಿನಯಪೂರ್ವಕವಾಗಿ ನಿಂತಿದ್ದ ಅಭಿಮಾನಿಗಳ ಗುಂಪಿನ ಮಧ್ಯೆ ಶಾಂತ-ಗಂಭೀರ ಮುಖ ಮುದ್ರೆಯ ಆ ವ್ಯಕ್ತಿ ಅಭಿಮಾನಿಯೊಬ್ಬರು ಅವರತ್ತ ಚಾಚಿದ ಸಿಗರೇಟನ್ನು ಹೊತ್ತಿಸಿ ಮೆಲುಧ್ವನಿಯಲ್ಲಿ ಏನೋ ಮಾತನಾಡುತ್ತಿದ್ದದ್ದು ಏನೆಂದು ಗೊತ್ತಾಗಲಿಲ್ಲ, ಅಲ್ಲಿಯವರೆಗೂ ಗಂಧರ್ವಲೋಕಕ್ಕೆ ನಮ್ಮನ್ನು ಕರೆದೊಯ್ದಿದ್ದ ಆ ಅಸಾಮಾನ್ಯ ಗಾಯಕ ಇಷ್ಟು ಸಾಮಾನ್ಯನೆ? ಎಂದು ನನ್ನ ಮನಸ್ಸಿನಲ್ಲಿ ಅಂದು ಎದ್ದ ಪ್ರಶ್ನೆಗೆ ಭೀಮಸೇನ ಜೋಶಿಯವರ ವಿಶಿಷ್ಟ ವ್ಯಕ್ತಿತ್ವ ನನ್ನ ಮುಂದಿನ ದಿನಗಳಲ್ಲಿ ಹಲವಾರು ರೀತಿಯಲ್ಲಿ ಉತ್ತರ ಕೊಡುತ್ತಾ ಹೋಯಿತು.

ಹನ್ನೊಂದು ವರ್ಷದ ಹುಡುಗ ಸಂಗೀತವನ್ನರಸುತ್ತಾ ಮನೆ ಬಿಟ್ಟುಹೋದ ಕಥೆ ಇಂದು ಜನಜನಿತ. ಮುಂದೆ ಈತನ ಜೀವನ ಒಂದು ದಂತಕಥೆಯಾಗಿ, ಒಂದು ಅದ್ಭುತ ಪವಾಡವೇ ಆಗಿ ಬೆಳೆದುನಿಂತಿದ್ದು ಈಗ ಚರಿತ್ರೆ. ಆದರೆ ಆ ಚರಿತ್ರೆಯನ್ನು ತಾನೇ ಸೃಷ್ಟಿಸಿ, ಅದನ್ನು ಪುಷ್ಟಿಗೊಳಿಸುತ್ತಾ ಹೋದ ಆ ಕ್ರಿಯಾಶೀಲತೆ, ಅದಮ್ಯ ಚೈತನ್ಯ ಮತ್ತು ಜೀವನದ ಪ್ರತಿಯೊಂದು ಸವಾಲನ್ನೂ ಸಂಗೀತದ ಮಹಾಶಕ್ತಿಯಿಂದ ಪಳಗಿಸುತ್ತಾ ಮುಂದುವರೆದ ಆ ಕೆಚ್ಚೆದೆ-ಇವಿಷ್ಟೂ ಈ ಮಹಾನ್ ಗಾಯಕ ಹಾಡಿದ ಪ್ರತಿಯೊಂದು ಚೀಜ್‌ನಲ್ಲೂ, ಭಜನ್, ಠುಮ್ರಿ, ಅಭಂಗ್ ಎಲ್ಲದರಲ್ಲೂ, ಪ್ರತಿತಾನಿನಲ್ಲೂ. ಅದೇಕೆ ಆತ ಉಚ್ಚರಿಸಿದ ಒಂದೊಂದು ಸ್ವರ, ಕಣಸ್ವರದಲ್ಲೂ ವಿಜೃಂಭಿಸುವುದೆಂಬುದು ನನ್ನ ಅನ್ನಿಸಿಕೆ. ಒಬ್ಬ ಶ್ರೀಸಾಮಾನ್ಯ "ಜೊ ಭಜೆ ಹರಿಕೊ ಸದಾ ಒಹಿ ಪರಮ ಪದ ಪಾವೇಗಾ" ಎಂದು ಹಾಡುತ್ತಾ ಶ್ರೇಷ್ಠತೆಯ ಪರಾಕಾಷ್ಠೆಯನ್ನು ತಲುಪಿದ್ದು ನಮ್ಮೆದುರಿಗೆ. "ಕರುಣಾಕರನೀನೆಂಬುವುದ್ಯಾತಕೋ ಭರವಸೆ ಇಲ್ಲೆನಗೆ" ಎಂದು ನುಡಿಯುತ್ತಾ ನಮ್ಮ ಸಿನಿಕತನವನ್ನು ಗೆಲ್ಲುವ ಪರಿಯನ್ನು ಪ್ರದರ್ಶಿಸಿದನಲ್ಲವೆ? "ಭಾಗ್ಯದಾಲಕ್ಷ್ಮಿ ಬಾರಮ್ಮಾ" ಎಂದು ಹಾಡುವ ಮೂಲಕ ನಮ್ಮ ಅನೇಕ ರೀತಿಯ ದಾರಿದ್ರ್ಯಗಳನ್ನು ದೂರಮಾಡಿಕೊಳ್ಳುವ ಸಂದೇಶ ನೀಡಿದನಲ್ಲವೆ? "ಮನಸು ಕಾರಣನಲ್ಲ ಪಾಪ ಪುಣ್ಯಕ್ಕೆಲ್ಲಾ" ಎಂದು ಹಾಡುತ್ತಾ ನಮ್ಮ ಚಿಂತೆ-ಬಾಧೆಗಳನ್ನು ನೀಗಿಸಿದನಲ್ಲವೆ? "ಪಿಯಾಕೆ ನಜರಿಯಾ ಜಾದು ಭರೇ" ಎಂದು ಹಾಡುವಾಗ ಪ್ರೀತಿಯ ಮೋಹಕ ಶಕ್ತಿಯನ್ನು ಎತ್ತಿ ತೋರಿಸುತ್ತಾ, ಅದೇ ಯಮನ್ ರಾಗದಲ್ಲಿ "ಏರಿ ಆಲಿಪಿಯಾ ಬಿನ" ಮೂಲಕ ವಿರಹದ ನೋವಿನಲ್ಲೂ ಆತ್ಮ ಎಷ್ಟು ಸಮೃದ್ಧವಾಗಿರಬಲ್ಲದು ಎನ್ನುವುದನ್ನು ಅರ್ಥೈಸಿದವನು ಈ ಸಂಗೀತದ ಮಾಂತ್ರಿಕ, ರಸಋಷಿ.



ಕಿರಾಣಾ ಘರಾಣಾದ ಪ್ರಮುಖ ವೈಶಿಷ್ಟ್ಯಗಳಾದ ಭಾವಪೂರಿತ ಆಲಾಪ್ ತುಂಬಿದ ಖ್ಯಾಲ್ ಗಾಯನ, ಪ್ರತಿಯೊಂದು ಸ್ವರದ ಸ್ವಭಾವ-ಲಕ್ಷಣಗಳನ್ನು ತೋರಿಸುತ್ತಾ ಮುಂದುವರೆಸುವ ಗಾಯಕಿ, ತಾರಸಪ್ತಕದಲ್ಲಿ ಮನಸ್ಸನ್ನು ಸೆರೆಹಿಡಿಯುವಂತಹ ಭಾವಭರಿತ "ಪುಕಾರ್"ಗಳು, ಎಲ್ಲಾ ಸಪ್ತಕಗಳನ್ನೂ ಆವರಿಸುತ್ತಾ ಸುಲಲಿತವಾಗಿ ಸುಳಿಯುವ, ಸಾಲಂಕೃತ ಮಣಿಗಳಂತೆ ಶೋಭಿಸುವ ತಾನುಗಳು-ಇವೆಲ್ಲದರ ಜೊತೆಗೆ ಅನೇಕ ಇತರೆ ಘರಾಣಾಗಳನ್ನೂ ಅವುಗಳ ಗಾಯಕರನ್ನೂ ಗೌರವದಿಂದ ಕಾಣುತ್ತಾ ಅವರ ಗಾಯನ ವೈಶಿಷ್ಟ್ಯಗಳನ್ನೂ ತಮ್ಮ ಗಾಯಕಿಯಲ್ಲಿ ಮೈಗೂಡಿಸಿಕೊಂಡಿದ್ದು ಭೀಮಸೇನರ ಮುಕ್ತ ಮನಸ್ಸಿಗೆ ಒಂದು ನಿದರ್ಶನ. ಒಮ್ಮೆ ಭೀಮಸೇನರ ಗಾಯನದಿಂದ ತುಂಬಾ ಪ್ರಭಾವಿತನಾದ ಅವರ ಅಭಿಮಾನಿಯೊಬ್ಬ ಅವರ ಬಳಿ ಬಂದು, "ದರಬಾರಿ ಕಾನ್ಹಡ ಅಂದರೆ ಹೀಗಿರಬೇಕು ನೋಡಿ. ಆ ಅಮೀರ್‌ಖಾನ್ ಹಾಡಿದ ಹಾಗೆ ಹಾಡಿದರೆ ಅದು ಹ್ಯಾಗೆ ಕೇಳಿಸಿಕೊಳ್ಳೋದು?" ಎಂದನಂತೆ. ಅದಕ್ಕೆ ಜೋಶಿಯವರು, "ಹೌದಪ್ಪ ಆ ಮಹಾನುಭಾವ ನನಗೆ ಹಾಗೆ ಹಾಡುತ್ತಾನೆ. ನಾನು ಅವನಿಂದ ಕಲಿತು ನಿನ್ನಂಥವರಿಗೆ ಹೀಗೆ ಹಾಡುತ್ತೇನೆ" ಎಂದು ಥಟ್ಟನೆ ಉತ್ತರಿಸಿದರಂತೆ. ಹಾಗೆಯೇ ಅವರಿಗೆ 'ಭಾರತ ರತ್ನ' ಪ್ರಶಸ್ತಿ ನೀಡಿದ ಸನ್ನಿವೇಶದಲ್ಲಿ ಭೀಮಸೇನರ ಪ್ರತಿಕ್ರಿಯೆ ಹೀಗಿತ್ತಂತೆ: "ಈ ದೇಶದ ಭವ್ಯ ಸಂಗೀತ ಪರಂಪರೆಯ ಜೀರ್ಣೋದ್ಧಾರಕ್ಕಾಗಿ ಶ್ರಮಿಸುತ್ತಿರುವ ಎಲ್ಲಾ ಸಂಗೀತಗಾರರ ಸಮುದಾಯಕ್ಕೆ ದೇಶ ಗೌರವ-ಪ್ರೀತಿಗಳಿಂದ ನೀಡುತ್ತಿರುವ ಪ್ರಶಸ್ತಿ ಇದೆಂದು ನಾನು ಭಾವಿಸಿದ್ದೇನೆ; ಹಾಗೂ ಅವರೆಲ್ಲರ ಪರವಾಗಿ ನಾನಿದನ್ನು ಸ್ವೀಕರಿಸುತ್ತಿದ್ದೇನೆ." ಹೀಗೆ ಹೇಳಿದಾಗ ಈ ಮೇರು ವ್ಯಕ್ತಿತ್ವದ ಮಹಾನ್ ಗಾಯಕನ ಹೃದಯ ವೈಶಾಲ್ಯತೆ ಎಷ್ಟು ಹಿರಿದಾಗಿತ್ತೆಂದು ನನ್ನಿಂದ ಊಹಿಸುವುದಂತೂ ಕಷ್ಟ. ಅವರ ಪವಿತ್ರ ಆತ್ಮಕ್ಕೆ ನನ್ನ ನಮನಗಳು.

● ಟಿ.ಕೆ. ಸತ್ಯನಾರಾಯಣಮೂರ್ತಿ

ನಾಗಾರಾಧನೆ

ಶ್ರದ್ಧಾಭಕ್ತಿಯಿಂದ ವಸೂಲಿಗಿರಿಯ ತನಕ

ಊರ ಉಸಾಬರಿಯನ್ನು ಮೈಮೇಲೆಳೆದುಕೊಂಡು ಕೋರ್ಟು-ಕೇಸುಗಳಿಂದೆಲ್ಲ ಅಲೆಯುತ್ತಿರುವ ಜನಪರ ನಿಲುವಿನ ಹೋರಾಟಗಾರ ಎಂಬುದನ್ನು ಬಿಟ್ಟರೆ ಕಲ್ಕುಳಿ ವಿಠ್ಠಲ್ ಹೆಗ್ಡೆಯವರು ಒಳ್ಳೆಯ ಬರಹಗಾರರೂ ಕೂಡ ಹೌದೆಂಬ ಸಂಗತಿ ಗೊತ್ತಾದದ್ದು 'ಲಂಕೇಶ್' ನಿಂದಲೇ. ವರ್ಷದ ಹಿಂದೆ ಬಂದ ಅವರ ಗೋಭಕ್ತರ ಗೋಸೇವೆಯ ಪಡಿಪಾಟಲಿನ ಕುರಿತ ಬರಹ ಓದುಗರಿಗೆ ಕೊಟ್ಟ ಕಿಕ್ ಮರೆಯಲಾಗದಂತಾದ್ದು. ತೇಜಸ್ವಿಯವರನ್ನು ನೆನೆಸುವಂತೆ ಗಂಭೀರ ವಿಷಯವನ್ನು ಕೂಡ ತಿಳಿಹಾಸ್ಯದ ಲೇಪದೊಂದಿಗೆ ಎಲ್ಲರಿಗೂ ಇಷ್ಟವಾಗುವಂತೆ ಬರೆಯುವ ಕಲೆ ಅವರಿಗೆ ಸಿದ್ಧಿಸಿದೆ ಎನ್ನುವುದರಲ್ಲಿ ಅನುಮಾನವೇ ಇಲ್ಲ. ಇದೀಗ ಮತ್ತೆ 'ಮಂಗನ ಬೇಟೆ'ಯ ಹೆಸರಲ್ಲಿ ಓದುಗರನ್ನವರು ರಂಜಿಸುತ್ತಿರುವುದು ಖುಷಿ ತಂದಿದೆ.

ಅಂದಹಾಗೆ, ಅವರು ಮಂಗನ ಬೇಟೆ (2)ಯಲ್ಲಿ ನಾಗನಿಗೆ ಸಂಬಂಧಿಸಿದಂತೆ ಮಲೆನಾಡು-ಕರಾವಳಿ ಪ್ರದೇಶಗಳಲ್ಲಿ ಬೆಳೆದು ಬಂದಿರುವ ಬ್ರಾಹ್ಮಣರ 'ವಸೂಲಿ ಸಂಪ್ರದಾಯ'ದ ಕುರಿತು ಬರೆದಿದ್ದಾರೆ. ಹೌದು ಕಾಗೆ, ಮಂಗ, ಹಾವು, ಹಕ್ಕಿ ಎಲ್ಲದರಲ್ಲೂ ಕೂಡ ದೈವತ್ವದ ಲಿಂಕ್ ಕಲ್ಪಿಸಿಕೊಳ್ಳಬಹುದಾದ (ಅನುಕೂಲಕ್ಕೆ ತಕ್ಕಂತೆ) ಸಂಸ್ಕೃತಿ ನಮ್ಮದು. ಹಾಗಾಗಿ ನಾಗಭಕ್ತಿ ಹೊಸತೇನಲ್ಲ, ಆದರೆ ಮೂಲತಃ ಶ್ರದ್ಧಾಭಕ್ತಿಯಿಂದ ಆರಾಧಿಸಲ್ಪಡುತ್ತಿದ್ದ ನಾಗ ಈಗ ನಮ್ಮ ಅನುಭವ, ಕಲ್ಪನೆಗೆ ನಿಲುಕದ ಯಾವುದೋ ಜನ್ಮದ ಪಾಪ ಅಥವಾ ಪೂರ್ವಜರು ಮಾಡಿದ ಪಾಪ ಇತ್ಯಾದಿಗಳ ದೋಷ ಪರಿಹಾರದ ನೆಪದಲ್ಲಿ ವಸೂಲಿ ಸಂಪ್ರದಾಯಕ್ಕೆ ನಾಂದಿಯಾಗಿರುವುದು ಮಾತ್ರ ಖೇದಕರ.

ಒಂದು ಪತ್ರ

ತುಳುನಾಡಿನಲ್ಲಿ ಭೂತಾರಾಧನೆಯಂತೆ ನಾಗಾರಾಧನೆಗೂ ಪ್ರಮುಖ ಸ್ಥಾನವಿದೆ. ಈಶ್ವರ, ಪಾರ್ವತಿ, ಗಣಪತಿಯಂತವರ ಪರಿಚಯಕ್ಕೂ ಮುನ್ನ ಇಲ್ಲಿನ ಮೂಲನಿವಾಸಿಗಳು ನಾಗಾರಾಧಕರೇ ಆಗಿದ್ದರು. ಇಂದಿಗೂ ಅಲ್ಲಲ್ಲಿ ಕಾಣಸಿಗುವ ಕೆಳವರ್ಗದವರ ಮೂಲಸ್ಥಾನಗಳೆಂದರೆ ಅವು ಬಹುತೇಕ ನಾಗಾರಾಧನೆಯ ಸ್ಥಳವೇ ಆಗಿರುವುದನ್ನು ಕಾಣಬಹುದು. ಅಷ್ಟೇ ಯಾಕೆ, ರಾಜ್ಯ ಅಲ್ಲ ದೇಶದಲ್ಲೇ (ತೆಂಡೂಲ್ಕರ್, ರಾಜ್‌ಕಪೂರ್ ಕುಟುಂಬ, ಜೂಹಿ ಚಾವ್ಲಾರಂತವರು ಭೇಟಿ ಕೊಡುವ) ಖ್ಯಾತವಾದ ಕುಕ್ಕೆ ಸುಬ್ರಹ್ಮಣ್ಯ ಕ್ಷೇತ್ರವೂ ಮೂಲತಃ ಅಲ್ಲಿನ ಮೂಲನಿವಾಸಿ ಮಲೆಕುಡಿಯ ಜನಾಂಗದ ಆರಾಧನಾ ಸ್ಥಳವಾಗಿತ್ತು. (ಆದರೀ ನಾಗನನ್ನ ಸುಬ್ರಹ್ಮಣ್ಯನನ್ನಾಗಿಸಿದ್ದು ಮಾತ್ರ ಸೋಜಿಗದ ವಿಷಯ. ನವಿಲಿನ ಮೇಲೆ ನಾಗ ಅರ್ಥಾತ್ ಸುಬ್ರಹ್ಮಣ್ಯ ಹೇಗೆ ಕುಳಿತುಕೊಳ್ಳುತ್ತಾನೋ ಆ ಶಿವನೇ ಬಲ್ಲ!)



ಅಂದಿನ ಶೂದ್ರ ಮಲೆಕುಡಿಯರ ದೇವರೀಗ ಸರ್ಪಸಂಸ್ಕಾರದದೋಷ ಪರಿಹಾರಕ್ಕಾಗಿ ಬ್ರಾಹ್ಮಣರನ್ನು ಹುಡುಕಿಕೊಂಡು ಬರುವಂಥ ಸ್ಥಳವಾಗಿ ಬದಲಾಗಿದೆ. ಹಾಗೆ ಬ್ರಾಹ್ಮಣರು ಉಂಡ ಉಚ್ಚಿಷ್ಟದ ಮೇಲೆ ಶೂದ್ರರು ಉರುಳಿ 'ಪುಣ್ಯ' ಕಟ್ಟಿಕೊಳ್ಳಬಹುದಾದ ಸ್ಥಳವಾಗಿ ಪರಿವರ್ತಿತಗೊಂಡಿದೆ.

ಆ ಕಾಲದಲ್ಲಿ ಸತ್ತ ನಾಗನಿಗಾಗಿ ಕಲ್ಕುಳಿ ಹೆಗ್ಡೆಯವರ ತಂದೆ 800 ರೂಪಾಯಿ ಸಾಲ ಮಾಡಿ ಬ್ರಾಹ್ಮಣರಿಗೆ ಊಟ ಹಾಕಿದ ಈ (ಬಯಲು) ಸೀಮೆಗಿಲ್ಲದ ರಿವಾಜುಗಳು ಇಂದು ಕರಾವಳಿ-ಮಲೆನಾಡಿನ ಪರಿಸರದ ಹೊರಗೂ ಹರಡುತ್ತಿರುವುದು ವಿಷಾದಕರ. ನಿಜಕ್ಕೂ ಈ ಬ್ರಾಹ್ಮಣರು ನಾಗನ ವಾರಸುದಾರರು ಹೌದೇ? ಎಂದು ಕೇಳಿದರೆ ಉತ್ತರ ಬೇರೆಯೇ ಇದೆ.

ಇದೀಗ ಭೂತ ಸ್ಥಾನಗಳಲ್ಲೂ ವೈದಿಕ ಆಚರಣೆಗಳು ನಡೆಯುವಂತೆ ಮೂಲತಃ ನಾಗಮಂಡಲವೂ ಸೇರಿ ನಾಗಾರಾಧನೆ ವೈದಿಕ ಆಚರಣೆಯಲ್ಲ, ಉಡುಪಿ-ಕುಂದಾಪುರ ಪರಿಸರದಲ್ಲಿ ನಡೆಯುವ ನಾಗಮಂಡಲವನ್ನೇ ಗಮನಿಸಿದರೆ ಅದನ್ನ ನಡೆಸಿಕೊಡುವವರು ಬ್ರಾಹ್ಮಣರೇ ಆದರೂ ಆಚರಣೆ ಮಾತ್ರ ವೈದಿಕ ಸಂಪ್ರದಾಯಕ್ಕೆ ತದ್ವಿರುದ್ಧವಾಗಿರುವುದನ್ನು ನೋಡಬಹುದು. ಆ ಸಂಪ್ರದಾಯದ ದೀಪ, ಆರತಿ ಮಂತ್ರೋಚ್ಚಾರಣೆ ಯಾವುದೂ ಇಲ್ಲಿಲ್ಲ. ಬದಲಿಗೆ ಭೂತಾರಾಧನೆಯಂತೆ ಶಕ್ತಿಯನ್ನು ಮೈಮೇಲೆ ಆಹ್ವಾನಿಸಿಕೊಂಡು 'ನುಡಿ' ಕೊಡುವ ಸ್ಥಳೀಯ ಮೂಲನಿವಾಸಿಗಳ ಪದ್ಧತಿಯೇ ಇಲ್ಲಿ ಎದ್ದು ತೋರುತ್ತದೆ. ಅತ್ಯಂತ ಅದ್ದೂರಿಯಾಗಿ ನಡೆಸಲಾಗುವ ಈ ನಾಗಮಂಡಲ ಮೂಲತಃ ಇದೇ ಉಡುಪಿ-ಕುಂದಾಪುರ ಪರಿಸರದಲ್ಲಿ ದಲಿತರು ನಡೆಸುವ 'ಕಾಧ್ಯನಾಟ' ಎಂಬ ನಾಗಾರಾಧನೆಯ ಪರಿಷ್ಕೃತ ರೂಪವಲ್ಲದೇ ಬೇರೇನಲ್ಲ. ಇಂದಿಗೂ ಈ ಪರಿಸರದಲ್ಲಿ ಕಾಧ್ಯನಾಟಕ್ಕೆಂದೇ ಕಾದಿರಿಸಿದ ಬನದ ಬಳಿ ನಡೆಸುವ ದಲಿತರ ಈ ಆರಾಧನೆಗೆ ಊರಿನ ಇತರ ಜಾತಿಯವರೂ ಭಕ್ತಿಯಿಂದ ನಡೆದುಕೊಳ್ಳುತ್ತಾರೆ. ಇದು ಹಿಂದಿನಿಂದಲೂ ನಡೆದುಕೊಂಡು ಬಂದ ಆರಾಧನೆ ಎನ್ನುವುದನ್ನು ಬಿಟ್ಟರೆ ನಾಗಮಂಡಲದಷ್ಟು ಅದ್ದೂರಿತನವಾಗಲೀ ಪ್ರಚಾರವಾಗಲೀ ಇದಕ್ಕಿಲ್ಲ.

ಐತಿಹಾಸಿಕವಾಗಿ ಮಯೂರವರ್ಮನ ಸಂಬಂಧಿ ಲೋಕಾದಿತ್ಯನ ಕಾರಣಕ್ಕೆ ಈ ಪರಿಸರಕ್ಕೆ ಶತಮಾನಗಳ ಹಿಂದೆ ಕಾಲಿಟ್ಟ ಬ್ರಾಹ್ಮಣವರ್ಗ ತಮ್ಮ ದೇವ-ದೇವತೆಗಳ ಆರಾಧನೆಯೊಂದಿಗೆ ಅನುಕೂಲಕ್ಕೆ ತಕ್ಕಂತೆ ಕ್ರಮೇಣ ಇದೀಗ ಭೂತಾರಾಧನೆಯೂ ಸೇರಿ ಇಲ್ಲಿನ ಮೂಲ ನಿವಾಸಿಗಳ ಆರಾಧನೆಯ ಮೇಲೂ ಹಕ್ಕು ಸಾಧಿಸಿದ್ದು ಆಶ್ಚರ್ಯಕರ. ಕುಕ್ಕೆ ಸುಬ್ರಹ್ಮಣ್ಯ ಬಿಡಿ ನಾಗ ಪಂಚಮಿಯಂದು ಭಟ್ಟರಿಗಿರುವ ಡಿಮ್ಯಾಂಡ್ ಹಾಗು ಬ್ರಾಹ್ಮಣರ ಪೂಜೆಗಾಗಿಯೇ ದೇವಸ್ಥಾನದ ಮುಂದೆ ಮೈಲುದ್ದದ ಕ್ಯೂ ನೋಡಿದರೇ ನಾಗನ 'ಪಕ್ಷಾಂತರ'ದ ಪರಿಣಾಮ ಎಂತದ್ದೆಂಬುದನ್ನು ಅರ್ಥೈಸಿಕೊಳ್ಳಬಹುದು.

-ರವಿ ಪುತ್ತೂರ, ದಕ್ಷಿಣ ಕನ್ನಡ

ರಾಜ್ಯಪಾಲರ ಸೈಯಿನಿಗೂ ಕೋಳಿಮಟ್ಟೆ ಅಂಗಡಿಗೂ ಏನ್ಲ ಸಮಂಧ?

ತಿವರೆಲ್ಲ ಯದಿಯೂರಪ್ಪನ ರಾಜೀನಾಮೆಗೆ ...ುತ್ತಿರುವಂತೆ ಕುಳಿತಿದ್ದರು. ಕಾಳಮಾವನಿಗೆ ಸದ್ಯದ ...ಾರಣಾದ ಗೋಜಲು ಅರ್ಥವಾಗಿರಲಿಲ್ಲ. ಆದ್ದರಿಂದ, "ಅಂಗರೆ ಎಡೂರಪ್ಪ ರಾಜೀನಾಮೆ ಬರೀಲೇಬೇಕು ...ಯಾ" ಎಂದ.

"ಊ ಕಣಮಾವ ಬರೀಲೇಬೇಕು"

"ಬರಿಯಕ್ಕುಲ್ಲ ಅಂದ್ರೇನು ಮಾಡ್ತರ್ಲ?" ಎಂದ

...ಯ ಲು ಸೀ ಮ
ಕಟ್ಟೆಪುರಾಣ

▸ಬಿ. ಚಂದ್ರೇಗೌಡ

"ಎಡೂರಪ್ಪನೂ ನಿನ್ನಂಗೇ ಕೇಳ್ತಕುಂತವ್ರುನೆ ಕಣೊ. ...ಮಾತು. ಕರ್ನಾಟಕಕಷ್ಟೇ ಅಲ್ಲ ಅವುನ ಪಾರ್ಟಿಗೂ ... ಆಗಿ ಕುಂತದೆ."

"ಅಂತಾ ಇದು ಮಾಡಿದ್ದನೆ ಅವುನು?" ಎಂದ ...ಮಾವ.

"ಊ ಕಣ ಮಾವ. ಎಡೂರಪ್ಪ ಒಂಥರಾ ಯಬಡ. ...ಮುಖ್ಯಮಂತ್ರಿಯಾಗಿ ಬಂದೇಟಿಗೆ ಮಾಡಿದ ಕೆಲಸೇನಪ್ಪ ... ಇಡೀ ಕರ್ನಾಟಕನೇ ನಂದು ಅಂತ ತಿಳಕಂಡು ...ವುದೊ ಮಠಕೆ ಗೋಕರ್ಣ ಬರದುಬುಟ್ಟ. ಅಮ್ಯಾಲೆ ...ಕೂರತ್ರ ಇರೊ ಖಾಲೀ ಜಮೀನ್ನಲ ಮಕ್ಕಳು, ...ಳು, ಬೀಗರ ಬಿಜ್ಜರೆಸರಿಗೆ ಬರದುಬುಟ್ಟ. ಇಂತ ...ನೆ ಇವುನಿಗಿಂತ ಮದಲಿದ್ದೊರು ಮಾಡಿದ್ರುವೆ ...ವಜ್ಜೆ ಮೇದುಮೋಟು ಕಾಣದಾಗೆ ಮಾಡಿಕಂಡು ...ದ್ರು. ಅವುರು ಎಡೂರಪ್ಪ ಖಾತೆ ಮಾಡಿಸಿಗಂಡ ...ಲೆನೆಲ್ಲ ತರಿಸಿಗಂಡ್ರು. ಇಬ್ಬುರು ಲಾಯರ್ ಕರುದು ...ತಗಂಡೋಗಿ ರಾಜ್ಯಪಾಲರಿಗೆ ಕೊಟ್ಟು ಎಡೂರಪ್ಪನ ... ಕೇಸಾಕಕ್ಕೆ ಪರಮಿಷನ್ ಕೇಳಿ ಅಂದ್ರು."

"...ಯಾರ್ಲ ಅಂಗಂದೋರು?" ಎಂದಳು ಜುಮ್ಮಿ.

"...ಎಡೂರಪ್ಪನಿಗಿಂತ ಮದ್ಲು ಪವರ್‌ಲ್ಯಾರಿದ್ರು ... ಕಣೆ. ಅವರೂ ಎಡೂರಪ್ಪನಷ್ಟೇ ...ಕಂಡಿದ್ರುವೆ. ಆದ್ರೆ ಯಾರೂ ...ಯಕ್ಕಾಗದಂಗೆ ಮಾಡಿಕಂಡಿದ್ರು. ...ವಸ್ಥರಲ್ಲವೆ. ಈ ದಡ್ಡ ಮುಂಡೆದು ಏಡೂರ ...ಮಾಡ್ತನೆ ಅಂತ ಅವುರಿಗೆ ಗೊತ್ತಿತ್ತು. ಅದ್ಕೆ ...ಟಿಕಂಡು ಕುಂತಿದ್ರು. ಅದಕೆ ತಲಿ ಮುಂದಾಗಿ ... ಅಂತ ಬಿದ್ದ ಎಡೂರಪ್ಪ. ಆಗ ದ್ಯಾವೇಗೌಡ್ರು ತುಟಿ ಬಿರಿಯಂಗೆ ನಗಾಡಿ, ಸಿಕ್ತು ಕಣಯ್ಯ ಮಿಕ ಅಂತವೆ ರಿಜಿಸ್ಟ್ರಾಫೀಸ್‌ನಿಂದ ದಾಖಲೆ ತರಿಸಿಗಂಡು ಶಿವಮೊಗ್ಗದೊರೆ ಇಬ್ಬರು ಲಾಯರ್ ಕರೆಸಿ 'ನೋಡಿ ಬ್ರದರ್ಸ್, ನೀವೇನು ಹೆದರೊ ಅಗತ್ಯ ಇಲ್ಲ, ನಾವೆಲ್ಲ ನಿಮ್ಮ ಹಿಂದೆ ಇರತಿವಿ. ನಾನಾಗ್ಲೆ ಹಂಸರಾಜ್‌ಗೆ ಹೇಳಿದ್ದಿನಿ. ನೀವು ಹೋಗಿ ಈ ದಾಖಲೆನ ಕೊಟ್ಟು ಎಡೂರಪ್ಪನ ಮ್ಯಾಲೆ ಕೇಸಾಕೋದಕ್ಕೆ ಪರಮಿಷನ್ ಕೇಳಿ' ಎಂದು ಕಳಿಸಿದ್ರು. ಇವುರೋದ್ರು, ರಾಜ್ಯಪಾಲ್ರು ಪರಮಿಷನ್ ಕೊಟ್ರು. ಆಗ ಹತ್ತಿಗತ್ತಿದ್ಯಲ್ಲ."

"ಎಡೂರಪ್ಪನ ಮ್ಯಾಲೆ ಕೇಸು ಮಾಡಕ್ಕೆ ರಾಜ್ಯಪಾಲನ ಅಪ್ಪಣೆ ಕೇಳಬೇಕೇನ್ಲ?"

"ಊ ಕಣ ಮಾವ. ಅವುನೇನು ಸೀರ ಮಾವನೊ ಅಥವಾ ಕಾಳಮಾವನೊ, ಈ ರಾಜ್ಯದ ಮುಖ್ಯಮಂತ್ರಿ. ಅವುನಮ್ಯಾಲೆ ಕೇಸ ಜಡಿಬೇಕಾದ್ರೆ ಅವುನಿಗಿಂತ ದೊಡ್ಡೊನಾದ ರಾಜ್ಯಪಾಲನ ಕೇಳಬೇಕು. ಅಂಗಾಗಿ ಹೋಗಿ ಕೇಳಿದ್ರು. ಕೊಟ್ಟ. ಈಗ ಕ್ರಿಮಿನಲ್ ಕೇಸ್ ಜಡುದ್ರು ಅತ್ತಗೆ."

"ಅಂಗರೀಗ ಎಡೂರಪ್ಪ ಕೋರ್ಟಿಗೆ ಬರಬೇಕು ಅನ್ನು."

"ಬಂದು ಕಟಕಟೇಲಿ ನಿಂತಗಂಡು ನಾನು ತೆಪ್ಪ ಮಾಡಿಲ್ಲ ಅನ್ನಬೇಕು. ಆಗ ಜಡಜು ವಳಗೇ ನಗಾಡ್ತನೆ."

"ಅದ್ಯಾಕ್ ನಗಾಡ್ತರ್ಲ?"

"ಅದ ನಾನೇಳ್ತಿನಿ ದ್ವಡಪ್ಪ" ಎಂದು ವಾಟಿಸ್ಸೆ ಬಂದ.

"ಬಂದ ನೋಡು ಪೂಟ್ ಲಾಯರು" ಎಂದಳು ಜುಮ್ಮಿ.

"ಪೂಟ್ ಲಾಯರೆ ಅಂತ ತಿಳಕಳಕ್ಕ, ನಾನು ವಸಿ ಟ್ರೈನಿಂಗ್ ತಗಂಡಿದ್ದಿನಿ. ಎಲ್ಲಿ ಗೊತ್ತಾ? ಕ್ರಿಮಿನಲ್ ಲಾಯರ್ ಹನುಮಂತರಾಯರತ್ರ ತಿಳಕ!"

"ಅದ್ಯಾವಾಗ?"

"ಗಂಗಾಧರ ಮೂರ್ತಿ ಕೊಲೆಯಾದಾಗ ಶಿವರಾಮೇಗೌಡ ಫೇಮಸ್ ಕ್ರಿಮಿನಲ್ ಲಾಯರ್ ಹನುಮಂತರಾಯರ ಮಡಗಿದ್ದ. ಆಗ ನಾನು ಸುಮಾರು ಸತಿ ಹೋಗಿ ಅವುರ ಮಾತ ಕೇಳಿಸಿಗಂಡಿದ್ದೆ. ಯಂತ್ಯಂತ ಕತೆ ಅವೆ ಗೊತ್ತ ಅಲ್ಲೀ?"

"ಕ್ರಿಮಿನಲ್ ಲಾಯರ್ ಅಲವೆ, ಅವುರತ್ರಕೇನು ವಸಿ ಕತೆ ಬಂದವೆ. ಒಂದು ಕತೆಯಂಗೆ ಇನ್ನೊಂದು ಕತೆ ಇರದಿಲ್ಲ, ಒಂದು ಕೊಲೆಯಂಗೆ ಇನ್ನೊಂದಿರದಿಲ್ಲ, ಅಂಗಾಗಿ ನಾನಾ ತರದ ಕೇಸ ಹ್ಯಾಂಡ್ಲುಮಾಡಿ ಕಾನೂನ ಓದಿಕಂಡಿರತರೆ" ಎಂದ ಉಗ್ರಿ.

"ಓ ಅಂಗರೆ ಶಿವರಾಮೇಗೌಡ ಮಡಗಿದ್ದ ಲಾಯರು ಅವುರೆಯಾ."

"ಊ ಕಣಕ್ಕ. ಈಗ ಎಡೂರಪ್ಪನ ಮ್ಯಾಲೆ ಕೇಸು ಮಾಡ್ತಯಿರೋರು ಅವುರೆಯಾ. ಆದ್ರಿಂದ ಎಡೂರಪ್ಪ ಕಂಬಿ ಎಣಿಸಲೇ ಬೇಕಾಯ್ತದೆ."

"ಯಾವ ರಾಜಕಾರಣಿನೂ ಕಂಬಿ ಎಣಿಸಿಲ್ಲ ಕಣೊ ವಾಟಿಸ್ಸೆ. ನಮ್ಮ ಕೋರ್ಟುಗಳು ಯಂಗವಪ್ಪಾ ಅಂದ್ರೆ, ಎಡೂರಪ್ಪ ತೀರಿಕೊಂಡ ನಾಲ್ಕೊರಸದ ಮ್ಯಾಲೆ ತೀರ್ಮಾನ ಬತ್ತದೆ. ಆಗೊಂದು ಸತಿ ಬಮ್ಮಾಯಿ ಗವುರ್‌ಮೆಂಟ್ ತಗದುದ್ದು ಸರಿಯಲ್ಲ ಅಂತ ತೀರ್ಪು ಬಂದಿತ್ತು, ಅಷ್ಟೊತ್ತಿಗೆ ವಿರೇಂದ್ರ ಪಾಟೀಲ್ರು, ಬಂಗಾರಿ ಕಾಲ ಮುಗುದು ಮೊಯ್ಲಿ ಮುಖ್ಯಮಂತ್ರಿಯಾಗಿದ್ದ ಗೊತ್ತೇ?" ಅಂದ ಉಗ್ರಿ.

"ಕೋರ್ಟು ವಿಷಯ ನನಿಗೇಳಕ್ಕೆ ಬರ್‍ತಿಯಲ್ಲೊ ಉಗ್ರಿ. ಇದೇ ನಮ್ಮ ಶಿವರಾಮೇಗೌಡ ಚುನಾವಣೆಲಿ ಅಕ್ರಮ, ಮಾಡಿರದು ನಿಜ. ಅವುನ ಶಾಸಕತ್ವ ಅನೂರ್ಜಿತ ಮಾಡಿ ಅಂತ ತೀರ್ಪು ಬಂದಾಗ, ಅವುನು ತಿರಗ ಇನ್ನೊಂದು ಸತಿಗೆದ್ದು ಯಮ್ಮೆಲ್ಲೆ ಆಗಿದ್ದ. ಆಗ ದ್ಯಾವೇಗೌಡ್ರು ಆ ತೀರ್ಪನ್ನು ಸ್ಪೀಕರ್ ಅತ್ರ ಮಡಿಗಿಸಿ ಬಿಡಿಎ ಚೇರ್ಮನ್ ಮಾಡಿದ್ರು ಗೊತ್ತೇ?"

"ಅಂಗರೀ ಕೇಸಿನಿಂದ ಎಡೂರಪ್ಪನಿಗೇನೂ ಆಗದಿಲವೇ?"

"ಆಗೇ ಆಯ್ತದೆ ದ್ವಡಪ್ಪ, ಎಡೂರಪ್ಪ ಭಾಳ ಧೈರ್ಯವಾಗಿ ತೆಪ್ಪ ಮಾಡಿರದ್ರಿಂದ ತಪ್ಪಿಸಿಗಳಂಗೇಯಿಲ್ಲ" ಎಂದು ವಾಟಿಸ್ಸೆ ಹೇಳುವಾಗ ಚೆಡ್ಡಿ ಮಂಜ ಕಂಡ.

"ಲೇ ಚೆಡ್ಡಿ ಮಂಜ ಬಾರ್ಲಯಿಲ್ಲಿ" ಎಂದು ಕರೆದ. ಆತ ಬಂದನಂತರ,

"ಅಲ್ಲ ಕಣಲೆ, ಊರಲ್ಲಿರೊ ಮೂರಂಗಡಿಯ ಬಂದ್‌ಮಾಡಿ ಅಂತ ಹೇಳಿದಂತಲ್ಲಾ ನೀನೇನು ಊರ ಕೊಂಡಕಂಡಿದ್ದಿಯೇನ್ಲ?"

"ಎಡೂರಪ್ಪನಿಗೆ ಸಪೋರ್ಟು ಮಾಡಿ ಬಂದ್ ಮಾಡಿ ಅಂದಿದ್ದು ತೆಪ್ಪೆ?"

"ಇಲ್ಲ, ಅದ್ಯಂಗೆ ತೆಪ್ಪಾದತು. ಎಡೂರಪ್ಪ ನಿಮ್ಮವ್ವನ ಮಿಂಡ ನೋಡು, ಅದ್ಕೆ ನಿನಿಗೊಂದು ಸೈಟು, ನಿನ್ನ ತಮ್ಮನಿಗೊಂದು ಸೈಟು ಕೊಟ್ಟವ್ರುನೆ. ಅದ್ಕೆ ಅವುನ ಪರವಾಗಿ ಊರಲ್ಲಿರೊ ಮೂರಂಗಡಿಯ ಬಂದ್ ಮಾಡು ಅಂದಿದ್ದಿ" ಎಂದು ವಾಟಿಸ್ಸೆ ಬೈದ ಕೂಡಲೇ ಚೆಡ್ಡಿ ಮಂಜನಿಗೆ ಸಿಟ್ಟು ಬಂದು,

"ಸರಿಯಾಗಿ ಮಾತಾಡೊ ಲೈ ಕುಡುಕ" ಎಂದ.

"ನಾವು ಸರಿಯಾಗೇ ಮಾತಾಡ್ತಾಯಿದ್ದಿವಿ. ನೀವು ಸರಿಯಾಗಿ ಮಾತಾಡಿ. ಅದ್ಕುಮೊದ್ಲು ಯಾವುದು ಸರಿ, ಯಾವುದು ತೆಪ್ಪು ಅನ್ನದ ತಿಳಕಳಿ. ರಾಜ್ಯಪಾಲಿ ಸಯಿನು ಮಾಡದ್ಕು ನಮ್ಮ ಚಿಕ್ಕಣ್ಣ ಹೋಟ್ಲು ಬಾಗಲಾಕದ್ಕು ಏನ್ಲ ಸಮಂಧ? ಆಗ ನಾನಿರಬೇಕಿತ್ತು, ಅವತ್ತು ದುಡುದು ಅವತ್ತೇ ತಿನ್ನೋರಿಗೆ ಎಷ್ಟು ಕಷ್ಟ ಆದೆ ಗೊತ್ತ ನಿನಿಗೆ ಲೈ ಚೆಡ್ಡಿ ಬಡ್ಡೆತ್ತುದೆ. ತಲೆಲಿ ಮೆದುಳೆ ಯಿಲ್ಲಲ್ಲೊ ನಿಮಿಗೆ. ಇಡೀ ಸಮೂಹನೆ ಬುದ್ಧಿಮಾಂದ್ಯರಂಗೆ ಕಾಣ್ತಿರಲ್ಲೊ, ಆ ಮೊಟ್ಟೆ ರಂಗನ ಅಂಗಡಿ ನುಗ್ಗಿ ಕೋಳಿ ಮೊಟ್ಟೆನೆಲ್ಲ ಹ್ವಡದಾಕಿದ್ದಿರಲ್ಲ ಅದರ ಬೆಲೆ ಗೊತ್ತ ನಿನಿಗೆ. ನಿಮ್ಮವ್ವ ನಿಮ್ಮಕ್ಕ ಮೊಟ್ಟೆಯಿಟ್ಟಿದ್ರೆ ಅದರ ಬೆಲೆ ಗೊತ್ತಾಗದು ನಿಮಗೆ" ಎಂದು ವಾಟಿಸ್ಸೆ ಅಸಂಬದ್ಧ ಮಾತಿನಿಂದ ಜಗಳಕ್ಕೆ ಬಿದ್ದ. ಅಲ್ಲಿ ಬಹುಮತವಿದ್ದುದರಿಂದ ಚೆಡ್ಡಿ ಮಂಜ ಬಹಿರ್ದೆಸೆ ಕಾರ್ಯದ ಬೆಸೆಯಲ್ಲಿ ಹೊರಟುಹೋದ. ●



ಹಳೇ ಕಾಲದ ಗೆಳೆಯ ಚೌಡಪ್ಪ ರೆಡ್ಡಿಯವರು



ಚೌಡಪ್ಪ ರೆಡ್ಡಿಯವರು ನನಗೆ ಕಳೆದ ಎರಡೂವರೆ ದಶಕದಿಂದ ...ತಯು. ಈ ವ್ಯಕ್ತಿಯ ಮುಗ್ಧತೆ, ಗಾಂಭೀರ್ಯ, ಹಳೇ ಕಾಲದ ...ೀ ಆದರ್ಶ ನನಗೆ ಇವತ್ತಿಗೂ ಮೆಚ್ಚು; ಹಾಗೆಯೇ ಈ ಮುಗ್ಧತೆ ... ಗಾಂಭೀರ್ಯ ಅನೇಕಸಲ ಹುಟ್ಟಿಸುವ ನಗೆ ಕೂಡ ವಿಚಿತ್ರ. ...ರು ಹತ್ತು ವರ್ಷದ ಹಿಂದೆ ಒಂದು ನಾಟಕ ಬರೆದರು. ಆ ...ಕವನ್ನು ಹೇಗೆ ಕಲ್ಪಿಸಿಕೊಂಡೆ ಎಂದು ನನ್ನನ್ನು ಪ್ರೀತಿಯಿಂದ ನಿಲ್ಲಿಸಿ ...ತೊಡಗಿದರು. ತುಂಬ ಚಡಪಡಿಕೆಯ ಆಸಾಮಿಯಾದ ನಾನು ...ಷ್ಟೊ ಸಹನೆಯಿಂದ ಕೇಳಿದೆ. ನಾನು ಕೇಳುತ್ತಿರುವುದನ್ನು ನೋಡಿ ...ಪ್ಪ ರೆಡ್ಡಿಯವರಿಗೆ ತುಂಬ ಖುಷಿಯಾಯಿತು. ಸ್ವಾತಂತ್ರ್ಯ ಸಂಗ್ರಾಮವನ್ನು ... ಅವರ ನಾಟಕ ಆಗಿನ ಸರ್ಕಾರಕ್ಕೂ ಸಾರ್ವಜನಿಕರಿಗೂ ತುಂಬ ...ಬಹುದೆಂದು ವಿಶ್ವಾಸದಿಂದ ಮಾತಾಡಿದ ರೆಡ್ಡಿಯವರು ನನಗೆ, '...ನಾಟಕಕ್ಕೆ ನೀವೇ ಹೆಸರು ಕೊಡಬೇಕು. ಅದಕ್ಕೆ ನೀವೇ ತಕ್ಕವರು' ...ರು. ನನ್ನಲ್ಲಿ ಅಷ್ಟೊಂದು ನಂಬಿಕೆ ಇಟ್ಟು ಮಾತಾಡಿದ್ದು ನನಗೇನೋ ...ಂಯೋ; ಆದರೆ ನನ್ನ ಸಹನೆಯೆಲ್ಲ ಮುಗಿದುಹೋಗಿತ್ತು, ಶೀರ್ಷಿಕೆ ...ನಷ್ಟು ಹುರುಪು ಉಳಿದಿರಲಿಲ್ಲ, 'ಹೆಸರಿಗೇನು ಬಿಡಿ, ಬೋಲೋ-ಭಾರತ್-ಮಾತಾಕೀ-ಜೈ ಅಂತ ಇಡಬಹುದು. ...ಟಕದ ವಿಷಯಕ್ಕೆ ಒಪ್ಪುತ್ತೆ' ಅಂದೆ. ನನ್ನ ವ್ಯಂಗ್ಯವನ್ನೇ ಅರಿಯದ ರೆಡ್ಡಿ ಅನೇಕರಿಗೆ ಹೆಮ್ಮೆಯಿಂದ ನಾನು ಕೊಟ್ಟ ...ಕೆಯ ಬಗ್ಗೆ ಮಾತಾಡಿದರು.

...ದೇ ರೆಡ್ಡಿಯವರು ಸರ್ಕಾರಿ ನೌಕರಿಯಿಂದ ನಿವೃತ್ತರಾಗುವ ಮುನ್ನ ಬಿ.ಟಿ. ಸೋಮಣ್ಣನವರು ದೇವರಾಜ ... ಅವರನ್ನು ಕಾಣುವುದಕ್ಕೆ, ಮುಂಚೆಯೇ ಬೆಳಗಿನ ಜಾವ ನೋಡುತ್ತಾರೆಂದು, ಸರ್ಕಾರಿ ಹುದ್ದೆಯಲ್ಲಿ ಖಂಡಿತ ...ಮುವರಿಯುತ್ತಾರೆಂದು ಅನೇಕರು ತಮಾಷೆ ಮಾಡುತ್ತಿದ್ದರು. ಈ ತಮಾಷೆ ತಮ್ಮ ಕಿವಿಗೆ ಬಿದ್ದರೂ ರೆಡ್ಡಿಯವರಿಗೆ ... ತಮಾಷೆಯೆಂದು ಅರ್ಥವಾಗುತ್ತಿರಲಿಲ್ಲ, ಅವರು ನೌಕರಿಯಲ್ಲಿ ಮತ್ತೆರಡು ವರ್ಷ ಮುಂದುವರಿದಿದ್ದು ನಿಜ.

ಆಗ ಅವರು ಸರ್ಕಾರದ 'ಫಿಲ್ಮ್ ಯೂನಿಟ್'ಗೆ ಮುಖ್ಯರಾಗಿದ್ದರು. ಅದೇ ಸಮಯದಲ್ಲಿ-ಅಂದರೆ 1977 ರಲ್ಲಿ ನನಗೆ 'ಪಲ್ಲವಿ' ಚಿತ್ರಕ್ಕೆ ಪ್ರಶಸ್ತಿ ಬಂತು. ಈ ಬಗ್ಗೆ ನನಗಾದಷ್ಟೇ ಸಂತೋಷ ರೆಡ್ಡಿಯವರಿಗೂ ಆಗಿತ್ತು. ಆ ಚಿತ್ರವನ್ನು ಆಗ ಭಹುವಾಗಿ ಮೆಚ್ಚಿದವರು ಶಿವರಾಮ ಕಾರಂತರು; ಆ ವರ್ಷ ಕಾರಂತರು ಚಿತ್ರೋತ್ಸವದಲ್ಲಿ ತೀರ್ಪುಗಾರರಾಗಿದ್ದರು.

ಮೇಲಿನದೆಲ್ಲ ನೆನಪು. ಚೌಡಪ್ಪ ರೆಡ್ಡಿಯವರು ನಿವೃತ್ತರಾಗಿ ಒಂದೂವರೆ ದಶಕಕ್ಕಿಂತ ಹೆಚ್ಚು ಕಾಲ ಆಗಿದೆ. ಅವರು ಬೆಂಗಳೂರಿನ ಹತ್ತಿರದ ತಮ್ಮ ಜಮೀನನ್ನು ನೋಡಿಕೊಳ್ಳುವುದು ಕಷ್ಟವಾಗಿ ಕ್ರಮೇಣ ಎಲ್ಲದರಿಂದ ಬಿಡಿಸಿಕೊಂಡಿದ್ದಾರೆ. ಮಗ ಒಳ್ಳೆಯ ಕೆಲಸದಲ್ಲಿ ವಿದೇಶದಲ್ಲಿದ್ದಾನೆ; ಇವರ ಇತರ ಮಕ್ಕಳೂ ಸುಖವಾಗಿ ನೆಲಸಿದ್ದಾರೆ. ಚೌಡಪ್ಪ ರೆಡ್ಡಿ ಒಮ್ಮೆ ಪ್ರಖ್ಯಾತ ಚಿತ್ರ ಕಲಾವಿದ ಮತ್ತು ಶಿಲ್ಪಿ ಆರ್.ಎಸ್.ನಾಯ್ಡು ಅವರಿಗೆ ಸ್ನೇಹಿತರಾಗಿದ್ದವರು. ನಾಯ್ಡು ತುಂಬ ತಿಕ್ಕಲನಾಗಿದ್ದು ವಿಚಿತ್ರವಾಗಿ ಅಸ್ತವ್ಯಸ್ತವಾಗಿ ಬದುಕುತ್ತಿದ್ದಾಗ ರೆಡ್ಡಿ ಆತನ ನೆರವಿಗೆ ಬಂದವರು. ಆರ್.ಎಸ್. ನಾಯ್ಡು ಸತ್ತು ಅನೇಕ ವರ್ಷವಾಗಿದೆ. ಈಗ ಚೌಡಪ್ಪ ರೆಡ್ಡಿ ತಮ್ಮಲ್ಲಿರುವ ಕಾಗದಗಳು, ಫೋಟೋಗಳು, ನೆನಪುಗಳ ಜೊತೆಗೆ ಇದ್ದಾರೆ. ಆರ್.ಎಸ್. ನಾಯ್ಡು ಅವರಿಗೆ ಬರೆದ ಅನೇಕ ಕಾರ್ಡುಗಳನ್ನು ಏನು ಮಾಡುವುದೆಂದು ತಿಳಿಯದೆ ಮೊನ್ನೆ ನಮ್ಮ ಕಚೇರಿಯಲ್ಲಿ ಕೊಟ್ಟು ಹೋಗಿದ್ದಾರೆ. ನಾನು ರೆಡ್ಡಿಯವರು ಬಂದಿದ್ದಾಗ ಸುಸ್ತಿನಿಂದ ಮಲಗಿದ್ದೆ. ನಾಯ್ಡು ಅವರು ಬರೆದ ಚಿತ್ರಗಳನ್ನುಳ್ಳ ಕಾರ್ಡುಗಳನ್ನು ನೋಡಿ ಖುಷಿಗೊಂಡೆ. ನಾವೆಲ್ಲ ಗೆಳೆಯರಿಗೆ ಸುಮ್ಮನೆ ಕಾಗದ ಬರೆಯುತ್ತೇವೆ. ನಾಯ್ಡು ಹಾಗಲ್ಲ, ಪ್ರತಿಯೊಂದು ಕಾರ್ಡಿನ ಮೇಲೂ ಒಂದು ಪುಟ್ಟ ಚಿತ್ರ ಬರೆದು ಬೇರೆ ವಿಷಯ ಬರೆದಿರುತ್ತಾರೆ. ಈ ಮುಪ್ಪಿನಲ್ಲೂ ರೆಡ್ಡಿಯವರಿಗೆ ನನ್ನ ಮೇಲಿರುವ ಪ್ರೀತಿ ಕಂಡು, ನಾನು (ಯಥಾಪ್ರಕಾರ) ಎಷ್ಟೇ ಕಿರಿಕಿರಿ ಉಂಟುಮಾಡಿದರೂ ಲೆಕ್ಕಿಸದೆ ತಮ್ಮ ವಿಶ್ವಾಸ ಮುಂದುವರಿಸುತ್ತಿರುವುದನ್ನು ನೋಡಿ ನಾಚಿಕೆಯಿಂದ ಕೂತೆ. ಅವರು ಹೋಗುವ ಮುನ್ನ ಹೇಳಿದ್ದರು, "ಮೇಷ್ಟ್ರಿಗೆ ಹೇಳಿ, ನನ್ನಲ್ಲಿ ಬಹಳ ಹಳೇ ಪುಸ್ತಕಗಳಿವೆ. ಅವರು ಕೆಲವನ್ನಾದರೂ ಮೆಚ್ಚಬಹುದು. ವೇಳೆ ದೊರೆತಾಗ ನಮ್ಮ ಮನೆಗೆ ಬಂದರೆ ಎಲ್ಲವನ್ನೂ ನೋಡಿ ಅವರು ಆರಿಸಿಕೊಳ್ಳಬಹುದು."

ಕಾಲ ಹೇಗೆ ಸರಿಯುತ್ತದೆ! ನಾಯ್ಡು ಈಗ ಇಲ್ಲ, ನಾಯ್ಡು ಅಪಾರವಾಗಿ ಮೆಚ್ಚಿದ ಕೈಲಾಸಂ ಕೂಡ ಇಲ್ಲ, ಈ ನಾಯ್ಡು ಬರೆದ ಚಿತ್ರಗಳು, ಶಿಲ್ಪಗಳು, ಕಾಗದಗಳು ಇವೆ. ಅವರ ನೆನಪು ಚೌಡಪ್ಪ ರೆಡ್ಡಿಯವರಲ್ಲಿ ಇದೆ.

ಚೌಡಪ್ಪ ರೆಡ್ಡಿಯವರಿಗೆ ಖುಷಿಯಾಗಲೆಂದು ಈ ಟಿಪ್ಪಣಿ ಬರೆದು ಅವರು ಬಿಟ್ಟುಹೋಗಿರುವ ಕಾರ್ಡುಗಳ ಚಿತ್ರಗಳಲ್ಲಿ ಒಂದನ್ನು ಇಲ್ಲಿ ಕೊಡುತ್ತಿದ್ದೇನೆ.

-ಸೆಪ್ಟೆಂಬರ್ 7, 1994



ಸ್ವಯಂಪ್ರೇರಣೆ ಪರದಾಟ

ಬೆಂಗಳೂರಿನಲ್ಲಿ ತುರ್ತು ಕೆಲಸ ಇತ್ತು. ನಮ್ಮ ಅಣ್ಣ ಅಲ್ಲಿದ್ದರು. ಅವರ ಮನೆಯಿಂದ ಭೂವಿವಾದಕ್ಕೆ ಸಂಬಂಧಿಸಿದ ದಾಖಲೆಪತ್ರಗಳನ್ನು ತರಬೇಕಿತ್ತು. ಸೋಮವಾರ ಪಾಂಡವಪುರದ ಎ.ಸಿ. ಕೋರ್ಟ್‌ನಲ್ಲಿ ಮೊಕದ್ದಮೆ ಇದ್ದದ್ದರಿಂದ ಅವನ್ನು ತರುವುದು ಅನಿವಾರ್ಯ ಆಗಿತ್ತು. ಮಂಡ್ಯದಿಂದ ಹೊರಡಬೇಕೆಂದಿದ್ದೆ. ಹಿಂದಿನ ರಾತ್ರಿಯೇ ಭಾಜಪ ರಾಜ್ಯಾಧ್ಯಕ್ಷರು ಸ್ವಯಂಪ್ರೇರಿತ ಬಂದ್‌'ಗೆ ಕರೆ ನೀಡಿದ್ದರು. ಗಲಭೆ ಉಂಟಾಗುವ ಸಂದರ್ಭ ಬಂದರೆ ಕೆಎಸ್‌ಆರ್‌ಟಿಸಿ ಮತ್ತು ಬಿಎಂಟಿಸಿ ಬಸ್ಸುಗಳನ್ನು ಓಡಿಸಲಾಗುವುದಿಲ್ಲ ಎಂದು ಅಧಿಕಾರಿಗಳು ಮುನ್ನೆಚ್ಚರಿಕೆ ನೀಡಿದ್ದರು. ನಾನು ಇಂತಹ ಹಲವು ಬಂದ್‌'ಗಳನ್ನು ಕಂಡಿರೋನು. ಆಮರಣ ಉಪವಾಸ ಅಂದ್ರೆ ಯಾರೂ ಸಾಯೋವರ್ಗೂ ಉಪವಾಸ ಮಾಡಲ್ಲ ಅಂತ ತಿಳ್ದಿರೋನು. ಬಂದ್ ಅಂದ್ರೆ ಪ್ರತಿಭಟನಾಕಾರರು ಬಂದು ಸೇರೋಹೊತ್ಗೆ ಸೂರ್ಯ ನೆತ್ತಿ ಮೇಲೆ ಬಂದಿರ್ತಾನೆ. ಉರಿಬಿಸಿಲಲ್ಲಿ ಬಂದ್ ಮಾಡೋದು ಎಂತೋರ್ಗೂ ತ್ರಾಸವೇಯ. ಆದಕ್ಕೇ ಅದು ಮಧ್ಯಾಹ್ನ ಮೂರು ಗಂಟೆಗೆಲ್ಲ ಬರಕಾಸ್ತಾಯ್ತದೆ ಅನ್ನೋದು ಗೊತ್ತಿತ್ತು. ಬೆಳಗ್ಗೆ ಒಂಭತ್ತು ಗಂಟೆ ಒಳಗೆ ಬೆಂಗ್ಳೂರ್ ಸೇರಿ ಮಧ್ಯಾಹ್ನ ಮೂರು ಗಂಟೆ ನಂತರ ಹಿಂತಿರುಗಿದರಾಯಿತು. ಅಂದ್ಕೊಂಡು ಮುಂಜಾನೆ ಐದು ಗಂಟೆಗೆಲ್ಲ ಬಸ್ ಸ್ಟ್ಯಾಂಡಿಗೆ ಬಂದೆ. ಒಂದು ಒಂದೂವರೆ ಗಂಟೆ ಕಾಯ್ದರೂ ಬಸ್ಸಿನ ಸುಳಿವೇ ಇರ್ಲಿಲ್ಲ. ಬೆಂಗಳೂರು-ಮೈಸೂರು ನಡುವೆ ಪ್ರತಿ ನಿಮಿಷಕ್ಕೆ ಒಂದು ಬಸ್ಸು ಓಡಾಡ್ತವೆ ಅಂತ ಅಧಿಕಾರಿಯೊಬ್ಬರು ಬಡಾಯಿಕೊಚ್ಚಿದ್ದ ಕೇಳಿದ್ದೆ. 'ಏನಾಯ್ತು ಇವತ್ತು ಈ ನನ್ ಮಗನಪ್ಪೆ' ಅಂದುಕೊಂಡು ಗೊಣಗ್ತಾ ಚಳೀಲಿ ನಡುಗ್ತಾ ನಿಂತಿದ್ದೆ. ನನ್ನಂಗೇ ನಿಂತಿದ್ದ ಪ್ರಾಣಿ ಕಣ್ಣಿಗೆ ಬಿತ್ತು. 'ಬಸ್ಸಾ' ಅಂದೆ. 'ಇಲ್ಲ ಬಂದ್ ದಿವಸಾನೂ ಬಸ್ ಕಾಯೊ ಮೂರ್ಖರು ಇರ್ತಾರಾ ಅಂತ ನೋಡೋಕೆ ಬಂದೆ' ಅಂದ. ತಗದು ನಾಲ್ಕು ಬಾರಿಸಲೇ ಅನ್ನುಸ್ತು. ತಡ್ಕಂಡು ಬಂದ್ ಪ್ರವರ ಅವನಿಗೆ ಒಪ್ಪಿಸಿ ಹಂಗೇನೆ ಸರ್ಕಾರಿ ಬಸ್ಸುಗಳು ಬೆಳಿಗ್ಗೆ ಸಂಜೆ ಓಡಾಡ್ತವೆ ಅಂತ ಹೇಳಿ ನನ್ನ ಜಾಣತನ ಮೆರೆದೆ ಅಂದ್ಕಂಡೆ. 'ಹಂಗಾ ಇದು ಸರ್ಕಾರಿ ಪ್ರಾಯೋಜಿತ ಬಂದ್ ತಿಳ್ಕಳಿ' ಅಂತ 'ಅಯ್ಯೋ ಬಕರಾ ಇಷ್ಟು ತಿಳೀದಾ' ಅನ್ನೋ ಹಂಗೆ ನೋಡ್ದ. ಎದ್ದು ಯಾರ ಮುಖ ನೋಡಿದ್ನೊ ಅಂತ ಶಪಿಸಿಕೊಳ್ತಾ ಮನೆಗೆ ಹಿಂತಿರುಗಿದೆ.

ಕೆಲಸ ಇಲ್ಲದ ಕುಂಬಾರ ಅದೇನೋ ಮಾಡ್ದ ಅಂತಾರಲ್ಲ ಹಂಗೆ ಟಿವಿ ನೋಡ್ತಾ ಕುಂತೆ. ನಮ್ಮ ಸಜ್ಜನ ಕಾನೂನು ಮಂತ್ರಿ ಸುರೇಶ್ ಕುಮಾರ್ ಅವರು ಕಾಣಿಸಿದ್ರು. ('ಸಜ್ಜನ' ಎಂಬುದು ಈ ಮನುಷ್ಯನಿಗೆ ಮಾಧ್ಯಮದವರು ನೀಡಿರುವ ಗುಣವಾಚಕ). ಅವರ ಜೊತೆ ಮಂತ್ರಿ, ಕಾರ್ಯಕರ್ತರ ಹಿಂಡೇ ಇತ್ತು. ರಾಜ್ಯಪಾಲರ ಮನೆಯಿಂದ ಹಿಂತಿರುಗುತ್ತಿದ್ದರಂತೆ. ಅರೆರೆ ಇದೇನಪ್ಪ ಇದು. ಈಗತಾನೆ ಶಂಕರ ಬಿದರಿಯೋರು ನಿಷೇಧ ಆಜ್ಞೆ ವಿಧಿಸಿದೀವಿ, ಐದು ಜನರ ಮೇಲೆ ಗುಂಪು ಸೇರುವುದು ಅಪರಾಧ ಅಂತ ಹೇಳ್ತಿದ್ದರಲ್ಲಾ ಇಲ್ಲಿ ನೋಡಿದ್ರೆ ಒಂದು ಹಿಂಡೇ ಅವ್ರಲ್ಲ..... ಕಾನೂನುಮಂತ್ರಿಗಳಿಗೆ ಈ ಕಾನೂನು ಅನ್ವಯಿಸಲ್ಲವೇನೋ.... ಅವ್ರು ಕಾನೂನಾತೀತರು ಇರ್ಬೇಕು. ಅದ್ಕೇ ಅಲ್ಲಿದ್ದ ಪೊಲೀಸ್ನೋರಾಗ್ಲಿ, ಮಾಧ್ಯಮದವರಾಗಲಿ ಯಾರೂ ಅವ್ರನ್ನ ಪ್ರಶ್ನಿಸಲಿಲ್ಲ. ಎಷ್ಟೇ ಆಗಲಿ ಕಾನೂನು ಪಾಲಿಸಬೇಕಾಗಿರೋ ಮಂತ್ರಿ ಅಲ್ವಾ..... ಅದಂಗಿರ್ಲಿ, ರಾಜಭವನದಿಂದ ಬರ್ತಿದ್ದೋರ್ಗೆ ಮಾಧ್ಯಮದವರನ್ನ ಕಂಡೇಟ್ಗೆ ಒಳ್ಳೆ ರಸಗುಲ್ಲ ಸಿಕ್ಕಿದಂಗಾಯ್ತು. ಅವರ ಮಾಮೂಲಿ ಶೈಲೀಲಿ ಏನೇನೋ ವದರಿದರು. ಯಾರೋ ಬಸ್ ಸಂಚಾರ ನಿಲ್ಲಿಸಿದ್ದರಿಂದ ಜನರು ಪರದಾಡ್ತಿರೋ ವಿಷಯಾನ ಎತ್ತಿರಬೇಕು. ಅವರೇನಂದ್ರು ಗೊತ್ತಾ? 'ಸರ್ಕಾರಿ ಬಸ್ ಸಂಚಾರ ನಿಲ್ಲಿಸುವಂತೇನೂ ಸರ್ಕಾರ ತಿಳಿಸಿಲ್ಲ' ಅಂದ್ಬುಟ್ರು. ಅಷ್ಟೇ ಅಲ್ಲ 'ಇದರಿಂದ ಯಾರಿಗೂ ತೊಂದರೆ ಆಗಿಲ್ಲ, ತೊಂದರೆಯಾಗಿರುವವರಿಗೆ ಸೂಕ್ತ ವ್ಯವಸ್ಥೆ ಮಾಡ್ತೀವಿ' ಅಂದ್ಬುಟ್ರು! ಹಂಗಾರೆ ನಾನು ಬಸ್ಸಿಗೆ ಕಾದು ಕಾದು ಸುಸ್ತಾಗಿ ಬಂದದ್ದು ಸುಳ್ಳು ಇರಬೇಕು! ಬಸ್ಸುಗಳಿಲ್ಲದೆ ಪರದಾಡ್ತ ಇದ್ದರಲ್ಲ ಅವ್ರುದ್ದೆಲ್ಲ 'ಸ್ವಯಂಪ್ರೇರಣೆ ಪರದಾಟ' ಇರಬೇಕು! ಹೇಳ್ತೀನಿ ಹೇಳ್ತೀನಿ ಅಂತಾ ಇಂತ ಸುಳ್ಳು ಹೇಳ್ತಾನಲ್ಲ ಇವನ ಬಾಯಿಗೆ....

ಎಲ್ಲರೂ ಸಂವಿಧಾನ ರಕ್ಷಕರೆ!

ತಲೆ ಕೆಟ್ಟು ಗೊಬ್ಬರ ಆಗಿತ್ತು.

ಕಾರಣ: ಭೂಹಗರಣಕ್ಕೆ ಸಂಬಂಧಿಸಿದಂತೆ ಮುಖ್ಯಮಂತ್ರಿ ವಿರುದ್ಧ ಕ್ರಿಮಿನಲ್ ಮೊಕದ್ದಮೆ ಹೂಡಲು ಇಬ್ಬರು ವಕೀಲರು ರಾಜ್ಯಪಾಲರಲ್ಲಿ ಮಾಡಿದ್ದ ಮನವಿ.



ರಾಜಭವನ ಈಗ 'ಪ್ರಜಾಪ್ರಭುತ್ವ'ದ ಆಡೊಂಬಲ!

ಒಂದು ವಕೀಲರ ಗುಂಪು ಬರುತ್ತದೆ.

ಕೇಳುತ್ತದೆ: ಪ್ರಜಾಪ್ರಭುತ್ವ ಉಳಿಯಬೇಕೆ?

ಹೌದು ಉಳಿಯಬೇಕು. ಅದಕ್ಕೇನು ಮಾಡಬೇಕು?

ಮುಖ್ಯಮಂತ್ರಿ ವಿರುದ್ಧ ಕ್ರಿಮಿನಲ್ ಮೊಕದ್ದಮೆ ನೀಡಲು ಅವಕಾಶ ನೀಡಬಾರದು!

ಇವರು ಮರೆಯಾದರು. ಇನ್ನೊಂದು ವಕೀಲರ ಗುಂಪು ಬಂತು. ಅವರದ್ದೂ ಅದೇ ಪ್ರಶ್ನೆ. ಉತ್ತರ ಮಾತ್ರ ಭಿನ್ನ. ಮುಖ್ಯಮಂತ್ರಿಗಳ ಮೇಲೆ ಕ್ರಿಮಿನಲ್ ಮೊಕದ್ದಮೆ ಹೂಡಲು ಅವಕಾಶ ನೀಡಿದರೇ ಪ್ರಜಾಪ್ರಭುತ್ವದ ಉಳಿವು!

ಎರಡು ಗುಂಪಿನ ಆಶಯವೂ ಒಂದೇ: ಪ್ರಜಾಪ್ರಭುತ್ವ ಉಳಿಸುವುದು! ಅವಕ್ಕೆ ತಮ್ಮ ತಮ್ಮ ನಿಲುವೇ ಸರಿಯಾದದ್ದು ಎಂಬುದರಲ್ಲಿ ಅಚಲವಾದ ನಂಬಿಕೆ!

ಅವರು ಹಿಡಿದ ಕಾಗೆಗೆ ಮೂರು ಕಾಲು!

ಅದು ಸರಿ. ಕ್ರಿಮಿನಲ್ ಮೊಕದ್ದಮೆ ಹೂಡಲು ಯಾಕೆ ಅನುಮತಿ ನೀಡಬೇಕು?

ಸಂವಿಧಾನ ರಕ್ಷಿಸಲು!

ಯಾಕೆ ನೀಡಬಾರದು?

ಇದು ಸಂವಿಧಾನ ವಿರೋಧಿ!

ಎಲ್ಲರೂ ಸಂವಿಧಾನ ಆರಾಧಕರೆ!

ಹಾಳು ಕಾನೂನುಗಳೇ ಹೀಗೇನೋ. ಎರಡೂ ನಿಜ, ಎರಡೂ ಸುಳ್ಳು. ವಕೀಲರ ವಾಕ್ಚಾತುರ್ಯದ ಮೇಲೆ ಅದರ ನಿರ್ಧಾರ!

ಅಂತೂಇಂತೂ ರಾಜ್ಯಪಾಲರು ಅನುಮತಿ ನೀಡೇಬಿಟ್ಟರು!

'ಇದು ಸರಿಯಾದ ಕ್ರಮ' ಎಂದವರೂ ಇದ್ದರು, ಇದರ ಹಿನ್ನೆಲೆಯಲ್ಲಿ ರಾಜಕೀಯ ಪ್ರಭಾವ ಗೋಚರಿಸಿದವರೂ ಇದ್ದರು.

ಒಂದನೇ ಗುಂಪು ಸಂತೋಷಗೊಂಡಿತು.

ಎರಡನೆಯ ಗುಂಪು?

'ಸ್ವಯಂಪ್ರೇರಿತ ಬಂದ್‌'ಗೆ ಕರೆ ನೀಡಿತು. ನೀಡಿದವರು ಭಾಜಪದ ರಾಜ್ಯಾಧ್ಯಕ್ಷ ಕೆ.ಎಸ್. ಈಶ್ವರಪ್ಪ ಅವರು.

ಯಾಕೆ ಈ ಸ್ವಯಂಪ್ರೇರಿತ ಬಂದ್? ಮುಖ್ಯಮಂತ್ರಿ ಯಡ್ಯೂರಪ್ಪನವರು ಇದರಲ್ಲಿ ಭಾಗಿಯಾಗಿಲ್ಲವೆ? ಯಡ್ಯೂರಪ್ಪನವರ ನಡವಳಿಕೆ ಸರಿಯೆ?

ಭಾಜಪ ರಾಷ್ಟ್ರಾಧ್ಯಕ್ಷ ನಿತಿನ್ ಗಡ್ಕರಿ ಅವರ ಪ್ರಕಾರ-ನೈತಿಕವಾಗಿ ತಪ್ಪು, ಕಾನೂನು ರೀತ್ಯ ಸರಿ!

ಅಂದರೆ ಕಾನೂನಿಗೆ ನೈತಿಕತೆ ಇಲ್ಲ ಅಂದ ಹಾಗಾಯ್ತು!

ಯಾರ ಅಭಿಪ್ರಾಯ ಏನೇ ಇರಲಿ. ರಾಜ್ಯಾಧ್ಯಕ್ಷರ ಕರೆಗೆ ಕಾರ್ಯಕರ್ತರು ಅತಿಯಾಗೇ ಪ್ರತಿಕ್ರಿಯಿಸಿದರು. ಬೈಕ್‌ಗಳಲ್ಲಿ ಬೀದಿಬೀದಿ ಸುತ್ತಿ ಅಂಗಡಿ ಬಾಗಿಲುಗಳನ್ನು ಮುಚ್ಚಿಸಿದರು.



ಎಚ್.ಎಲ್. ಕೇಶವಮೂರ್ತಿ

ಅಣಕ

'ಬಲವಂತ ಬಂದ್' ಮಾಡಿಸಿದರು. ಇದನ್ನು 'ಸ್ವಯಂಘೋಷಿತ ಬಂದ್' ಆಗಿ ಪರಿವರ್ತಿಸಿದರು!

ಬೆಳಿಗ್ಗೆ ಎದ್ದು ಪತ್ರಿಕೆ ನೋಡ್ತೀನಿ. ಪರಿವರ್ತಿತ ಬಂದೇ ಮುಖಕ್ಕೆ ಬಡೀತಿದೆ! ತಾವು 'ನ್ಯಾಯಪರರು' ಅಂತ ತೋರಿಸಿಕೊಳ್ಳೋ ಇಚ್ಛೆ ಇದ್ದವರು ಈ ಮಾದರಿ ಸ್ವಯಂಪ್ರೇರಿತ ಬಂದ್ ವಿಷಯವನ್ನೇ ಒಳಪುಟಕ್ಕೆ ಜರುಗಿಸಿ ಕೈ ತೊಳೆದು ಕೊಂಡಿದ್ದರು!

ಇದು ಇರಲಿ. ಯಡ್ಯೂರಪ್ಪನವರು ರಾಜೀನಾಮೆ ನೀಡ್ತಾರೆ ಎಂದು ಮೂರ್ಖರು ಮಾತ್ರ ನಂಬಲು ಅಸಾಧ್ಯ. ಅವರೇನು ಹೇಳಿದರು ಪತ್ರಿಕಾಗೋಷ್ಠಿಯಲ್ಲಿ?

'ಭಾಜಪ ಬಂದ್ ಕರೆ ನೀಡಿರಲಿಲ್ಲ, ಜನರೇ ಸ್ವಯಂ ಪ್ರೇರಣೆಯಿಂದ ಬಂದ್ ಮಾಡಿದ್ದಾರೆ. ಅದಕ್ಕ ಅವರಿಗೆ ಕೃತಜ್ಞತೆ ಸಲ್ಲಿಸುತ್ತೇನೆ.'

ಹಿಂದಿನ ದಿನ ಭಾಜಪ ರಾಜ್ಯಾಧ್ಯಕ್ಷರು ಬಂದ್ ಆಚರಿಸಲು ಕರೆ ನೀಡಿದ್ದು ಅವರ ನೆನಪಿನಿಂದ ಮಾಯ ಆಗಿರಬೇಕು. ಇಲ್ಲ ಮಹಾಜನತೆಯೇ ಅದನ್ನು ತಪ್ಪಾಗಿ ಅರ್ಥೈಸಿಕೊಂಡಿರಬೇಕು!

ಆಯಿತು. ತಮ್ಮ ನಾಯಕನ ಪರವಾಗಿ ಮಹಾ ಜನತೆಯೇ ರೊಚ್ಚಿಗೆದ್ದು ಪ್ರತಿಭಟಿಸಿದರು ಎಂದೇ ನಂಬೋಣ. ಅಂಗಡಿ, ವಾಹನಗಳಿಗೆ ಕಲ್ಲೆಸೆದದ್ದೂ ಸ್ವಯಂಪ್ರೇರಣೆ ಕಲ್ಲೆಸೆತವೊ? ಅವುಗಳನ್ನು ಸುಡುವಿಕೆಯೂ ಸ್ವಯಂಪ್ರೇರಿತ ಸುಡುವಿಕೆಯೊ? ಸನ್ಮಾನ್ಯರ ಉತ್ತರ ಏನು ಇದಕ್ಕೆ?

'ದಾಂಧಲೆ ಎಬ್ಬಿಸಿದವರು ಭಾಜಪ ಕಾರ್ಯಕರ್ತರಲ್ಲ!'

ಹಾಗಾದರೆ ಅವರು ಯಾರು?


ಸಮಾಜಘಾತುಕರು!

ದೃಶ್ಯ ಮಾಧ್ಯಮಗಳಲ್ಲಿ ಭಾಜಪ ಕಾರ್ಯಕರ್ತರೆ ದಾಂಧಲೆ ಮಾಡುತ್ತಿರುವುದು ಕಾಣಿಸುತ್ತಿತ್ತಲ್ಲ... ಭಾಜಪ ಕಾರ್ಯಕರ್ತರಲ್ಲೂ ಗೂಂಡಾ ಪಡೆ ಇದೆಯಾ..... ಒಂದೂ ತಿಳಿಯದು.... ಥತ್ ತಲೆ ಕೆಟ್ಟು ಗೊಬ್ಬರ ಆಗಿದೆ.

ನ್ಯಾಯಪರವಾದ, ಸತ್ಯಪರವಾದ, ಜನಪರವಾದ ಕಾಳಜಿ ಸಾಬೀತಾಗಿದೆ

ಪಿ. ಲಂಕೇಶರ ಲೇಖನಗಳು 'ಪ್ರಜಾವಾಣಿ'ಯಲ್ಲಿ ಬಂದ ದಿನಗಳಿಂದ, ಆನಂತರ 'ಲಂಕೇಶ್ ಪತ್ರಿಕೆ' ಹುಟ್ಟಿನಿಂದ ನನ್ನ ಜೀವನದ ಅವಿಭಾಜ್ಯ ಅಂಗವಾಗಿದೆ.

ಲಂಕೇಶರು ಏನಾದರೂ ಹೊಸತನ್ನು ಪ್ರತಿ ಸಂಚಿಕೆಯಲ್ಲಿ ಹೊರತಂದು ಓದುಗರನ್ನು ಬೆಚ್ಚಿಬೀಳಿಸುತ್ತಿದ್ದರು. ಅದರಲ್ಲಿ ಒಂದು ತರಹದ ಜೀವನ ಉಲ್ಲಾಸ ಇರುತ್ತಿತ್ತು, ಸಾಮಾಜಿಕ ಕಳಕಳಿಯನ್ನು ಹೊಂದಿರುತ್ತಿತ್ತು ಹಾಗೂ ಹೊಸ ಲೇಖಕರನ್ನು ಪತ್ರಿಕೆಯ ಮುಖಾಂತರ ಹುಟ್ಟುಹಾಕುತ್ತಿದ್ದರು. ನೇರ ಅನುಭವಗಳಿಂದ ತಟ್ಟಿ ಎಬ್ಬಿಸುತ್ತಿದ್ದರು. ಪ್ರಪಂಚದ ಯಾವುದೇ ಭಾಗದಲ್ಲಿ ಹೊಸ ಪುಸ್ತಕಗಳು ಪ್ರಕಟವಾಗಿದ್ದರೂ ಮೊಟ್ಟ ಮೊದಲು ಓದಿ ಅನುಭವದ ಸಾರವನ್ನು ನೀಡುತ್ತಿದ್ದರು. ದೈನಂದಿನ ಘಟನೆಗಳನ್ನು ಅನುಭವಿಸಿ ತನ್ನ ಓದುಗರಿಗೆ ರುಚಿರುಚಿಯಾಗಿ ಬಡಿಸುತ್ತಿದ್ದರು.



ಪ್ರಚಲಿತ ಸಾಮಾನ್ಯರ ಸಮಸ್ಯೆಗೆ, ಮೇಲಿನಂತಹ ವಿಷಯಗಳಿಗೆ ಕೊರತೆಯಾಗಿದೆಯೋ? ತನ್ನ ರುಚಿ ಕಳೆದುಕೊಳ್ಳುತ್ತಿದೆಯೋ ಎನ್ನುವಂತಹ ಸಮಯದಲ್ಲಿ ಕಲ್ಕುಳಿ ವಿಠ್ಠಲ ಹೆಗ್ಡೆಯವರ 'ಮಂಗನ ಬ್ಯಾಟೆ' ಓದುಗರನ್ನು ಬಡಿದೆಬ್ಬಿಸಿದೆ. ಚಿಂತನೆಗೆ, ವೈಚಾರಿಕತೆಗೆ ಹಾಗೂ 'ಗೌರಿ ಲಂಕೇಶ್ ಪತ್ರಿಕೆ'ಯ ಜೀವಂತಿಕೆಗೆ ಮೆರುಗು ಕೊಟ್ಟಿದೆ. ಇಂತಹ ಅದ್ಭುತ ಕೃತಿಯನ್ನು ಓದುಗರಿಗೆ ಉಣಬಡಿಸಿದ್ದಕ್ಕಾಗಿ ತಮ್ಮೆಲ್ಲರಿಗೂ ಹೃದಯಪೂರ್ವಕ ಧನ್ಯವಾದಗಳು.

- ಡಾ. ಹೆಚ್.ಟಿ.ಚಂದ್ರಶೇಖರ್, ಮೈಸೂರು

ದಿವಂಗತ ಛಾಯಾಗ್ರಾಹಕ ಎಸ್.ರಾಮಚಂದ್ರ ಅವರನ್ನು ಕುರಿತು ಕವಿತಾ ಲಂಕೇಶ್ ಬರೆದಿದ್ದ ಲೇಖನ ತುಂಬಾ ಚೆನ್ನಾಗಿತ್ತು. ಓರ್ವ ಉತ್ತಮ ಛಾಯಾಗ್ರಾಹಕನ ಅದ್ಭುತ ಗುಣಗಳನ್ನು ಲೇಖನ ಸೆರೆಹಿಡಿದಿತ್ತು.

- ಜೆ.ಪಿ.ಬಸವರಾಜು, ಮೈಸೂರು

ಫೆಬ್ರವರಿ 2 ಮತ್ತು 9, 2011ರ ಸಂಚಿಕೆಗಳಲ್ಲಿ ಸಂಘಪರಿವಾರ ಬೆಂಬಲಿತ ಹಿಂದೂತ್ವವಾದಿ ಭಯೋತ್ಪಾದಕ ಷಡ್ಯಂತ್ರವನ್ನು ಪರಿಪೂರ್ಣವಾಗಿ ಬಯಲುಗೊಳಿಸಿದ್ದೀರಿ. ಅದಕ್ಕೆ ನಿಮ್ಮ ತಂಡಕ್ಕೆ ಧನ್ಯವಾದಗಳು.

ಇಲ್ಲಿಯ ತನಕ ನಮ್ಮ ಯಾವ ಕನ್ನಡ ಪತ್ರಿಕೆಗಳೂ ಹಿಂದೂತ್ವವಾದಿ ಭಯೋತ್ಪಾದನೆ ಕುರಿತು ಇಂತಹ ವಿವರಗಳನ್ನುಳ್ಳ ವರದಿಯನ್ನು ಪ್ರಕಟಿಸಿಲ್ಲ, ಮಾತ್ರವಲ್ಲ, 'ಲಂಕೇಶ್' ವಾರ ಪತ್ರಿಕೆ 2008ರಿಂದಲೇ ಇಂತಹ ಷಡ್ಯಂತ್ರದ ಬಗ್ಗೆ ಗುಮಾನಿ ವ್ಯಕ್ತಪಡಿಸುತ್ತಲೇ ಬಂದಿದೆ. ಸ್ವಾಮಿ ಅಸೀಮಾನಂದನ ತಪ್ಪೊಪ್ಪಿಗೆ ಈಗ ಅದನ್ನೆಲ್ಲ ಧೃಢಪಡಿಸಿದೆಯಷ್ಟೇ. ನ್ಯಾಯಪರವಾದ, ಸತ್ಯಪರವಾದ, ಜನಪರವಾದ ನಿಮ್ಮ ಕಾಳಜಿ ನಿಜವಾಗಿತ್ತೆಂದು ಸಾಬೀತಾಗಿದೆ.


ಇದು ನನ್ನಂತಹವರಲ್ಲಿ ನೆಮ್ಮದಿ ಮೂಡಿಸಿದೆ.

- ಶಶಿಕಲಾ ಶೆಟ್ಟಿ, ಬೆಂಗಳೂರು

ಛೆ! 'ರಮ್ಯಾ ಇನ್ ಲವ್' ವರದಿ ಓದಿ ತುಂಬಾ ಫೀಲ್ ಆಯಿತು. ಅವಳನ್ನು ಅಪಾರವಾಗಿ ಪ್ರೀತಿಸುವ ಅಭಿಮಾನಿಗಳಲ್ಲಿ ನಾನೂ ಒಬ್ಬ. ಆಕೆ ಯಾವನೋ ಐಎಎಸ್ ಅಧಿಕಾರಿಯನ್ನು ಪ್ರೀತಿಸುತ್ತಿದ್ದಾಳಂತೆ ಎಂಬುದನ್ನು ಓದಿ ನನ್ನಂತಹ ಸಾಮಾನ್ಯ ಯುವಕನ ಕನಸುಗಳೆಲ್ಲ ಭಗ್ನಗೊಂಡವು.

ರಮ್ಯ ಐ ಲವ್ ಯು ಕಣೆ!

- ಭಗ್ನಪ್ರೇಮಿ, ಕರ್ನಾಟಕ



ಒಲವಿನ ಪೂಜೆಗೆ ಒಲವೇ ಮಂದಾರ!

ಂಗು-ಮಚ್ಚು ಹೊಡಿ-ಬಡಿ-ಕಡಿ ಸಿನಿಮಾಗಳನ್ನೇ ನೋಡಿ ಬೇಸತ್ತಿರುವ ಕನ್ನಡ ಸಿನಿಮಾ ಪ್ರೇಕ್ಷಕರ ಈಗ ಒಂದು ಉತ್ತಮ ಪ್ರೇಮಕಾವ್ಯ ಮೂಡಿ . ಆ ಚಿತ್ರದ ಹೆಸರು 'ಒಲವೇ ಮಂದಾರ'.

ಲವೇ ಮಂದಾರ' ಚಿತ್ರದಲ್ಲಿ ದೊಡ್ಡ ದೊಡ್ಡ ಳಿಲ್ಲ, ಅದಕ್ಕೆ ಸ್ಟಾರ್ ವ್ಯಾಲ್ಯೂ ಹೊಂದಿರುವ ಶಕನೂ ಇಲ್ಲ. ಈ ಚಿತ್ರದ ಪ್ರಚಾರವೂ ಅಷ್ಟಕಷ್ಟೇ ಇತರ ಜಾಹೀರಾತುಗಳೂ ಅಷ್ಟೇನು ಆಕರ್ಷಣೀಯ . ಈ ಎಲ್ಲ ಕಾರಣಗಳಿಂದ ನೀವು ಇದೊಂದು ನ್ಯ ಚಿತ್ರವಾಗಿರುತ್ತದೆ ಎಂದು ಭಾವಿಸಿ ಅದನ್ನು ದಿದ್ದರೆ ನಿಮಗೆ ಖಂಡಿತಾ ನಷ್ಟವಾಗುತ್ತದೆ. ಅಷ್ಟೇ ವಾಗಿ ಕನ್ನಡ ಚಿತ್ರರಂಗಕ್ಕೆ ಇನ್ನೂ ದೊಡ್ಡ ಉಂಟಾಗುತ್ತದೆ.

ಏಂದರೆ 'ಒಲವೇ ಮಂದಾರ' ಚಿತ್ರವನ್ನು ನೀವು ಮನೆಮಂದಿಯವರೊಂದಿಗೆ ಕೂತು ಖಂಡಿತಾ ಬೇ ಬೇಕಾದಂತಹ ನವಿರಾದ ಪ್ರೇಮಕಥಾವಸ್ತುವಿನ ಗಿದೆ. ಹಾಗೆ ಮಾಡುವ ಮೂಲಕ ಹೊಸ ಗಳನ್ನು, ಹೊಸ ಪ್ರಯೋಗಗಳನ್ನೂ ಪ್ರೋಹಿಸಿದಂತಾಗುತ್ತದೆ. ಅದರೊಂದಿಗೆ ಚಿತ್ರರಂಗವನ್ನೂ ಬೆಳೆಸಿದಂತಾಗುತ್ತದೆ.

ತ್ತೀಚೆಗೆ ಪ್ರೇಮಕಥೆಯ , ನಾಯಕಿಯ ಮೈ ನ ನಡೆಯುವುದೇ ಾಗಿದೆ. ಅಂತಹ ಲ್ಲಿ ಪ್ರೀತಿಪ್ರೇಮಕ್ಕಿಂತ -ನಾಯಕಿ ನಡುವಿನ ಮತ್ತು ಯೌವ್ವನದ ಷ್ಠೆಯನ್ನು ಬಿಂಬಿಸುವುದನ್ನೇ ದ್ದೇವೆ. ಇದೆಲ್ಲದರ ಜೊತೆಗೆ ಚಿತ್ರಗಳು ಸಿದ್ಧ ಸೂತ್ರಗಳಿಗೇ ಂಡಿರುತ್ತವೆ. ಶ್ರೀಮಂತ -ಬಡ ನಾಯಕ ಕಥೆ ಇರುವ ೂಲಿ ಚಿತ್ರಗಳನ್ನು ನೋಡಿ ನೋಡಿ ಗೆ ವಾಕರಿಕೆ ಬಂದುಹೋಗಿದೆ. ಸಂದರ್ಭದಲ್ಲಿ ಇದ್ಯಾವುದೇ ತ್ರಗಳಿಗೆ ಅಂಟಿಕೊಳ್ಳದ 'ಒಲವೇ ರ' ಹೊಸ ಸುವಾಸನೆಯನ್ನು .

ಲವೇ ಮಂದಾರ' ಚಿತ್ರದ ನಾಯಕ ತ್ ಪಾಲಿಗೆ ಇದು ಮೊತ್ತಮೊದಲ ಚಿತ್ರ. ಇದರ ನಿರ್ದೇಶಕ ಜಯತೀರ್ಥ ಅವರಿಗೂ ಇದು ಮೊದಲ ಚಿತ್ರ. ಹಾಗೆಯೇ ಚಿತ್ರದ ನಾಯಕಿಯಾದ ಸುಂದರಿ ಆಕಾಂಕ್ಷ ಮನ್ಸೂತ್ ಖಾನಿ ಕೂಡಾ ಇದೇ ಮೊದಲ ಬಾರಿಗೆ ಬೆಳ್ಳಿ ಪರದೆಯ ಮೇಲೆ ಕಾಣಿಸಿಕೊಂಡಿದ್ದಾಳೆ. ಅಷ್ಟೇ ಯಾಕೆ, ಚಿತ್ರದ ಛಾಯಾಗ್ರಾಹಣದ ಜವಾಬ್ದಾರಿಯನ್ನು ಸಮರ್ಥವಾಗಿ ನಿರ್ವಹಿಸಿರುವ ರವಿ ಪಾಲಿಗೂ ಇದು ಚೊಚ್ಚಲ ಚಿತ್ರ. ಒಂದೇ ಮಾತಿನಲ್ಲಿ ಹೇಳುವುದಾದರೆ ಎಲ್ಲಾ ಹೊಸಬರು ಜೊತೆಗೂಡಿ ಅತ್ಯುತ್ಸಾಹದೊಂದಿಗೆ ಮಾಡಿರುವ ಚಿತ್ರ ಇದು. ಈ ಕಾರಣಕ್ಕೇ ಈ ಚಿತ್ರದಲ್ಲಿ ಹೊಸತನ ಎದ್ದು ಕಾಣುತ್ತದೆ ಎಂದರೆ ತಪ್ಪಾಗಲಾರದು.



'ಒಲವೇ ಮಂದಾರ'ದ ಕತೆ ಸರಳವಾಗಿದೆ. ಇದರ ನಾಯಕ ಉಂಡಾಡಿ ಗುಂಡ. ಹೆಣ್ಣುಮಕ್ಕಳೊಂದಿಗೆ ವಿಲಾಸಿ ಜೀವನ ನಡೆಸುವ ಈತ ಕೊನೆಗೊಮ್ಮೆ ತನ್ನ ಪ್ರಿಯತಮೆಗೆ ಕೊಟ್ಟ ಮಾತನ್ನು ಉಳಿಸಿಕೊಳ್ಳುವ ಉದ್ದೇಶದಿಂದ ತನ್ನ ತಂದೆಯ ಅಂತಸ್ತು, ಶ್ರೀಮಂತಿಕೆಯನ್ನೆಲ್ಲಾ ತೊರೆದು ಬರಿಗಾಲಲ್ಲಿ ಆಕೆಯನ್ನು ಹುಡುಕಿಕೊಂಡು ಹೋಗುತ್ತಾನೆ.

ಆದರೆ ಈ ಚಿತ್ರ ಗೆಲ್ಲುವುದು ಈ ಸರಳ ಕತೆಯನ್ನು ನಿರೂಪಿಸಿರುವ ರೀತಿಯಿಂದಾಗಿ. ನಾಯಕ ಕನ್ನಡಿಗನಾಗಿದ್ದು ಆತ ಪ್ರೀತಿಸುವ ನಾಯಕಿ ದೂರದ ಅಸ್ಸಾಂ ರಾಜ್ಯದವಳಾಗಿದ್ದಾಳೆ. ಆಕೆಯನ್ನು ಅರಸಿ ನಾಯಕ ಇಲ್ಲಿಂದ ಅಲ್ಲಿಗೆ ಹೋಗುವ ಪಯಣದಲ್ಲಿ ಕಳ್ಳ, ರೈತ, ವೇಶ್ಯೆ, ಕಾರ್ಮಿಕ, ಸನ್ಯಾಸಿ... ಹೀಗೆ ವಿವಿಧ ರೀತಿಯ ಜನರನ್ನು ಭೇಟಿ ಆಗುತ್ತಾನೆ, ಅವರ ಕತೆಗಳನ್ನು ಕೇಳುತ್ತಾನೆ. ಆ ಮೂಲಕ ಆ ಹುಡುಗನ ಮುಂದೆ ಬದುಕು, ಪ್ರೀತಿ, ವಾತ್ಸಲ್ಯ, ಜೀವನ, ಸಮಸ್ಯೆ ಕಷ್ಟ, ಸುಖ, ಎಲ್ಲವೂ ತೆರೆದುಕೊಳ್ಳುತ್ತಾ ಹೋಗುತ್ತದೆ. ಜೊತೆಗೆ ಚಿತ್ರದ ಕತೆಯೂ ಬೆಳೆಯುತ್ತಾ ಹೋಗುತ್ತದೆ. ರಂಗಾಯಣ ರಘು ಮತ್ತು ವೀಣಾ ಸುಂದರ್ ಜೋಡಿಯ ಪ್ರೇಮಕಥೆಯ ದೃಶ್ಯಗಳಂತೂ ಕಟುಕರ ಹೃದಯವನ್ನೂ ಅಲುಗಾಡಿಸುತ್ತದೆ.



ಹುಡುಗನ ಪಯಣ ಮುಂದುವರೆಯುತ್ತಲೇ ತನ್ನ ಪ್ರಿಯತಮೆ ಬಗೆಗಿನ ಪ್ರೀತಿಯ ಉತ್ಕಟತೆ ಆತನಲ್ಲಿ ಹೆಚ್ಚಾಗುತ್ತಾ ಹೋಗುತ್ತದೆ. ಕತೆ ಹಲವಾರು ತಿರುವುಗಳನ್ನು ಪಡೆಯುವುದರಿಂದ ಪ್ರೇಕ್ಷಕರಲ್ಲಿ ಕುತೂಹಲವನ್ನು ಕೆರಳಿಸುತ್ತಾ ಸಾಗುತ್ತದೆ.

ಸಾಧಾರಣವಾಗಿ ನಮ್ಮ ಕನ್ನಡ ಸಿನಿಮಾ ನಿರ್ದೇಶಕರು ಹಾಡು-ಕುಣಿತಕ್ಕಾಗಿ ಬೇರೆ ರಾಜ್ಯಕ್ಕೋ, ದೇಶಕ್ಕೋ ಹೋಗಿ ಬರುತ್ತಾರೆ. ಆದರೆ ಈ ಚಿತ್ರದಲ್ಲಿ ನಮ್ಮ ದೇಶದ ಒಂಭತ್ತು ರಾಜ್ಯಗಳ ಜನ ವಿವಿಧ ಪಾತ್ರಗಳಾಗಿ ಮೂಡಿಬರುತ್ತಾರೆ. ಆ ರಾಜ್ಯಗಳ ಭೌಗೋಳಿಕ ಮತ್ತು ಸಾಂಸ್ಕೃತಿಕ ಪರಿಚಯವೂ ಪ್ರೇಕ್ಷಕರಿಗೆ ಆಗುತ್ತದಲ್ಲದೆ, ಬೇರೆ ರಾಜ್ಯಗಳ ಪಾತ್ರಗಳು

'ಒಲವೇ ಮಂದಾರ' ಚಿತ್ರ ಆರಂಭವಾಗಿದ್ದು 2008 ಡಿಸೆಂಬರ್ 5ರಂದು. ಅಂದರೆ ಸುದೀರ್ಘ ಎರಡು ವರ್ಷಗಳೇ ಈ ಚಿತ್ರಕ್ಕಾಗಿ ನಿರ್ದೇಶಕ ಜಯತೀರ್ಥ ಸವೆಸಿದ್ದಾರೆ. ಅದಕ್ಕಿಂತ 'ದೊಡ್ಡ ವಿಶೇಷವೆಂದರೆ ಚಿತ್ರದ ಆರಂಭಕ್ಕಿಂತ ಮೊದಲು ಒಂದು ಕ್ವಾಲಿಸ್ ಜೀಪ್‌ನಲ್ಲಿ ನಿರ್ದೇಶಕ ಮತ್ತು ಛಾಯಾಗ್ರಾಹಕ ತಮ್ಮ ಸಹಾಯಕರೊಂದಿಗೆ ಹತ್ತು ಸಾವಿರ ಕಿ.ಮೀ. ದೂರವನ್ನು ಸುತ್ತಾಡಿಕೊಂಡು ಬಂದಿದ್ದರು. ಆ ಸಂದರ್ಭದಲ್ಲಿ ಯಾವ್ಯಾವ ರಾಜ್ಯದಲ್ಲಿ ಯಾವ್ಯಾವ ಪ್ರದೇಶದಲ್ಲಿ ಶೂಟಿಂಗ್ ಮಾಡಬೇಕೆಂದು ಹ್ಯಾಂಡಿಕ್ಯಾಮೆರಾದಲ್ಲಿ ಚಿತ್ರೀಕರಿಸಿಕೊಂಡು ಬಂದಿದ್ದರು. ಬಹುಶಃ ಕನ್ನಡ ಚಿತ್ರರಂಗದ ಇತಿಹಾಸದಲ್ಲೇ ಮುಹೂರ್ತಕ್ಕಿಂತಲೂ ಮೊದಲ ಲೊಕೇಷನ್ ಹುಡುಕಲು ಚಿತ್ರ ತಂಡ ಹತ್ತು ಸಾವಿರ ಕಿ.ಮೀ. ಸುತ್ತಾಡಿಕೊಂಡು ಬಂದ ಉದಾಹರಣೆಯೇ ಇಲ್ಲ.

ಬಂದಾಗ ಸಹಜತೆಯ ಕಾರಣಕ್ಕಾಗಿ ಅಲ್ಲಿಯ ಭಾಷೆಯನ್ನೇ ನಿರ್ದೇಶಕ ಬಳಸಿದ್ದಾರೆ. ಇಂತಹ ಸಂದರ್ಭಗಳಲ್ಲಿ ಆಯಾ ಭಾಷೆಗಳ ಮಾತುಗಳ ಕನ್ನಡ ಭಾಷಾಂತರದ ಸಾಲುಗಳು ತೆರೆಯ ಮೇಲೆ ಮೂಡಿಬರುತ್ತವೆ.

ಒಂದು ಸುಂದರ ಅನುಭವ ನೀಡುವ 'ಒಲವೇ ಮಂದಾರ' ಚಿತ್ರದಲ್ಲಿ ಪ್ರೀತಿ ಪ್ರೇಮದ ಹೆಸರಲ್ಲಿ ಅರಚಾಟ, ಕಿರುಚಾಟವಿಲ್ಲ, ಹಾಸ್ಯದ ಹೆಸರಲ್ಲಿ ಅಶ್ಲೀಲ ಸಂಭಾಷಣೆಗಳಿಲ್ಲ, ನೃತ್ಯದ ಹೆಸರಲ್ಲಿ ಕಾಮೋದ್ರೇಕ ನೃತ್ಯದ ಭಂಗಿಗಳಿಲ್ಲ, ಫೈಟಿಂಗ್ ಹೆಸರಲ್ಲಿ ಲಾಂಗ್ ಮತ್ತು ಮಚ್ಚುಗಳ ಹಾರಾಟವಿಲ್ಲ. ಆದರೂ ಈ ಚಿತ್ರದಲ್ಲಿ ಹಾಸ್ಯ, ಹಾಡು, ನೃತ್ಯ, ಹೊಡೆದಾಟಗಳೆಲ್ಲವೂ ಇದ್ದು ಅವೆಲ್ಲ ತುಂಬ ಸಹಜವಾಗಿ ಮತ್ತು ಸುಂದರವಾಗಿ ಮೂಡಿಬಂದಿವೆ.

ಈ ಚಿತ್ರದಿಂದಾಗಿ ಕನ್ನಡ ಚಿತ್ರರಂಗಕ್ಕೆ ಒಬ್ಬ ಕ್ರಿಯಾಶೀಲ ನಿರ್ದೇಶಕ, ಆರಡಿ ಎತ್ತರದ ಸ್ಫುರದ್ರೂಪಿ ನಾಯಕನಟ, ಉತ್ತಮ ಛಾಯಾಗ್ರಾಹಕ ಮತ್ತು ಒಬ್ಬಳು ಸಹಜಸುಂದರಿ ನಾಯಕಿ, ಸಾಹಸಿ ನಿರ್ಮಾಪಕ ಸಿಕ್ಕಿದ್ದಾರೆಂದೇ ಹೇಳಬಹುದು.

'ಒಲವೇ ಮಂದಾರ' ತರಹದ ಸದಭಿರುಚಿಯ, ಕ್ರಿಯಾಶೀಲತೆಯ, ಪ್ರೇಮಕಥಾವಸ್ತುವಿನ ಚಿತ್ರಗಳು ಮನಸ್ಸಿಗೆ ಮುದ ನೀಡುತ್ತವೆ. ಇಂತಹ ಚಿತ್ರಗಳು ಕನ್ನಡದಲ್ಲಿ ಹೆಚ್ಚೆಚ್ಚು ನಿರ್ಮಾಣವಾದರೆ ಕನ್ನಡ ಚಿತ್ರರಂಗ ಮತ್ತೊಮ್ಮೆ ವೈಭವದ ದಿನಗಳನ್ನು ಕಾಣುವುದರಲ್ಲಿ ಸಂಶಯವಿಲ್ಲ.


ಆ ಕಾರಣಕ್ಕಾದರೂ ಈ ಚಿತ್ರ ಗೆದ್ದು ಕನ್ನಡ ಚಿತ್ರರಂಗದ ಯಶಸ್ಸಿಗೆ ಮುನ್ನುಡಿ ಬರೆಯಲಿ ಎಂಬುದು ನಮ್ಮ ಆಶಯ....

● ಶೆಣೈ

ವಗೊಂಡ ಪ್ರತಿಭೆ ಶ್ರೀಕಾಂತ್

ಈ ಚಿತ್ರದ ನಾಯಕ ಶ್ರೀಕಾಂತ್ ಇದೇ ಮೊದಲ ಬಾರಿಗೆ ಕ್ಯಾಮರಾವನ್ನು ಸಿದ್ದರೂ ಆತ ಓರ್ವ ಅನುಭವಿ ನಟನಂತೆ ನಟಿಸಿದ್ದಾನೆ. ಆದರೆ ಅದು ದ್ದು ಆತನ ಪರಿಶ್ರಮದಿಂದ ಎಂಬುದನ್ನು ಮರೆಯಬಾರದು.

ಉದಾಹರಣೆಗೆ 'ಒಲವೇ ಮಂದಾರ'ದ ಚಿತ್ರೀಕರಣ ಪ್ರಾರಂಭವಾಗುವುದಕ್ಕೆ ಲು ಶ್ರೀಕಾಂತ್ ಹೈದರಾಬಾದ್‌ನಲ್ಲಿರುವ ಫಿಲ್ಮ್ ಇನ್‌ಸ್ಟಿಟ್ಯೂಟ್‌ನಲ್ಲಿ ರು ಆರು ತಿಂಗಳ ಕಾಲ ನಟನೆಯ ತರಬೇತಿಯನ್ನು ಪಡೆದ. ಆನಂತರ ನ್ನೈಗೆ ಹೋಗಿ ಅಲ್ಲಿ ಖ್ಯಾತ ಸ್ಟಂಟ್ ಮಾಸ್ಟರ್‌ಗಳಾದ ರಾಮ್-ಲಕ್ಷ್ಮಣ್‌ರ ನನ್ನೂ ಹೆಚ್ಚು ತರಬೇತಿಯನ್ನು ಪಡೆದ.



ಮೇಲೆ ಬೆಂಗಳೂರಿಗೆ ಹಿಂದಿರುಗಿದ ಂತ್ ಇಲ್ಲಿ ಪ್ರತಿದಿನ ಜಿಮ್ನೆಸಿಯಂನಲ್ಲಿ ೇಹವನ್ನು ಗಟ್ಟಿ ಮಾಡಿಕೊಂಡನಲ್ಲದೆ, ಜೊತೆಗೆ ನೃತ್ಯಗಳನ್ನೂ ಕಲಿತ.

ಷ್ಟೆಲ್ಲ ಸಾಲದೆಂಬಂತೆ ಚಿತ್ರೀಕರಣವನ್ನು ಭಿಸುವ ಮೊದಲು ನಿರ್ದೇಶಕ ೇರ್ಥ ತನ್ನ ನಾಯಕ, ನಾಯಕಿ ಮತ್ತು ಪಾತ್ರಧಾರಿಗಳಿಗೆ ಸುಮಾರು ಹದಿ ದಿನಗಳ ಕಾಲ ನಟನಾ ಶಿಬಿರವನ್ನೂ ಿಸಿದ್ದರು.

ಶ್ರೀಕಾಂತ್ ಇಷ್ಟೆಲ್ಲ ಕಾಳಜಿ ಮತ್ತು ವಹಿಸಿದ್ದಕ್ಕೇ ಇವತ್ತು ಚಿತ್ರ ಚೆನ್ನಾಗಿ ಬಂದಿದೆ. ಜನರೂ, ವಿಮರ್ಶಕರೂ ಪ್ರಶಂಸಿಸುತ್ತಿದ್ದಾರೆ.

ಮಗನಿಗಾಗಿ ಸಾಹಸ




'ಒಲವೇ ಮಂದಾರ'ದಂತಹ ವಿಭಿನ್ನ ಮತ್ತು ಒಂದು ರೀತಿಯಲ್ಲಿ ಸಾಹಸಮಯ ಚಿತ್ರವನ್ನು ನಿರ್ಮಿಸಲು ಸಾಧಾರಣವಾಗಿ ಯಾವ ಕನ್ನಡ ಚಿತ್ರ ನಿರ್ಮಾಪಕನೂ ಮುಂದೆ ಬರುವುದಿಲ್ಲ. ಅದಕ್ಕೆ ಬದಲಾಗಿ ಯಾವುದೋ ಒಂದು ರಿಮೇಕ್ ಚಿತ್ರವನ್ನು ರಾತ್ರಿಹಗಲು ಸುತ್ತಿ ಮೂರು ತಿಂಗಳೊಳಗೆ ಬಿಡುಗಡೆ ಮಾಡಿ ತಾನು ಹಾಕಿದ ಬಂಡವಾಳವನ್ನು ವಾಪಸ್ ಪಡೆಯುವುದೇ ಬಹುತೇಕ ನಿರ್ಮಾಪಕರ ಉದ್ದೇಶವಾಗಿರುತ್ತದೆ.

ಇಂತಹ ಪರಿಸ್ಥಿತಿಯಲ್ಲಿ ಸುಮಾರು ಎರಡೂವರೆ ವರ್ಷಗಳ ಕಾಲ ಚಿತ್ರವೊಂದಕ್ಕೆ - ಅದೂ ಎಲ್ಲಾ ಹೊಸಬರೇ ಇರುವ ಚಿತ್ರಕ್ಕೆ - ಹಣ ಹೂಡುವುದೆಂದರೆ ಸುಲಭದ ಮಾತಲ್ಲ. ಆದರೂ ಇಂತಹ ದೊಡ್ಡ ಸಾಹಸಕ್ಕೆ ಕೈಹಾಕಿದವರು ನಿರ್ಮಾಪಕ ಬಿ.ಗೋವಿಂದರಾಜು. ಇವರು ಇದೇ ಮೊದಲ ಬಾರಿ ಸಿನಿಮಾವೊಂದನ್ನು ನಿರ್ಮಿಸಿರುವುದು.

ಗೋವಿಂದರಾಜು ಮೂಲತಃ ರಾಜಕಾರಣಿ. ಸದ್ಯ ಇವರು ಬೆಂಗಳೂರಿನ ಮಹಾನಗರ ಪಾಲಿಕೆಯ ಸದಸ್ಯರು. ಈ ಚಿತ್ರದ ನಾಯಕ ನಟ ಶ್ರೀಕಾಂತ್ ಇವರ ಮಗ.

ಇವರು ತಮ್ಮ ಮಗನಿಗಾಗಿ ಈ ಚಿತ್ರವನ್ನು ನಿರ್ಮಿಸಿದ್ದರೂ ಇಂತಹ ಒಂದು ಉತ್ತಮ ಸಿನಿಮಾ ಮಾಡಲು ಧೈರ್ಯ ಮಾಡಿದ್ದಕ್ಕೆ ಅವರನ್ನು ಶ್ಲಾಘಿಸಲೇ ಬೇಕು.

ತೆಲುಗು ತಮಿಳಿನಲ್ಲೂ ಅವತರಿಸಲಿದೆ 'ಒಲವು'



ಈ ಚಿತ್ರದ ನಿರ್ದೇಶಕ ಜಯತೀರ್ಥ ಅವರ ಪ್ರಕಾರ ಒಟ್ಟು 87 ದಿನಗಳ ಕಾಲ ಇದರ ಚಿತ್ರೀಕರಣ ನಡೆಯಿತು. ಇದಕ್ಕೊಂದು ಪ್ರಯಾಣ ಮಾಡಿದ ದಿನಗಳನ್ನೂ ಲೆಕ್ಕಕ್ಕೆ ತೆಗೆದುಕೊಂಡರೆ ಒಟ್ಟು 110 ದಿನಗಳ ಕಾಲ 'ಒಲವೇ ಮಂದಾರ'ಕ್ಕಾಗಿ ಇವರು ಓಡಾಡಿದಂತಾಗುತ್ತದೆ.

ಇಷ್ಟು ದಿನ ತೆಗೆದುಕೊಂಡಿದ್ದರಿಂದ ಸಹಜವಾಗಿಯೇ ಈ ಚಿತ್ರದ ಬಜೆಟ್ ಸಿಕ್ಕಾಪಟ್ಟೆ ಹೆಚ್ಚಾಗಿದೆ. ಆ ಕಾರಣಕ್ಕೆ ಈಗ ಇವರ ನಿರ್ಮಾಪಕ ಗೋವಿಂದರಾಜು ಈ ಚಿತ್ರವನ್ನು ತಮಿಳು ಮತ್ತು ತೆಲುಗು ಭಾಷೆಗಳಲ್ಲೂ ಏಕಕಾಲದಲ್ಲಿ ಚಿತ್ರೀಕರಿಸಿದ್ದಾರೆ. ಅಂದರೆ ಚೊಚ್ಚಲು ಪ್ರಯತ್ನದಲ್ಲೇ ನಿರ್ದೇಶಕ ಜಯತೀರ್ಥ ಮೂರು ಭಾಷೆಗಳಲ್ಲಿ ಈ ಚಿತ್ರವನ್ನು ಮಾಡಿ ಮುಗಿಸಿದ್ದಾರೆ.

ಈ ಚಿತ್ರದ ತಮಿಳು ಮತ್ತು ತೆಲುಗು ಅವತರಣಿಕೆಯನ್ನು ಮುಂದಿನ ತಿಂಗಳು ಬಿಡುಗಡೆ ಮಾಡುವ ಸಿದ್ಧತೆಯಲ್ಲಿದ್ದಾರೆ ನಿರ್ಮಾಪಕ ಗೋವಿಂದರಾಜು.

Regd.No.KA/RNP/BGS/2036/2008-10. Posted at : GPO, Bangalore-01. R B P LANKESH, Kannada Weekly Price Rs. 12/- 9-2-2011 RNI No. KARKAN2005/14648



ಮೈಲಾರಿ ಹಿಟ್ಟು ಚಂದ್ರುಗೆ ರೇಟು!

ಕೇಶಾವರ ಚಂದ್ರುವಿನ ಅದೃಷ್ಟ ಮತ್ತಷ್ಟು ಗಟ್ಟಿಯಾಗಿದೆ!

ಕೇಶಾವರ ಚಂದ್ರು ನಿರ್ದೇಶನದ 'ತಾಜ್‌ಮಹಲ್' ಚಿತ್ರ ಶತದಿನ ಪೂರೈಸಿದಾಗ ಗಾಂಧಿನಗರದವರು 'ಅದೊಂದು ಫ್ಲೂಕ್' ಎಂದು ಸುಮ್ಮನಾಗಿಬಿಟ್ಟಿದ್ದರು. ನಂತರ ಅಬ್ಬರದ ಪ್ರಚಾರದ ನಡುವೆ ಬಂದ ಚಂದ್ರುರವರ 'ಪ್ರೇಮ್ ಕಹಾನಿ' ದೊಡ್ಡಮಟ್ಟದ ಯಶಸ್ಸು ಕಾಣಲಿಲ್ಲವಾದರೂ ಕೆಲವು ಸೆಂಟರ್‌ಗಳಲ್ಲಿ ಐವತ್ತು ದಿನದ ಪ್ರದರ್ಶನ ಕಂಡಿತ್ತು. ಈಗ ಚಂದ್ರು ನಿರ್ದೇಶನದ ಮೂರನೇ ಚಿತ್ರ 'ಮೈಲಾರಿ' ಬಾಕ್ಸ್ ಆಫೀಸ್‌ನಲ್ಲಿ ಕೊಳ್ಳೆ ಹೊಡೆಯುತ್ತಿದೆ. ಬರೀ ಮೂರೂಕಾಲು ಕೋಟಿ ಬಜೆಟ್‌ನಲ್ಲಿ ನಿರ್ಮಾಣವಾದ ಈ ಚಿತ್ರ ನಿರ್ಮಾಪಕ ಶ್ರೀಕಾಂತ್ ಅವರ ತಿಜೋರಿಯನ್ನು ಭರ್ತಿ ತುಂಬಿಸಿದೆ. ಹಾಗೆ ನೋಡಿದರೆ 'ಮೈಲಾರಿ' ಕ್ಲಾಸ್ ಸಿನಿಮಾದಂತಿದ್ದರೂ ಬಿ.ಸಿ. ಸೆಂಟರ್‌ಗಳಲ್ಲೇ ಹೆಚ್ಚು ಕಲೆಕ್ಷನ್ ಕಾಣುತ್ತಿದೆ. ಸಿನಿಮಾವನ್ನು ಖರೀದಿಸಿದ್ದ ಎಲ್ಲ ವಿತರಕರಿಗೂ ಹಾಕಿದ ಬಂಡವಾಳಕ್ಕಿಂತ ದುಪ್ಪಟ್ಟು ಲಾಭ ಬಂದಿರುವುದರಿಂದ ಎಲ್ಲರೂ ಈಗ ದಿಲ್ ಖುಷ್!

ಕೇಶಾವರ ಎಂಬ ಸಣ್ಣ ಹಳ್ಳಿಯಿಂದ ಬರಿಗೈಲಿ ಬಂದು ಒಂದಷ್ಟು ಸಿನಿಮಾಗಳಿಗೆ ಸಹಾಯಕನಾಗಿ ದುಡಿದು ಕೊನೆಗೆ ನಿರ್ದೇಶಕನೂ ಆದ ಚಂದ್ರುಗೆ ಈಗ ಜೂ. ಪ್ರೇಮ್ ಎಂಬ ಬಿರುದು ಪ್ರಾಪ್ತಿಯಾಗಿದೆ. ಪ್ರೇಮ್ ಅವರಂತೆ ಈತ ಕೂಡ ಪ್ರಚಾರಕ್ಕಾಗಿ ಹಪಹಪಿಸುವುದು ಈ ನಾಮಾಂಕಿತಕ್ಕೆ ಕಾರಣ ಎಂದು ಬೇರೆ ಹೇಳಬೇಕಿಲ್ಲ ಅಲ್ಲವೆ?

ಯೋಗರಾಜ್ ಭಟ್, ಸೂರಿ, ಶಶಾಂಕ್, ಗುರುಪ್ರಸಾದ್‌ರಂಥ ಯಶಸ್ವಿ ನಿರ್ದೇಶಕರ ಪಟ್ಟಿಗೆ ಈಗ ಚಂದ್ರು ಕೂಡಾ ಸೇರಿಹೋಗಿದ್ದಾರೆ. ಸತತ ಮೂರು ಯಶಸ್ವಿ ಚಿತ್ರಗಳನ್ನು ನೀಡಿ ಹ್ಯಾಟ್ರಿಕ್ ನಿರ್ದೇಶಕ ಎನಿಸಿಕೊಂಡಿರುವ ಚಂದ್ರುಗೆ ಇನ್ನು ಮುಂದಾದರೂ ಒಳ್ಳೆ ರೇಟು ಸಿಗುವುದು ಗ್ಯಾರಂಟಿ.

ಬುಟ್ಟಿ ಸೇರಿತು ಭಟ್ಟರ ಹಾಡು!



ದಿಢೀರ್ ಎಂದು ಗೀತರಚನೆಕಾರರಾಗಿಯೂ ಹೊಮ್ಮಿರುವ ನಿರ್ದೇಶಕ ಯೋಗರಾಜ್ ಭಟ್ ಈಗ ಬರೆದದ್ದೆಲ್ಲವೂ ಬಂಗಾರ ಎಂಬಂತಾಗಿದೆ. ಅದಕ್ಕೆ ಕಾರಣ ಭಟ್ಟರ ಅಡ್ನಾಡಿದ್ದಿ ಸಾಲುಗಳೇ ಇವತ್ತಿನ ಟ್ರೆಂಡ್ ಆಗಿರಬಹುದು. ನಿರ್ದೇಶಕರಾಗಿ ಈಗ ಭಟ್ ಸಾಕಷ್ಟು ಒತ್ತಡದಲ್ಲಿದ್ದರೂ ಬೇರೆಯವರ ಸಿನಿಮಾಗಳಿಗೂ ಹಾಡುಗಳನ್ನು ಬರೆಯುತ್ತಾರೆ. ಭಟ್ಟರು ಬರೆದರೆ ಆಡಿಯೋ ವ್ಯಾಪಾರವಾಗುತ್ತೆ ಎಂಬ ಕಾರಣಕ್ಕೆ ನಿರ್ಮಾಣವಾಗುತ್ತಿರುವ ಬಹುತೇಕ ಎಲ್ಲ ಚಿತ್ರಗಳೂ ಒಂದೊಂದು ಹಾಡನ್ನು ಭಟ್ಟರಿಂದ ಬರೆಸಿಕೊಳ್ಳುತ್ತಿವೆ. ಇದಕ್ಕೆ ಸರಿಯಾಗಿ ಯೋಗರಾಜ ಭಟ್ಟರ ಸಂಭಾವನೆ ಕೂಡಾ ದಿವಿನಾಗೇ ಹೆಚ್ಚಾಗುತ್ತಿದೆ.

ಹಾಡು ಬರೆಯುವುದರಲ್ಲಿ ಈ ಪಾಟಿ ಬ್ಯುಸಿಯಾಗಿರುವ ಭಟ್ಟರಿಗೆ ಈಗ ಸಣ್ಣದೊಂದು ಮುಖಭಂಗವೂ ಆಗಿದೆ. 'ಕೃಷ್ಣನ್ ಮ್ಯಾರೇಜ್ ಸ್ಟೋರಿ' ಚಿತ್ರಕ್ಕೆ ಭಟ್ಟರಿಂದ ಎರಡು ಹಾಡುಗಳನ್ನು ಬರೆಸಲಾಗಿತ್ತು. 'ಮುಸ್ಸಂಜೆ ಮಾತು' ಖ್ಯಾತಿಯ ವಿ. ಶ್ರೀಧರ್ ಸಂಯೋಜಿಸಿದ್ದ ಟ್ಯೂನಿಗೆ ಭಟ್ಟರು ಬರೆದುಕೊಟ್ಟ ಹಾಡು ಯಾಕೋ ಸರಿಹೊಂದಲಿಲ್ಲವಂತೆ. ಹೀಗಾಗಿ ಭಟ್ಟರು ಬರೆದದ್ದನ್ನು ಕಿತ್ತೆಸೆದು ಸ್ವತಃ ಶ್ರೀಧರ್ ಅವರೇ ಹಾಡುಗಳನ್ನು ಬರೆದಿದ್ದಾರಂತೆ.



ಆಪತ್ತಿಗೆ ಬಂದವನೇ ಅದ್ವೈತ!

ಪ್ರಪಂಚದ ಏಳು ಅದ್ಭುತಗಳಲ್ಲಿ ಚಿತ್ರೀಕರಣಗೊಂಡ ಕನ್ನಡ ಚಿತ್ರ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದ್ದ 'ಚೆಲುವೆಯೇ ನಿನ್ನ ನೋಡಲು' ಸಿನಿಮಾವನ್ನು ನಿರ್ಮಿಸಿದ ಎಸ್.ಎಂ.ಸುರೇಶ್ ಈಗ ಮತ್ತೊಂದು ಚಿತ್ರ ನಿರ್ಮಾಣಕ್ಕೆ ಕೈಹಾಕಿದ್ದಾರೆ. ಆದರೆ ಈ ಬಾರಿ ಸಾಲಗಾರರ ಭಯದಿಂದಾಗಿ ಅವರು ತಮ್ಮ ಪತ್ನಿಯ ಹೆಸರಲ್ಲಿ ಹೊಸ ಚಿತ್ರವನ್ನು ಆರಂಭಿಸಿದ್ದಾರೆ. ಅಜಯ್‌ರಾವ್ ನಾಯಕನಾಗಿ ನಟಿಸುತ್ತಿರುವ ಈ ಚಿತ್ರದ ಹೆಸರು 'ಅದ್ವೈತ'.

'ಚೆಲುವೆಯೇ ನಿನ್ನ ನೋಡಲು' ಚಿತ್ರ ಬಾಕ್ಸಾಫೀಸ್‌ನಲ್ಲಿ ಮುಗ್ಗರಿಸಿದ ನಂತರ ಸುರೇಶ್ ಎದ್ದೇಳಲು ಸಾಧ್ಯವಾಗದಷ್ಟು ಪಾತಾಳಕ್ಕೆ ಕುಸಿದಿದ್ದರು. ಇನ್ನೇನು ಕನ್ನಡ ಚಿತ್ರರಂಗ ಒಬ್ಬ ದೈತ್ಯ ನಿರ್ಮಾಪಕನನ್ನ ಕಳೆದುಕೊಂಡಿತು ಎಂದು ಗಾಂಧಿನಗರದವರು ಮಾತನಾಡಿಕೊಳ್ಳುತ್ತಿರುವಾಗಲೇ ಪ್ರಪಂಚದ ಎಂಟನೆ ಅದ್ಭುತ ಅವರ ಪಾಲಿಗೆ ನಡೆದೇಹೋಯಿತು. ಅದೇನೆಂದರೆ "ಚಿಕ್ಕಾಸೂ ಇಲ್ಲದೇ ನಿಮ್ಮ ಚಿತ್ರದಲ್ಲಿ ನಟಿಸುತ್ತೇನೆ" ಎಂದು ನಾಯಕ ಅಜಯ್‌ರಾವ್ ಸ್ನೇಹಹಸ್ತ ಚಾಚಿ ಸುರೇಶ್‌ಗೆ ಪುನರ್‌ಜನ್ಮ ನೀಡಿದರು. ಹೀಗಾಗಿ ಈ ಚಿತ್ರ ಈಗ ಆರಂಭವಾಗಿದೆ. ಸದ್ಯಕ್ಕೆ ಸುರೇಶ್ ಕುಂತರೂ ನಿಂತರೂ ಅಜಯ್‌ನ ನಾಮಸ್ಮರಣೆ ಮಾಡುತ್ತಾ ಆತನನ್ನು ಹೊಗಳುತ್ತಿದ್ದಾರೆ. ಹಿಂದೆ ಗಿರಿರಾಜ್ ಎಂಬ ಪ್ರತಿಭಾವಂತನ ಬಗ್ಗೆ ಲಂಕೇಶ್ ಪರಿಚಯಿಸಿತ್ತು. ಕೇವಲ ಮೂವತ್ತೈದು ಸಾವಿರ ರೂಪಾಯಿ ಖರ್ಚಿನಲ್ಲಿ ಗಿರಿರಾಜ್ 'ನವಿಲಾದವರು' ಎಂಬ ಪುಟ್ಟ ಸಿನಿಮಾವನ್ನು ರೂಪಿಸಿದ್ದರು. ಅದೇ ಗಿರಿರಾಜ್ 'ಅದ್ವೈತ'ದ ಮೂಲಕ ನಿರ್ದೇಶಕರಾಗಿದ್ದಾರೆ. ಗಿರಿರಾಜ್ ಮೂಲಕವಾದರೂ ಸುರೇಶ್ ನಸೀಬು ಬದಲಾಗಲಿ...

ಗೆದ್ದರೆ ಗಾಂಧಿನಗರ-ಸೋತರೆ ಮಠ!



ಕೋಮಲ್ ಈಗ ಅಗ್ನಿಪರೀಕ್ಷೆಯನ್ನು ಎದುರಿಸುತ್ತಿದ್ದಾರೆ. ಅವರ ನಿರ್ಮಾಣದ, ಅವರೇ ನಾಯಕನಾಗಿ ನಟಿಸಿರುವ 'ಕಳ್ಮಂಜ' ಚಿತ್ರ ಮುಂದಿನ ವಾರ ತೆರೆಕಾಣಲಿದೆ. ಈ ಚಿತ್ರಕ್ಕೆ ಕೋಮಲ್ ಅವರ ಪತ್ನಿ ಬಂಡವಾಳ ಹೂಡಿದ್ದಾರಂತೆ. ಆದ್ದರಿಂದ "ಈ ಚಿತ್ರದ ಸೋಲು ಗೆಲುವಿನ ಮೇಲೆ ನನ್ನ ಭವಿಷ್ಯ ನಿರ್ಧಾರವಾಗಲಿದೆ" ಎಂದು ಕೋಮಲ್ ಪತ್ರಕರ್ತರ ಮುಂದೆ ಮೊನ್ನೆ ಹೇಳಿದರು.

ಇತ್ತೀಚೆಗೆ ಕೋಮಲ್ ನಟಿಸಿ ಬಹಳ ನಿರೀಕ್ಷೆಯಿಟ್ಟಿದ್ದ ವಿಜಯಲಕ್ಷ್ಮಿ ಸಿಂಗ್ ನಿರ್ದೇಶನದ 'ವಾರೆವ್ಹಾ' ಚಿತ್ರ ಬಾಕ್ಸಾಫೀಸ್‌ನಲ್ಲಿ ಬೋರಲು ಬಿದ್ದುಕೊಂಡಿತ್ತು. ಆ ಚಿತ್ರ ಗೆದ್ದಿದ್ದರೆ 'ಕಳ್ಮಂಜ' ಚಿತ್ರಕ್ಕೆ ಸಹಜವಾಗಿಯೇ ಭಾರೀ ಬೇಡಿಕೆ ಬರುತ್ತದೆ ಎಂಬುದು ಕೋಮಲ್ ಲೆಕ್ಕಾಚಾರವಾಗಿತ್ತು. ಆದರೀಗ ಆ ಚಿತ್ರಕ್ಕೆ ಆದ ಗತಿ ಈ ಚಿತ್ರಕ್ಕೂ ಆದರೆ ಎಂದು ಭಯಭೀತಿಗೊಂಡಿದ್ದಾರೆ ಕೋಮಲ್. 'ವಾರೆವ್ಹಾ' ಸೋಲನ್ನು ಜನ ಮರೆಯುವ ತನಕ ಕಾದು ಆನಂತರವೇ 'ಕಳ್ಮಂಜ' ಚಿತ್ರವನ್ನು ಬಿಡುಗಡೆ ಮಾಡೋಣವೆಂದರೆ ಸದ್ಯದಲ್ಲೇ ಪ್ರಾರಂಭವಾಗಲಿರುವ ಕ್ರಿಕೆಟ್ ವಿಶ್ವಕಪ್ ಕೋಮಲ್‌ರಲ್ಲಿ ಇನ್ನೂ ದೊಡ್ಡ ಭೀತಿಯನ್ನು ಮೂಡಿಸಿದೆ. ಹೀಗಾಗಿ ವಿಶ್ವಕಪ್ ಕ್ರಿಕೆಟ್ ಆರಂಭವಾಗುವ ಮೊದಲೇ 'ಕಳ್ಮಂಜ'ನನ್ನು ಪ್ರೇಕ್ಷಕ ನೋಡಿಬಿಡಲಿ ಎಂಬ ಉದ್ದೇಶದಿಂದಲೇ ಕೋಮಲ್ ಈಗ ಇದನ್ನು ಬಿಡುಗಡೆ ಮಾಡುತ್ತಿದ್ದಾರೆ.

ಮೂಲತಃ ಹಾಸ್ಯನಟನಾದ ಕೋಮಲ್ ಇತ್ತೀಚೆಗೆ 'ಮಿ.ಗರಗಸ' ಮೂಲಕ ನಾಯಕ ನಟನಾಗಿ ಬಡ್ತಿ ಪಡೆದಿರುವುದು ಅವರ ಪಾಲಿಗೆ ಎರಡಂಚಿನ ಕತ್ತಿಯ ಮೇಲಿನ ನಡಿಗೆಯಂತಾಗಿದೆ. ಈಗ ಕೋಮಲ್ ನಾಯಕ ನಟನಾಗಿರುವುದರಿಂದ ಅವರಿಗೆ ಹಾಸ್ಯನಟನ ಪಾತ್ರಗಳು ಸಿಗುತ್ತಿಲ್ಲ. ಆದರೆ ಅವರು ನಾಯಕನಟನಾಗಿ ನಟಿಸಿರುವ ಚಿತ್ರಗಳು ಗೆಲ್ಲುತ್ತಿಲ್ಲ. ಹೀಗಾಗಿ ಕೋಮಲ್ ಪಾಲಿಗೆ 'ಕಳ್ಮಂಜ' ನಿಜಕ್ಕೂ ಅಗ್ನಿ ಪರೀಕ್ಷೆ. ಇದರಲ್ಲಿ ಅವರು ಪಾಸಾದರೆ ಪೋಷಕ ಪಾತ್ರಗಳಿಗೆ ಕೋಮಲ್ ಗುಡ್‌ಬೈ ಹೇಳಲಿದ್ದಾರೆ; ಫೇಲಾದರೆ ನಾಯಕನ ಪಾತ್ರಕ್ಕೆ ಗುಡ್‌ಬೈ. ಏನಾಗುತ್ತದೋ?

ಜಂಗಲ್ ಹುಡುಗ ಜಾಕಿಯಾದ

ಕೊನೆಗೂ ಒಂದು ಟಿವಿ ರಿಯಾಲಿಟಿ ಶೋನಿಂದಾಗಿ ಕನ್ನಡ ಚಿತ್ರರಂಗಕ್ಕೆ ಒಬ್ಬ ನಾಯಕ ಮತ್ತು ಒಬ್ಬ ನಾಯಕಿ ದೊರೆತಿದ್ದಾರೆ. ಅದರರ್ಥ ಸುವರ್ಣ ವಾಹಿನಿಯ 'ಹಳ್ಳಿಹೈದ ಪ್ಯಾಟೆಗ್ ಬಂದ' ರಿಯಾಲಿಟಿ ಶೋನಲ್ಲಿ ಗೆದ್ದ ರಾಜೇಶ್ ಮತ್ತು ಐಶ್ವರ್ಯ ಈಗ ಒಂದು ಸಿನಿಮಾದಲ್ಲಿ ನಾಯಕ-ನಾಯಕಿಯಾಗಿ ಕಾಣಿಸಿಕೊಳ್ಳುತ್ತಿದ್ದಾರೆ. ವಿಚಿತ್ರವೆಂದರೆ ಈ ಕಾರ್ಯಕ್ರಮವನ್ನು ನಡೆಸಿಕೊಟ್ಟ ಅಕುಲ್ ಬಾಲಾಜಿ ಬೆಳ್ಳಿತೆರೆಯಲ್ಲಿ ವಿಫಲಗೊಂಡ ನಂತರವೇ ಅವರು ಟಿವಿ ಕಡೆಗೆ ಬಂದವರು. ಅಕುಲ್ ನಟಿಸಿದ 'ಆತ್ಮೀಯ' ಎಂಬ ಚಿತ್ರ ಒಂದು ವಾರ ಕೂಡಾ ಓಡಲಿಲ್ಲ, ಆದರೀಗ ಅಕುಲ್ ಟಿವಿಯ ನಿರೂಪಕನಾಗಿ ಯಶಸ್ವಿಯಾಗಿ ಹಲವಾರು ನಾಯಕನಟರಿಗಿಂತಲೂ ಹೆಚ್ಚು ಜನಪ್ರಿಯರಾಗಿದ್ದಾರೆ. ಈಗ ಅವರ ಶೋನಲ್ಲಿ ಭಾಗವಹಿಸಿದ್ದ ಇಬ್ಬರು ಬೆಳ್ಳಿ ಪರದೆಗೆ ಬಡ್ತಿ ಪಡೆಯುತ್ತಿದ್ದಾರೆ.

ರಾಜೇಶ್ ಮತ್ತು ಐಶ್ವರ್ಯ ನಟಿಸುತ್ತಿರುವ ಚಿತ್ರದ ಹೆಸರು 'ಜಂಗ್ಲಿ ಜಾಕಿ'. ಇದನ್ನು ರವಿ ಎಂಬ ಯುವಕ ನಿರ್ದೇಶಿಸುತ್ತಿದ್ದಾರೆ. ಇದು ಅವರ ಮೊದಲ ಚಿತ್ರ. ಪತ್ರಕರ್ತ ವಿನಾಯಕ ಕಲಗಾರ್ ಈ ಚಿತ್ರದ ಸಂಭಾಷಣೆಯ ಜವಾಬ್ದಾರಿಯನ್ನು ವಹಿಸಿಕೊಂಡಿದ್ದಾರೆ. 'ಜಂಗ್ಲಿ' ಮತ್ತು 'ಜಾಕಿ' ಬಾಕ್ಸಾಫೀಸ್‌ನಲ್ಲಿ ಇತ್ತೀಚೆಗೆ ಜಯಭೇರಿ ಬಾರಿಸಿದ ಚಿತ್ರಗಳು. ಇವೆರಡು ಚಿತ್ರಗಳ ಹೆಸರುಗಳನ್ನು ಒಟ್ಟಾಗಿಸಿರುವ ನಿರ್ದೇಶಕ ರವಿ ಆ ಮೂಲಕ ಜಾಕ್ ಪಾಟ್ ಹೊಡೆಯಲು ಯತ್ನಿಸುತ್ತಿರುವಂತಿದೆ.

ಮಂಗಗಳಿಗಾಗಿ ಮೂರೂವರೆ ಕೋಟಿ ಲಾಸ್!

ಇದು ಸದ್ಯ ಗಾಂಧಿನಗರದಲ್ಲಿ ಚಾಲ್ತಿಯಲ್ಲಿರುವ ಜೋಕ್. ಅದೇನೆಂದರೆ 'ಎರಡು ಕೋತಿಗಳಿಗಾಗಿ ಸೌಂದರ್ಯ ಜಗದೀಶ್ ಮೂರೂವರೆ ಕೋಟಿ ಕಳೆದುಕೊಂಡರು' ಎಂಬುದು.

ಯಾರು ಈ ಎರಡು ಕೋತಿಗಳು ಎಂದು ಅಚ್ಚರಿಯೇ? ಕೇಳಿ...

ಸೌಂದರ್ಯ ಜಗದೀಶ್ ನಿರ್ಮಾಣದ 'ಅಪ್ಪು-ಪಪ್ಪು' ಎಂಬ ಚಿತ್ರ ಬಹಳ ಕಷ್ಟಪಟ್ಟು ಇತ್ತೀಚೆಗೆ ನೂರು ದಿನಗಳ ಪ್ರದರ್ಶನವನ್ನು ಮುಗಿಸಿದೆಯಂತೆ. ಈ ಚಿತ್ರದಲ್ಲಿ ಸೌಂದರ್ಯ ಜಗದೀಶರ ಮಗ ಬಾಲನಟನಾಗಿ ನಟಿಸಿದ್ದ. ಜೊತೆಗೆ ವಿದೇಶದಲ್ಲಿ ತರಬೇತಿ ಪಡೆದ ಒಂದು ಚಿಂಪಾಂಜಿ ಕೂಡಾ ಒಂದು ಪ್ರಮುಖ ಪಾತ್ರದಲ್ಲಿ ಕಾಣಿಸಿಕೊಂಡಿತ್ತು. ಈ ಚಿತ್ರವನ್ನು ಅನಂತ್‌ರಾಜ್ ನಿರ್ದೇಶಿಸಿದ್ದರು. ಈ ಚಿತ್ರ ನೋಡಿ ಮಕ್ಕಳು ಸಾಕಷ್ಟು ಮನೋರಂಜನೆ ಪಡೆದಿದ್ದರು. ಆದರೂ ನಿರ್ಮಾಪಕ ಸೌಂದರ್ಯ ಜಗದೀಶ್ ಸುಮಾರು ಮೂರೂವರೆ ಕೋಟಿ ಕಳೆದುಕೊಂಡರಂತೆ.



ಆ ಕಾರಣಕ್ಕಾಗಿಯೇ ಕೆಲ ಗಾಂಧಿನಗರಿಗಳು ಇಂತಹ ಒಂದು ಜೋಕ್ ಅನ್ನು ಹುಟ್ಟುಹಾಕಿದ್ದಾರೆ!

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427, Fax : 26604536, E-mail :lankesh70@rediffmail.com, Printed at Rajhans Enterprises, # 134, 4th Main...